ಬುಧವಾರ, ಏಪ್ರಿಲ್ 9, 2025 | ₹ 7.00

www.prajavani.net

prajavani.net | prajavani | prajavani | prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಪ್ರಶಸ್ತಿಗೆ ಇನ್ನೂ ಹತ್ತಿರ

ಕನ್ನಡದ ಕಥೆಗಾರ್ತಿ ಬಾನು ಮುಷ್ತಾಕ್ ಅವರ ಸಣ್ಣ ಕತೆಗಳ ಅನುವಾದಿತ ಸಂಕಲನ 'ಹಾರ್ಟ್ ಲ್ಯಾಂಪ್', 2025ರ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಇನ್ನಷ್ಟು ಹತ್ತಿರವಾಗಿದ್ದು, 'ಶಾರ್ಟ್ ಲಿಸ್ಟ್'ನಲ್ಲಿ ಸ್ಥಾನ ಪಡೆದಿದೆ.



ಹೇಳಿಕೆ ತಪ್ಪಾಗಿ ಅರ್ಥೈಸಲಾಗಿದೆ: ಪರಮೇಶ್ವರ

ಪ್ರಜಾವಾಣಿ ವಾರ್ತೆ


ಜಿ.ಪರಮೇಶ್ವರ

ಬೆಂಗಳೂರು: 'ಯುವತಿಯನ್ನು ಹಿಂಬಾಲಿಸಿದ ಯುವಕನೊಬ್ಬ ಅನುಚಿತವಾಗಿ ವರ್ತಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ನಾನು ನೀಡಿದ್ದ ಹೇಳಿಕೆಯನ್ನು ತಪ್ಪಾಗಿ ಅರ್ಥೈಸಿಕೊಳ್ಳಲಾಗಿದೆ' ಎಂದು ಗೃಹ ಸಚಿವ ಜಿ. ಪರಮೇಶ್ವರ ಸ್ಪಷ್ಟನೆ ನೀಡಿದರು.

ಸುದ್ದಿಗಾರರ ಜೊತೆ ಮಂಗಳವಾರ ಮಾತನಾಡಿದ ಅವರು, 'ನಾನು ಗೃಹ ಸಚಿವನಾಗಿದ್ದ ಸಂದರ್ಭಗಳಲ್ಲಿ ಬೆಂಗಳೂರು ನಗರ ಸೇರಿದಂತೆ ರಾಜ್ಯದಾದ್ಯಂತ ಮಹಿಳೆಯರ ಸುರಕ್ಷತೆಗೆ ಏನೆಲ್ಲ ಕ್ರಮ ಕೈಗೊಂಡಿದ್ದೇನೆ ಎಂಬುದನ್ನು ಮುಂದಿನ ದಿನಗಳಲ್ಲಿ ತಿಳಿಸುತ್ತೇನೆ' ಎಂದರು.

'ಬಿಜೆಪಿಯವರ ರಾಜಕೀಯ ಹೊರತುಪಡಿಸಿ, ಒಂದು ವೇಳೆ ನಾಡಿನ ತಾಯಂದಿರ ಮನಸ್ಸಿಗೆ ನೋವಾಗಿದ್ದರೆ ವಿಷಾದ ವ್ಯಕ್ತಪಡಿಸುತ್ತೇನೆ. ನನ್ನ ಹೇಳಿಕೆಯನ್ನು ಬೇರೆಬೇರೆ ರೂಪಕ್ಕೆ ತೆಗೆದುಕೊಂಡು ಹೋಗಬೇಕಿಲ್ಲ' ಎಂದೂ ಹೇಳಿದರು.

ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನಲ್ಲಿ ಏಪ್ರಿಲ್ 3ರಂದು ಮಧ್ಯರಾತ್ರಿ ನಡೆದಿದ್ದ ಘಟನೆಗೆ ಸೋಮವಾರ ಪ್ರತಿಕ್ರಿಯಿಸಿದ್ದ ಪರಮೇಶ್ವರ, 'ದೊಡ್ಡ ನಗರದಲ್ಲಿ ಅಲ್ಲಿ ಇಲ್ಲಿ ಇಂತಹ ಘಟನೆಗಳು ನಡೆಯುತ್ತವೆ' ಎಂದು ಹೇಳಿದ್ದು ಭಾರಿ ಟೀಕೆಗೆ ಗುರಿಯಾಗಿತ್ತು.

'ನನ್ನ ಹೇಳಿಕೆಯನ್ನು ತಿರುಚಿ ಅವಹೇಳನ ಮಾಡುವುದು ಸರಿಯಲ್ಲ. ನಾನು ಮಹಿಳೆಯರ ರಕ್ಷಣೆಗೆ ಅನೇಕ ಕಟ್ಟುನಿಟ್ಟಿನ ಕ್ರಮಗಳನ್ನು ಕೈಗೊಂಡಿದ್ದೇನೆ. ಮಹಿಳೆಯರ ರಕ್ಷಣೆ ಆಗಬೇಕು ಎನ್ನುವ ನಂಬಿಕೆಯಲ್ಲಿದ್ದೇನೆ' ಎಂದೂ ಪರಮೇಶ್ವರ ಹೇಳಿದರು.

ಅಂಗಾಂಗ ದಾನ: ಹೆಚ್ಚಿದ ಒಲವು

ನೊಟ್ಟೊ ಅಡಿ ರಾಜ್ಯದಲ್ಲಿ 45 ವರ್ಷದೊಳಗಿನ 23 ಸಾವಿರ ಮಂದಿ ವಾಗ್ದಾನ

• ವರುಣ ಹೆಗಡೆ

ಬೆಂಗಳೂರು: ರಾಜ್ಯದಲ್ಲಿ ಅಂಗಾಂಗ ದಾನಕ್ಕೆ ಯುವಜನರು ಹೆಚ್ಚಿನ ಒಲವು ತೋರುತ್ತಿದ್ದು, ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯಡಿ (ನೊಟ್ಟೊ) ಯುವಜನರೇ ಅಧಿಕ ಸಂಖ್ಯೆಯಲ್ಲಿ ಅಂಗಾಂಗ ದಾನದ ಪ್ರತಿಜ್ಞೆ ಕೈಗೊಂಡಿದ್ದಾರೆ.

ಬದಲಾದ ಜೀವನ ಶೈಲಿ ಸೇರಿ ವಿವಿಧ ಕಾರಣಗಳಿಂದ ಅಂಗಾಂಗ ವೈಫಲ್ಯಕ್ಕೆ ಒಳಪಡುವವರ ಸಂಖ್ಯೆ ಹೆಚ್ಚುತ್ತಿದ್ದು, ಮೂತ್ರಪಿಂಡ, ಯಕೃತ್ತು, ಹೃದಯ ಸೇರಿ ವಿವಿಧ ಅಂಗಾಂಗಗಳ ಕಸಿಗೆ ರಾಜ್ಯದಲ್ಲಿ 5 ಸಾವಿರಕ್ಕೂ ಹೆಚ್ಚು ಜನರು ಸರ್ಕಾರದ 'ಜೀವಸಾರ್ಥಕತೆ' ಸಂಸ್ಥೆಯಡಿ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಅಂಗಾಂಗಕ್ಕೆ ಬೇಡಿಕೆ ಹೆಚ್ಚಳ, ದಾನಿಗಳ ಕೊರತೆಯ ಕಾರಣ ಸರ್ಕಾರದ ಜತೆಗೆ ಆಸ್ಪತ್ರೆಗಳೂ ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸುತ್ತಿವೆ. ಅಂಗಾಂಗ ದಾನ ಪ್ರಕ್ರಿಯೆ ಪ್ರೋತ್ಸಾಹಿಸಲು ರಾಷ್ಟ್ರ ಮಟ್ಟದಲ್ಲಿ ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ ಹಾಗೂ ರಾಜ್ಯ ಮಟ್ಟದಲ್ಲಿ ರಾಜ್ಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆ (ಸೊಟ್ಟೊ) ಕಾರ್ಯನಿರ್ವಹಿಸುತ್ತಿವೆ. ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡಿಸಲು ಹಾಗೂ ದಾನಿಗಳ ಸಂಖ್ಯೆ ಹೆಚ್ಚಿಸಲು ನೊಟ್ಟೊ 2023ರಲ್ಲಿ ಕ್ಯೂಆರ್ ಕೋಡ್ ಕೂಡ ಪರಿಚಯಿಸಿದೆ. ನೊಟ್ಟೊ ಅಡಿ ಅಂಗಾಂಗ ಪ್ರತಿಜ್ಞೆ ಮಾಡಿದ 34 ಸಾವಿರ ಮಂದಿಯಲ್ಲಿ 23 ಸಾವಿರಕ್ಕೂ ಅಧಿಕ ಮಂದಿ 45 ವರ್ಷದೊಳಗಿನವರಾಗಿದ್ದಾರೆ.

ರಸ್ತೆ ಅಪಘಾತ ಸೇರಿ ವಿವಿಧ ಸಂದರ್ಭದಲ್ಲಿ ಮಿದುಳು ನಿಷ್ಕ್ರಿಯಗೊಂಡವರು ಅಂಗಾಂಗ ದಾನ ಮಾಡಬಹುದಾಗಿದೆ. ಒಬ್ಬ ದಾನಿಯು ಹೃದಯ, ಮೂತ್ರಪಿಂಡ, ಶ್ವಾಸಕೋಶ, ಯಕೃತ್ತು, ಸಣ್ಣ ಕರುಳು ಹಾಗೂ ಮೇದೋಜೀರಕ ಗ್ರಂಥಿ ದಾನದ ಮೂಲಕ ಎಂಟು ಜೀವಗಳಿಗೆ, ಹೃದಯದ ಕವಾಟ, ಚರ್ಮ, ಕಣ್ಣುಗುಡ್ಡೆ ಸೇರಿ ವಿವಿಧ ಅಂಗಾಂಶಗಳ ನೆರವಿನಿಂದ 50 ಮಂದಿಗೆ ನೆರವಾಗಬಹುದು. ಅಂಗಾಂಗ ದಾನಕ್ಕೆ ಯಾವುದೇ ವಯಸ್ಸಿನ ಮಿತಿಯಿಲ್ಲ. ಇದರಿಂದಾಗಿ ವಿವಿಧ ವಯೋಮಾನದವರು ಅಂಗಾಂಗ ದಾನದ ಪ್ರತಿಜ್ಞೆ ಕೈಗೊಳ್ಳುತ್ತಿದ್ದಾರೆ. ಈ ರೀತಿ ಪ್ರತಿಜ್ಞೆ ಕೈಗೊಂಡವರ ಅಂಗಾಂಗವನ್ನು ಮರಣದ ಬಳಿಕ ಪಡೆಯಲಾಗುತ್ತದೆ.

ಮಹಿಳೆಯರೇ ಅಧಿಕ: ನೊಟ್ಟೊ ಅಡಿ ಅಂಗಾಂಗ ದಾನಕ್ಕೆ ಪ್ರತಿಜ್ಞೆ ಕೈಗೊಂಡವರಲ್ಲಿ ಮಹಿಳೆಯರ ಸಂಖ್ಯೆಯೇ ಅಧಿಕವಿದೆ. 18 ಸಾವಿರಕ್ಕೂ ಅಧಿಕ ಮಹಿಳೆಯರು ಅಂಗಾಂಗ ದಾನದ ಪ್ರತಿಜ್ಞೆ ಕೈಗೊಂಡರೆ, 16,035 ಪುರುಷರು ಅಂಗಾಂಗ ದಾನದ ಪ್ರತಿಜ್ಞೆ ಮಾಡಿದ್ದಾರೆ. ಮಾನವ ಅಂಗಾಂಗ ದಾನ ಕಸಿ ಕಾಯ್ದೆ–1994 ಅಂಗಾಂಗ ದಾನಕ್ಕೆ ಉತ್ತೇಜನ ನೀಡುತ್ತಿದೆ. ಮಿದುಳು ನಿಷ್ಕ್ರಿಯಗೊಂಡ ಯಾವುದೇ ವ್ಯಕ್ತಿಯ ಅಂಗಾಂಗಗಳನ್ನು ದಾನ ಮಾಡಬಹುದಾಗಿದೆ. ಕಳೆದ ಮೂರು ವರ್ಷಗಳಿಂದ ವಾರ್ಷಿಕ 150ಕ್ಕೂ ಅಧಿಕ ಮಂದಿಯ ಅಂಗಾಂಗವನ್ನು ದಾನವಾಗಿ ಪಡೆಯಲಾಗಿದೆ. ಈ ವರ್ಷ ಮೂರು ತಿಂಗಳಲ್ಲಿ 58 ಮಂದಿ ಅಂಗಾಂಗ ದಾನ ಮಾಡಿದ್ದಾರೆ.

'ರಾಜ್ಯದಲ್ಲಿ ಅಂಗಾಂಗ ದಾನ ಉತ್ತೇಜಿಸಲು ಅಂಗಾಂಗ ದಾನಿಗಳ ಕುಟುಂಬಸ್ಥರಿಗೆ ಸರ್ಕಾರದ ವತಿಯಿಂದ ಪ್ರಶಂಸನಾ ಪತ್ರಗಳನ್ನು ನೀಡಲಾಗುತ್ತಿದೆ. ಗಣರಾಜ್ಯೋತ್ಸವ, ಸ್ವಾತಂತ್ರ್ಯೋತ್ಸವ ಸಮಾರಂಭದಲ್ಲಿ ಗೌರವಿಸಲಾಗುತ್ತಿದೆ. ಅಂಗಾಂಗ ದಾನದ ಬಗ್ಗೆ ಜಾಗೃತಿ ಮೂಡುತ್ತಿದ್ದು, ಪ್ರತಿಜ್ಞೆ ಕೈಗೊಳ್ಳುತ್ತಿರುವವರ ಸಂಖ್ಯೆ ಹೆಚ್ಚಾಗುತ್ತಿದೆ' ಎಂದು ಇಲಾಖೆಯ ಅಧಿಕಾರಿಯೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದರು.



ಅಂಗಾಂಗ ದಾನದ ಬಗ್ಗೆ ಎಲ್ಲೆಡೆ ಜಾಗೃತಿ ಮೂಡಿಸಲಾಗುತ್ತಿದೆ. ಅಂಗಾಂಗ ದಾನಿಗಳ ಕುಟುಂಬವನ್ನು ಸನ್ಮಾನಿಸಲಾಗುತ್ತಿದ್ದು, ದಾನಿಗಳು ಸ್ವಯಂಪ್ರೇರಿತರಾಗಿ ಮುಂದೆ ಬರಬೇಕು

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

ಎಲ್ಲ ಜಿಲ್ಲೆಗಳಲ್ಲೂ ಪ್ರತಿಜ್ಞೆ

ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ವಿವಿಧ ವಯೋಮಾನದವರು ರಾಷ್ಟ್ರೀಯ ಅಂಗ ಮತ್ತು ಅಂಗಾಂಶ ಕಸಿ ಸಂಸ್ಥೆಯಡಿ ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿಕೊಂಡಿದ್ದಾರೆ. ಬಳ್ಳಾರಿಯಲ್ಲಿ (8,024) ಗರಿಷ್ಠ ಮಂದಿ ಪ್ರತಿಜ್ಞೆ ಕೈಗೊಂಡಿದ್ದಾರೆ. ಧಾರವಾಡ (7,524), ಬೆಂಗಳೂರು ನಗರ (2,457), ಕೋಲಾರ (1,781), ದಕ್ಷಿಣ ಕನ್ನಡ (1,399), ಕೊಪ್ಪಳ (1,094) ಹಾಗೂ ಹಾವೇರಿಯಲ್ಲಿ (1,056) ಸಾವಿರಕ್ಕೂ ಅಧಿಕ ಮಂದಿ ಅಂಗಾಂಗ ದಾನಕ್ಕೆ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಅಂಕಿ ಅಂಶಗಳು

1,150
2007ರಿಂದ ಈವರೆಗೆ ಅಂಗಾಂಗ ದಾನ ಮಾಡಿದವರು

5,628
2007ರಿಂದ ಈವರೆಗೆ ಪಡೆದ ಅಂಗಾಂಗ ಹಾಗೂ ಅಂಗಾಂಶಗಳು

ರಾಜ್ಯದಲ್ಲಿ ನೊಟ್ಟೊ ಅಡಿ ಅಂಗಾಂಗ ದಾನ ಪ್ರತಿಜ್ಞೆ

ವರ್ಷ	ಪ್ರತಿಜ್ಞೆ ಮಾಡಿದವರು
18-30	7,797
30-45	15,326
45-60	8,022
60+	3,023

ಅಂಗಾಂಗ ದಾನಕ್ಕೆ ಕ್ಯೂಆರ್ ಕೋಡ್

ಸಂಕ್ಷಿಪ್ತ ಸುದ್ದಿ

ನಟ ದರ್ಶನ್ ವಿಚಾರಣೆಗೆ ಗೈರು

ಬೆಂಗಳೂರು: ಚಿತ್ರದುರ್ಗದ ರೇಣುಕ ಸ್ವಾಮಿ ಕೊಲೆ ಪ್ರಕರಣದ ವಿಚಾರಣೆ ಸಿಸಿಎಚ್ 57ನೇ ನ್ಯಾಯಾಲಯದಲ್ಲಿ ಮಂಗಳವಾರ ನಡೆಯಿತು. ನಟ ದರ್ಶನ್ ಹೊರತು ಪಡಿಸಿ ಎಲ್ಲ ಆರೋಪಿಗಳು ವಿಚಾರಣೆಗೆ ಹಾಜರಾಗಿದ್ದರು.

'ತೀವ್ರ ಬೆನ್ನು ನೋವಿನಿಂದಾಗಿ ದರ್ಶನ್ ಹಾಜರಾಗಲು ಸಾಧ್ಯವಿಲ್ಲ' ಎಂದು ನಟನ ಪರ ವಕೀಲರು ತಿಳಿಸಿದರು. ಇದಕ್ಕೆ ಅಸಮಾಧಾನಗೊಂಡ ನ್ಯಾಯಾಧೀಶರು, 'ಮುಂದೆ ವಿಚಾರಣೆ ವೇಳೆ ದರ್ಶನ್ ಖುದ್ದು ಹಾಜರಾಗಬೇಕು' ಎಂದು ಸೂಚನೆ ನೀಡಿದರು. ಮೇ 20ಕ್ಕೆ ವಿಚಾರಣೆ ಮುಂದೂಡಲಾಯಿತು. ವಿಚಾರಣೆ ಬಳಿಕ ಹೊರಗೆ ಬಂದ ಪವಿತ್ರಾ ಗೌಡ ಅವರನ್ನು ಪ್ರಶ್ನಿಸಿದಾಗ, 'ಏನು ಹೇಳಲಿ' ಎಂದಷ್ಟೇ ಉತ್ತರಿಸಿ ಕಾರು ಹತ್ತಿ ಹೊರಟರು.

'ರೀಲ್ಸ್ ಸ್ಟಾರ್'ಗಳಿಗೆ ಪೊಲೀಸರ ಎಚ್ಚರಿಕೆ

ಬೆಂಗಳೂರು: ಐಪಿಎಲ್ ಬೆಟ್ಟಿಂಗ್ ಕುರಿತು ವಾಟ್ಸ್‌ಆ್ಯಪ್ ಹಾಗೂ ಇನ್‌ಸ್ಟಾಗ್ರಾಂನಲ್ಲಿ ಸ್ಟೇಟಸ್ ಹಾಕುತ್ತಿದ್ದ ರೀಲ್ಸ್ ಸ್ಟಾರ್‌ಗಳಿಗೆ ಸೈಬರ್ ಅಪರಾಧ ವಿಭಾಗದ ಪೊಲೀಸರು ಎಚ್ಚರಿಸಿದ್ದಾರೆ.

ಗೆಲ್ಲುವ ಹಾಗೂ ಸೋಲುವ ತಂಡ ಯಾವುದು ಎಂಬುದಾಗಿ ರೀಲ್ಸ್ ಸ್ಟಾರ್‌ಗಳು ಸಾಮಾಜಿಕ ಮಾಧ್ಯಮಗಳಲ್ಲಿ ಸ್ಟೇಟಸ್ ಹಾಕುತ್ತಿದ್ದರು. ಅದನ್ನು ಗಮನಿಸಿದ ಸೈಬರ್ ಠಾಣೆಯ ಪೊಲೀಸರು, ಅವರನ್ನು ಕರೆಸಿ ಎಚ್ಚರಿಕೆ ನೀಡಿ ಕಳುಹಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ರಾಜ್ಯ ಸರ್ಕಾರಕ್ಕೆ ಹೈಕೋರ್ಟ್ ಆದೇಶ

'ಜಾಡಮಾಲಿ' ಸಲ್ಲ; ಸ್ವಚ್ಛತಾ ನೌಕರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಇನ್ನು ಮುಂದೆ ಸರ್ಕಾರ 'ಜಾಡಮಾಲಿ' ಪದ ಬಳಸಬಾರದು. ಇದಕ್ಕೆ ಪರ್ಯಾಯವಾಗಿ ಸ್ವಚ್ಛತಾ ಸಹಾಯಕ ಎಂದೇ ಬಳಸಬೇಕು' ಎಂದು ಹೈಕೋರ್ಟ್ ಆದೇಶಿಸಿದೆ.



'ನಮ್ಮ ಸೇವೆಯನ್ನು ಕಾಯಂಗೊಳಿಸಬೇಕು' ಎಂದು ಕೋರಿ ತುಮಕೂರು ಜಿಲ್ಲಾ ಮೀಸಲು ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ರಮೇಶ್ ಬಾಬು ಸೇರಿ ರಾಜ್ಯದ ವಿವಿಧೆಡೆಯ 31 ಠಾಣೆಗಳಲ್ಲಿನ ಜಾಡಮಾಲಿ (SWEEPER) ಪೊಲೀಸ್ ವರ್ಗ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ಹಿರಿಯ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಮತ್ತು ನ್ಯಾಯಮೂರ್ತಿ ರಾಮಚಂದ್ರ ಡಿ.ಹುದ್ದಾರ ಅವರಿದ್ದ ವಿಭಾಗೀಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಹೆಚ್ಚುವರಿ ಅಡ್ವೊಕೇಟ್ ಜನರಲ್ ಎಸ್.ಎ. ಅಹಮದ್, 'ಸರ್ಕಾರ ಜಾಡಮಾಲಿ ಪದ ಬಳಸುತ್ತಿರುವುದು ಸರಿಯಲ್ಲ. ಆದ್ದರಿಂದ, ಈ ಪದಕ್ಕೆ ಪರ್ಯಾಯವಾಗಿ ಸ್ವಚ್ಛತಾ ನೌಕರ ಎಂಬುದನ್ನು ಬಳಸುವಂತೆ ನ್ಯಾಯಪೀಠ ಆದೇಶಿಸಬೇಕು' ಎಂದು ಕೋರಿದರು.

ಈ ಮನವಿಯನ್ನು ಮುಕ್ತವಾಗಿ ಶ್ಲಾಘಿಸಿ, ಪುರಸ್ಕರಿಸಿದ ನ್ಯಾಯಪೀಠ; 'ಸಮಾಜಕ್ಕೆ ಅಮೂಲ್ಯ ಸೇವೆ ಸಲ್ಲಿಸುವ ಒಂದು ವರ್ಗದ ನೌಕರರನ್ನು ಉದ್ದೇಶಿಸುವ ಪದ ಗೌರವದಿಂದ ಕೂಡಿರಬೇಕು. ಹೀಗಾಗಿ, ಸರ್ಕಾರ ಇನ್ನು ಮುಂದೆ ಜಾಡಮಾಲಿ ಪದದ ಬಳಕೆಯ ಬದಲಾಗಿ ಸ್ವಚ್ಛತಾ ನೌಕರ ಎಂಬುದಾಗಿಯೇ ಬಳಸತಕ್ಕದ್ದು' ಎಂದು ನ್ಯಾಯಾಂಗ ಆದೇಶ ಹೊರಡಿಸಿತು.

ಬೂಕರ್ ಶಾರ್ಟ್ ಲಿಸ್ಟ್‌ನಲ್ಲಿ ಬಾನು ಮುಷ್ತಾಕ್ 'ಕತೆಗಳು'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕನ್ನಡದ ಹೆಸರಾಂತ ಸಾಹಿತಿ ಬಾನು ಮುಷ್ತಾಕ್ ಅವರ ಸಣ್ಣ ಕತೆಗಳ ಅನುವಾದಿತ ಸಂಕಲನ 'ಹಾರ್ಟ್ ಲ್ಯಾಂಪ್', 2025ರ ಅಂತರರಾಷ್ಟ್ರೀಯ ಬೂಕರ್ ಪ್ರಶಸ್ತಿಗೆ ಇನ್ನಷ್ಟು ಹತ್ತಿರವಾಗಿದ್ದು, 'ಶಾರ್ಟ್ ಲಿಸ್ಟ್'ನಲ್ಲಿ ಸ್ಥಾನ ಪಡೆದಿದೆ.

ದೀಪಾ ಭಸ್ತಿ ಅವರು ಬಾನು ಅವರ ಕತೆಗಳನ್ನು ಇಂಗ್ಲಿಷ್‌ಗೆ ಅನುವಾದಿಸಿದ್ದಾರೆ. ಇದೇ ಮೊದಲ ಬಾರಿಗೆ ಕನ್ನಡದ ಕಥೆಗಾರ್ತಿಯೊಬ್ಬರ ಕೃತಿಯು ಪ್ರತಿಷ್ಠಿತ ಈ ಪ್ರಶಸ್ತಿಯ ಅಂತಿಮ ಆಯ್ಕೆ ಪಟ್ಟಿಯಲ್ಲಿ ಸ್ಥಾನ ಪಡೆದಿದೆ.

ಲಂಡನ್‌ನ ಟೇಟ್ ಮಾಡರ್ನ್ ಗ್ಯಾಲರಿಯಲ್ಲಿ ಏಪ್ರಿಲ್ 20ರಂದು ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ವಿಜೇತರ ಹೆಸರು ಘೋಷಿಸಲಾಗುತ್ತದೆ. ಪ್ರಶಸ್ತಿಯ ಮೊತ್ತ 50 ಸಾವಿರ ಪೌಂಡ್ (₹55 ಲಕ್ಷಕ್ಕೂ ಹೆಚ್ಚು) ಇದೆ.

1990 ಮತ್ತು 2023ರ ನಡುವೆ ಪ್ರಕಟಗೊಂಡ 12 ಕತೆಗಳನ್ನು ಈ ಸಂಕಲನ ಒಳಗೊಂಡಿದೆ. ಮುಸ್ಲಿಂ ಸಮುದಾಯದ ಬಾಲಕಿಯರು ಹಾಗೂ ಹೆಣ್ಣುಮಕ್ಕಳ ದೈನಂದಿನ ಬದುಕು ಈ ಕತೆಗಳಲ್ಲಿ ಅನಾವರಣಗೊಂಡಿದೆ.

ತಮ್ಮ ಕೃತಿಯು ಪ್ರಶಸ್ತಿಯ 'ಲಾಂಗ್ ಲಿಸ್ಟ್'ಗೆ ಆಯ್ಕೆಗೊಂಡ ಸಂದರ್ಭದಲ್ಲಿ 'ಪ್ರಜಾವಾಣಿ'ಯೊಂದಿಗೆ ಮಾತನಾಡಿದ್ದ ಬಾನು ಮುಷ್ತಾಕ್ ಅವರು, 'ಆಯಾ ಕಾಲಘಟ್ಟದ ಸವಾಲುಗಳು, ಮಹಿಳೆಯರ ಮೇಲೆ ಬೀರಬಹುದಾದ ಪರಿಣಾಮ, ಸಮಾಜದ ಶೋಷಕ ನಿಲುವು, ಪುರುಷ ಪ್ರಾಧಾನ್ಯದ ಆಕ್ರಮಣ, ಅದನ್ನು ಮೀರುವ ಹೆಣ್ಣು ಮಕ್ಕಳ ಪ್ರಯತ್ನ ಎಲ್ಲವೂ ಈ ಕೃತಿಯಲ್ಲಿ ಭಿನ್ನವಾಗಿ ಸೇರಿಕೊಂಡಿವೆ' ಎಂದು ಪ್ರತಿಕ್ರಿಯಿಸಿದ್ದರು.

ಫ್ರೆಂಚ್‌ನಿಂದ ಅನುವಾದಿತ ಎರಡು ಕೃತಿಗಳು, ಜಪಾನ್, ಇಟಾಲಿಯನ್ ಹಾಗೂ ಡ್ಯಾನಿಷ್ ಭಾಷೆಯ ತಲಾ ಒಂದು ಕೃತಿ 'ಶಾರ್ಟ್ ಲಿಸ್ಟ್'ನಲ್ಲಿವೆ.

'ಎಮರ್ಜೆನ್ಸಿ ಬಟನ್: ದೂರಿದ್ದರೆ ತಿಳಿಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಹಿಳೆಯರು ಮತ್ತು ಮಕ್ಕಳ ಸುರಕ್ಷತೆಗಾಗಿ ಸಾರ್ವಜನಿಕ ಸೇವಾ ವಾಹನಗಳಲ್ಲಿ ಅಳವಡಿಸಿರುವ ಎಮರ್ಜೆನ್ಸಿ ಬಟನ್‌ಗಳಲ್ಲಿ ತಾಂತ್ರಿಕ ದೋಷ ಕಂಡುಬಂದರೆ ಇ–ಮೇಲ್ ಇಲ್ಲವೇ ಕರೆ ಮಾಡುವಂತೆ ಸಾರಿಗೆ ಮತ್ತು ರಸ್ತೆ ಸುರಕ್ಷತೆ ಆಯುಕ್ತ ಎ.ಎಂ. ಯೋಗೀಶ್ ತಿಳಿಸಿದ್ದಾರೆ.

ನಿರ್ಭಯ ಯೋಜನೆಯಡಿ ಸಾರ್ವಜನಿಕ ಸಾರಿಗೆ ವಾಹನಗಳಿಗೆ 'ವೆಹಿಕಲ್ ಲೊಕೇಶನ್ ಟ್ರ್ಯಾಕಿಂಗ್ ಡಿವೈಸ್ ಆ್ಯಂಡ್ ಎಮರ್ಜೆನ್ಸಿ ಬಟನ್' ಅಳವಡಿಸುವ ಯೋಜನೆ ಜಾರಿಯಾಗಿತ್ತು. ವಾಹನಗಳ ಚಲನವಲನದ ಮೇಲೆ ನಿಗಾ ವಹಿಸಲು, ತುರ್ತು ಸಂದರ್ಭದಲ್ಲಿ ಸಂದೇಶ ರವಾನಿಸಲು ಈ ಯೋಜನೆ ರೂಪಿಸಲಾಗಿತ್ತು. ಆದರೆ, ಸಾರಿಗೆ ಆಯುಕ್ತರ ಕಚೇರಿಯಲ್ಲಿ ಸ್ಥಾಪಿಸಲಾಗಿರುವ 'ಕಮಾಂಡ್ ಆ್ಯಂಡ್ ಕಂಟ್ರೋಲ್ ಸೆಂಟರ್'ಗೆ ಸಂದೇಶ ರವಾನೆ ಆಗುತ್ತಿಲ್ಲ ಎಂಬ ದೂರುಗಳು ಸಾರ್ವಜನಿಕರಿಂದ ಬಂದಿದ್ದವು.

ಈ ಬಗ್ಗೆ ಪರಿಶೀಲಿಸಿದಾಗ ಕೆಲವು ವಾಹನಗಳಲ್ಲಿ ವಿಎಲ್‌ಟಿ ಸಾಧನಗಳ ವೈರ್ ತುಂಡಾಗಿರುವುದು, ಅಸಮರ್ಪಕ ಜೋಡಣೆ ಮಾಡಿರುವುದು, ಸ್ವಿಚ್ ಆನ್ ಆಗದೇ ಇರುವುದು ಮುಂತಾದ ಸಮಸ್ಯೆಗಳು ಕಂಡುಬಂದಿದ್ದವು. ಮುಂದೆ ಇಂಥ ದೋಷಗಳು ಕಂಡು ಬಂದರೆ surakshamitr-ka@cda.inಗೆ ಮೇಲ್ ಕಳುಹಿಸಬಹುದು. ಇಲ್ಲವೇ ಮೊಬೈಲ್: 9059955319 ಸಂಪರ್ಕಿಸಿ ಪರಿಹಾರ ಪಡೆದುಕೊಳ್ಳಹುದು ಎಂದು ಆಯುಕ್ತರು ತಿಳಿಸಿದ್ದಾರೆ.

ಹಿಮವದ್ ಗೋಪಾಲಸ್ವಾಮಿ ಬೆಟ್ಟದಲ್ಲಿ ಚಿತ್ರೀಕರಣ: ಆಕ್ರೋಶ

ಗುಂಡ್ಲುಪೇಟೆ (ಚಾಮರಾಜನಗರ ಜಿಲ್ಲೆ): ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದೊಳಗಿರುವ ಹಿಮವದ್ ಗೋಪಾಲಸ್ವಾಮಿ ಬೆಟ್ಟದ ದೇವಾಲಯದ ಆವರಣದಲ್ಲಿ ಸಿನಿಮಾ ಚಿತ್ರೀಕರಣಕ್ಕೆ ಅವಕಾಶ ನೀಡಿರುವ ಅರಣ್ಯ ಇಲಾಖೆಯ ಕ್ರಮಕ್ಕೆ ಸ್ಥಳೀಯರು ಹಾಗೂ ಪರಿಸರ ಪ್ರೇಮಿಗಳು ತೀವ್ರ ವಿರೋಧ ವ್ಯಕ್ತಪಡಿಸಿದ್ದಾರೆ.

'ಭಕ್ತರು ಹಾಗೂ ಪ್ರವಾಸಿಗರ ವಾಹನಗಳನ್ನು ಬೆಟ್ಟದ ತಪ್ಪಲಲ್ಲೇ ತಡೆಯಲಾಗುತ್ತದೆ. ಚಿತ್ರತಂಡವು ಮಂಗಳವಾರ ದೇವಾಲಯದ ಆವರಣದಲ್ಲಿ ಸಂಚಾರಿ ಯೂನಿಟ್‌ಗಳೊಂದಿಗೆ ದೊಡ್ಡ ಕ್ಯಾಮೆರಾ, ಪರದೆ ಬಳಸಿ ಚಿತ್ರೀಕರಣ ಮಾಡಿದೆ. ದೇಗುಲದ ಮೆಟ್ಟಿಲ ಬಳಿ ಚಿತ್ರೀಕರಿಸಲಾಗಿದೆ. ವಾಹನಗಳನ್ನು ದೇಗುಲದ ಬಳಿ ಕೊಂಡೊಯ್ಯಲಾಗಿದೆ. ಹುಲಿ ಸಂರಕ್ಷಿತ ಪ್ರದೇಶದಲ್ಲಿ ಇಂತಹ ಚಟುವಟಿಕೆಗಳಿಗೆ ಅನುಮತಿ ನೀಡಿರುವುದು ಖಂಡನೀಯ' ಎಂದು ರೈತ ಸಂಘಟನೆ ಜಿಲ್ಲಾ ಕಾರ್ಯದರ್ಶಿ ಹಂಗಳ ಮಾಧು ಆಕ್ಷೇಪ ವ್ಯಕ್ತಪಡಿಸಿದ್ದಾರೆ.

'ಅವಕಾಶ ನೀಡಿರುವುದು ಖಂಡನೀಯ' ಎಂದು ರೈತ ಸಂಘದ ಜಿಲ್ಲಾ ಘಟಕದ ಅಧ್ಯಕ್ಷ ಮಾಡ್ರಳ್ಳಿ ಮಹದೇವಪ್ಪ ಹೇಳಿದ್ದಾರೆ. 'ದೇವಾಲಯದ ಆವರಣದಲ್ಲಿ ಒಂದು ದಿನ ಚಿತ್ರೀಕರಣ ನಡೆಸಲು ಚಿತ್ರತಂಡ ಸರ್ಕಾರದಿಂದ ನೇರ ಅನುಮತಿ ಪಡೆದಿದೆ. ಕಾಡಿನೊಳಗೆ ಚಿತ್ರೀಕರಣ ನಡೆಸಲು ಅರಣ್ಯ ಇಲಾಖೆ ಅನುಮತಿ ನೀಡುವುದಿಲ್ಲ' ಎಂದು ಎಸಿಎಫ್ ನವೀನ್ ಕುಮಾರ್ ಪ್ರತಿಕ್ರಿಯಿಸಿದರು.

ಉಳಿದ ಜೀವನ ಪರಿಸರ ಸಂರಕ್ಷಣೆಗೆ ಮುಡಿಪು: ರಾಮಸ್ವಾಮಿ

'ಪರಿಸರಕ್ಕಾಗಿ ನಾವು' 12ರಂದು ಅಸ್ತಿತ್ವಕ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಅಧ್ಯಕ್ಷತೆಯಲ್ಲಿ 'ಪರಿಸರಕ್ಕಾಗಿ ನಾವು' ಸಂಘಟನೆಯು ಏಪ್ರಿಲ್ 12ರಂದು ಅಸ್ತಿತ್ವಕ್ಕೆ ಬರಲಿದೆ. ಅಂದು ನಗರದ ಸೇಂಟ್ ಜೋಸೆಫ್ ಕಾನೂನು ಮಹಾವಿದ್ಯಾಲಯದಲ್ಲಿ ಸಂಘಟನೆಗೆ ಚಾಲನೆ ದೊರೆಯಲಿದೆ.

ಈ ಕುರಿತು ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಎ.ಟಿ. ರಾಮಸ್ವಾಮಿ, 'ಬೇರೆಲ್ಲ ಕೆಲಸಗಳಿಗಿಂತಲೂ ಪರಿಸರದ ಸಂರಕ್ಷಣೆ ಬಹಳ ಮಹತ್ವದ್ದು. ಅದಕ್ಕಾಗಿ ನನ್ನ ಭವಿಷ್ಯದ ಸಂಪೂರ್ಣ ಸಮಯವನ್ನು ಪರಿಸರ ಸಂರಕ್ಷಣೆಗಾಗಿ ಮೀಸಲಿಡಲು ತೀರ್ಮಾನಿಸಿದ್ದೇನೆ. ರಾಜ್ಯದ ಬೇರೆ ಬೇರೆ ಪರಿಸರ ಸಂಘಟನೆಗಳು, ಪರಿಸರಾಸಕ್ತರು, ತಜ್ಞರನ್ನು ಒಳಗೊಂಡ ರಾಜ್ಯಮಟ್ಟದ 'ಪರಿಸರಕ್ಕಾಗಿ ನಾವು' ಸಂಘಟನೆಯ ನೇತೃತ್ವವನ್ನು ವಹಿಸಿಕೊಳ್ಳುತ್ತಿದ್ದೇನೆ' ಎಂದು ಮಾಹಿತಿ ನೀಡಿದರು.

ಮುಖ್ಯಾಂಶಗಳು

- ಮಾಜಿ ಶಾಸಕ ಎ.ಟಿ. ರಾಮಸ್ವಾಮಿ ಅಧ್ಯಕ್ಷತೆಯಲ್ಲಿ ಸಂಘಟನೆ ರಚನೆ
- ಪರಿಸರದ ಬಗ್ಗೆ ಜಾಗೃತಿ ಮೂಡಿಸಲು1,000 ಪರಿಸರ ಕಾರ್ಯಕರ್ತರು ತಯಾರಿ
- ಪರಿಸರಕ್ಕೆ ಪೂರಕವಾಗಿ ಸರ್ಕಾರ ಕೆಲಸ ಮಾಡುತ್ತಿಲ್ಲ: ನಾಗೇಶ ಹೆಗಡೆ ಬೇಸರ


ಎ.ಟಿ. ರಾಮಸ್ವಾಮಿ

'ವಿಷಮುಕ್ತ ಭೂಮಿ, ಕುಡಿಯಲು ಶುದ್ಧ ನೀರು, ಉಸಿರಾಡಲು ಸ್ವಚ್ಛ ಗಾಳಿಯನ್ನು ಮುಂದಿನ ಪೀಳಿಗೆಗೆ ಬಿಟ್ಟುಹೋಗಬೇಕು. ಈಗಾಗಲೇ ನಾವು ಪರಿಸರವನ್ನು ವಿಷಮಯಗೊಳಿಸುತ್ತಾ ತಪ್ಪುಗಳನ್ನು ಮಾಡಿದ್ದೇವೆ. ಇನ್ನಾದರೂ ತಿದ್ದಿಕೊಳ್ಳಬೇಕಿದೆ. ಎಲ್ಲರೂ ಸ್ವಚ್ಛ, ಸ್ವಸ್ಥ, ಹಸಿರು ಸಮಾಜದ ನಿರ್ಮಾಣಕ್ಕಾಗಿ ಶ್ರಮಿಸಬೇಕು' ಎಂದು ಸಲಹೆ ನೀಡಿದರು.

ಪರಿಸರ ವಿಜ್ಞಾನ ಬರಹಗಾರ ನಾಗೇಶ ಹೆಗಡೆ ಮಾತನಾಡಿ, 'ಅರಣ್ಯ ಇಲಾಖೆ, ಕೃಷಿ ಇಲಾಖೆ, ನೀರಾವರಿ ಇಲಾಖೆ, ಶಿಕ್ಷಣ ಇಲಾಖೆ, ವಾರ್ತಾ ಇಲಾಖೆ, ಯುವಜನ ಇಲಾಖೆ ಸೇರಿದಂತೆ 14 ಇಲಾಖೆಗಳು ಪರಿಸರಕ್ಕೆ ಪೂರಕವಾಗಿ ಕೆಲಸ ಮಾಡುವ ಅವಕಾಶ ಇದ್ದರೂ ಮಾಡುತ್ತಿಲ್ಲ' ಎಂದು ಬೇಸರ ವ್ಯಕ್ತಪಡಿಸಿದರು.

'ಪರಿಸರದ ಬಗ್ಗೆ ಜಾಗೃತಿ ಮೂಡಿಸಲು, ಪರಿಸರ ಸಂಬಂಧಿ ದಿನಗಳನ್ನು ಆಚರಿಸಲು ಸರ್ಕಾರಕ್ಕೆ ಸಹಕಾರ ನೀಡಲು ನಮ್ಮಲ್ಲಿ ತರಬೇತಿ ಹೊಂದಿರುವ 1,200ಕ್ಕೂ ಅಧಿಕ ಪರಿಸರ ಕಾರ್ಯಕರ್ತರು ತಯಾರಿದ್ದಾರೆ' ಎಂದು ತಿಳಿಸಿದರು.

'ಪರಿಸರಕ್ಕಾಗಿ ನಾವು' ಸಂಘಟನೆಯ ಅ.ನ. ಯಲ್ಲಪ್ಪ ರೆಡ್ಡಿ, ಭಾರ್ಗವಿ ವಿ.ಎಸ್. ರಾವ್, ರೇಣುಕಾಪ್ರಸಾದ್, ಪಾರ್ವತಿ ಶ್ರೀರಾಂ, ಸಿಕಂದರ್ ಸಿ.ಎಚ್. ಸುದ್ದಿಗೋಷ್ಠಿಯಲ್ಲಿ ಉಪಸ್ಥಿತರಿದ್ದರು.

ಬುಧವಾರ, ಏಪ್ರಿಲ್ 9, 2025 | ಬೆಂಗಳೂರು | ₹ 7.00 | ಸಂಪುಟ 78 | ಸಂಚಿಕೆ 98 | ಪುಟ 20
www.prajavani.net
prajavani.net prajavani prajavani prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಶತಕದ ಸಂಭ್ರಮ
ಪಂಜಾಬ್ ಕಿಂಗ್ಸ್ ತಂಡದ ಆರಂಭದ ಆಟಗಾರ ಪ್ರಿಯಾಂಶ್ ಆರ್ಯ ಅವರು ಮುಲ್ಲನಪುರದಲ್ಲಿ ಮಂಗಳವಾರ ನಡೆದ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧದ ಐಪಿಎಲ್ ಪಂದ್ಯದಲ್ಲಿ ಶತಕ ಸಿಡಿಸಿ ಸಂಭ್ರಮಿಸಿದರು.

ಮಹಿಳಾ ಮತ
ನ್ಯಾಯಾಂಗ: ಮಹಿಳೆಯರ ಪ್ರಾತಿನಿಧ್ಯ ಅತ್ಯಲ್ಪ
ಬಿಜೆಪಿ ನೀತಿ ವಿರುದ್ಧ 'ಕೈ' 'ನ್ಯಾಯ' ಹೋರಾಟ 16
'ಡಕಾಯಿತರನ್ನು ಮೀರಿಸಿದ ಕಾಂಗ್ರೆಸ್ಸಿಗರು' 9

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
74,227	22,535	₹93,000 (ಬೆಂಗಳೂರು)	₹94,900 (ಬೆಂಗಳೂರು)	86.26

ಶೇ 73.45ರಷ್ಟು ವಿದ್ಯಾರ್ಥಿಗಳು ತೇರ್ಗಡೆ ● ಹಿಂದಿನ ವರ್ಷಕ್ಕೆ ಹೋಲಿಸಿದರೆ ಶೇ 7.70ರಷ್ಟು ಕುಸಿತ

ಪಿಯು: ಹೆಣ್ಣು ಮಕ್ಕಳಿಗೆ ಕಿರೀಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಫಲಿತಾಂಶ ಪ್ರಕಟವಾಗಿದ್ದು, ಈ ಬಾರಿಯೂ ವಿದ್ಯಾರ್ಥಿನಿಯರೇ ಅತ್ಯುತ್ತಮ ಸಾಧನೆ (ಶೇ 77.88) ಮೆರೆದಿದ್ದಾರೆ. ಕಲಾ, ವಾಣಿಜ್ಯ, ವಿಜ್ಞಾನದ ಮೂರೂ ವಿಭಾಗಗಳಲ್ಲೂ ಮೊದಲ ಸ್ಥಾನದ ಕಿರೀಟವನ್ನು ಬಾಲಕಿಯರು ತಮ್ಮ ಮುಡಿಗೇರಿಸಿಕೊಂಡಿದ್ದಾರೆ.

2024–25ರಲ್ಲಿ ಪರೀಕ್ಷೆ ಬರೆದಿದ್ದ 6.37 ಲಕ್ಷ ವಿದ್ಯಾರ್ಥಿಗಳಲ್ಲಿ 4.68 ಲಕ್ಷ ವಿದ್ಯಾರ್ಥಿಗಳು (ಶೇ 73.45) ತೇರ್ಗಡೆಯಾಗಿದ್ದಾರೆ. 2023–24ನೇ ಸಾಲಿನ ಫಲಿತಾಂಶಕ್ಕೆ (ಶೇ 81.15) ಹೋಲಿಸಿದರೆ ಈ ಬಾರಿ ಶೇ 7.70ರಷ್ಟು ಫಲಿತಾಂಶ ಕುಸಿದಿದೆ. ಪುನರಾವರ್ತಿತ ಹಾಗೂ ಖಾಸಗಿಯಾಗಿ ಪರೀಕ್ಷೆ ತೆಗೆದುಕೊಂಡ ವಿದ್ಯಾರ್ಥಿಗಳ ಫಲಿತಾಂಶವನ್ನೂ ಪರಿಗಣಿಸಿದರೆ ಒಟ್ಟಾರೆ ಫಲಿತಾಂಶ ಶೇ 69.16ರಷ್ಟಿದೆ.

ಕಲಾ, ವಾಣಿಜ್ಯ ಮತ್ತು ವಿಜ್ಞಾನ ವಿಷಯದ ಮೂರು ವಿಭಾಗಗಳಲ್ಲಿ ನಾಲ್ವರು ರಾಜ್ಯಕ್ಕೆ ಪ್ರಥಮ ಸ್ಥಾನ ಪಡೆದಿರುವುದು ಈ ಬಾರಿಯ ವಿಶೇಷ. ಕಲಾ ವಿಭಾಗದಲ್ಲಿ ಬಳ್ಳಾರಿ ಜಿಲ್ಲೆ ಕೊಟ್ಟೂರಿನ ಇಂದು ಸ್ವತಂತ್ರ ಪಿಯು ಕಾಲೇಜಿನ ವಿದ್ಯಾರ್ಥಿನಿ ಎಲ್‌.ಆರ್‌. ಸಂಜನಾ ಬಾಯಿ (597), ವಾಣಿಜ್ಯ ವಿಭಾಗದಲ್ಲಿ ಮಂಗಳೂರು ಕೆನರಾ ಕಾಲೇಜಿನ ಎಸ್‌. ದೀಪಶ್ರೀ (599), ವಿಜ್ಞಾನ ವಿಭಾಗದಲ್ಲಿ ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜಿನ ಅಮೂಲ್ಯ ಕಾಮತ್‌ (599) ಹಾಗೂ ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕಿನ ವಾಗ್ದೇವಿ ಕಾಲೇಜಿನ ಆರ್‌. ದೀಕ್ಷಾ ಅವರು ಮೊದಲ ಸ್ಥಾನ ಪಡೆದಿದ್ದಾರೆ.

ಪರೀಕ್ಷೆ ಬರೆದಿದ್ದ 3.45 ಲಕ್ಷ ವಿದ್ಯಾರ್ಥಿನಿಯರಲ್ಲಿ 2.69 ಲಕ್ಷ ಉತ್ತೀರ್ಣರಾಗಿದ್ದಾರೆ. ಪರೀಕ್ಷೆಗೆ ಹಾಜರಾಗಿದ್ದ 2.92 ಲಕ್ಷ ಬಾಲಕರಲ್ಲಿ 1.99 ಲಕ್ಷ (ಶೇ 68.20) ತೇರ್ಗಡೆಯಾಗಿದ್ದಾರೆ.

14ನೇ ಪುಟ ನೋಡಿ



ಸಾಧಕರ ಸಂಭ್ರಮ...
ಬೆಂಗಳೂರಿನ ಹನುಮಂತನಗರದ ಪಿಇಎಸ್ ಕಾಲೇಜಿನ ವಿದ್ಯಾರ್ಥಿಗಳು ಪಿಯು ಪರೀಕ್ಷಾ ಫಲಿತಾಂಶದ ನಂತರ ಪರಸ್ಪರ ಅಭಿನಂದಿಸಿ ಸಂಭ್ರಮಿಸಿದ ಪರಿ ಚಿತ್ರ: ರಂಜು ಪಿ

ಪರೀಕ್ಷೆ–2, 3ಕ್ಕೆ ಶುಲ್ಕವಿಲ್ಲ



ಅನುತ್ತೀರ್ಣರಾದ ಹಾಗೂ ಫಲಿತಾಂಶ ವೃದ್ಧಿಸಿಕೊಳ್ಳಲು ಬಯಸುವ ವಿದ್ಯಾರ್ಥಿಗಳಿಗೆ ಶುಲ್ಕ ಪಾವತಿಸದೆ ಎರಡನೇ ಮತ್ತು ಮೂರನೇ ಪರೀಕ್ಷೆ ಬರೆಯಲು ಅವಕಾಶ ಒದಗಿಸಲಾಗಿದೆ ಎಂದು ಶಾಲಾ ಶಿಕ್ಷಣ ಸಚಿವ ಮಧು ಬಂಗಾರಪ್ಪ ಮಾಹಿತಿ ನೀಡಿದರು.

ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದ ಅವರು, ಪಿಯು ಪರೀಕ್ಷೆ–2 ಏ.24ರಿಂದ ಮೇ 8ರವರೆಗೆ, ಪರೀಕ್ಷೆ–3 ಜೂನ್ 9ರಿಂದ 21ರವರೆಗೆ ನಡೆಯಲಿದೆ. ಎರಡೂ ಪರೀಕ್ಷೆ ತೆಗೆದುಕೊಳ್ಳುವ ಎಲ್ಲ ವಿದ್ಯಾರ್ಥಿಗಳಿಗೂ ಶುಲ್ಕದಲ್ಲಿ ಸಂಪೂರ್ಣ ವಿನಾಯಿತಿ ನೀಡಲಾಗಿದೆ. ಶುಲ್ಕ ಪಾವತಿಸದೇ, ಏ.9ರಿಂದ ಏ.17ರ ಒಳಗೆ ಆಯಾ ಕಾಲೇಜುಗಳಲ್ಲಿ ಹೆಸರು ನೋಂದಾಯಿಸಿಕೊಂಡು ಪರೀಕ್ಷೆ ಬರೆಯಬಹುದು ಎಂದರು.

14ನೇ ಪುಟ ನೋಡಿ

ವಿಜ್ಞಾನ ವಿಭಾಗ



ಕಾಲೇಜಿನಲ್ಲಿ ನಿರಂತರವಾಗಿ ನಡೆಸುತ್ತಿದ್ದ ಅಣಕು ಪರೀಕ್ಷೆ ಆತ್ಮವಿಶ್ವಾಸ ಬೆಳೆಸಿತ್ತು. ಪರೀಕ್ಷಾ ಭಯವೇ ಇರಲಿಲ್ಲ. ಕಂಪ್ಯೂಟರ್ ಸೈನ್ಸ್ ಎಂಜಿನಿಯರಿಂಗ್ ಓದುವ ಆಸೆ ಇದೆ

ಅಮೂಲ್ಯ ಕಾಮತ್
ಎಕ್ಸ್‌ಪರ್ಟ್ ಕಾಲೇಜು, ಮಂಗಳೂರು



ಶಿಕ್ಷಕರಾದ ಅಪ್ಪ-ಅಮ್ಮ, ಕಾಲೇಜಿನ ಉಪನ್ಯಾಸಕರು ಓದಿಗೆ ಪ್ರೋತ್ಸಾಹ ನೀಡಿದರು. ಕೃತಕ ಬುದ್ಧಿಮತ್ತೆಯಲ್ಲಿ ಎಂಜಿನಿಯರಿಂಗ್ ಅಧ್ಯಯನ ಮಾಡುವ ಗುರಿ ಇಟ್ಟುಕೊಂಡಿದ್ದೇನೆ

ಆರ್‌.ದೀಕ್ಷಾ
ವಾಗ್ದೇವಿ ಕಾಲೇಜು, ತೀರ್ಥಹಳ್ಳಿ

ವಾಣಿಜ್ಯ ವಿಭಾಗ



ಕಠಿಣ ಪರಿಶ್ರಮದಿಂದ ಮೊದಲ ಸ್ಥಾನ ಸಾಧ್ಯವಾಗಿದೆ. ಅಂದಿನ ಅಭ್ಯಾಸವನ್ನು ಅಂದೇ ಮನನ ಮಾಡುವುದನ್ನು ರೂಢಿಸಿಕೊಂಡಿದ್ದೆ. ಸಿ.ಎ ಆಗಬೇಕು ಎನ್ನುವ ಗುರಿ ಇದೆ

ಎಸ್‌. ದೀಪಶ್ರೀ
ಕೆನರಾ ಕಾಲೇಜು, ಮಂಗಳೂರು

ಕಲಾ ವಿಭಾಗ



ತಾಯಿ ಕಾವೇರಿ ಮತ್ತು ಲಾರಿ ಚಾಲಕರಾದ ತಂದೆ ರಾಮನಾಯ್ಕ ನನ್ನನ್ನು ಕಷ್ಟಪಟ್ಟು ಓದಿಸಿದರು. ನನ್ನ ಶ್ರಮ ಫಲ ಕೊಟ್ಟಿದೆ. ಐಎಎಸ್ ಅಧಿಕಾರಿಯಾಗುವ ಗುರಿ ಇದೆ

ಎಲ್‌.ಆರ್‌. ಸಂಜನಾಬಾಯಿ
ಇಂದು ಕಾಲೇಜು, ಕೊಟ್ಟೂರು

ಮರುಮೌಲ್ಯಮಾಪನಕ್ಕೆ ಅರ್ಜಿ: 17ಕ್ಕೆ ಕೊನೆ

ದ್ವಿತೀಯ ಪಿಯುಸಿ ಉತ್ತರ ಪತ್ರಿಕೆಗಳ ಮರುಮೌಲ್ಯಮಾಪನಕ್ಕೆ ಏ.17ರ ಒಳಗೆ ಅರ್ಜಿ ಸಲ್ಲಿಸಬಹುದು.

ಉತ್ತರ ಪತ್ರಿಕೆಗಳ ಛಾಯಾಪ್ರತಿ ಪಡೆಯಲು ಏ.13, ಛಾಯಾ ಪ್ರತಿ ಡೌನ್‌ಲೋಡ್ ಮಾಡಿಕೊಳ್ಳಲು ಏ.16 ಕೊನೆಯ ದಿನ. ಪ್ರತಿ ವಿಷಯದ ಛಾಯಾ ಪ್ರತಿಗೆ ₹530 ಹಾಗೂ ಮರುಮೌಲ್ಯಮಾಪನಕ್ಕೆ ₹1,670 ನಿಗದಿ ಮಾಡಲಾಗಿದೆ.

ರಾಜ್ಯಪಾಲರಿಗೆ ಕಾಲಮಿತಿ

ತಮಿಳುನಾಡು ಪ್ರಕರಣದಲ್ಲಿ 'ಸುಪ್ರೀಂ' ಐತಿಹಾಸಿಕ ತೀರ್ಪು

ನವದೆಹಲಿ (ಪಿಟಿಐ): ಮೈಲಿಗಲ್ಲು ಎಂಬಂಥ ತೀರ್ಪೊಂದನ್ನು ಪ್ರಕಟಿಸಿರುವ ಸುಪ್ರೀಂ ಕೋರ್ಟ್‌, ರಾಜ್ಯ ವಿಧಾನ ಮಂಡಲ ಅಂಗೀಕಾರ ನೀಡಿರುವ ಮಸೂದೆಯ ವಿಚಾರವಾಗಿ ಕ್ರಮಗಳನ್ನು ಕೈಗೊಳ್ಳಲು ರಾಜ್ಯಪಾಲರಿಗೆ ಸಮಯಮಿತಿ ನಿಗದಿ ಮಾಡಿದೆ.

ತಮಿಳುನಾಡಿನ ರಾಜ್ಯಪಾಲ ಆರ್‌.ಎನ್‌.ರವಿ ಅವರು 10 ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗಾಗಿ ತಡೆಹಿಡಿದು ಇರಿಸಿಕೊಂಡಿದ್ದು ಸಂವಿಧಾನಕ್ಕೆ ವಿರುದ್ಧವಾದ ನಡೆ ಎಂದು ಸುಪ್ರೀಂ ಕೋರ್ಟ್ ಅಸಮಾಧಾನ ವ್ಯಕ್ತಪಡಿಸಿದೆ.

ಸುಪ್ರೀಂ ಕೋರ್ಟ್‌ನ ಈ ತೀರ್ಪು ತಮಿಳುನಾಡಿನ ಡಿಎಂಕೆ ನೇತೃತ್ವದ ಸರ್ಕಾರಕ್ಕೆ ಸಿಕ್ಕ ದೊಡ್ಡ ಜಯ ಎಂದು ವ್ಯಾಖ್ಯಾನಿಸಲಾಗಿದೆ.

'10 ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗಾಗಿ ತಡೆಹಿಡಿದ ರಾಜ್ಯಪಾಲರ ಕ್ರಮವು ಅಕ್ರಮ ಮಾತ್ರವಲ್ಲ, ಮನಸೋಇಚ್ಛೆ ತೀರ್ಮಾನ. ಹೀಗಾಗಿ, ಆ ಕ್ರಮವನ್ನು ಅಸಿಂಧುಗೊಳಿಸಲಾಗಿದೆ' ಎಂದು ನ್ಯಾಯಮೂರ್ತಿಗಳಾದ ಜೆ.ಬಿ. ಪಾರ್ದೀವಾಲಾ ಮತ್ತು ಆರ್‌. ಮಹಾದೇವನ್ ಅವರು ಇರುವ ವಿಭಾಗೀಯ ಪೀಠವು ಹೇಳಿದೆ.

16ನೇ ಪುಟ ನೋಡಿ



ಜನರ, ಅಂದರೆ ವಿಧಾನ ಮಂಡಲದ ಆಯ್ಕೆಗೆ ವಿರುದ್ಧವಾಗಿ ಯಾವುದೇ ಕ್ರಮ ಕೈಗೊಂಡರೆ ರಾಜ್ಯಪಾಲರು ತಾವು ಸ್ವೀಕರಿಸಿದ ಪ್ರತಿಜ್ಞೆಗೆ ವಿರುದ್ಧವಾಗಿ ನಡೆದುಕೊಂಡಂತೆ ಆಗುತ್ತದೆ. ರಾಜ್ಯಪಾಲರು ತಮ್ಮ ಹೊಣೆಯನ್ನು ಸ್ನೇಹಿತನಾಗಿ, ದಾರ್ಶನಿಕನಾಗಿ, ಮಾರ್ಗದರ್ಶಕನಾಗಿ ಯಾವುದೇ ರಾಗ–ದ್ವೇಷಗಳಿಲ್ಲದೆ ನಿರ್ವಹಿಸಬೇಕು. ರಾಜಕೀಯ ಲೆಕ್ಕಾಚಾರಗಳು ಅವರ ಮೇಲೆ ಪ್ರಭಾವ ಬೀರಬಾರದು

ಸುಪ್ರೀಂ ಕೋರ್ಟ್

ಕೋರ್ಟ್ ನಿಗದಿ ಮಾಡಿದ ಕಾಲಮಿತಿ

ಸಂವಿಧಾನದ 200ನೆಯ ವಿಧಿಯು ಸೂಕ್ತ ಕ್ರಮ ಕೈಗೊಳ್ಳಲು ರಾಜ್ಯಪಾಲರಿಗೆ ಕಾಲಮಿತಿಯನ್ನು ವಾಚ್ಯವಾಗಿ ಹೇಳಿಲ್ಲ.

'ಸಮಯಮಿತಿ ನಿಗದಿ ಮಾಡದೆ ಇದ್ದರೂ, ತಮ್ಮ ಅಂಕಿತಕ್ಕಾಗಿ ಕಳುಹಿಸಿರುವ ಮಸೂದೆಗಳ ಕುರಿತು ಕ್ರಮ ಕೈಗೊಳ್ಳದೆ ಇರಲು 200ನೇ ವಿಧಿಯು ಅವಕಾಶ ಮಾಡಿಕೊಡುತ್ತದೆ ಎಂಬಂತೆ ಅರ್ಥ ಮಾಡಿಕೊಳ್ಳಬಾರದು' ಎಂದು ಪೀಠವು ಸ್ಪಷ್ಟವಾಗಿ ಹೇಳಿದೆ.

16ನೇ ಪುಟ ನೋಡಿ

200ನೆಯ ವಿಧಿ ಹೇಳುವುದೇನು?

200ನೇ ವಿಧಿಯಲ್ಲಿ ಹೇಳಿರುವ ನಿಯಮದ ಪ್ರಕಾರ ರಾಜ್ಯಪಾಲರು ಯಾವುದಾದರೂ ಒಂದು ಹಾದಿ ತುಳಿಯಬೇಕು.

ಅಂದರೆ, ಅವರು ಮಸೂದೆಗೆ ಸಹಿ ಹಾಕಬಹುದು, ಅದಕ್ಕೆ ಅಂಕಿತ ಹಾಕದೆ ಇರಬಹುದು ಅಥವಾ ಅದನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಇರಿಸಬಹುದು.

16ನೇ ಪುಟ ನೋಡಿ

ಬಾಟಲಿ ನೀರು 'ಅಸುರಕ್ಷಿತ'



ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಆರೋಗ್ಯ ಸುರಕ್ಷತಾ ವಿಭಾಗವು ರಾಜ್ಯದ ವಿವಿಧ ಕಡೆ ಕುಡಿಯುವ ನೀರಿನ ಬಾಟಲಿಗಳಲ್ಲಿನ 255 ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಿದಾಗ 95 ಮಾದರಿಗಳು ಅಸುರಕ್ಷಿತ, 88 ಮಾದರಿಗಳು ಕಳಪೆ ಗುಣಮಟ್ಟದ್ದೆಂದು ವರದಿಯಾಗಿವೆ. 72 ಮಾದರಿಗಳು ಮಾತ್ರ ಸುರಕ್ಷಿತ ಆಗಿದ್ದವು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಮಂಗಳವಾರ ಮಾತನಾಡಿದ ಅವರು, 'ಸ್ಥಳೀಯ ಕಂಪನಿಗಳು ತಯಾರಿಸುವ ಬಾಟಲಿಗಳಲ್ಲಿನ ನೀರು ಶೇ 99ರಷ್ಟು ಕಳಪೆ ಗುಣಮಟ್ಟದ್ದೆಂದು ಗುರುತಿಸಲಾಗಿದೆ. ಮಾದರಿ ವಿಶ್ಲೇಷಣೆ ನಡೆಸಲಾಗಿದ್ದು, ಮುಂದಿನ ದಿನಗಳಲ್ಲಿ ಕಾನೂನಾತ್ಮಕವಾಗಿ ವಿಶ್ಲೇಷಣೆಗೆ ಒಳಪಡಿಸಿ, ಕಳಪೆ ನೀರಿನ ಬಾಟಲಿ ಪೂರೈಸುವ ಕಂಪನಿಗಳ ಮೇಲೆ ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಎಚ್ಚರಿಕೆ ನೀಡಿದರು.

ಕುಡಿಯಲು ಯೋಗ್ಯವಲ್ಲದ ನೀರನ್ನು ಪೂರೈಸುವವರ ವಿರುದ್ಧ ಕ್ರಮ ತೆಗೆದುಕೊಳ್ಳುವ ಕುರಿತು ಕೈಗಾರಿಕಾ ಇಲಾಖೆಯ ಜೊತೆ ಚರ್ಚೆ ನಡೆಸಲಾಗುವುದು

ದಿನೇಶ್ ಗುಂಡೂರಾವ್, ಆರೋಗ್ಯ ಸಚಿವ

7ನೇ ಪುಟ ನೋಡಿ

ರಾಜ್ಯದ 2 ಗ್ರಾಮೀಣ ಬ್ಯಾಂಕ್ ವಿಲೀನ ಶೀಘ್ರ

ನವದೆಹಲಿ (ಪಿಟಿಐ): ದೇಶದಲ್ಲಿರುವ ಪ್ರಾದೇಶಿಕ ಗ್ರಾಮೀಣ ಬ್ಯಾಂಕ್‌ಗಳ (ಆರ್‌ಆರ್‌ಬಿ) ವಿಲೀನ ಪ್ರಕ್ರಿಯೆಗೆ ಕೇಂದ್ರ ಹಣಕಾಸು ಸಚಿವಾಲಯವು ಅನುಮೋದನೆ ನೀಡಿದ್ದು, ಮೇ 1ರಿಂದ 'ಒಂದು ರಾಜ್ಯ; ಒಂದು ಆರ್‌ಆರ್‌ಬಿ' ತತ್ವ ಅನುಷ್ಠಾನಕ್ಕೆ ಬರಲಿದೆ.

ಕರ್ನಾಟಕ ಸೇರಿ 11 ರಾಜ್ಯಗಳಲ್ಲಿ ಇರುವ 15 ಆರ್‌ಆರ್‌ಬಿಗಳನ್ನು ವಿಲೀನಗೊಳಿಸಲಾಗುತ್ತದೆ. ಹಾಗಾಗಿ, ಹಾಲಿ ಇರುವ 43 ಬ್ಯಾಂಕ್‌ಗಳ ಸಂಖ್ಯೆಯು 28ಕ್ಕೆ ಇಳಿಯಲಿದೆ.

ಬ್ಯಾಂಕ್‌ಗಳ ಪರಿಣಾಮಕಾರಿ ಕಾರ್ಯಾಚರಣೆ ಮತ್ತು ವೆಚ್ಚ ಕಡಿತಗೊಳಿಸುವುದು ಇದರ ಉದ್ದೇಶವಾಗಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಕರ್ನಾಟಕದ ಎರಡು ಬ್ಯಾಂಕ್ ವಿಲೀನ: ಕರ್ನಾಟಕದಲ್ಲಿ ಕರ್ನಾಟಕ ವಿಕಾಸ ಗ್ರಾಮೀಣ ಬ್ಯಾಂಕ್ ಮತ್ತು ಕರ್ನಾಟಕ ಗ್ರಾಮೀಣ ಬ್ಯಾಂಕ್ ಕಾರ್ಯನಿರ್ವಹಿಸುತ್ತಿವೆ. ಈ ಎರಡನ್ನು ವಿಲೀನಗೊಳಿಸಿ 'ಕರ್ನಾಟಕ ಗ್ರಾಮೀಣ ಬ್ಯಾಂಕ್' ಎಂದು ನಾಮಕರಣ ಮಾಡಲಾಗುತ್ತದೆ ಎಂದು ಸಚಿವಾಲಯದ ಅಧಿಸೂಚನೆ ತಿಳಿಸಿದೆ.

ಈ ಹೊಸ ಬ್ಯಾಂಕ್‌ನ ಕೇಂದ್ರ ಕಚೇರಿಯು ಬಳ್ಳಾರಿಯಲ್ಲಿ ಇರಲಿದೆ. ಇದರ ಪ್ರಾಯೋಜಕ ಬ್ಯಾಂಕ್ ಆಗಿ ಕೆನರಾ ಬ್ಯಾಂಕ್ ಕಾರ್ಯ ನಿರ್ವಹಿಸಲಿದೆ ಎಂದು ಹೇಳಿದೆ.

ಆಂಧ್ರಪ್ರದೇಶ, ಉತ್ತರ ಪ್ರದೇಶ, ಪಶ್ಚಿಮ ಬಂಗಾಳ, ಬಿಹಾರ, ಗುಜರಾತ್, ಜಮ್ಮು ಮತ್ತು ಕಾಶ್ಮೀರ, ಮಧ್ಯಪ್ರದೇಶ, ಮಹಾರಾಷ್ಟ್ರ, ಒಡಿಶಾ ಮತ್ತು ರಾಜಸ್ಥಾನದಲ್ಲಿರುವ ಗ್ರಾಮೀಣ ಬ್ಯಾಂಕ್‌ಗಳನ್ನು ವಿಲೀನಗೊಳಿಸಲಾಗುವುದು ಎಂದು ಸಚಿವಾಲಯ ತಿಳಿಸಿದೆ.



ವಿಧಾನಸೌಧ ವೀಕ್ಷಣೆಗೆ ಇನ್ನು 'ಪ್ರವೇಶ ಶುಲ್ಕ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಷ್ಟ್ರಪತಿ ಭವನ ಮತ್ತು ಸಂಸತ್ ಕಟ್ಟಡಗಳಿಗೆ ಇರುವಂತೆ, ವಿಧಾನಸೌಧಕ್ಕೂ 'ಗೈಡೆಡ್ ಟೂರ್' (ಪ್ರವಾಸ ಮಾರ್ಗದರ್ಶಿ) ವ್ಯವಸ್ಥೆ ಕಲ್ಪಿಸಿ, ವೀಕ್ಷಣೆಗೆ ಬರುವ ಪ್ರವಾಸಿಗರಿಗೆ ಪ್ರವೇಶ ಶುಲ್ಕ ವಿಧಿಸಲು ರಾಜ್ಯ ಸರ್ಕಾರ ಮುಂದಾಗಿದೆ.


'ಗೈಡೆಡ್ ಟೂರ್' ವ್ಯವಸ್ಥೆ ಕಲ್ಪಿಸಲು ಅನುಮತಿ ನೀಡುವಂತೆ ಪ್ರವಾಸೋದ್ಯಮ ಇಲಾಖೆ ಸಲ್ಲಿಸಿದ್ದ ಪ್ರಸ್ತಾವಕ್ಕೆ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ (ಡಿಪಿಎಆರ್) ಅನುಮತಿ ನೀಡಿದೆ.

ಸಾರ್ವತ್ರಿಕ ರಜಾ ದಿನಗಳಲ್ಲಿ ಮಾತ್ರ ಬೆಳಿಗ್ಗೆ 8 ಗಂಟೆಯಿಂದ ಸಂಜೆ 6 ಗಂಟೆಯವರೆಗೆ ಈ ವ್ಯವಸ್ಥೆ ಇರಲಿದೆ.

7ನೇ ಪುಟ ನೋಡಿ

ಚಿನಕುರುಳಿ

ಪ್ರಕಾಶ್ ಶೆಟ್ಟಿ



ಬಿಬಿಎಂಪಿ: 'ವಸತಿಯೇತರ ಉಪಯೋಗದ ಸ್ವತ್ತುಗಳಿಗೆ ಪ್ರತಿ ವರ್ಷಕ್ಕೆ' ಎಂದು ಬದಲಾಯಿಸಿ ಆದೇಶ

ಕಸ: ಬಳಕೆದಾರರ ಶುಲ್ಕ ಪರಿಷ್ಕರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿಯೇತರ ಉಪಯೋಗದ ಸ್ವತ್ತುಗಳಿಗೆ ಘನತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕವನ್ನು (ಡಬ್ಲ್ಯುಯುಎಫ್) ಪ್ರತಿ ತಿಂಗಳಿಗೆ ಎಂದು ಹೊರಡಿಸಿದ್ದ ಆದೇಶವನ್ನು ಮಾರ್ಪಡಿಸಿರುವ ಬಿಬಿಎಂಪಿ, ವಾರ್ಷಿಕ ಶುಲ್ಕ ಎಂದು ಪರಿಷ್ಕರಿಸಿದೆ.

ವಸತಿಯೇತರ ಕಟ್ಟಡಗಳಿಗೆ ₹2 ಸಾವಿರದಿಂದ ₹35 ಲಕ್ಷದವರೆಗೆ ಪ್ರತಿ ತಿಂಗಳು ಶುಲ್ಕವನ್ನು ವಿಧಿಸಲಾಗುತ್ತದೆ ಎಂದು ಏಪ್ರಿಲ್ 5ರ ಆದೇಶದಲ್ಲಿ ತಿಳಿಸಲಾಗಿತ್ತು. ಅದನ್ನು ಪರಿಷ್ಕರಿಸಿ ವಾರ್ಷಿಕವಾಗಿ ವಿಧಿಸುವ ಶುಲ್ಕ ಎಂದು ಪ್ರಕಟಿಸಲಾಗಿದೆ.

2024ರಲ್ಲಿ ಬಿಬಿಎಂಪಿ ಘನತ್ಯಾಜ್ಯ ನಿರ್ವಹಣೆ ಉಪ ನಿಮಯಗಳನ್ನು (ಬೈ-ಲಾ) ಅಧಿಸೂಚಿಸಲಾಗಿದ್ದು, ಅದರಲ್ಲಿ ಯಾರಿಗೆ ಎಷ್ಟು ಸೆಸ್ ಹಾಗೂ ಬಳಕೆದಾರರ ಶುಲ್ಕವನ್ನು ವಿಧಿಸಬೇಕು ಎಂಬುದನ್ನು ಪ್ರಕಟಿಸಲಾಗಿದೆ. ಅದಕ್ಕಿಂತ ಕಡಿಮೆ ಶುಲ್ಕವನ್ನು ಬಿಬಿಎಂಪಿ ಐದು ವರ್ಷದ ನಂತರ ಜಾರಿ ಮಾಡಿದೆ ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೇರಿದಂತೆ ಹಿರಿಯ ಅಧಿಕಾರಿಗಳು ಪ್ರತಿಪಾದಿಸಿದ್ದಾರೆ.

ಬಿಬಿಎಂಪಿ ಎಸ್‌ಡಬ್ಲ್ಯುಎಂ ಬೈ-ಲಾದಂತೆ ವಿಧಿಸಬೇಕಿರುವ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ

ವರ್ಗ	ಶುಲ್ಕ (ಪ್ರತಿ ತಿಂಗಳ ಶುಲ್ಕ)
ಎಲ್ಲ ರೀತಿಯ ವಸತಿ	₹200
ವಾಣಿಜ್ಯ ಮತ್ತು ಸಂಸ್ಥೆಗಳ ತ್ಯಾಜ್ಯ ಉತ್ಪಾದಕರಿಗೆ	
ಪ್ರತಿದಿನ 5 ಕೆ.ಜಿಯಷ್ಟು ತ್ಯಾಜ್ಯ ಉತ್ಪಾದಕರಿಗೆ	₹500
ಪ್ರತಿದಿನ 10 ಕೆ.ಜಿಯಷ್ಟು ತ್ಯಾಜ್ಯ ಉತ್ಪಾದಕರಿಗೆ	₹1,400
ಪ್ರತಿದಿನ 25 ಕೆ.ಜಿಯಷ್ಟು ತ್ಯಾಜ್ಯ ಉತ್ಪಾದಕರಿಗೆ	₹3,500
ಪ್ರತಿದಿನ 50 ಕೆ.ಜಿಯಷ್ಟು ತ್ಯಾಜ್ಯ ಉತ್ಪಾದಕರಿಗೆ	₹7,000
ಪ್ರತಿದಿನ 100 ಕೆ.ಜಿಯಷ್ಟು ತ್ಯಾಜ್ಯ ಉತ್ಪಾದಕರಿಗೆ	₹14,000
ಖಾಲಿ ನಿವೇಶನ	ಪ್ರತಿ ಚದರ ಅಡಿಗೆ 20 ಪೈಸೆ



ಬೈ-ಲಾದಂತೆ, ಎಲ್ಲ ವಸತಿ ಕಟ್ಟಡಗಳಿಗೆ ಪ್ರತಿ ತಿಂಗಳಿಗೆ ₹200 ಬಳಕೆದಾರರ ಶುಲ್ಕವಿದೆ. ಬಿಬಿಎಂಪಿ ಜಾರಿ ಮಾಡಿರುವ ಬಳಕೆದಾರರ ಶುಲ್ಕದಂತೆ 600 ಚದರಡಿಯಷ್ಟು ಕಟ್ಟಡ ಹೊಂದಿರುವವರಿಗೆ ತಿಂಗಳಿಗೆ ₹10, 601 ಚದರಡಿಯಿಂದ 1000 ಚದರಡಿ ವರೆಗಿನ ಕಟ್ಟಡಕ್ಕೆ ತಿಂಗಳಿಗೆ ₹50 ವಿಧಿಸಲಾಗಿದೆ. ಬಡವರ್ಗದ ಜನರಿಗೆ ಇದು ಹೆಚ್ಚಿನ ಹೊರೆಯಾಗುವುದಿಲ್ಲ ಎಂಬುದು ಅಧಿಕಾರಿಗಳ ಮಾತು.

ಸ್ವಂತ ಕಟ್ಟಡದಲ್ಲಿ ತಾವು ವಾಸವಿದ್ದು, ಮೇಲೆ ಅಥವಾ ಕೆಳಗೆ ಮನೆಗಳನ್ನು ಬಾಡಿಗೆಗೆ ನೀಡಿದ್ದರೆ ಆ ಕಟ್ಟಡವನ್ನು ವಸತಿಯೇತರ (ಮಿಶ್ರ ಉಪಯೋಗದ ಸ್ವತ್ತು) ಎಂದು ನಿರ್ಧರಿಸಲಾಗಿದೆ. ಹೀಗಾಗಿ, ಆಸ್ತಿ ತೆರಿಗೆಯ ಗರಿಷ್ಠ ಶೇ60ರಷ್ಟನ್ನು ಬಳಕೆದಾರರ ಶುಲ್ಕ ಪಾವತಿಸಬೇಕಾಗುತ್ತದೆ. ಕಟ್ಟಡವನ್ನು ಸಂಪೂರ್ಣ ಬಾಡಿಗೆಗೇ ನೀಡಿದ್ದರೆ ಆಸ್ತಿ ತೆರಿಗೆಯ ಗರಿಷ್ಠ ಶೇ 30ರಷ್ಟು ಪಾವತಿಬೇಕಾಗುತ್ತದೆ.

ಹೋಟೆಲ್, ಲಾಡ್ಜ್, ತಾರಾ ಹೋಟೆಲ್‌ಗಳಿಗೆ ಚದರಡಿಗೆ ಬಳಕೆದಾರರ ಶುಲ್ಕವನ್ನು ನಿಗದಿ ಮಾಡಿದ್ದು, ಈ ಕಟ್ಟಡಗಳಿಗೂ ಆಸ್ತಿ ತೆರಿಗೆಯ ಗರಿಷ್ಠ ಶೇ 60ರಷ್ಟು ಮಿತಿಯನ್ನು ನಿಗದಿಪಡಿಸಲಾಗಿದೆ. ತ್ಯಾಜ್ಯ ಸಂಸ್ಕರಣೆ ಘಟಕಗಳನ್ನು ಹೊಂದಿರುವ ಈ ವರ್ಗದ ಕಟ್ಟಡಗಳು ಬಳಕೆದಾರರ ಶುಲ್ಕ ಪಾವತಿಸುವಂತಿಲ್ಲ ಎಂದು ಬಿಬಿಎಂಪಿ ಅಧಿಕಾರಿಗಳು ವಿವರಿಸಿದ್ದಾರೆ.

ರಸ್ತೆಯಲ್ಲಿ ಉಗುಳಿದರೆ ₹1,000 ದಂಡ

ಬಿಬಿಎಂಪಿ ಎಸ್‌ಡಬ್ಲ್ಯುಎಂ ಬೈ-ಲಾದಂತೆ, ರಸ್ತೆ, ಸಾರ್ವಜನಿಕ ಪ್ರದೇಶಗಳಲ್ಲಿ ಕಸ ಹಾಕುವುದು, ಉಗುಳಿದರೆ ₹1,000 ದಂಡ ಹಾಕಬಹುದು. ಮತ್ತೆ ಅದೇ ಕಾರ್ಯ ಮಾಡಿದರೆ ಪ್ರತಿ ಬಾರಿಗೂ ₹2,000 ದಂಡ ಹಾಕಬಹುದಾಗಿದೆ.

ಮನೆಗಳ ತ್ಯಾಜ್ಯವನ್ನು ವಿಂಗಡಿಸಿ ನೀಡದಿದ್ದರೆ, ಮಿಶ್ರ ತ್ಯಾಜ್ಯವನ್ನು ಅಧಿಕಾರಿಗಳು ಸೇರಿದಂತೆ ಯಾರೇ ಸಂಗ್ರಹಿಸಿದರೂ ₹2 ಸಾವಿರ ದಂಡ ವಿಧಿಸಬಹುದು. ನಂತರದ ಪ್ರಕರಣಗಳಿಗೆ ₹3 ಸಾವಿರ ದಂಡವಿದೆ.

ಸಣ್ಣ ವಾಣಿಜ್ಯ ಕಟ್ಟಡದವರು ತ್ಯಾಜ್ಯವನ್ನು ಅನಧಿಕೃತ ವ್ಯಕ್ತಿಗಳಿಗೆ ನೀಡಿದರೆ ಮೊದಲ ಬಾರಿಗೆ ₹5 ಸಾವಿರ, ದೊಡ್ಡ ವಾಣಿಜ್ಯ ಕಟ್ಟಡವರಿಗೆ ಮೊದಲು ₹10 ಸಾವಿರ, ಅಧಿಕ (ಬಲ್ಕ್) ತ್ಯಾಜ್ಯ ಉತ್ಪಾದಕರಿಗೆ ₹15 ಸಾವಿರ ದಂಡ ವಿಧಿಸಬಹುದಾಗಿದೆ.

30 x40 ಅಡಿ ನಿವೇಶನಕ್ಕೆ ವರ್ಷಕ್ಕೆ ₹720 ಶುಲ್ಕ

ಖಾಲಿ ನಿವೇಶನಗಳಿಗೆ 2024-25 ಆರ್ಥಿಕ ವರ್ಷದವರೆಗೆ ಘನತ್ಯಾಜ್ಯ ಸೆಸ್ ಕೂಡ ಇರಲಿಲ್ಲ. 2025–26ನೇ ಸಾಲಿನಿಂದ ಸೆಸ್ ಹಾಗೂ ಬಳಕೆದಾರರ ಶುಲ್ಕವನ್ನು ವಿಧಿಸಲಾಗಿದೆ. ವಾರ್ಷಿಕವಾಗಿ ಪ್ರತಿ ಚದರಡಿಗೆ 60 ಪೈಸೆ ಬಳಕೆದಾರರ ಶುಲ್ಕವನ್ನು ಖಾಲಿ ನಿವೇಶನದ ಮಾಲೀಕರು ಪಾವತಿಸಬೇಕಾಗಿದೆ.

1,200 ಚದರಡಿಯ (30 ಅಡಿ x 40 ಅಡಿ) ನಿವೇಶನಕ್ಕೆ ತ್ಯಾಜ್ಯ ನಿರ್ವಹಣಾ ಬಳಕೆದಾರರ ಶುಲ್ಕ ವರ್ಷಕ್ಕೆ ₹720 ಆಗುತ್ತದೆ. ಆದರೆ, ಘನತ್ಯಾಜ್ಯ ನಿರ್ವಹಣೆ (ಎಸ್‌ಡಬ್ಲ್ಯುಎಂ) ಬೈ-ಲಾದಂತೆ, ಪ್ರತಿ ಚದರಡಿಗೆ 20 ಪೈಸೆಯನ್ನು ತಿಂಗಳಿಗೆ ನಿಗದಿಪಡಿಸಲಾಗಿತ್ತು. ಇದರಂತೆ, ಪ್ರತಿ ತಿಂಗಳಿಗೆ ₹240ರಂತೆ ವರ್ಷಕ್ಕೆ ₹2,880 ಪಾವತಿಸಬೇಕಾಗಿತ್ತು.

ಬಿಬಿಎಂಪಿ ಅನುಷ್ಠಾನಗೊಳಿಸಿರುವ ಬಳಕೆದಾರರ ಶುಲ್ಕದಂತೆ ₹720 ಪಾವತಿಸಬೇಕಾಗುತ್ತದೆ. ಈ ಹಿಂದೆ ಸೆಸ್ ಹಾಗೂ ಬಳಕೆದಾರರ ಶುಲ್ಕ ಎರಡೂ ಇಲ್ಲದ್ದರಿಂದ ಈ ಬಾರಿ, ಆಸ್ತಿ ತೆರಿಗೆ ಶೇ 20ರಿಂದ ಶೇ 200ರಷ್ಟು ಹೆಚ್ಚಾಗಲಿದೆ.

₹2.20 ಕೋಟಿ ನಗದಿನೊಂದಿಗೆ ಪರಾರಿಯಾಗಿದ್ದವನ ಬಂಧನ



ಬೆಂಗಳೂರು: ಸ್ನೇಹಿತನ ಜಮೀನು ಮಾರಾಟದಿಂದ ಬಂದ ಹಣವನ್ನು ಕಳ್ಳತನ ಮಾಡಿ ಪರಾರಿಯಾಗಿದ್ದ ರಿಯಲ್ ಎಸ್ಟೇಟ್ ಮಧ್ಯವರ್ತಿ ಹಾಗೂ ಆತನ ಸಹಚರನನ್ನು ಸುಬ್ರಹ್ಮಣ್ಯಪುರ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಉತ್ತರಹಳ್ಳಿ ನಿವಾಸಿ ಆರ್.ಎಸ್.ಮಂಜುನಾಥ್ (43) ಹಾಗೂ ಜೆಸಿಬಿ ಚಾಲಕ ಕೃಷ್ಣಕುಮಾರ್(38) ಬಂಧಿತರು.

ಆರೋಪಿಗಳಿಂದ ₹15 ಲಕ್ಷ ಮೌಲ್ಯದ ಕಾರು ಮತ್ತು ₹2.20 ಕೋಟಿ ನಗದು ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.

ಪಾಪಯ್ಯ ಗಾರ್ಡನ್ ನಿವಾಸಿ, ರಿಯಲ್ ಎಸ್ಟೇಟ್ ಉದ್ಯಮಿ ಸುಕುಮಾರ್ ಅವರು ನಾಲ್ಕು ಎಕರೆ ಜಮೀನನ್ನು ಮಾರಾಟ ಮಾಡಿದ್ದರು. ಖರೀದಿದಾರರಿಂದ ₹2.20 ಕೋಟಿ ಪಡೆದುಕೊಂಡಿದ್ದರು. ಹಣವನ್ನು ಮನೆಗೆ ಸುರಕ್ಷಿತವಾಗಿ ತೆಗೆದುಕೊಂಡು ಹೋಗಲು ಸ್ನೇಹಿತ ಮಂಜುನಾಥ್ ನೆರವು ಪಡೆದುಕೊಂಡಿದ್ದರು. ಈ ಹಿಂದೆ ಮಂಜುನಾಥ್ ತಮ್ಮ ಮನೆಯಲ್ಲೇ ಬಾಡಿಗೆಗೆ ಇದ್ದ ಕಾರಣಕ್ಕೆ ಸುಕುಮಾರ್ ಅವರ ಜತೆಗೆ ಆತ್ಮೀಯವಾಗಿದ್ದ. ಬಾಡಿಗೆಗೆ ಪಡೆದ ಕಾರನ್ನು ಆರೋಪಿ ಮಂಜುನಾಥ್ ಚಾಲನೆ ಮಾಡುತ್ತಿದ್ದ. ಮಾರ್ಗಮಧ್ಯದಲ್ಲಿ ಕಾರು ನಿಲುಗಡೆ ಮಾಡಿ ಒಂದು ಲಕ್ಷ ರೂಪಾಯಿ ಅನ್ನು ತಮ್ಮ ಖಾತೆಗೆ ಜಮೆ ಮಾಡಲು ಸುಕುಮಾರ್ ಎಟಿಎಂ ಕೇಂದ್ರಕ್ಕೆ ಹೋಗಿದ್ದರು. ಅದೇ ವೇಳೆ ಮಂಜುನಾಥ್ ಕಾರಿನಲ್ಲಿದ್ದ ₹2.20 ಕೋಟಿ ಸಮೇತ ಪರಾರಿಯಾಗಿದ್ದ. ಇದಕ್ಕೆ ಕೃಷ್ಣಕುಮಾರ್ ನೆರವು ಪಡೆದುಕೊಂಡಿದ್ದ. ಮಂಡ್ಯದ ಕೆ.ಎಂ. ದೊಡ್ಡಿ, ಭಾರತಿನಗರ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ಎದುರು ಆರೋಪಿಗಳನ್ನು ವಶಕ್ಕೆ ಪಡೆದುಕೊಂಡು ಬಂಧಿಸಲಾಯಿತು' ಎಂದು ಪೊಲೀಸರು ಹೇಳಿದರು.

ದೇವಾಲಯ ನವೀಕರಣಕ್ಕೆ ₹50 ಲಕ್ಷ ಧನಸಹಾಯ

ಪ್ರಜಾವಾಣಿ ವಾರ್ತೆ



ಬೆಂಗಳೂರು: ಬಿಬಿಎಂಪಿ ಕೇಂದ್ರ ಕಚೇರಿ ಅವರಣದಲ್ಲಿರುವ ಏಳು ಸುತ್ತಿನ ಕೋಟೆ ಸಪ್ತಮಾತೃಕಾ ಸಹಿತ ಶ್ರೀ ಆದಿಶಕ್ತಿ ಅಮ್ಮನವರ ದೇವಸ್ಥಾನದ ನವೀಕರಣಕ್ಕೆ ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ಕ್ಷೇಮಾಭಿವೃದ್ಧಿ ಸಂಘದ ವತಿಯಿಂದ ₹50 ಲಕ್ಷ ಧನಸಹಾಯ ನೀಡಲಾಯಿತು.

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಸಂಘದ ವತಿಯಿಂದ ₹50 ಲಕ್ಷದ ಚೆಕ್ ಅನ್ನು ದೇವಸ್ಥಾನದ ಆಡಳಿತ ಮಂಡಳಿ, ಅರ್ಚಕರಿಗೆ ಸೋಮವಾರ ಹಸ್ತಾಂತರಿಸಿದರು.

'ಬಿಬಿಎಂಪಿ ಅಧಿಕಾರಿ ಮತ್ತು ನೌಕರರ ನಡುವೆ ಸಾಮರಸ್ಯ ಇರಬೇಕು. ದೇವಸ್ಥಾನದ ನವೀಕರಣದಂತಹ ಕಾಮಗಾರಿಗಳಿಗೆ ನೌಕರರು ಧನಸಹಾಯ ಮಾಡಿರುವುದು ಶ್ಲಾಘನಾರ್ಹ' ಎಂದು ತುಷಾರ್ ಗಿರಿನಾಥ್ ಹೇಳಿದರು.

'ಇತಿಹಾಸ ಪ್ರಸಿದ್ಧವಾಗಿರುವ ನೂರಾರು ವರ್ಷದ ದೇವಸ್ಥಾನದ ನವೀಕರಣ ಕಾಮಗಾರಿ ಆರ್ಥಿಕ ಕೊರತೆಯಿಂದ ಕುಂಠಿತಗೊಂಡಿತ್ತು. ಸಂಘದ ಸದಸ್ಯರು ಹಾಗೂ ನೌಕರರಿಂದ ವಂತಿಗೆ ಸಂಗ್ರಹಿಸಿ ಹಣವನ್ನು ನೀಡಲಾಯಿತು' ಎಂದು ಸಂಘದ ಅಧ್ಯಕ್ಷ ಎ. ಅಮೃತ್‌ರಾಜ್ ತಿಳಿಸಿದರು.

ಸಂಘದ ಪದಾಧಿಕಾರಿಗಳಾದ ಸಾಯಿಶಂಕರ್, ಕೆ.ಜಿ. ರವಿ, ಎಸ್.ಜಿ. ಸುರೇಶ್, ರಾಮಚಂದ್ರ, ಮಂಜೇಗೌಡ, ಎಚ್.ಬಿ. ಹರೀಶ್, ಮಾರ್ಕೆಟ್ ಮಂಜುನಾಥ್, ಶ್ರೀಧರ್, ಮಂಜುನಾಥ್, ಕೆ. ನರಸಿಂಹ, ಎನ್. ಶಿವಪ್ರಸಾದ್, ಎನ್.ಹರೀಶ್ ಕುಮಾರ್ ಉಪಸ್ಥಿತರಿದ್ದರು

'ಆರೋಗ್ಯಂ' ಕೇಂದ್ರಕ್ಕೆ ಚಾಲನೆ

ಬೆಂಗಳೂರು: ನಗರದ ವೃತ್ತಿಪರರಿಗೆ ಮುನ್ನೆಚ್ಚರಿಕೆ ಅಥವಾ ರೋಗ ಪೂರ್ವ ತಪಾಸಣೆ ಒದಗಿಸುವ ನಾರಾಯಣ ಹೆಲ್ತ್‌ನ 'ಆರೋಗ್ಯಂ' ಕೇಂದ್ರಕ್ಕೆ ಸೋಮವಾರ ಚಾಲನೆ ನೀಡಲಾಯಿತು.

ಕಾಡುಬೀಸನಹಳ್ಳಿಯ ಪ್ರೆಸ್ಟೀಜ್ ಟೆಕ್ ಪಾರ್ಕ್‌ನಲ್ಲಿನ ಈ ಕೇಂದ್ರದಲ್ಲಿ 90 ನಿಮಿಷಗಳಲ್ಲಿ ಸಮಗ್ರ ಆರೋಗ್ಯ ತಪಾಸಣೆಯ ಗುರಿ ಹೊಂದಲಾಗಿದೆ.

'ಎಐ-ಚಾಲಿತ ಕಾರ್ಡಿಯಾಕ್ ಸಿಟಿ ಸ್ಕ್ಯಾನರ್ ಹೊಂದಿದ್ದು, ಇದು ಹೃದಯದ ಆರೋಗ್ಯಕ್ಕಾಗಿ ಅಲ್ಟ್ರಾ-ಲೋ ರೇಡಿಯೇಷನ್ ಎಐ-ವರ್ಧಿತ ಇಮೇಜ್ ನೀಡುತ್ತದೆ. ಆಸ್ಟಿಯೊಪೊರೋಸಿಸ್ ಅಪಾಯಗಳನ್ನು ಪತ್ತೆಹಚ್ಚುವ ಸೌಲಭ್ಯಗಳಿವೆ. ಸ್ತನ ಕ್ಯಾನ್ಸರ್ ತಪಾಸಣೆಗಾಗಿ ಸುಧಾರಿತ ತ್ರಿಡಿ ಮ್ಯಾಮೊಗ್ರಾಮ್‌ಗಳನ್ನು ಸಹ ಕೇಂದ್ರವು ಹೊಂದಿದೆ' ಎಂದು ನಾರಾಯಣ ಹೆಲ್ತ್‌ನ ಅಧ್ಯಕ್ಷ ಡಾ.ದೇವಿ ಶೆಟ್ಟಿ ತಿಳಿಸಿದರು.



ಕರಗ ಮಹೋತ್ಸವ

ತಿಗಳರಪೇಟೆಯಲ್ಲಿರುವ ಶ್ರೀ ಧರ್ಮರಾಯಸ್ವಾಮಿ ದೇವಸ್ಥಾನದ ಆವರಣದಲ್ಲಿ ಕರಗ ಮಹೋತ್ಸವ ಪ್ರಯುಕ್ತ ಮಂಗಳವಾರ ನಡೆದ ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ನೃತ್ಯ ದಿಶಾ ಟ್ರಸ್ಟ್ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ನೀಡಿದರು ಪ್ರಜಾವಾಣಿ ಚಿತ್ರ

ಸರ್ಕಾರದ ಅನುಮತಿ ನಿರೀಕ್ಷೆ, ಮೇ ತಿಂಗಳಿನಿಂದಲೇ ಜಾರಿಗೆ ಸಿದ್ಧತೆ

ಹಿಂಬಾಕಿ ವಸೂಲಿಗೆ 'ಒಟಿಎಸ್'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀರ್ಘ ಕಾಲದಿಂದ ನೀರಿನ ಶುಲ್ಕ ಬಾಕಿ ಉಳಿಸಿಕೊಂಡಿರುವ ಗ್ರಾಹಕರು ಬಡ್ಡಿ ಮತ್ತು ದಂಡ ರಹಿತವಾಗಿ ಹಿಂಬಾಕಿ ಪಾವತಿಗೆ ಅವಕಾಶ ಕಲ್ಪಿಸಲು 'ಒಂದು ಬಾರಿ ಪರಿಹಾರ ಯೋಜನೆ'(ಒಟಿ-ಎಸ್) ಜಾರಿಗೊಳಿಸಲು ಜಲಮಂಡಳಿ ಸಿದ್ಧತೆ ನಡೆಸಿದೆ. ಮೇ ತಿಂಗಳಿನಿಂದಲೇ ಇದು ಅನುಷ್ಠಾನಕ್ಕೆ ಬರುವ ಸಾಧ್ಯತೆ ಇದೆ.

'ಜಲಮಂಡಳಿಯ ನಿರ್ವಹಣಾ ವೆಚ್ಚ ಏರಿಕೆಯಾಗುತ್ತಿದೆ. ಮತ್ತೊಂದೆಡೆ ಕೇಂದ್ರ ಮತ್ತು ರಾಜ್ಯ ಸರ್ಕಾರದ ಇಲಾಖೆಗಳು, ವಸತಿ ಮತ್ತು ವಾಣಿಜ್ಯ ಕಟ್ಟಡಗಳು ಸೇರಿ ಗ್ರಾಹಕರಿಂದ ₹ 701.70 ಕೋಟಿ ನೀರಿನ ಬಿಲ್ ಬಾಕಿ ಇದೆ. ಬಾಕಿ ಬಿಲ್ ಸಂಗ್ರಹಿಸಲು ಒಟಿಎಸ್ ವ್ಯವಸ್ಥೆ ಜಾರಿಗೆ ಮಂಡಳಿ ಮುಂದಾಗಿದೆ. ಸರ್ಕಾರದಿಂದ ಅನುಮತಿ ದೊರೆತರೆ ಮೇ ತಿಂಗಳಿನಿಂದಲೇ ಜಾರಿಗೊಳಿಸುವ ಸಾಧ್ಯತೆ ಇದೆ. ಯೋಜನೆ ಜಾರಿಯಾದಾಗಿನಿಂದ ಮೂರು ತಿಂಗಳವರೆಗೆ ಈ ಯೋಜನೆಯನ್ನು ಮುಂದುವರಿಸಲಾಗುತ್ತದೆ' ಎಂದು ಜಲಮಂಡಳಿ ಮೂಲಗಳು ತಿಳಿಸಿವೆ.

ಒಳಚರಂಡಿ ಮತ್ತು ನೀರು ಸರಬರಾಜು ಶುಲ್ಕ ಜಲಮಂಡಳಿಗೆ ಪ್ರಮುಖ ಆದಾಯದ ಮೂಲವಾಗಿದೆ. ಹೀಗಾಗಿ ಬಾಕಿ ಶುಲ್ಕ ಸಂಗ್ರಹಣೆಗೆ ಒಟಿಎಸ್ ಜಾರಿಗೊಳಿಸಲು ಜಲಮಂಡಳಿ ಉದ್ದೇಶಿಸಿದೆ. ಈ ಯೋಜನೆ ಜಾರಿಯಾದರೆ ಗ್ರಾಹಕರು ಈವರೆಗೆ ಬಾಕಿ ಉಳಿಸಿಕೊಂಡಿರುವ ಶುಲ್ಕಕ್ಕೆ ಹಾಕಿರುವ ಬಡ್ಡಿಯನ್ನು ಮನ್ನಾ ಮಾಡಲಾಗುತ್ತದೆ. ಜಲಮಂಡಳಿಯ ನಿಯಮಗಳ ಉಲ್ಲಂಘನೆಗಾಗಿ ವಿಧಿಸಿದ್ದ ದಂಡವನ್ನು ಮನ್ನಾ ಮಾಡಿ, ಬಾಕಿ ಶುಲ್ಕವನ್ನಷ್ಟೇ ಸಂಗ್ರಹಿಸಲಾಗುತ್ತದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ನಗರದಲ್ಲಿ 11.2 ಲಕ್ಷ ನೀರಿನ ಸಂಪರ್ಕಗಳಿವೆ. ಇದರಲ್ಲಿ 2 ಲಕ್ಷದಷ್ಟು ಸರ್ಕಾರಿ ಇಲಾಖೆಗಳು, ಕೈಗಾರಿಕೆ, ವಾಣಿಜ್ಯ ಕಟ್ಟಡಗಳು, 9 ಲಕ್ಷ ಮನೆಗಳಿವೆ. ಪ್ರತಿ ತಿಂಗಳು ₹119 ಕೋಟಿ ಆದಾಯ ಸಂಗ್ರಹವಾದರೂ, ತಿಂಗಳಿಗೆ ₹170 ಕೋಟಿ ವೆಚ್ಚವಾಗುತ್ತದೆ. ಪ್ರತಿ ತಿಂಗಳು ₹51 ಕೋಟಿ ನಷ್ಟವಾಗುತ್ತಿದೆ ಎನ್ನುತ್ತಾರೆ ಮಂಡಳಿಯ ಅಧಿಕಾರಿಗಳು.

ಇತ್ತೀಚೆಗಷ್ಟೇ ಬಿಬಿಎಂಪಿ ಅಧೀನದಲ್ಲಿದ್ದ 1,145 ಶುದ್ಧ ನೀರಿನ ಘಟಕಗಳು ಮತ್ತು ಸುಮಾರು 4,000ಕ್ಕೂ ಹೆಚ್ಚು ಕೊಳವೆ ಬಾವಿಗಳ ನಿರ್ವಹಣೆಯೂ ಜಲಮಂಡಳಿಯ ಹೆಗಲೇರಿದೆ. ಇದರಿಂದ ನಿರ್ವಹಣಾ ವೆಚ್ಚ ಮತ್ತಷ್ಟು ಹೆಚ್ಚಾಗುತ್ತಿದೆ.

ಸದ್ಯ ಜಲಮಂಡಳಿ ತಿಂಗಳಿಗೆ ₹59 ಕೋಟಿ ವಿದ್ಯುತ್ ಬಿಲ್ ಪಾವತಿಸುತ್ತಿದೆ. ಒಂದೊಮ್ಮೆ ಕಾವೇರಿ 5ನೇ ಹಂತದ ಯೋಜನೆ ಪೂರ್ಣ ಅನುಷ್ಠಾನಗೊಂಡರೆ ಈ ಬಿಲ್ ಮೊತ್ತ ₹ 86 ಕೋಟಿ ದಾಟಬಹುದು. ಇದರಿಂದ ತಿಂಗಳ ನಿರ್ವಹಣಾ ವೆಚ್ಚ₹170 ಕೋಟಿಯಿಂದ ₹210 ಕೋಟಿ ಮೀರಲಿದೆ. ನೀರಿನ ಬಿಲ್ ವಸೂಲಿಯಾಗದ ಕಾರಣ, ಜಲಮಂಡಳಿ ₹566 ಕೋಟಿಗೂ ಹೆಚ್ಚು ವಿದ್ಯುತ್ ಶುಲ್ಕವನ್ನು ಬಾಕಿ ಉಳಿಸಿಕೊಂಡಿದೆ. ಇದೆಲ್ಲವನ್ನೂ ನಿಭಾಯಿಸಲು ಒಟಿಎಸ್ ಮೂಲಕ ಬಾಕಿ ಶುಲ್ಕ ಸಂಗ್ರಹಕ್ಕೆ ಜಲಮಂಡಳಿ ಮುಂದಾಗಿದೆ.

ಯಾರು, ಎಷ್ಟು ಶುಲ್ಕ ಬಾಕಿ (ಕೋಟಿಗಳಲ್ಲಿ)

ವರ್ಗ	ಸಂಪರ್ಕಗಳು	ಒಟ್ಟು ಮೊತ್ತ
ಬಿಬಿಎಂಪಿ	485	23.90
ಕೇಂದ್ರ ಸರ್ಕಾರ	193	27.97
ರಾಜ್ಯ ಸರ್ಕಾರ	645	93.67
ರಕ್ಷಣಾ ಇಲಾಖೆ	46	39.4
ಶಾಸನಬದ್ಧ ಸಂಸ್ಥೆಗಳು	152	11.09
ಕೈಗಾರಿಕೆಗಳು	1144	4.81
ಭಾಗಶಃ ಗೃಹೇತರ	32,533	47.33
ಗೃಹೇತರ	40,018	132.96
ಮನೆ ಸಂಪರ್ಕಗಳು	4.1ಲಕ್ಷ	308.62

*ಪ್ರಮುಖವಾಗಿ ಬಾಕಿ ಉಳಿಸಿಕೊಂಡಿರುವ ವಿಭಾಗಗಳು



ಬಾಕಿ ಶುಲ್ಕ ಸಂಗ್ರಹಕ್ಕಾಗಿ ಒಟಿಎಸ್ ವ್ಯವಸ್ಥೆ ಜಾರಿಗೆ ತರಲು ಉದ್ದೇಶಿಸಲಾಗಿದೆ. ಸರ್ಕಾರದ ಅನುಮತಿ ದೊರೆತರೆ ಮೇ ತಿಂಗಳಿನಿಂದ ಜಾರಿಗೊಳಿಸುತ್ತೇವೆ

ರಾಮ್‌ಪ್ರಸಾತ್ ಮನೋಹರ್, ಅಧ್ಯಕ್ಷ, ಜಲಮಂಡಳಿ

ನಗರದಲ್ಲಿ ಇಂದು

ತ್ರಿಭಾಷಾ ಸೂತ್ರ, ಲೋಕಸಭಾ ಕ್ಷೇತ್ರಗಳ ಮರುವಿಂಗಡಣೆ ಬಗ್ಗೆ ಸ್ವಾಭಿಮಾನಿ ಚಳವಳಿಗಳ ಸಂವಾದ: ಭಾಗವಹಿಸುವವರು: ಸಿ.ಎಂ. ಇಬ್ರಾಹಿಂ, ಬಿ.ಟಿ. ಲಲಿತಾ ನಾಯಕ್, ಕೋಡಿಹಳ್ಳಿ ಚಂದ್ರಶೇಖರ್, ಗೋಪಿನಾಥ್, ಮಾರಸಂದ್ರ ಮುನಿಯಪ್ಪ, ಎನ್.ಮೂರ್ತಿ, ಆರ್. ಮೋಹನರಾಜ್, ಆರ್. ಮುನಿಯಪ್ಪ, ಎಚ್.ಡಿ. ಬಸವರಾಜ್, ರಾಧಾಕೃಷ್ಣ, ಆರ್.ಎಂ.ಎನ್. ರಮೇಶ್, ಆಯೋಜನೆ: ನವ ಕರ್ನಾಟಕ ನಿರ್ಮಾಣ ಆಂದೋಲನ, ಸ್ಥಳ: ಸ್ಕೌಟ್ಸ್ ಆ್ಯಂಡ್ ಗೈಡ್ಸ್ ಭವನ, ಬೆಳಿಗ್ಗೆ 10.30

ವಿಎಲ್‌ಎನ್ ಪ್ರಬುದ್ಧಾಲಯದ 16ನೇ ವಾರ್ಷಿಕೋತ್ಸವ: ಅಧ್ಯಕ್ಷತೆ: ವಿ. ಲಕ್ಷ್ಮೀನಾರಾಯಣ, ಅತಿಥಿಗಳು: ಡಾ.ಸಿ.ಎನ್. ಮಂಜುನಾಥ, ಎಂ. ಕೃಷ್ಣಪ್ಪ, ಡಾ.ಸಿ. ರಾಮಚಂದ್ರ, ಡಾ. ಪಲ್ಲವಿ ವಿ.ಆರ್., ಆಯೋಜನೆ ಮತ್ತು ಸ್ಥಳ: ನವ ನಿರ್ಮಾಣ್–ವಿಎಲ್‌ಎನ್ ಪ್ರಬುದ್ಧಾಲಯ ಮತ್ತು ಆಯುರ್ಧಾಮ, ನಿಸರ್ಗ ಬಡಾವಣೆ, ಬನ್ನೇರುಘಟ್ಟ

25ನೇ ವರ್ಷದ ಪ್ರವಚನ ವಾಹಿನಿ: 'ರಾಮಾಯಣದ ಆಯ್ದ ಭಾಗಗಳು' ಉಪನ್ಯಾಸ: ಕೆ. ಲಕ್ಷ್ಮೀನಾರಾಯಣ, ಆಯೋಜನೆ ಹಾಗೂ ಸ್ಥಳ: ಸಾಂಸ್ಕೃತಿಕ ಮಂದಿರ, ರಾಗೀಗುಡ್ಡದ ಶ್ರೀ ಪ್ರಸನ್ನ ಆಂಜನೇಯಸ್ವಾಮಿ ಭಕ್ತ ಮಂಡಳಿ ಟ್ರಸ್ಟ್, ಜಯನಗರ 9ನೇ ಬಡಾವಣೆ, ಸಂಜೆ 6.30

ಬೆಂಗಳೂರು ಕರಗ ಮಹೋತ್ಸವ: ಆರತಿ ದೀಪಗಳು, ಆಯೋಜನೆ: ಧಾರ್ಮಿಕ ದತ್ತಿ ಇಲಾಖೆ, ಸ್ಥಳ: ಧರ್ಮರಾಯಸ್ವಾಮಿ ದೇವಸ್ಥಾನ, ತಿಗಳರಪೇಟೆ, ಸಂಜೆ 7.30

ಸಾಹಿತ್ಯ, ಸಾಂಸ್ಕೃತಿಕ, ಶೈಕ್ಷಣಿಕ ಸೇರಿ ವಿವಿಧ ಕಾರ್ಯಕ್ರಮಗಳ ವಿವರಗಳನ್ನು 'ನಗರದಲ್ಲಿ ಇಂದು' ಅಂಕಣದಲ್ಲಿ ಪ್ರಕಟಿಸಲು ಈ ಕೆಳಗಿನ ಇ-ಮೇಲ್‌ಗೆ (ಸಂಜೆ 6 ಗಂಟೆ ಒಳಗೆ) ಕಳುಹಿಸಿ
nagaradalli_indu@prajavani.co.in

ರಾಮನವಮಿ ವಿಶೇಷ



87ನೇ ರಾಮೋತ್ಸವ ಸಮಾರಂಭ: ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಗಾಯನ: ಆದಿತ್ಯ ಭಾಸ್ಕರ್, ಹಾರ್ಮೋನಿಯಂ: ಚಿರಾಗ್ ಡಿ. ವಿಶ್ವಕರ್ಮ, ತಬಲಾ: ಕಿಶೋರ್ ಕುಲಕರ್ಣಿ, ಪ್ರವಚನ: ಪಾವಗಡ ಪ್ರಕಾಶ್ ರಾವ್, ಕರ್ನಾಟಕ ಶಾಸ್ತ್ರೀಯ ಸಂಗೀತ–ಪಿಟೀಲು: ಮೈಸೂರು ಮಂಜುನಾಥ್, ಸುಮಂತ್ ಮಂಜುನಾಥ್, ಮಾಳವಿ ಮಂಜುನಾಥ್, ಮೃದಂಗ: ತುಮಕೂರು ರವಿಶಂಕರ್, ಘಟಂ: ಗಿರಿಧರ್ ಉಡುಪ, ಆಯೋಜನೆ: ಎನ್. ಆರ್. ಕಾಲೊನಿ ಶ್ರೀರಾಮಮಂದಿರಂ ಟ್ರಸ್ಟ್, ಸ್ಥಳ: ಶ್ರೀರಾಮಮಂದಿರ, ಎನ್.ಆರ್. ಕಾಲೊನಿ, ಬಸವನಗುಡಿ, ಸಂಜೆ 4.15ರಿಂದ

32ನೇ ಶ್ರೀರಾಮನವಮಿ ಸಂಗೀತೋತ್ಸವ: ಸಂಜೆ 5.15– ಗಾಯನ: ಸುಷ್ಮಾ ಅನಿಲ್, ಪಿಟೀಲು: ಅಧಿತಿ ಹೆಬ್ಬಾರ್, ಮೃದಂಗ: ಪ್ರಣವ್ ಸುಬ್ರಹ್ಮಣ್ಯ, ಸಂಜೆ 6.30 ಗಾಯನ: ಕೆ.ಎಸ್. ವಾಸುದೇವ್, ಪಿಟೀಲು: ವೈಭವ್ ರಮಣಿ, ಮೃದಂಗ: ಎಚ್.ಎಸ್. ಸುಧೀಂದ್ರ, ಘಟ: ಸಮಿತ್ ಎಸ್. ಗೌಡ, ಆಯೋಜನೆ ಹಾಗೂ ಸ್ಥಳ: ಶ್ರೀವಾಣಿ ಕಲಾ ಕೇಂದ್ರ, ಬಸವೇಶ್ವರನಗರ

87ನೇ ಶ್ರೀ ರಾಮನವಮಿ ಸಂಗೀತೋತ್ಸವ: ಹಾಡುಗಾರಿಕೆ: ವರುಣ್ ಎಂ. ಕಗಿನಗೊಳ್ಳಿ ಮತ್ತು ತಂಡ, ಕರ್ನಾಟಕ ಶಾಸ್ತ್ರೀಯ ಸಂಗೀತ: ಹಾಡುಗಾರಿಕೆ: ಶ್ರೀರಂಜಿನಿ ಸಂತಾನಗೋಪಾಲನ್, ಪಿಟೀಲು: ಚಾರುಲತ ರಾಮಾನುಜಂ, ಮೃದಂಗ: ಎನ್.ಸಿ. ಭಾರಧ್ವಾಜ್, ಖಂಜಿರ: ಸುನಾದ್ ಅನೂರ್, ಆಯೋಜನೆ: ಶ್ರೀರಾಮಸೇವಾ ಮಂಡಳಿ ರಾಮನವಮಿ ಸೆಲೆಬ್ರೇಷನ್ ಟ್ರಸ್ಟ್, ಸ್ಥಳ: ಕೋಟೆ ಪ್ರೌಢಶಾಲೆ ಆವರಣ, ಚಾಮರಾಜಪೇಟೆ, ಸಂಜೆ 5

ವಸಂತ ನವರಾತ್ರಿ ಶ್ರೀರಾಮೋತ್ಸವ: ಹರಿನಾಮ ಸಂಕೀರ್ತನೆ: ವಾಣಿಶ್ರೀ ರಾಮಕೃಷ್ಣ, ಮೈತ್ರಿ, ಕೀ ಬೋರ್ಡ್: ಟಿ.ಎಸ್. ರಮೇಶ್, ಮೃದಂಗ: ಸರ್ವೋತ್ತಮ, ಆಯೋಜನೆ ಹಾಗೂ ಸ್ಥಳ: ಶ್ರೀರಾಮ ಮಂದಿರ, ಈಸ್ಟ್ ಪಾರ್ಕ್ ರಸ್ತೆ, ಮಲ್ಲೇಶ್ವರ, ಸಂಜೆ 6.30

71ನೇ ಶ್ರೀರಾಮನವಮಿ ಸಂಗೀತ ಮಹೋತ್ಸವ: ಸಂಜೆ 5.30–ಹಾಡುಗಾರಿಕೆ: ವಸುಮತಿ ರಘುನಾಥ್ ಮತ್ತು ಶಿಷ್ಯರಿಂದ. ರಾತ್ರಿ 7-ಭರತನಾಟ್ಯ: ಸಭಾಪತಿ ಸಾಂಸ್ಕೃತಿಕ ಕೇಂದ್ರ ವೃಂದದವರಿಂದ, ನಿರ್ದೇಶನ: ಮಹಿಮ ಹರೀಶ್, ಆಯೋಜನೆ: ಕಾರಂಜಿ ಶ್ರೀರಾಮ ಸೇವಾ ಸಮಿತಿ ಟ್ರಸ್ಟ್, ಸ್ಥಳ: ಕಾರಂಜಿ ಆಂಜನೇಯಸ್ವಾಮಿ ದೇವಸ್ಥಾನ, ಬಸವನಗುಡಿ, ಸಂಜೆ 7

ಬಿಬಿಎಂಪಿ ಕಾಲೇಜುಗಳಿಗೆ ಶೇ 70.15ರಷ್ಟು ಫಲಿತಾಂಶ



ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಬಿಬಿಎಂಪಿಯ 19 ಪದವಿಪೂರ್ವ ಕಾಲೇಜುಗಳ ವಿದ್ಯಾರ್ಥಿಗಳಲ್ಲಿ ಶೇ 70.15ರಷ್ಟು ಮಂದಿ ಉತ್ತೀರ್ಣರಾಗಿದ್ದಾರೆ. ಫಲಿತಾಂಶದ ಪ್ರಮಾಣ ಕಳೆದ ವರ್ಷಕ್ಕಿಂತ ಶೇ 7.68ರಷ್ಟು ಕಡಿಮೆಯಾಗಿದೆ.

ಭೈರವೇಶ್ವರ ನಗರ ಪದವಿಪೂರ್ವ ಕಾಲೇಜು ಶೇ 93.29ರಷ್ಟು ಫಲಿತಾಂಶ ಗಳಿಸಿ ಮೊದಲ ಸ್ಥಾನ ಗಳಿಸಿದ್ದರೆ, ಕಾವೇರಿಪುರ, ಪಾದರಾಯನಪುರ ಕಾಲೇಜು ನಂತರದ ಸ್ಥಾನದಲ್ಲಿವೆ. ಥಣಿಸಂದ್ರ ಕಾಲೇಜು ಶೇ 36.17ರಷ್ಟು ಫಲಿತಾಂಶ ಗಳಿಸಿ ಕೊನೆಯ ಸ್ಥಾನದಲ್ಲಿದ್ದು, ಟಾಸ್ಕರ್ ಟೌನ್, ಜೋಗುಪಾಳ್ಯ ಕಾಲೇಜು ನಂತರದ ಸ್ಥಾನದಲ್ಲಿವೆ.

ವಾಣಿಜ್ಯ ವಿಭಾಗದಲ್ಲಿ ಉತ್ತರಹಳ್ಳಿ ಪದವಿಪೂರ್ವ ಕಾಲೇಜಿನ ಪಿ. ಪ್ರತೀಕ್ ಅವರು 585, ಕಸ್ತೂರಬಾ ನಗರ ಕಾಲೇಜಿನ ಡಿ. ಲಿಖಿತಾ 584, ಪಾದರಾಯನಪುರ ಕಾಲೇಜಿನ ಹಾದಿಯಾ ತನ್ಜೀಮ್ 580 ಅಂಕ ಗಳಿಸಿದ್ದಾರೆ.

ಫಲಿತಾಂಶದ ವಿವರ

2,345 ಪರೀಕ್ಷೆ ಬರೆದವರು

1,645 ಉತ್ತೀರ್ಣರಾದವರು

160 ಅತ್ಯುನ್ನತ ಶ್ರೇಣಿ

ಶೇ 85ಕ್ಕಿಂತ ಹೆಚ್ಚು ಅಂಕಗಳಿಸಿ ಅತ್ಯುನ್ನತ ಶ್ರೇಣಿಯಲ್ಲಿ ಉತ್ತೀರ್ಣರಾದ 160 ವಿದ್ಯಾರ್ಥಿಗಳಿಗೆ ಪಾಲಿಕೆ ವತಿಯಿಂದ ತಲಾ ₹35 ಸಾವಿರ ಪ್ರೋತ್ಸಾಹ ಧನ ನೀಡಲಾಗುತ್ತದೆ ಎಂದು ಬಿಬಿಎಂಪಿ ಶಿಕ್ಷಣ ವಿಭಾಗದ ಉಪ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಬಿಬಿಎಂಪಿ ಕಾಲೇಜುಗಳಲ್ಲಿ 2021–22ನೇ ಸಾಲಿನಲ್ಲಿ ಶೇ 64.42, 2022–23ನೇ ಸಾಲಿನಲ್ಲಿ ಶೇ 63.18 ಮತ್ತು 2023–24ನೇ ಸಾಲಿನಲ್ಲಿ ಶೇ 77.83ರಷ್ಟು ಫಲಿತಾಂಶ ದಾಖಲಾಗಿತ್ತು.

ಕಾಲೇಜುವಾರು ಫಲಿತಾಂಶ

ಕಾಲೇಜು	ಪರೀಕ್ಷೆ ಬರೆದವರು	ಉತ್ತೀರ್ಣ	ಅತ್ಯುನ್ನತ ಶ್ರೇಣಿ	ಶೇಕಡ
ಭೈರವೇಶ್ವರನಗರ	149	139	30	93.29
ಕಾವೇರಿಪುರ	97	86	7	88.66
ಪಾದರಾಯನಪುರ	87	76	7	87.36
ಶಕ್ತಿಗಣಪತಿ ನಗರ	38	32	6	84.21
ಶ್ರೀರಾಮಪುರ	281	219	25	77.94
ಮತ್ತಿಕೆರೆ	75	58	5	77.33
ಕಸ್ತೂರಬಾನಗರ	281	208	20	74.02
ಹೇರೋಹಳ್ಳಿ	92	61	7	66.30
ಬನ್ನಪ್ಪ ಪಾರ್ಕ್	47	33	1	70.21
ಕ್ಲೀವ್‌ಲ್ಯಾಂಡ್‌ಟೌನ್	470	316	28	67.23
ಡಿಸ್ಪೆನ್ಸರಿ ರಸ್ತೆ	135	88	3	65.19
ಮಾಗಡಿ ರಸ್ತೆ	89	57	2	64.04
ಆಸ್ಟಿನ್ ಟೌನ್	21	13	1	61.90
ಚಾಮರಾಜಪೇಟೆ	62	38	3	61.29
ಪಿಳ್ಳಣ್ಣ ಗಾರ್ಡನ್	107	63	4	58.88
ಉತ್ತರಹಳ್ಳಿ	153	87	8	56.86
ಜೋಗುಪಾಳ್ಯ	52	28	0	53.85
ಟಾಸ್ಕರ್ ಟೌನ್	62	26	3	41.94
ಥಣಿಸಂದ್ರ	47	17	0	36.17

ಅಗ್ರ 10ರೊಳಗೆ ಬೆಂಗಳೂರು ಗ್ರಾಮಾಂತರಕ್ಕೂ ಸ್ಥಾನ

ಪಿಯುಸಿ: ಉತ್ತರ–ದಕ್ಷಿಣ ಜಿಗಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆ ಫಲಿತಾಂಶದಲ್ಲಿ ಬೆಂಗಳೂರು ದಕ್ಷಿಣ, ಉತ್ತರ ಹಾಗೂ ಗ್ರಾಮಾಂತರ ಶೈಕ್ಷಣಿಕ ಜಿಲ್ಲೆಗಳು ಈ ಬಾರಿ ಉತ್ತಮ ಸಾಧನೆ ಮಾಡಿವೆ.

ಕಳೆದ ಬಾರಿ 6ನೇ ಸ್ಥಾನದಲ್ಲಿದ್ದ ಬೆಂಗಳೂರು ದಕ್ಷಿಣ ಜಿಲ್ಲೆಯು ಈ ಬಾರಿ 3ನೇ ಸ್ಥಾನಕ್ಕೆ ಜಿಗಿದರೆ, ಬೆಂಗಳೂರು ಉತ್ತರ ಜಿಲ್ಲೆಯು 7ನೇ ಸ್ಥಾನದಿಂದ 5ನೇ ಸ್ಥಾನಕ್ಕೇರಿದೆ.

ಕಾಲೇಜು ಶಿಕ್ಷಣ ಇಲಾಖೆಯು ಮಂಗಳವಾರ ಪರೀಕ್ಷಾ ಫಲಿತಾಂಶ ಪ್ರಕಟಿಸಿದ್ದು, ದಕ್ಷಿಣ ಜಿಲ್ಲೆಯ ಫಲಿತಾಂಶವು ಶೇ 85.36 ಆಗಿದ್ದು, ಕಳೆದ ಬಾರಿ ಶೇ 89.57 ಇತ್ತು. ಅದೇ ರೀತಿ ಉತ್ತರ ಜಿಲ್ಲೆಯ ಫಲಿತಾಂಶವು ಶೇ 83.31 ಆಗಿದ್ದು, ಕಳೆದ ಬಾರಿ ಶೇ 88.67 ಇತ್ತು.

ಅಗ್ರ 10ರೊಳಗೆ ಬೆಂಗಳೂರು ಗ್ರಾಮಾಂತರ ಜಿಲ್ಲೆಗೂ ಸ್ಥಾನ ದೊರೆತಿದೆ. ಶೇ 79.70 ಫಲಿತಾಂಶದೊಂದಿಗೆ ಎಂಟನೇ ಸ್ಥಾನಕ್ಕೇರಿದೆ. ಕಳೆದ ವರ್ಷ ಶೇ 87.55 ಫಲಿತಾಂಶದೊಂದಿಗೆ ಹತ್ತನೇ ಸ್ಥಾನದಲ್ಲಿತ್ತು.

ಪಿಇಎಸ್ ಪಿಯು ಕಾಲೇಜು: ನಗರದ ಪಿಇಎಸ್ ಪಿಯು ಕಾಲೇಜಿನ ವಿದ್ಯಾರ್ಥಿನಿಯರು ಮೇಲುಗೈ ಸಾಧಿಸಿದ್ದಾರೆ. ವಿಜ್ಞಾನ ವಿಭಾಗದ 139 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ಉತ್ತೀರ್ಣರಾಗಿದ್ದಾರೆ.

ಎಸ್.ಪ್ರಜ್ವಲ್ (593), ಬಿ.ಎಲ್. ಕಿಶನ್ (592), ವಿ.ದೀಕ್ಷಾ (588), ಧ್ಯಾನ ಎಸ್.ರಾವ್ (583), ಐಶ್ವರ್ಯಾ ಎಂ.ರಾಯ್ಕರ್(581) ಅಂಕ ಗಳಿಸಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ 128 ವಿದ್ಯಾರ್ಥಿಗಳು ಉನ್ನತ ಶ್ರೇಣಿಯಲ್ಲಿ ತೇರ್ಗಡೆ ಹೊಂದಿದ್ದಾರೆ. ಬಿ.ಎಸ್. ಪ್ರಿಯಾಂಕಾ (592), ಎ.ಭುವನ್ (591)., ನೇಹಾ ಯು. ಭಟ್ (590), ಚಂದನಾ ಯು. (590), ಎ.ರೋಷಣಿ (590) ಅಂಕ ಗಳಿಸಿದ್ದಾರೆ.

ದೀಕ್ಷಾ ವೇದಾಂತು ಕಾಲೇಜು: ದೀಕ್ಷಾ ವೇದಾಂತು ಕಾಲೇಜಿನ 13 ವಿದ್ಯಾರ್ಥಿಗಳು ಅಗ್ರ ಹತ್ತರೊಳಗೆ ಸ್ಥಾನ ಪಡೆದಿದ್ದಾರೆ. ವಿಜ್ಞಾನ ವಿಭಾಗದ 11 ವಿದ್ಯಾರ್ಥಿಗಳು ಮತ್ತು ವಾಣಿಜ್ಯ ವಿಭಾಗದ ಇಬ್ಬರು ವಿದ್ಯಾರ್ಥಿಗಳು ಅಗ್ರ 10ರೊಳಗೆ ಸ್ಥಾನ ಪಡೆದಿದ್ದಾರೆ.

ವಿಜ್ಞಾನ ವಿಭಾಗದ ಸುಘೋಷ್ ಪ್ರಶಾಂತ್ ಹೆಗಡೆ, ನೀತಿ ಹೊಳ್ಳ 600ಕ್ಕೆ 595 ಅಂಕಗಳನ್ನು ಗಳಿಸಿ ಐದನೇ ಶ್ರೇಯಾಂಕ ಪಡೆದಿದ್ದಾರೆ.

ಮುಖ್ಯಾಂಶಗಳು

- ಕಳೆದ ಬಾರಿ 6ನೇ ಸ್ಥಾನದಲ್ಲಿದ್ದ ಬೆಂಗಳೂರು ದಕ್ಷಿಣ
- 7ನೇ ಸ್ಥಾನದಲ್ಲಿದ್ದ ಬೆಂಗಳೂರು ಉತ್ತರ ಈ ಬಾರಿ 5ನೇ ಸ್ಥಾನಕ್ಕೆ ಜಿಗಿತ

ಅಸೆಂಟ್ ಪಿಯು ಕಾಲೇಜಿನ ವಿದ್ಯಾರ್ಥಿಗಳ ಉತ್ತಮ ಸಾಧನೆ

ಪೀಣ್ಯ ದಾಸರಹಳ್ಳಿ: ಹೆಸರಘಟ್ಟ ಮುಖ್ಯ ರಸ್ತೆಯಲ್ಲಿರುವ ಅಸೆಂಟ್ ಪಿಯು ಕಾಲೇಜಿಗೆ ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯಲ್ಲಿ ಶೇ 98.47 ಫಲಿತಾಂಶ ಬಂದಿದೆ.

ಕಾಲೇಜಿನಲ್ಲಿ 70 ವಿದ್ಯಾರ್ಥಿಗಳು ಅತ್ಯುನ್ನತ ಶ್ರೇಣಿಯಲ್ಲಿ ಹಾಗೂ 150 ವಿದ್ಯಾರ್ಥಿಗಳು ಪ್ರಥಮ ಶ್ರೇಣಿಯಲ್ಲಿ ತೇರ್ಗಡೆಯಾಗಿದ್ದಾರೆ ಎಂದು ಪ್ರಾಚಾರ್ಯ ಬಿ.ಎಂ.ವೆಂಕಟೇಶ್ ತಿಳಿಸಿದರು.

ವಿದ್ಯಾರ್ಥಿನಿ ಸ್ಪಂದನ ಬಿ. (ವಾಣಿಜ್ಯ ವಿಭಾಗ) ಶೇ.98, ಪವಿತ್ರ ಜಿ. (ವಿಜ್ಞಾನ ವಿಭಾಗ) ಶೇ.97.17, ಖುಷಿ ಬಿ. ಶೇ 96.83, ತೇಜಸ್ವಿನಿ ಎಂ (ವಿಜ್ಞಾನ ವಿಭಾಗ) ಶೇ.95.33 ಅಂಕ ಪಡೆದಿದ್ದಾರೆ.



ಸ್ಪಂದನ ಬಿ.




ಪವಿತ್ರ ಜಿ.



ಖುಷಿ ಬಿ.

ಸಿ.ಚಿನ್ಮಯಿ ಚಿತ್ರಕಿಗೆ ಶೇ 98

ರೇವಾ ವಿಶ್ವ ವಿದ್ಯಾಲಯದ ಅಂಧ ವಿದ್ಯಾರ್ಥಿನಿ ಸಿ.ಚಿನ್ಮಯಿ ಚಿತ್ರಕಿ ಅವರು ದ್ವಿತೀಯ ಪಿಯುಸಿ ಯಲ್ಲಿ ಶೇಕಡ 98 ಅಂಕ ಗಳಿಸಿದ್ದಾರೆ. ಮನೋವಿಜ್ಞಾನ ವಿಷಯದಲ್ಲಿ ಶೇ 100 ಅಂಕ ಗಳಿಸಿದ್ದಾರೆ. ಯಲಹಂಕದ ಮಾತೃ ಎಜುಕೇಷನಲ್ ಟ್ರಸ್ಟ್ (ಅಂಧರ ಮತ್ತು ಇತರ ಅಂಗವಿಕಲರು) ಚಿನ್ಮಯಿ ಸಾಧನೆಗೆ ಮೆಚ್ಚುಗೆ ವ್ಯಕ್ತಪಡಿಸಿದೆ.



ಸಿ.ಚಿನ್ಮಯಿ ಚಿತ್ರಕಿ

49 ಬಿಬಿಎಂಪಿ ಶಾಲೆಗಳ ದುಃಸ್ಥಿತಿ: ಪಿಐಎಲ್ ವಿಚಾರಣೆ

ಪರಿಶೀಲನಾ ತಂಡ ರಚನೆಗೆ ಆದೇಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ (ಬಿಬಿಎಂಪಿ) ವತಿಯಿಂದ ನಡೆಸಲಾಗುತ್ತಿರುವ 49 ಶಾಲೆಗಳಲ್ಲಿನ ವಿದ್ಯಾರ್ಥಿಗಳ ಮೂಲ ಸೌಕರ್ಯ ಲಭ್ಯತೆಗೆ ಸಂಬಂಧಿಸಿದಂತೆ ಪರಿಶೀಲನಾ ತಂಡ ರಚನೆ ಮಾಡಬೇಕು' ಎಂದು ಹೈಕೋರ್ಟ್, ರಾಜ್ಯ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ನಿರ್ದೇಶಿಸಿದೆ.

ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಮರಳಿ ಕರೆತರುವುದು ಹಾಗೂ ಸರ್ಕಾರಿ ಶಾಲೆಗಳಲ್ಲಿ ಮೂಲಸೌಕರ್ಯಗಳ ಕೊರತೆಯ ಕುರಿತಂತೆ ಮಾಧ್ಯಮ ವರದಿ ಆಧರಿಸಿ ದಾಖಲಿಸಿಕೊಂಡಿರುವ ಸ್ವಯಂಪ್ರೇರಿತ ಸಾರ್ವಜನಿಕ ಹಿತಾಸಕ್ತಿ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಎನ್.ವಿ. ಅಂಜಾರಿಯಾ ನೇತೃತ್ವದ ವಿಭಾಗೀಯ ನ್ಯಾಯಪೀಠ ವಿಚಾರಣೆ ನಡೆಸಿ ಈ ಕುರಿತಂತೆ ಆದೇಶಿಸಿದೆ.

ನಿರ್ದೇಶನದ ಅಂಶಗಳು:

- ಕಾನೂನು ಸೇವೆಗಳ ಪ್ರಾಧಿಕಾರದ ಕಾರ್ಯದರ್ಶಿ ತಕ್ಷಣವೇ ಮೂವರು ಸದಸ್ಯರ ಸಮಿತಿ ರಚನೆ ಮಾಡಬೇಕು. ಇದರಲ್ಲಿ ಒಬ್ಬರು ಕಾರ್ಯದರ್ಶಿ ಶ್ರೇಣಿಯ ನ್ಯಾಯಾಂಗ ಅಧಿಕಾರಿ, ಇಬ್ಬರು ಕಾನೂನು ವಿದ್ಯಾರ್ಥಿಗಳು ಇರಬೇಕು.
- ಬಿಬಿಎಂಪಿ ಗಮನಕ್ಕೆ ಬಾರದಂತೆ ಈ ಸಮಿತಿ 49 ಶಾಲೆಗಳಿಗೆ ಭೇಟಿ ನೀಡಬೇಕು. ಭೇಟಿ ನೀಡಬೇಕಿರುವ ಶಾಲೆಗಳ ಸಂಪೂರ್ಣ ವಿವರಗಳನ್ನು ಕಾರ್ಯದರ್ಶಿ ಒದಗಿಸಬೇಕು ಮತ್ತು ಈ ನಿಟ್ಟಿನಲ್ಲಿ ಸಮಿತಿಗೆ ಕಾನೂನು ಸೇವಾ ಪ್ರಾಧಿಕಾರ ವ್ಯವಸ್ಥೆ ಮಾಡಬೇಕು.
- ಸಮಿತಿಯು, ಶೌಚಾಲಯ ಸಮರ್ಪಕತೆ–ಸ್ವಚ್ಛತೆ, ಕುಡಿಯುವ ನೀರಿನ ಸೌಲಭ್ಯ, ಶಾಲಾ ಆವರಣದಲ್ಲಿ ಸ್ವಚ್ಛತೆ ಮತ್ತು ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಆರೋಗ್ಯಕರ ವಾತಾವರಣಕ್ಕೆ ಅಗತ್ಯವಿರುವ ಇತರೆ ಮೂಲಸೌಕರ್ಯಗಳ ಕುರಿತಂತೆ ಪರಿಶೀಲಿಸಬೇಕು.
- ಈ ಪ್ರಕ್ರಿಯೆಯನ್ನು ಮುಂದಿನ ಒಂದು ತಿಂಗಳಲ್ಲಿ ಪೂರ್ಣಗೊಳಿಸಿ ಪ್ರತಿಯೊಂದು ಶಾಲೆಗಳ ಬಗ್ಗೆ ವಿವರವಾದ ದಾಖಲೆಗಳೊಂದಿಗೆ ವರದಿ ಸಿದ್ಧಪಡಿಸಿ ಕೋರ್ಟ್‌ಗೆ ಸಲ್ಲಿಸಬೇಕು.

ವಿಚಾರಣೆ ವೇಳೆ ಅಮಿಕಸ್ ಕ್ಯೂರಿಯಾದ (ನ್ಯಾಯಾಲಯಕ್ಕೆ ಸಹಕರಿಸುವ ವಕೀಲ) ಪದಾಂಕಿತ ಹಿರಿಯ ವಕೀಲ ಕೆ.ಎನ್.ಫಣೀಂದ್ರ ಹಾಜರಿದ್ದರು.

ಹೈಕೋರ್ಟ್ ಸುದ್ದಿ

ಹಾಲಿನ ಮಳಿಗೆ ತಕರಾರು: ನೋಟಿಸ್

ನಗರದ ಸಿಎಆರ್ ಕೇಂದ್ರ ಸ್ಥಾನದ ಸರ್ಕಿ ವೃತ್ತದಲ್ಲಿನ ನಂದಿನಿ ಹಾಲಿನ ಮಳಿಗೆಯ ಬಾಡಿಗೆ ಕರಾರು ನವೀಕರಣ ನಿರಾಕರಿಸಿ ಸಿಎಆರ್ ಕೇಂದ್ರ ಸ್ಥಾನದ ಉಪ ಪೊಲೀಸ್ ಆಯುಕ್ತ (ಡಿಸಿಪಿ) ಡಿ.ಎಲ್.ನಾಗೇಶ್ ಹೊರಡಿಸಿದ್ದ ಆದೇಶಕ್ಕೆ ಹೈಕೋರ್ಟ್ ತಡೆ ನೀಡಿದೆ.

ಈ ಸಂಬಂಧ ಸದ್ಯ ನಂದಿನಿ ಹಾಲಿನ ಮಳಿಗೆ ನಡೆಸಿಕೊಂಡು ಹೋಗುತ್ತಿರುವ ಎಸ್.ಕಾರ್ತಿಕ್ ಕುಮಾರ್ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿ, ಡಿಸಿಪಿಗೆ ನೋಟಿಸ್ ಜಾರಿಗೊಳಿಸಲು ಆದೇಶಿಸಿತು.

ಮಾಂಸ ಮಾರಾಟ ನಿಷೇಧ

ಬೆಂಗಳೂರು: ಮಹಾವೀರ ಜಯಂತಿ ಪ್ರಯುಕ್ತ ಏ. 10ರಂದು ಬಿಬಿಎಂಪಿ ವ್ಯಾಪ್ತಿಯ ಕಸಾಯಿಖಾನೆಯಲ್ಲಿ ಪ್ರಾಣಿ ವಧೆ ಹಾಗೂ ಮಾರಾಟ ಮಳಿಗೆಗಳಲ್ಲಿ ಮಾಂಸ ಮಾರಾಟ ನಿಷೇಧಿಸಲಾಗಿದೆ.

ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್‌ಗೆ ₹11.56 ಕೋಟಿ ಲಾಭ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಶ್ರೀ ತ್ಯಾಗರಾಜ ಕೋ–ಆಪರೇಟಿವ್ ಬ್ಯಾಂಕ್, 2024–25ನೇ ಸಾಲಿನಲ್ಲಿ ₹11.56 ಕೋಟಿ ಲಾಭಗಳಿಸಿದ್ದು, ನಿವ್ವಳ ಲಾಭ ₹6.37 ಕೋಟಿಗಳಷ್ಟಿದೆ ಎಂದು ಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಈ ಬಾರಿಯ ಒಟ್ಟು ಅನುತ್ಪಾದಕ ಆಸ್ತಿಯ ಪ್ರಮಾಣ ಶೇ 3.61ರಷ್ಟಿದ್ದು, ಈ ಸಾಲಿನಲ್ಲಿ ಸುಮಾರು ₹6 ಸಾವಿರ ಕೋಟಿಯಷ್ಟು ಒಟ್ಟು ವಹಿವಾಟು ನಡೆದಿದೆ.

ಸುಮಾರು 30 ಸಾವಿರ ಸದಸ್ಯರನ್ನು ಹೊಂದಿರುವ ಬ್ಯಾಂಕ್‌ನ ಸ್ವಂತ ಬಂಡವಾಳ ₹125.83 ಕೋಟಿಯಷ್ಟಿದೆ. ₹325 ಕೋಟಿ ಹೂಡಿಕೆಗಳಿದ್ದು, ಇದರಲ್ಲಿ ಶೇ 66ರಷ್ಟನ್ನು ಸರ್ಕಾರಿ ಹೂಡಿಕೆಗಳಲ್ಲಿ ತೊಡಗಿಸಲಾಗಿದೆ ಎಂದು ಬ್ಯಾಂಕ್ ತಿಳಿಸಿದೆ.

ಬ್ಯಾಂಕ್, ಯುಪಿಐ ಮತ್ತು ಇ–ಕಾಮರ್ಸ್‌ನಂತಹ ಎಲ್ಲ ರೀತಿಯ ಡಿಜಿಟಲ್ ಪೇಮೆಂಟ್ ಸೌಲಭ್ಯಗಳನ್ನು ಗ್ರಾಹಕರಿಗೆ ಕಲ್ಪಿಸಿದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳಿಂದ ಬರುವ ಸಹಾಯ ಧನಗಳನ್ನು ನೇರವಾಗಿ ಗ್ರಾಹಕರ ಖಾತೆಗಳಿಗೆ ವರ್ಗಾಯಿಸುವ ವ್ಯವಸ್ಥೆಯೂ ಜಾರಿಯಲ್ಲಿದೆ ಎಂದು ವಿವರಿಸಿದೆ.

'ಆರ್‌ಬಿಐ ಪ್ರಕಾರ ನಮ್ಮ ಬ್ಯಾಂಕ್ ಆರ್ಥಿಕವಾಗಿ ಸದೃಢ ಮತ್ತು ದಕ್ಷ ನಿರ್ವಹಣಾ ಬ್ಯಾಂಕ್ ಎಂದು ಪರಿಗಣಿಸಲ್ಪಟ್ಟಿದೆ. 2024–25ನೇ ಸಾಲಿನ ಅಖಿಲ ಭಾರತ ಪಟ್ಟಣ ಸಹಕಾರ ಬ್ಯಾಂಕುಗಳ ಶೃಂಗ ಸಭೆಯಲ್ಲಿ 'ಬೆಸ್ಟ್ ಅರ್ಬನ್ ಕೋ–ಆಪ್ ಬ್ಯಾಂಕ್' ಪ್ರಶಸ್ತಿಗೆ ಭಾಜನವಾಗಿದೆ' ಎಂದು ಪ್ರಕಟಣೆ ತಿಳಿಸಿದೆ.

ಮೂಳೆ ತಜ್ಞ ಡಾ. ಚಾಂಡಿ ಇನ್ನಿಲ್ಲ

ಬೆಂಗಳೂರು: ನಗರದ ಹಾಸ್‌ಮ್ಯಾಟ್ ಆಸ್ಪತ್ರೆಯ ಮುಖ್ಯ ವ್ಯವಸ್ಥಾಪಕ ನಿರ್ದೇಶಕ ಮತ್ತು ಕೀಲು, ಮೂಳೆ ತಜ್ಞ ಡಾ. ಥಾಮಸ್ ಚಾಂಡಿ (74) ಅವರು ಶ್ವಾಸಕೋಶದ ಕಾಯಿಲೆಯಿಂದ ಸೋಮವಾರ ಮಧ್ಯಾಹ್ನ ನಿಧನರಾದರು.



ಮೃತದೇಹವನ್ನು ಏಪ್ರಿಲ್ 11ರಂದು ಬೆಳಿಗ್ಗೆ 7 ಗಂಟೆಯಿಂದ 10 ಗಂಟೆವರೆಗೆ ಮೆಗ್ರಾತ್ ರಸ್ತೆಯಲ್ಲಿರುವ ಹಾಸ್‌ಮ್ಯಾಟ್ ಆಸ್ಪತ್ರೆಯಲ್ಲಿ ಸಾರ್ವಜನಿಕ ದರ್ಶನಕ್ಕೆ ಇಡಲಾಗುತ್ತದೆ. 10.30ಕ್ಕೆ ಬ್ರಿಗೇಡ್ ರಸ್ತೆಯ ಸೇಂಟ್ ಪ್ಯಾಟ್ರಿಕ್ ಚರ್ಚ್‌ನಲ್ಲಿ ಅಂತ್ಯಕ್ರಿಯೆ ನಡೆಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಥಾಮಸ್ ಚಾಂಡಿ ಅವರು ಹುಟ್ಟಿದ್ದು ಬೆಂಗಳೂರಿನಲ್ಲಿ. ಅವರ ತಂದೆ ಕೋರಾ ಚಾಂಡಿ. ಇವರು ಬ್ರಿಟಿಷ್ ಆಡಳಿತದಲ್ಲಿ ಕಾನೂನು ಸಲಹೆಗಾರರಾಗಿದ್ದರು. ಅವರೊಬ್ಬ ಬೆಂಗಳೂರು ಇತಿಹಾಸಕಾರರೂ ಹೌದು.

ಚಾಂಡಿ, ಅವರು ನಗರದ ಸೇಂಟ್ ಜರ್ಮನ್ ಪ್ರೌಢಶಾಲೆ ಮತ್ತು ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಪದವಿ ಪೂರ್ವ ಶಿಕ್ಷಣ ಪೂರೈಸಿದರು. 1973ರಲ್ಲಿ ಸೇಂಟ್ ಜಾನ್ಸ್ ವೈದ್ಯಕೀಯ ಕಾಲೇಜಿನಿಂದ ಎಂಬಿಬಿಎಸ್ ಪದವಿ ಪಡೆದರು. 1980ರಲ್ಲಿ ಉನ್ನತ ವಿದ್ಯಾಭ್ಯಾಸಕ್ಕಾಗಿ ಅಮೆರಿಕಕ್ಕೆ ತೆರಳಿದರು. ನ್ಯೂಯಾರ್ಕ್‌ನ ಬ್ರೂಕ್ಲಿನ್‌ನಲ್ಲಿರುವ ಜೆವಿಶ್ ಆಸ್ಪತ್ರೆ ಮತ್ತು ವೈದ್ಯಕೀಯ ಕೇಂದ್ರದಿಂದ ಕೀಲು, ಮೂಳೆ ಶಸ್ತ್ರಚಿಕಿತ್ಸೆ ವಿಷಯದಲ್ಲಿ ಉನ್ನತ ಶಿಕ್ಷಣ ಪಡೆದರು.

1985ರವರೆಗೆ ವಿದೇಶದಲ್ಲಿ ನೆಲಸಿದ್ದ ಅವರು, ವಿವಿಧ ಆಸ್ಪತ್ರೆಗಳಲ್ಲಿ ಕಾರ್ಯನಿರ್ವಹಿಸಿದ್ದರು. ಈ ವೇಳೆ ಕೀಲು, ಮೂಳೆ ಶಸ್ತ್ರಚಿಕಿತ್ಸೆಗೆ ಸಂಬಂಧಿಸಿದ ಹಲವು ಫೆಲೋಷಿಪ್‌ಗಳನ್ನೂ ಪಡೆದಿದ್ದರು.

ಭಾರತಕ್ಕೆ ಮರಳಿದ ನಂತರ, 1990ರಲ್ಲಿ ಬೆಂಗಳೂರಿನಲ್ಲಿ ಹಾಸ್‌ಮ್ಯಾಟ್ ಆಸ್ಪತ್ರೆ ನಿರ್ಮಾಣ ಮಾಡುವಲ್ಲಿ ಪ್ರಮುಖ ಪಾತ್ರವಹಿಸಿದ್ದರು. 1992ರಲ್ಲಿ ಆಸ್ಪತ್ರೆ ನಿರ್ಮಾಣ ಕಾರ್ಯ ಪೂರ್ಣಗೊಂಡಿತು. ಇದು ಬೆಂಗಳೂರಿನ ಮೊದಲ ಕೀಲು–ಮೂಳೆ ಚಿಕಿತ್ಸೆ, ನರವಿಜ್ಞಾನ, ಕ್ರೀಡಾ ಗಾಯಗಳಿಗೆ ಮತ್ತು ಅಪಘಾತಕ್ಕೆ ಸಂಬಂಧಿಸಿದ ಚಿಕಿತ್ಸೆ ನೀಡುವ ವಿಶೇಷ ಆಸ್ಪತ್ರೆಯಾಗಿ ಗುರುತಿಸಿಕೊಂಡಿತು. ಚಾಂಡಿ ಅವರು 2004ರಲ್ಲಿ ಬೆಂಗಳೂರು ಆರ್ಥೋಪೆಡಿಕ್ ಸೊಸೈಟಿಯ ಅಧ್ಯಕ್ಷರಾಗಿ ಆಯ್ಕೆಯಾದರು.

ಥಾಮಸ್ ಚಾಂಡಿ ತಜ್ಞ ವೈದ್ಯರಲ್ಲದೇ, ಒಬ್ಬ ಉತ್ತಮ ಸಂಗೀತಗಾರ ಹಾಗೂ ರೈತರೂ ಆಗಿದ್ದರು. ಚಾಂಡಿ ಅವರು ವಿಶ್ವದ ಬೇರೆ ಬೇರೆ ದೇಶಗಳ 350ಕ್ಕೂ ಹೆಚ್ಚು ಸಂಗೀತ ವಾದ್ಯಗಳನ್ನು ಸಂಗ್ರಹಿಸಿದ್ದರು.

ನಿಧನ ವಾರ್ತೆ

ಗಂಗಾಧರ ಸ್ವಾಮಿ

ಪೀಣ್ಯ ದಾಸರಹಳ್ಳಿ: ದಾಸರಹಳ್ಳಿ ಮಹೇಶ್ವರಿ ನಗರದ ಗಂಧದ ಗುಡಿ ಕನ್ನಡ ಯುವಕರ ಸಂಘದ ಸದಸ್ಯ ಗಂಗಾಧರ ಸ್ವಾಮಿ ಎಸ್. (51) ಅವರು ಸೋಮವಾರ ಹೃದಯಾಘಾತದಿಂದ ನಿಧನರಾಗಿದ್ದಾರೆ. ಮೃತರಿಗೆ ಪತ್ನಿ ಮತ್ತು ಇಬ್ಬರು ಪುತ್ರರು ಇದ್ದಾರೆ. ಶಿವಪುರದ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.



ಅಲ್ಪಸಂಖ್ಯಾತರ ಇಲಾಖೆ: ದಶಕವಾದರೂ ಇಲ್ಲ ವೃಂದ – ನೇಮಕಾತಿ ತಿದ್ದುಪಡಿ

ಕಾರ್ಯಕಾರಿ ಆದೇಶದಲ್ಲೇ ಹುದ್ದೆಗಳ ಭರ್ತಿ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮಾಡದೇ ಕಾರ್ಯಕಾರಿ ಆದೇಶದ ಮೂಲಕವೇ ಗ್ರೂಪ್ 'ಬಿ' ವೃಂದದ ತಾಲ್ಲೂಕು ವಿಸ್ತರಣಾಧಿಕಾರಿಗಳನ್ನು ನೇಮಕ ಮಾಡಿಕೊಳ್ಳಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹೊರಡಿಸಿರುವ ಆದೇಶಕ್ಕೆ ಆಕ್ಷೇಪ ವ್ಯಕ್ತವಾಗಿದೆ.

ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಅಧೀನದಲ್ಲಿದ್ದ ಅಲ್ಪ ಸಂಖ್ಯಾತರ ಕಲ್ಯಾಣ ನಿರ್ದೇಶನಾಲಯವನ್ನು 1999–2000ನೇ ಸಾಲಿನಲ್ಲಿ ಬೇರ್ಪಡಿಸಿ, ಪ್ರತ್ಯೇಕ ನಿರ್ದೇಶನಾಲಯ ಸ್ಥಾಪಿಸಲಾಗಿತ್ತು. ಅಗತ್ಯ ಹುದ್ದೆಗಳನ್ನು ಭರ್ತಿ ಮಾಡಿಕೊಳ್ಳಲು 2010ರಲ್ಲಿ ವೃಂದ ಮತ್ತು ನೇಮಕಾತಿ ನಿಯಮಗಳನ್ನು ರೂಪಿಸಲಾಗಿತ್ತು. ನಂತರ ಇಲ್ಲಿಯವರೆಗೂ ನಿಯಮಗಳಿಗೆ ತಿದ್ದುಪಡಿಯನ್ನೇ ಮಾಡಿಲ್ಲ.

ಕಳೆದ 15 ವರ್ಷಗಳಿಂದಲೂ ಕಾರ್ಯಕಾರಿ ಆದೇಶದ ಮೇಲೆ ಹೊಸದಾಗಿ ಸೃಜಿಸಿದ ಹಾಗೂ ಖಾಲಿ ಹುದ್ದೆಗಳಿಗೆ ನೇಮಕಾತಿ ಮಾಡಿಕೊಂಡು ಬರಲಾಗಿದೆ. ಈಗ ಹೊಸದಾಗಿ ಸೃಜಿಸಲಾದ ತಾಲ್ಲೂಕು ವಿಸ್ತರಣಾಧಿಕಾರಿಗಳ 71 ಹುದ್ದೆಗಳನ್ನು ಕಾರ್ಯಕಾರಿ ಆದೇಶದಂತೆ ಶೇ 50ರಷ್ಟು ಬಡ್ತಿ ಹಾಗೂ ಶೇ 50ರಷ್ಟು ನೇರ ನೇಮಕಾತಿ ಮೂಲಕ ಭರ್ತಿ ಮಾಡಿಕೊಳ್ಳಲಾಗುತ್ತಿದೆ.

'ಮುಸ್ಲಿಂ, ಕ್ರೈಸ್ತ, ಬೌದ್ಧ, ಜೈನ, ಪಾರ್ಸಿಗಳೂ ಸೇರಿದಂತೆ ಅಲ್ಪಸಂಖ್ಯಾತರನ್ನು ಸಾಮಾಜಿಕ, ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಸಬಲೀಕರಣಗೊಳಿಸಲು ಸರ್ಕಾರ ಹಲವು ಯೋಜನೆ, ಕಾರ್ಯಕ್ರಮಗಳನ್ನು ರೂಪಿಸಿದ್ದು, ತಾಲ್ಲೂಕು ಮಟ್ಟದಲ್ಲಿ ಸಮರ್ಪಕವಾಗಿ ಅನುಷ್ಠಾನಗೊಳಿಸಲು ತಾಲ್ಲೂಕು ವಿಸ್ತರಣಾಧಿಕಾರಿಗಳ ಕಾಯಂ ನೇಮಕ ಮಾಡಿಕೊಳ್ಳುವ ಅಗತ್ಯ ಇರುವ ಕಾರಣ ಕಾರ್ಯಕಾರಿ ಆದೇಶದ ಮೂಲಕ ತುರ್ತಾಗಿ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ.

ಹೊಸದಾಗಿ ಸೃಜಿಸಲಾದ ಹಾಗೂ ವೃಂದ ಮತ್ತು ನೇಮಕಾತಿ ನಿಯಮ ರೂಪಿಸಿದ ಹುದ್ದೆಗಳಿಗೆ ಮಾತ್ರ ಈ ಆದೇಶ ಅನ್ವಯವಾಗುತ್ತದೆ. ಅಲ್ಲದೇ, ಭರ್ತಿ ಮಾಡಿಕೊಂಡ ವಿವರವನ್ನು ಆರು ತಿಂಗಳ ಒಳಗೆ ವೃಂದ ಮತ್ತು ನೇಮಕಾತಿ ನಿಯಮಗಳಿಗೆ ತಿದ್ದುಪಡಿ ಮೂಲಕ ಸೇರ್ಪಡೆ ಮಾಡಬೇಕು' ಎಂದು ಅಲ್ಪ ಸಂಖ್ಯಾತರ ಕಲ್ಯಾಣ ಇಲಾಖೆ ಸೂಚಿಸಿದೆ.

ಪ್ರಾಂಶುಪಾಲರ ಹುದ್ದೆಗೆ ಮುಖ್ಯಶಿಕ್ಷಕರು?

ಮೊರಾರ್ಜಿ ವಸತಿ ಕಾಲೇಜುಗಳ ಪ್ರಾಂಶುಪಾಲರ ಹುದ್ದೆಗೆ ಉಪನ್ಯಾಸಕರ ಬದಲು ಮುಖ್ಯಶಿಕ್ಷಕರನ್ನು ಬಡ್ತಿ ಮೂಲಕ ನೇಮಿಸಿಕೊಳ್ಳುವ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಸ್ತಾವವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ತಿರಸ್ಕರಿಸಿದೆ.

2024–25ನೇ ಬಜೆಟ್‌ನಲ್ಲಿ 62 ಮೊರಾರ್ಜಿ ದೇಸಾಯಿ ವಸತಿ ಶಾಲೆಗಳನ್ನು ಕಾಲೇಜುಗಳಾಗಿ ಉನ್ನತೀಕರಿಸಲಾಗಿತ್ತು. ಅಲ್ಲಿನ ಪ್ರಾಂಶುಪಾಲರ ಹುದ್ದೆಗಳಿಗೆ ಮುಖ್ಯ ಶಿಕ್ಷಕರನ್ನು ಬಡ್ತಿ ಮೂಲಕ ನೇಮಿಸಲು ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆ ಅಭಿಪ್ರಾಯ ಕೋರಿ ಪ್ರಸ್ತಾವ ಸಲ್ಲಿಸಲಾಗಿತ್ತು.

'ಇಲಾಖೆಯು ನೇಮಕಾತಿಗಳಿಗೆ 2010ರಲ್ಲಿ ರೂಪಿಸಿದ ವೃಂದ ಮತ್ತು ನೇಮಕಾತಿ ನಿಯಮಗಳಲ್ಲಿ ಕನಿಷ್ಠ ವಿದ್ಯಾರ್ಹತೆ ಸೇರಿದಂತೆ ಹಲವು ವಿಷಯಗಳಿಗೆ ತಿದ್ದುಪಡಿ ಮಾಡದೆ ಮುಖ್ಯ ಶಿಕ್ಷಕರನ್ನು ಪರಿಗಣಿಸಲು ಸಾಧ್ಯವಿಲ್ಲ. ಕಾರ್ಯಕಾರಿ ಆದೇಶ ಅನ್ವಯಿಸಲು ಆಗದು' ಎಂದು ಪ್ರಸ್ತಾವವನ್ನು ವಾಪಸ್ ಕಳುಹಿಸಲಾಗಿದೆ.

ದಲಿತ ಪದವೀಧರರ ಸಂಘ ಆಕ್ಷೇಪ: ಅಲ್ಪಸಂಖ್ಯಾತರ ಇಲಾಖೆಯ ಕಾರ್ಯಕಾರಿ ಆದೇಶಕ್ಕೆ ಆಕ್ಷೇಪ ವ್ಯಕ್ತಪಡಿಸಿರುವ ಕರ್ನಾಟಕ ರಾಜ್ಯ ದಲಿತ ಪದವೀಧರರ ಸಂಘ, ಆದೇಶವನ್ನು ತಕ್ಷಣ ತಡೆಹಿಡಿಯುವಂತೆ ಮುಖ್ಯಮಂತ್ರಿ ಹಾಗೂ ಸರ್ಕಾರದ ಮುಖ್ಯ ಕಾರ್ಯದರ್ಶಿಗೆ ಪತ್ರ ಬರೆದಿದೆ.

'ಒಳ ಮೀಸಲಾತಿ ಅಂತಿಮವಾಗಿ ಜಾರಿಯಾಗುವವರೆಗೂ ಯಾವುದೇ ವೃಂದದ ಹುದ್ದೆಗಳಿಗೆ ಬಡ್ತಿ, ನೇಮಕಾತಿ ಆದೇಶ ಹೊರಡಿಸದಂತೆ ಸರ್ಕಾರವೇ ಸೂಚಿಸಿದೆ. ಆದರೂ, ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ಹುದ್ದೆಗಳ ಭರ್ತಿಗೆ ಕಾರ್ಯಕಾರಿ ಆದೇಶ ಹೊರಡಿಸಿದೆ. ಇದರಿಂದ ದಲಿತ ಸಮುದಾಯದ ಅಭ್ಯರ್ಥಿಗಳಿಗೆ ಅನ್ಯಾಯವಾಗುತ್ತದೆ. ಹಾಗಾಗಿ, ನಿಯಮಗಳಿಗೆ ತಿದ್ದುಪಡಿ ಮಾಡದೆ ನೇಮಕಾತಿ, ಬಡ್ತಿ ನೀಡಬಾರದು' ಎಂದು ಸಂಘದ ಅಧ್ಯಕ್ಷ ವಿ. ಲೋಕೇಶ್ ಅವರು ಒತ್ತಾಯಿಸಿದ್ದಾರೆ.

ಡಿ.ಒಗಳಿಗೆ ಮೂರೇ ವರ್ಷಕ್ಕೆ ಬಡ್ತಿ

ಅಲ್ಪಸಂಖ್ಯಾತರ ಇಲಾಖೆ ಅಧೀನದಲ್ಲಿರುವ ಶಾಲೆಗಳ ಶಿಕ್ಷಕರು ಹಾಗೂ ಉಪನ್ಯಾಸಕರಿಗೆ ಒಂದೂವರೆ ದಶಕದಿಂದ ಬಡ್ತಿ ನೀಡಿಲ್ಲ. ಆದರೆ, 15 ಜಿಲ್ಲೆಗಳ ಜಿಲ್ಲಾ ಅಧಿಕಾರಿಗಳಿಗೆ (ಡಿ.ಒ) ಮೂರೇ ವರ್ಷಕ್ಕೆ ಬಡ್ತಿ ನೀಡಲಾಗುತ್ತಿದೆ.

ವಿವಿಧ ವೃಂದಗಳ ಅಧಿಕಾರಿಗಳು, ಸಿಬ್ಬಂದಿಯ ಬಡ್ತಿ ಕುರಿತು ವೃಂದ ಮತ್ತು ನೇಮಕಾತಿ ನಿಯಮಕ್ಕೆ ತಿದ್ದುಪಡಿ ತಾರದೆ ವಸತಿನಿಲಯ ಮೇಲ್ವಿಚಾರಕರು, ವಸತಿನಿಲಯ ಪಾಲಕರು, ಪ್ರಥಮ ದರ್ಜೆ ಸಹಾಯಕರು, ಗಣಕ ಯಂತ್ರ ಸಹಾಯಕರಿಗೆ ಬಡ್ತಿ ನೀಡಲು ಆದೇಶ ಹೊರಡಿಸಿದೆ. ಒಂದಕ್ಕಿಂತ ಹೆಚ್ಚು ವೃಂದಗಳಿಗೆ ಬಡ್ತಿ ಅವಕಾಶ ಕಲ್ಪಿಸಿದಲ್ಲಿ ಅವರ ಇಚ್ಛೆಯಂತೆ ನಂತರ ವೃಂದ ಬದಲಾವಣೆ ಮಾಡಿಕೊಳ್ಳಲೂ ಅವಕಾಶ ನೀಡಲಾಗಿದೆ.

ಎಚ್‌ಡಿಕೆಗೆ ದಾಖಲೆ ಒದಗಿಸಿ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೇತಗಾನಹಳ್ಳಿ ಸರ್ಕಾರಿ ಜಮೀನುಗಳ ಒತ್ತುವರಿ ಆರೋಪಕ್ಕೆ ಸಂಬಂಧಿಸಿದಂತೆ ರಾಮನಗರ ತಹಶೀಲ್ದಾರ್ ಅವರು ತಮ್ಮ ಬಳಿ ಹೊಂದಿರುವ ಭೂ ದಾಖಲೆಗಳನ್ನು ಅರ್ಜಿದಾರ ಕುಮಾರಸ್ವಾಮಿ ಅವರಿಗೆ ಒಂದು ವಾರದಲ್ಲಿ ಒದಗಿಸಬೇಕು. ದಾಖಲೆಗಳನ್ನು ಪಡೆದ ಎರಡು ವಾರಗಳಲ್ಲಿ ಕುಮಾರಸ್ವಾಮಿ ಅವರು ತಹಶೀಲ್ದಾರ್ ಅವರಿಗೆ ಪ್ರತ್ಯುತ್ತರ ನೀಡಬೇಕು' ಎಂದು



ಹೈಕೋರ್ಟ್ ನಿರ್ದೇಶಿಸಿದೆ.

ತಹಶೀಲ್ದಾರ್ ನೋಟಿಸ್ ಪ್ರಶ್ನಿಸಿ ಎಚ್.ಡಿ.ಕುಮಾರಸ್ವಾಮಿ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎನ್.ಎಸ್.ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಂಗಳವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಕುಮಾರಸ್ವಾಮಿ ಪರ ಹಾಜರಿದ್ದ ಪದಾಂಕಿತ ಹಿರಿಯ ವಕೀಲ ಉದಯ ಹೊಳ್ಳ ಅವರು, 'ಕರ್ನಾಟಕ ಭೂ ಕಂದಾಯ ಕಾಯ್ದೆ–1964ಕ್ಕೆ ತಿದ್ದುಪಡಿ ತರುವ ಮೂಲಕ ಸರ್ಕಾರಿ ಜಮೀನು ಒತ್ತುವರಿ ಕುರಿತಂತೆ ಒತ್ತುವರಿದಾರರಿಂದ ವಿವರಣೆ ಪಡೆದು ಮುಂದಿನ ಕ್ರಮ ಜರುಗಿಸಲು ತಹಶೀಲ್ದಾರ್‌ಗೆ ಅಧಿಕಾರ ಕಲ್ಪಿಸಿರುವ ಕಾನೂನನ್ನು ನಾವು ಪ್ರಶ್ನಿಸಿದ್ದೇವೆ. ಈ ಬಗ್ಗೆ ತಿದ್ದುಪಡಿ ಅರ್ಜಿ ಸಲ್ಲಿಸಲಾಗಿದ್ದು ತಿದ್ದುಪಡಿಯ ಸಾಂವಿದಾನಿಕ ಬದ್ಧತೆಯ ವಿಚಾರಣೆ ನಡೆಸಬೇಕು' ಎಂದು ನ್ಯಾಯಪೀಠಕ್ಕೆ ಕೋರಿದರು.

ಇದಕ್ಕೆ ಸರ್ಕಾರದ ಪರ ಹಾಜರಿದ್ದ ಹೆಚ್ಚುವರಿ ಅಡ್ವೊಕೇಟ್ ಜನರಲ್ ಕಿರಣ್ ವಿ.ರೋಣ ಅವರು, 'ಅರ್ಜಿದಾರರ ಈ ನಿಲುವಿಗೆ ಅನುಸಾರವಾಗಿ; ಪ್ರಕರಣಕ್ಕೆ ಸಂಬಂಧಿಸಿದಂತೆ ಅರ್ಜಿದಾರರ ವಿರುದ್ಧ ಬಲವಂತದ ಕ್ರಮವನ್ನು ಜರುಗಿಸುವುದಿಲ್ಲ ಎಂದು ಸರ್ಕಾರ ಈ ಹಿಂದೆ ನೀಡಿರುವ ಮುಚ್ಚಳಿಕೆಯನ್ನು ಹಿಂಪಡೆಯಲಾಗುವುದು' ಎಂದು ನ್ಯಾಯಪೀಠಕ್ಕೆ ಸ್ಪಷ್ಟಪಡಿಸಿದರು.

ಇದನ್ನು ದಾಖಲಿಸಿಕೊಂಡ ನ್ಯಾಯಪೀಠ ವಿಚಾರಣೆ ಮುಂದೂಡಿತು. 'ಸಮಾಜ ಪರಿವರ್ತನಾ ಸಮುದಾಯ'ದ ಪರ ಪದಾಂಕಿತ ಹಿರಿಯ ವಕೀಲ ಎಸ್. ಬಸವರಾಜು ಹಾಜರಿದ್ದರು.

ಇನ್‌ಸ್ಪೆಕ್ಟರ್ ಕುಮಾರ್, ಇಬ್ಬರು ಕಾನ್‌ಸ್ಟೆಬಲ್ ವರ್ಗ

ಬೆಂಗಳೂರು: ಭೂವಿವಾದ ಪ್ರಕರಣಕ್ಕೆ ಸಂಬಂಧಿಸಿದಂತೆ ಅನ್ನಪೂರ್ಣೇಶ್ವರಿ ನಗರ ಠಾಣೆಯ ಇನ್‌ಸ್ಪೆಕ್ಟರ್ ಎ.ವಿ.ಕುಮಾರ್, ಇಬ್ಬರು ಕಾನ್‌ಸ್ಟೆಬಲ್‌ಗಳ ವಿರುದ್ಧ ಲೋಕಾಯುಕ್ತ ಪೊಲೀಸರು ತನಿಖೆ ನಡೆಸುತ್ತಿದ್ದು, ಪ್ರಕರಣದ ಆರೋಪಿಗಳನ್ನು ವರ್ಗಾವಣೆ ಮಾಡಿ ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಅವರು ಆದೇಶಿಸಿದ್ದಾರೆ.

ನಗರದ ಪೊಲೀಸ್ ವಿಶೇಷ ಶಾಖೆಗೆ ಕುಮಾರ್ ಅವರನ್ನು ಒಒಡಿ ಮೇರೆಗೆ ವರ್ಗಾವಣೆ ಮಾಡಲಾಗಿದೆ. ಕಾನ್‌ಸ್ಟೆಬಲ್‌ಗಳಾದ ಉಮೇಶ್ ಹಾಗೂ ಅನಂತ್ ಅವರನ್ನೂ ಬೇರೆ ಬೇರೆ ಠಾಣೆಗಳಿಗೆ ವರ್ಗಾವಣೆ ಮಾಡಲಾಗಿದೆ.

ಪಶ್ಚಿಮ ವಿಭಾಗದ ಮಹಿಳಾ ಠಾಣೆ ಇನ್‌ಸ್ಪೆಕ್ಟರ್ ರವಿಕುಮಾರ್ ಅವರನ್ನು ಅನ್ನಪೂರ್ಣೇಶ್ವರಿ ನಗರ ಠಾಣೆಗೆ ವರ್ಗಾವಣೆ ಮಾಡಲಾಗಿದೆ. 'ಮೂವರ ವಿರುದ್ಧ ಏ.1ರಂದು ಲೋಕಾಯುಕ್ತ ಪೊಲೀಸರು ಎಫ್‌ಐಆರ್ ದಾಖಲಿಸಿದ್ದರು. ಲೋಕಾಯುಕ್ತ ಪೊಲೀಸರ ತನಿಖಾ ವರದಿ ಆಧರಿಸಿ ಮುಂದೆ ಶಿಸ್ತು ಕ್ರಮ ತೆಗೆದುಕೊಳ್ಳಲಾಗುವುದು' ಎಂದು ಮೂಲಗಳು ತಿಳಿಸಿವೆ.

ಲಂಚಕ್ಕಾಗಿ ಒತ್ತಡ ಹೇರಿ, ದೂರುದಾರರ ಕಟ್ಟಡ ಆರೋಪಿಗಳಲ್ಲಿ ಒಬ್ಬರ ಹೆಸರಿಗೆ ವರ್ಗಾವಣೆ ಮಾಡಿಸಿಕೊಳ್ಳಲು ಯತ್ನಿಸಿದ ಆರೋಪದಡಿ ಏಪ್ರಿಲ್ 1ರಂದು ಲೋಕಾಯುಕ್ತ ಪೊಲೀಸರು ದಾಳಿ ಮಾಡಿದ್ದರು. ದಾಳಿಗೂ ಮುನ್ನ ಕುಮಾರ್ ಮತ್ತು ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು.

ರಘುನಂದನರಿಗೆ ಇನಾಂದಾರ್ ಪ್ರಶಸ್ತಿ

ಉಡುಪಿ: ಕವಿ, ನಾಟಕಕಾರ ಹಾಗೂ ರಂಗನಿರ್ದೇಶಕ ರಘುನಂದನ ಅವರ 'ತುಯ್ತವೆಲ್ಲ ನವ್ಯದತ್ತ, ಅಂದತ್ತರ ಉಯ್ಯಾಲೆ ಮತ್ತು ಅದರ ಸುತ್ತ' ವಿಮರ್ಶಾ ಕೃತಿ 2024ರ ಸಾಲಿನ 'ಇನಾಂದಾರ್ ಪ್ರಶಸ್ತಿ'ಗೆ ಆಯ್ಕೆಯಾಗಿದೆ.



ರಘುನಂದನ

ಖ್ಯಾತ ವಿಮರ್ಶಕ ಪ್ರೊ. ವಿ.ಎಂ. ಇನಾಂದಾರ್ ಅವರ ನೆನಪಿನಲ್ಲಿ ರಾಷ್ಟ್ರಕವಿ ಗೋವಿಂದಪೈ ಸಂಶೋಧನಾ ಕೇಂದ್ರ ಈ ಪ್ರಶಸ್ತಿ ನೀಡುತ್ತಿದೆ.

ಏಪ್ರಿಲ್ 23ರಂದು ನಡೆಯುವ ಎಂ.ಜಿ.ಎಂ ಕಾಲೇಜಿನ ಮುದ್ದಣ ಸಾಹಿತ್ಯೋತ್ಸವದಲ್ಲಿ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ ಎಂದು ಸಂಶೋಧನಾ ಕೇಂದ್ರದ ಆಡಳಿತಾಧಿಕಾರಿ ತಿಳಿಸಿದ್ದಾರೆ.

ರಘುನಂದನ ಅವರು ವೃತ್ತಿನಿರತ ರಂಗನಿರ್ದೇಶಕ, ರಂಗಕಲೆಯ ಅಧ್ಯಾಪಕ, ನಾಟಕಕಾರ. ಮೈಸೂರಿನ ರಂಗಾಯಣ ಮತ್ತು ನೀನಾಸಂ ಸಂಸ್ಥೆಯಲ್ಲಿ ತೊಡಗಿಸಿಕೊಂಡವರು. ಪುತಿನ ಕಾವ್ಯ–ನಾಟಕ ಪುರಸ್ಕಾರ ಪಡೆದಿರುವ ಅವರು, ನೀನಾಸಂ ಪ್ರತಿಷ್ಠಾನ ನೀಡುವ ಬಿ.ವಿ ಕಾರಂತ ಫೆಲೋಶಿಪ್ ಪಡೆದ ಮೊದಲಿಗರು.

'ಅನಾಥ ಶಿಶು' ತಂದೆ–ತಾಯಿ ವಿವಾಹ

ಪ್ರಜಾವಾಣಿ ವಾರ್ತೆ

ಉಜಿರೆ (ದಕ್ಷಿಣ ಕನ್ನಡ): ಧರ್ಮಸ್ಥಳ ಪೊಲೀಸ್ ಠಾಣಾ ವ್ಯಾಪ್ತಿಯ ಬೆಳಾಲು ಗ್ರಾಮದ ಕೊಡೋಳುಕೆರೆ ಎಂಬಲ್ಲಿ ಮಾರ್ಚ್ 22ರಂದು ಕಾಡಿನಲ್ಲಿ ಪತ್ತೆಯಾಗಿದ್ದ ಶಿಶುವಿನ ತಂದೆ-ತಾಯಿ ವಿವಾಹವಾಗಿದ್ದಾರೆ.

ಕಾಡಿನಲ್ಲಿ ಪತ್ತೆಯಾದ ಶಿಶುವು ಬೆಳಾಲು ಗ್ರಾಮದ ಮಾಯ ಪ್ರದೇಶದ ನಿವಾಸಿ ರಂಜಿತ್ ಗೌಡ (27) ಹಾಗೂ ಧರ್ಮಸ್ಥಳ ಬಳಿಯ ಪಾಂಗಾಳ ನಿವಾಸಿ ಸುಶ್ಮಿತಾ ಅವರಿಗೆ ಸೇರಿದ್ದು ಎಂಬುದನ್ನು ಪೊಲೀಸರು ಪತ್ತೆಹಚ್ಚಿದ್ದರು.

ಎರಡೂ ಕುಟುಂಬಗಳ ಪ್ರಮುಖರ ಸಮ್ಮುಖದಲ್ಲಿ ನಡ ಗ್ರಾಮದ ಕುತ್ರೊಟ್ಟು ಸತ್ಯನಾರಾಯಣ ದೇವಸ್ಥಾನದಲ್ಲಿ ಅವರ ವಿವಾಹ ನಡೆಯಿತು.



ಸುಶ್ಮಿತಾ – ರಂಜಿತ್ ಗೌಡ ದಂಪತಿ

ದಕ್ಷಿಣ ಕನ್ನಡ ಜಿಲ್ಲಾ ಮಕ್ಕಳ ಕಲ್ಯಾಣ ಸಮಿತಿಯವರು ಶಿಶುವನ್ನು ಪುತ್ತೂರಿನ ವಾತ್ಸಲ್ಯಧಾಮ ದತ್ತು ಕೇಂದ್ರದ ಸುಪರ್ದಿಗೆ ವಹಿಸಿದ್ದಾರೆ. 'ಶಿಶುವನ್ನು ಕಾನೂನಾತ್ಮಕವಾಗಿ ವಾಪಸ್ ಪಡೆಯುತ್ತೇವೆ' ಎಂದು ದಂಪತಿ ತಿಳಿಸಿದ್ದಾರೆ.

'ರಂಜಿತ್, ಮಂಗಳೂರಿನ ಬ್ಯೂಟಿಪಾರ್ಲರ್‌ನಲ್ಲಿ ಕೆಲಸ ಮಾಡುತ್ತಿದ್ದ ಸುಶ್ಮಿತಾಳನ್ನು ಪ್ರೀತಿಸುತ್ತಿದ್ದ. ಮದುವೆಯಾಗುವ ಭರವಸೆ ನೀಡಿ ಆಕೆಯ ಜೊತೆ ದೈಹಿಕ ಸಂಪರ್ಕ ಬೆಳೆಸಿದ್ದ. ಆಕೆ ಈಚೆಗೆ ಹೆಣ್ಣು ಮಗುವಿಗೆ ಜನ್ಮ ನೀಡಿದ್ದಳು. ಆ ಬಳಿಕ ಅವರಿಬ್ಬರ ನಡುವೆ ಮನಸ್ತಾಪ ಉಂಟಾಗಿತ್ತು. ಯುವತಿಯು ಶಿಶುವನ್ನು ರಂಜಿತ್ ಗೌಡನ ಮನೆಯಲ್ಲಿ ಬಿಟ್ಟು ಹೋಗಿದ್ದಳು. ಆತ ಅದನ್ನು ಕಾಡಿನಲ್ಲಿ ಬಿಟ್ಟು ಹೋಗಿದ್ದ' ಎಂದು ಪೊಲೀಸರು ಮಾಹಿತಿ ನೀಡಿದ್ದರು. ಈ ಬಗ್ಗೆ ಧರ್ಮಸ್ಥಳ ಠಾಣೆಯಲ್ಲಿ ಪ್ರಕರಣ ದಾಖಲಾಗಿತ್ತು.

ರಂಜಿತ್ ಗೌಡನನ್ನು ವಶಕ್ಕೆ ಪಡೆದು ಪೊಲೀಸರು ವಿಚಾರಣೆ ನಡೆಸಿದಾಗ, ಆತ ಸುಶ್ಮಿತಾ ಅವರನ್ನು ಮದುವೆಯಾಗಲು ಒಪ್ಪಿದ್ದ.

ಆರೋಪಿ ಪತ್ತೆಗೆ 300ಕ್ಕೂ ಹೆಚ್ಚು ದೃಶ್ಯಾವಳಿ ಪರಿಶೀಲನೆ

ಬೆಂಗಳೂರು: ಪಾದಚಾರಿ ಯುವತಿಯ ಹಿಂಬಾಲಿಸಿ, ಬಲವಂತವಾಗಿ ತಬ್ಬಿಕೊಳ್ಳಲು ಯತ್ನಿಸಿದ್ದ ಪ್ರಕರಣದ ಆರೋಪಿಯ ಪತ್ತೆಗಾಗಿ ಸಿ.ಸಿ.ಟಿ.ವಿಗಳ ಕ್ಯಾಮೆರಾಗಳ 300ಕ್ಕೂ ಅಧಿಕ ದೃಶ್ಯಾವಳಿಗಳನ್ನು ಪರಿಶೀಲಿಸಿ, ವಿಶ್ಲೇಷಿಸಲಾಗಿದೆ ಎಂದು ಬೆಂಗಳೂರು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ತಿಳಿಸಿದರು.

'ಸ್ಥಳೀಯ ನಿವಾಸಿಯೊಬ್ಬರ ದೂರು ಆಧರಿಸಿ ಆಗ್ನೇಯ ವಿಭಾಗದ ಡಿಸಿಪಿ ಸಾರಾ ಫಾತಿಮಾ ಅವರ ನೇತೃತ್ವದಲ್ಲಿ ಸುದ್ದಗುಂಟೆಪಾಳ್ಯ ಠಾಣೆ ಪೊಲೀಸರು ಪ್ರಕರಣದ ತನಿಖೆ ನಡೆಸುತ್ತಿದ್ದಾರೆ' ಎಂದು ತಿಳಿಸಿದರು.

ಸುದ್ದಗುಂಟೆಪಾಳ್ಯದ ಭಾರತಿ ಲೇಔಟ್‌ನ 1ನೇ ಕ್ರಾಸ್‌ನಲ್ಲಿ ಘಟನೆ ನಡೆದಿತ್ತು. ರಸ್ತೆಯಲ್ಲಿ ನಡೆದು ತೆರಳುತ್ತಿದ್ದ ಯುವತಿ ಜೊತೆಗೆ ಯುವಕ ಅನುಚಿತವಾಗಿ ವರ್ತಿಸಿದ್ದ. ಇದು, ಸಿ.ಸಿ.ಟಿ.ವಿ ಕ್ಯಾಮೆರಾದಲ್ಲಿ ಸೆರೆ ಆಗಿತ್ತು.

ನಿರುಪಯುಕ್ತ ವಸ್ತು ಮಾರಾಟ: ₹188 ಕೋಟಿ ಆದಾಯ

ಹುಬ್ಬಳ್ಳಿ: ನೈರುತ್ಯ ರೈಲ್ವೆಯು 2024–25ನೇ ಹಣಕಾಸು ವರ್ಷದಲ್ಲಿ ನಿರುಪಯುಕ್ತ ವಸ್ತುಗಳನ್ನು ಮಾರಿ, ₹188.07 ಕೋಟಿ ಆದಾಯ ಗಳಿಸಿದೆ. 2022–23ನೇ ಹಣಕಾಸು ವರ್ಷದಲ್ಲಿ ₹180.52 ಕೋಟಿ ಆದಾಯ ಗಳಿಸಿತ್ತು. ಪ್ರಸಕ್ತ ಸಾಲಿನಲ್ಲಿ ಶೇ 4.2ರಷ್ಟು ಹೆಚ್ಚು ಆದಾಯ ಗಳಿಸಿದೆ. ನಿರುಪಯುಕ್ತ ವಸ್ತುಗಳ ಮಾರಾಟವನ್ನು ಪಾರದರ್ಶಕ ಮತ್ತು ನ್ಯಾಯಸಮ್ಮತ ಆಗಿಸಲು ಭಾರತೀಯ ರೈಲ್ವೆಯ ಆನ್‌ಲೈನ್ ವೇದಿಕೆ www.ireps.gov.in ಮೂಲಕ ಹರಾಜು ಪ್ರಕ್ರಿಯೆ ನಡೆಸಲಾಯಿತು. ಜನವರಿ 23ರಂದೇ ರೈಲ್ವೆ ಮಂಡಳಿಯ ₹160 ಕೋಟಿ ಗುರಿ ತಲುಪಿದ್ದು, ಆನಂತರವೂ ಹೆಚ್ಚುವರಿ ಆದಾಯ ಗಳಿಸಿದ್ದು ವಿಶೇಷ.

ಮುಖ್ಯ ಸಾಮಗ್ರಿಗಳ ವ್ಯವಸ್ಥಾಪಕ ಮಾಮನ್ ಸಿಂಗ್ ಮಾರ್ಗದರ್ಶನದಂತೆ, ತ್ರೈಮಾಸಿಕ ಆಧಾರದಲ್ಲಿ ಕಾರ್ಯಾಚರಣೆ ನಡೆಯಿತು. 19,745 ಮೆಟ್ರಿಕ್ ಟನ್ ಹಳಿ ಹಾಗೂ ಫಿಟ್ಟಿಂಗ್‌ಗಳು, ನಾಲ್ಕು ಲೋಕೊಮೋಟಿವ್, 38 ವ್ಯಾಗನ್, 56 ಜಖಂಗೊಂಡ ಬೋಗಿಗಳು, 11,532 ಮೆಟ್ರಿಕ್ ಟನ್ ಕಬ್ಬಿಣ, 1,500 ಮೆಟ್ರಿಕ್ ಟನ್ ಇತರೆ ವಸ್ತುಗಳನ್ನು ಮಾರಾಟ ಮಾಡಲಾಗಿದೆ ಎಂದು ಪ್ರಕಟಣೆ ತಿಳಿಸಿದೆ.

ದೇವಾಲಯಕ್ಕೆ ಪ್ರವೇಶ: ದಲಿತರ ಆಗ್ರಹ

ಪ್ರಜಾವಾಣಿ ವಾರ್ತೆ

ಶ್ರೀರಂಗಪಟ್ಟಣ (ಮಂಡ್ಯ ಜಿಲ್ಲೆ): 'ತಾಲ್ಲೂಕಿನ ಹುಂಜನಕೆರೆ ಗ್ರಾಮದ ಚನ್ನಕೇಶ್ವರಸ್ವಾಮಿ ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದು, ದಲಿತರಿಗೆ ವರ್ಷದ ಎಲ್ಲ ದಿನವೂ ಮುಕ್ತ ಪ್ರವೇಶ ನೀಡಬೇಕು' ಎಂದು ಗ್ರಾಮಸ್ಥರು ಹಾಗೂ ದಲಿತ ಸಂಘರ್ಷ ಸಮಿತಿಯ ಮುಖಂಡರು ಮಂಗಳವಾರ ಆಗ್ರಹಿಸಿದರು.

ಪಟ್ಟಣದಲ್ಲಿ ತಹಶೀಲ್ದಾರ್ ಪರಶುರಾಮ ಸತ್ತಿಗೇರಿ ಮತ್ತು ಸಮಾಜ ಕಲ್ಯಾಣ ಇಲಾಖೆ ಅಧಿಕಾರಿ ಮೇಘ ಅವರಿಗೆ ಮನವಿ ಸಲ್ಲಿಸಿದ ಮುಖಂಡರು, 'ದೇವಾಲಯ ಮುಜರಾಯಿ ಇಲಾಖೆಗೆ ಸೇರಿದ್ದರೂ ಗ್ರಾಮದ ದಲಿತರಿಗೆ ಪ್ರವೇಶವಿಲ್ಲ. ಶಾಸಕ ರಮೇಶ ಬಂಡಿಸಿದ್ದೇಗೌಡ ಅವರಿಗೆ ತಿಳಿಸಿದ ಬಳಿಕ, ವಿಶೇಷ ದಿನಗಳಲ್ಲಿ ಮಾತ್ರ ಅವಕಾಶ ನೀಡಲು ಒಪ್ಪಿಗೆ ಸಿಕ್ಕಿದೆ. ವರ್ಷದ ಎಲ್ಲ ದಿನವೂ ದಲಿತರು ಇಲ್ಲಿ ಪೂಜೆ ಸಲ್ಲಿಸಲು ಅವಕಾಶ ಮಾಡಿಕೊಡಬೇಕು. ದೇವಾಲಯದ ಮುಂದೆ ಫಲಕ ಹಾಕಬೇಕು' ಎಂದು ಮುಖಂಡರಾದ ಚನ್ನಪ್ಪ ಮತ್ತು ಸಿದ್ದಲಿಂಗು ಒತ್ತಾಯಿಸಿದರು.



ಶ್ರೀರಂಗಪಟ್ಟಣ ತಾಲ್ಲೂಕಿನ ಹುಂಜನಕೆರೆ ಗ್ರಾಮದ ಚನ್ನಕೇಶ್ವರಸ್ವಾಮಿ ದೇವಾಲಯ ಪ್ರವೇಶಿಸಲು ದಲಿತರಿಗೆ ಮುಕ್ತ ಅವಕಾಶ ಕಲ್ಪಿಸಬೇಕು ಎಂದು ದಸಂಸ ಮುಖಂಡರು ತಹಶೀಲ್ದಾರ್ ಪರಶುರಾಮ ಸತ್ತಿಗೇರಿ ಅವರನ್ನು ಮಂಗಳವಾರ ಒತ್ತಾಯಿಸಿದರು

'ಯುಗಾದಿ ಉತ್ಸವ ಸೇರಿ ವಿಶೇಷ ದಿನಗಳಲ್ಲಿ ಮಾತ್ರ ದಲಿತರಿಗೆ ಪ್ರವೇಶ ಮತ್ತು ಪೂಜೆ ಸಲ್ಲಿಸಲು ಅವಕಾಶ ನೀಡಲಾಗುತ್ತದೆ. ಉಳಿದ ದಿನಗಳಲ್ಲೂ ದಲಿತರಿಗೆ ಪೂಜೆ ಮಾಡಲು ಕ್ರಮ ವಹಿಸಬೇಕು' ಎಂದು ದಸಂಸ ಮುಖಂಡ ಎಂ. ಚಂದ್ರಶೇಖರ್, ಗಂಜಾಂ ರವಿಚಂದ್ರ, ಮಹದೇವಸ್ವಾಮಿ ಮನವಿ ಮಾಡಿದರು.

'ಮುಜರಾಯಿ ಇಲಾಖೆಯ ದೇವಾಲಯಗಳ ಪ್ರವೇಶದ ವಿಷಯದಲ್ಲಿ ತಾರತಮ್ಯ ಮಾಡುವಂತಿಲ್ಲ. ತಾರತಮ್ಯ ಮಾಡಿದವರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುತ್ತದೆ. ಶೀಘ್ರ ದಲಿತರು ಮತ್ತು ಸವರ್ಣೀಯರ ಸಭೆ ನಡೆಸಿ ಗೊಂದಲ ಬಗೆಹರಿಸಲಾಗುವುದು' ಎಂದು ತಹಶೀಲ್ದಾರ್ ಪರಶುರಾಮ ಸತ್ತಿಗೇರಿ ಭರವಸೆ ನೀಡಿದರು.

ಅಪೆಕ್ಸ್ ಬ್ಯಾಂಕ್ ಮಾಜಿ ನಿರ್ದೇಶಕ ಅರಕೆರೆ ಶಿವಯ್ಯ, ರೈತ ಸಂಘದ ತಾಲ್ಲೂಕು ಘಟಕದ ಸಂಚಾಲಕ ಪಾಂಡು, ಬೆಳಗೊಳ ಬಸವಯ್ಯ, ಕುಬೇರಪ್ಪ, ಕೆ.ಶೆಟ್ಟಹಳ್ಳಿ ಅಪ್ಪಾಜಿ, ಸುರೇಶ್, ಸೋಮೇಶ್ ಪಾಲ್ಗೊಂಡಿದ್ದರು.

ಅಪಘಾತ: ವಿಮಾನ ಸಂಸ್ಥೆಯ ಉದ್ಯೋಗಿ ಸಾವು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಗಲೂರು ಕ್ರಾಸ್‌ನಲ್ಲಿ ಖಾಸಗಿ ಬಸ್ ಹಾಗೂ ಕ್ಯಾಬ್ ಮಧ್ಯೆ ಸಂಭವಿಸಿದ ಅಪಘಾತದಲ್ಲಿ ವಿಮಾನಯಾನ ಸಂಸ್ಥೆ ಉದ್ಯೋಗಿ ಮೃತಪಟ್ಟಿದ್ದಾರೆ. ಇಬ್ಬರು ಗಾಯಗೊಂಡಿದ್ದಾರೆ.

ತಮಿಳುನಾಡಿನ ಮಧುರೈ ನಿವಾಸಿ ಸ್ನೇಹಾ ಕುಮಾರಿ(24) ಮೃತಪಟ್ಟವರು. ಇವರ ಸಹೋದ್ಯೋಗಿ ಕೌಸರ್ ಖಾನಂ(21) ಮತ್ತು ಕ್ಯಾಬ್ ಚಾಲಕ ವಿನಯ್(28) ಗಾಯಗೊಂಡಿದ್ದು, ಖಾಸಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಇಬ್ಬರೂ ಪ್ರಾಣಾಪಾಯದಿಂದ ಪಾರಾಗಿದ್ದಾರೆ ಎಂದು ಸಂಚಾರ ವಿಭಾಗದ ಪೊಲೀಸರು ಹೇಳಿದರು.

ಸ್ನೇಹಾ ಕುಮಾರಿ ವಿಮಾನಯಾನ ಸಂಸ್ಥೆಯೊಂದರ ಗ್ರಾಹಕರ ಸೇವಾ ಕೇಂದ್ರ ವಿಭಾಗದಲ್ಲಿ ಕೆಲಸ ಮಾಡುತ್ತಿದ್ದರು. ಸೋಮವಾರ ಮುಂಜಾನೆ ಬಾಗಲೂರು ಕ್ರಾಸ್ ಕಡೆಯಿಂದ ಕೆಂಪೇಗೌಡ ಅಂತರ ರಾಷ್ಟ್ರೀಯ ವಿಮಾನ ನಿಲ್ದಾಣದ ಕಡೆಗೆ ಕ್ಯಾಬ್‌ನಲ್ಲಿ ತೆರಳುತ್ತಿದ್ದರು. ಆಗ ಖಾಸಗಿ ಬಸ್ ಹಾಗೂ ಕ್ಯಾಬ್ ಮಧ್ಯೆ ಅಪಘಾತ ಸಂಭವಿಸಿದೆ ಎಂದು ಪೊಲೀಸರು ಹೇಳಿದರು. ಚಿಕ್ಕಜಾಲ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಡ್ರಗ್ಸ್ ಮಾರಾಟ: 47 ಮಂದಿ ಸೆರೆ

ಬೆಂಗಳೂರು: ನಗರ ಪೊಲೀಸ್ ಕಮಿಷನರೇಟ್ ವ್ಯಾಪ್ತಿಯಲ್ಲಿ ಮಾರ್ಚ್ ತಿಂಗಳಲ್ಲಿ ನಡೆಸಿದ ವಿಶೇಷ ಕಾರ್ಯಾಚರಣೆಯಲ್ಲಿ ಇಬ್ಬರು ವಿದೇಶಿ ಪ್ರಜೆಗಳು ಸೇರಿದಂತೆ ಡ್ರಗ್ಸ್ ಮಾರಾಟ ಮಾಡುತ್ತಿದ್ದ 47 ಮಂದಿಯನ್ನು ಪೊಲೀಸರು ಬಂಧಿಸಿದ್ದಾರೆ.

'ಮಾದಕ ದ್ರವ್ಯ ನಿಗ್ರಹ ಕಾಯ್ದೆ ಅಡಿ(ಎನ್‌ಡಿಪಿಎಸ್) ಒಂದು ತಿಂಗಳಲ್ಲಿ 40 ಪ್ರಕರಣ ದಾಖಲು ಮಾಡಿಕೊಳ್ಳಲಾಗಿದೆ. 90 ಗಾಂಜಾ, 3 ಕೆ.ಜಿ ಹ್ಯಾಶಿಶ್ ಆಯಿಲ್, 2 ಗ್ರಾಂ. ಕೊಕೇನ್, ಒಂದು ಕೆ.ಜಿ 254 ಗ್ರಾಂ. ಎಂಡಿಎಂಎ ಕ್ರಿಸ್ಟಲ್ ಅನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ' ಎಂದು ನಗರ ಪೊಲೀಸ್ ಕಮಿಷನರ್ ಬಿ.ದಯಾನಂದ ಮಂಗಳವಾರ ಮಾಹಿತಿ ನೀಡಿದರು.

ಕಚ್ಚಾತೈಲ ಬೆಲೆ ಇಳಿದರೂ ಎಲ್‌ಪಿಜಿ ದರ ಹೆಚ್ಚಳ: ಕಾಂಗ್ರೆಸ್ ಕಾರ್ಯಕರ್ತರ ಪ್ರತಿಭಟನೆ

'ಸಿಲಿಂಡರ್ ಬೆಲೆ ಹೆಚ್ಚಿಸಿ ವಂಚನೆ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾತೈಲದ ಬೆಲೆ ಇಳಿಕೆಯಾಗಿದೆ. ಬೆಲೆ ಇಳಿಕೆಯ ಲಾಭವನ್ನು ಕೇಂದ್ರ ಸರ್ಕಾರವು ಜನ ಸಾಮಾನ್ಯರಿಗೆ ವರ್ಗಾಯಿಸಬೇಕಿತ್ತು. ಆದರೆ ಎಲ್‌ಪಿಜಿ ಸಿಲಿಂಡರ್ ಬೆಲೆ ಏರಿಕೆ ಮಾಡಿ, ಜನರನ್ನು ವಂಚಿಸಿದೆ' ಎಂದು ಯುವ ಕಾಂಗ್ರೆಸ್ ಅಧ್ಯಕ್ಷ ಎಚ್.ಎಸ್. ಮಂಜುನಾಥ್ ಗೌಡ ಆರೋಪಿಸಿದರು.

ನಗರದ ಸ್ವಾತಂತ್ರ್ಯ ಉದ್ಯಾನದಲ್ಲಿ ಯುವ ಕಾಂಗ್ರೆಸ್ ಆಯೋಜಿಸಿದ್ದ ಪ್ರತಿಭಟನಾ ಮೆರವಣಿಗೆಯಲ್ಲಿ ಮಾತನಾಡಿದ ಅವರು, 'ಕಚ್ಚಾತೈಲದ ಬೆಲೆ ಕುಸಿತದ ಕಾರಣದಿಂದ ದೇಶದಲ್ಲೂ ಪೆಟ್ರೋಲ್ ಮತ್ತು ಡೀಸೆಲ್ ಬೆಲೆ ಪ್ರತಿ ಲೀಟರ್‌ಗೆ ₹12ರಷ್ಟು ಇಳಿಕೆಯಾಗಿದೆ. ಈ ಬೆಲೆ ಕುಸಿತದ ಲಾಭವನ್ನು ಜನ ಸಾಮಾನ್ಯರಿಗೆ ವರ್ಗಾಯಿಸಲು ಮೋದಿ ಅವರಿಗೆ ಇಷ್ಟವಿಲ್ಲ. ಹೀಗಾಗಿ ಎರಡೂ ಇಂಧನಗಳ ಮೇಲೆ ₹2ರಷ್ಟು ಅಬಕಾರಿ ಸುಂಕವನ್ನು ಹೆಚ್ಚಿಸಿದ್ದಾರೆ' ಎಂದು ಹೇಳಿದರು.





ಯುವ ಕಾಂಗ್ರೆಸ್ ಘಟಕದ ಅಧ್ಯಕ್ಷ ಎಚ್.ಎಸ್. ಮಂಜುನಾಥ ಗೌಡ ನೇತೃತ್ವದಲ್ಲಿ ಎತ್ತಿನಗಾಡಿ ಏರಿ, ಖಾಲಿ ಸಿಲಿಂಡರ್ ಹೊತ್ತು ಬೆಲೆ ಏರಿಕೆ ವಿರುದ್ಧ ಕಾರ್ಯಕರ್ತರು ಪ್ರತಿಭಟನೆ ನಡೆಸಿದರು (ಎಡಚಿತ್ರ). ಮಹಿಳಾ ಕಾಂಗ್ರೆಸ್ ಅಧ್ಯಕ್ಷೆ ಸೌಮ್ಯಾರೆಡ್ಡಿ ನೇತೃತ್ವದಲ್ಲಿ ಕೆಪಿಸಿಸಿ ಕಚೇರಿ ಮುಂದೆ ಪ್ರತಿಭಟನೆ ನಡೆಯಿತು —ಪ್ರಜಾವಾಣಿ ಚಿತ್ರ

'ಮೋದಿ ಅವರು ತಮ್ಮ ಸರ್ಕಾರದ ಆದಾಯ ಸಂಗ್ರಹಕ್ಕಷ್ಟೇ ಆದ್ಯತೆ ನೀಡುತ್ತಾರೆ. ಹಲವು ವರ್ಷಗಳಿಂದ ಹೀಗೇ ಮಾಡುತ್ತಿದ್ದು, ಕಚ್ಚಾತೈಲ ಬೆಲೆ ಇಳಿಕೆಯ ಲಾಭವು ಜನ ಸಾಮಾನ್ಯರಿಗೆ ಸಿಗದಂತೆ ಮಾಡಿದ್ದಾರೆ. ಅವರ ವಿಫಲ ಆರ್ಥಿಕ ನೀತಿಗಳ ಕಾರಣದಿಂದ ದೇಶದ ಹಣಕಾಸು ಸ್ಥಿತಿ ಹದಗೆಟ್ಟಿದೆ. ನಿರುದ್ಯೋಗ ಹೆಚ್ಚಾಗಿದೆ. ಎಲ್ಲ ಬೆಲೆಏರಿಕೆಗಳ ನಡುವೆ ಈಗ ಎಲ್‌ಪಿಜಿ ಸಿಲಿಂಡರ್ ಬೆಲೆ ಸಹ ಹೆಚ್ಚಳ ಮಾಡಿ, ಬಡವರ ಹೊಟ್ಟೆಯ ಮೇಲೆ ಹೊಡೆಯುತ್ತಿದೆ' ಎಂದರು.

ಇದಕ್ಕೂ ಮುನ್ನ ಯುವ ಕಾಂಗ್ರೆಸ್ ಕಾರ್ಯಕರ್ತರು ಎತ್ತಿನಗಾಡಿ ಏರಿ, ಎಲ್‌ಪಿಜಿ ಖಾಲಿ ಸಿಲಿಂಡರ್ ಹೊತ್ತು ಪ್ರತಿಭಟನಾ ಮೆರವಣಿಗೆ ನಡೆಸಿದರು. 'ಬೆಲೆ ಏರಿಕೆ ನಿಲ್ಲಿಸಿ, ಜನರ ಬದುಕು ಉಳಿಸಿ' ಎಂದು ಆಗ್ರಹಿಸಿದರು.

ಪಕ್ಷದ ಕಚೇರಿ ಬಳಿಯೂ ಪ್ರತಿಭಟನೆ: ಕಾಂಗ್ರೆಸ್ ಮಹಿಳಾ ಘಟಕದ ಅಧ್ಯಕ್ಷೆ ಸೌಮ್ಯಾರೆಡ್ಡಿ ನೇತೃತ್ವದಲ್ಲಿ ಕಾಂಗ್ರೆಸ್ ಕಾರ್ಯಕರ್ತರು, ಮಹಿಳಾ ಕಾಂಗ್ರೆಸ್ ಸದಸ್ಯರು ನಗರದ ಕೆಪಿಸಿಸಿ ಕಚೇರಿ ಎದುರು ಪ್ರತಿಭಟನೆ ನಡೆಸಿದರು. ಕೇಂದ್ರ ಸರ್ಕಾರದ ವಿರುದ್ಧ ಫಲಕಗಳನ್ನು ಪ್ರದರ್ಶಿಸಿ, ಬೆಲೆ ಏರಿಕೆಯನ್ನು ಖಂಡಿಸಿದರು.

ಕೊಲೆ ಪ್ರಕರಣ: ಆರೋಪಿ ಬಂಧನ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಬ್ಬಿಣದ ಸಲಾಕೆಯಿಂದ ಹೊಡೆದು ವ್ಯಕ್ತಿಯನ್ನು ಕೊಲೆ ಮಾಡಿದ್ದ ಆರೋಪಿಗಳ ಪೈಕಿ ಒಬ್ಬನನ್ನು ಕೆಂಗೇರಿ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಕಾಟನ್‌ಪೇಟೆಯ ಭಕ್ತಿ ಗಾರ್ಡನ್ ನಿವಾಸಿ ದಾದಾಪೀರ್ (25) ಎಂಬಾತನನ್ನು ಬಂಧಿಸಲಾಗಿದೆ.



ದಾದಾಪೀರ್

ಮತ್ತೊಬ್ಬ ಆರೋಪಿ, ಪಾದರಾಯನಪುರದ ನಿವಾಸಿ ಉಮ್ಮೆಸಲ್ಮಾ (22) ಎಂಬಾಕೆ ತಲೆಮರೆಸಿಕೊಂಡಿದ್ದಾಳೆ. ಆಕೆಯ ಬಂಧನಕ್ಕೆ ಕಾರ್ಯಾಚರಣೆ ನಡೆಸಲಾಗುತ್ತಿದೆ ಎಂದು ಪೊಲೀಸರು ಹೇಳಿದರು.

ಮೈಸೂರು ರಸ್ತೆಯ ಅಂಚೆಪಾಳ್ಯದ ನಿವಾಸಿ ಸಮೀರ್ (26) ಎಂಬುವವರನ್ನು ಕೊಲೆ ಮಾಡಿ ಬನಶಂಕರಿ ಆರನೇ ಹಂತದ ಏಳನೇ ಬ್ಲಾಕ್‌ನ ತುರಹಳ್ಳಿ ಅರಣ್ಯ ಪಕ್ಕದ ರಸ್ತೆಯಲ್ಲಿ ಮೃತದೇಹ ಎಸೆದು ಪರಾರಿ ಆಗಿದ್ದರು. ಕೊಲೆ ಪ್ರಕರಣ ದಾಖಲಿಸಿಕೊಂಡು ಪೊಲೀಸರು ತನಿಖೆ ನಡೆಸಿದ್ದರು.


'ಕೆಲವು ವರ್ಷಗಳ ಹಿಂದೆ ಸಮೀರ್ ಮದುವೆ ಆಗಿದ್ದರು. ಸಮೀರ್ ಅವರ ಪತ್ನಿ ಜತೆಗೆ ಆರೋಪಿ ದಾದಾಪೀರ್ ಸ್ನೇಹ ಬೆಳೆಸಿಕೊಂಡಿದ್ದ. ಸ್ನೇಹ ಮುಂದುವರಿಸಲು ಸಮೀರ್ ಅಡ್ಡಿ ಆಗಲಿದ್ದಾರೆ ಎಂದು ಭಾವಿಸಿ ಕೊಲೆಗೆ ಸಂಚು ರೂಪಿಸಿ ಕೃತ್ಯ ಎಸಗಲಾಗಿದೆ. ಸಮೀರ್ ಅವರ ಪತ್ನಿಯ ಕೈವಾಡ ಇರುವ ಸಾಧ್ಯತೆಯಿದ್ದು, ಆಕೆಯನ್ನೂ ವಿಚಾರಣೆ ನಡೆಸಲಾಗುತ್ತಿದೆ' ಎಂದು ಪೊಲೀಸರು ತಿಳಿಸಿದರು.

ಪತ್ನಿ ಆತ್ಮಹತ್ಯೆ: ಪತಿ ಬಂಧನ


ಪ್ರಜಾವಾಣಿ ವಾರ್ತೆ

ಬೆಂಗಳೂರು: ಹೆಬ್ಬಾಳದ ಕನಕ ನಗರದಲ್ಲಿ ಗೃಹಿಣಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿದ್ದು, ಪತಿಯನ್ನು ಹೆಬ್ಬಾಳ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ಬಹರ್ ಆಸ್ಮಾ (30) ಆತ್ಮಹತ್ಯೆ ಮಾಡಿಕೊಂಡವರು. ಇವರ ಪತಿ ಬಷೀರ್ ಉಲ್ಲಾ ಎಂಬಾತನನ್ನು ಬಂಧಿಸಲಾಗಿದೆ. ಆರೋಪಿ ತಾಯಿ ಜಬೀನ್ ತಾಜ್, ಅಣ್ಣ ಅರ್ಷದ್ ಉಲ್ಲಾ, ಮಜರ್ ಖಾನ್, ತರ್ಬೆಜ್ ಖಾನ್, ಹರ್ಷಿಯಾ ಹಾಗೂ ನೌಷದ್ ವಿರುದ್ಧವೂ ಪ್ರಕರಣ ದಾಖಲಾಗಿದ್ದು ಅವರನ್ನೂ ವಿಚಾರಣೆ ನಡೆಸಲಾಗುವುದು ಎಂದು ಪೊಲೀಸರು ಹೇಳಿದರು.



ಬಷೀರ್



ಆಸ್ಮಾ

ಯುವತಿಯ ಜತೆಗೆ ಬಷೀರ್ ಉಲ್ಲಾಗೆ ಸ್ನೇಹವಿದ್ದು, ಆತನ ಕಿರುಕುಳದಿಂದಲೇ ಆಸ್ಮಾ ಮೃತಪಟ್ಟಿದ್ದಾರೆ ಎಂದು ಆರೋಪಿಸಿ ಅವರ ಪೋಷಕರು ದೂರು ನೀಡಿದ್ದಾರೆ.

'ಎರಡು ವರ್ಷಗಳ ಹಿಂದೆ ಕುಟುಂಬದ ಹಿರಿಯರು ನಿಶ್ಚಯಿಸಿದಂತೆ ಆಸ್ಮಾ ಹಾಗೂ ಬಷೀರ್ ಉಲ್ಲಾ ಮದುವೆ ನಡೆದಿತ್ತು. ಆಸ್ಮಾ ಎಂ.ಎ ಪದವಿ ಪಡೆದಿದ್ದರು. ಖಾಸಗಿ ಕಂಪನಿಯೊಂದರಲ್ಲಿ ಬಷೀರ್ ಕೆಲಸ ಮಾಡುತ್ತಿದ್ದ. ಯುವತಿಯ ಜತೆಗೆ ಬಷೀರ್‌ಗೆ ಸ್ನೇಹವಿತ್ತು. ಬಷೀರ್ ಮೊಬೈಲ್ ಪರಿಶೀಲಿಸಿದಾಗ ಸಾಕ್ಷ್ಯಗಳು ಸಿಕ್ಕಿದ್ದವು. ಅದನ್ನು ನೋಡಿದ್ದ ಆಸ್ಮಾ ಅವರು ಪತಿಯನ್ನು ಪ್ರಶ್ನೆ ಮಾಡಿದ್ದರು. ಆಗ ಆತ ಹಲ್ಲೆ ಮಾಡಿದ್ದ' ಎಂದು ಆಸ್ಮಾ ಪೋಷಕರು ಆರೋಪಿಸಿದ್ದಾರೆ.

'ಆಸ್ಮಾ ಅವರ ತಂದೆ ಜಮೀರ್ ಅವರು ಸೋಮವಾರ ಬೆಳಿಗ್ಗೆ ಅಳಿಯನಿಗೆ ಕರೆ ಮಾಡಿ ಮನೆಗೆ ಬರುವಂತೆ ಕರೆದಿದ್ದರು. ಆದರೆ, ಬಷೀರ್ ನೇರವಾಗಿ ಹೆಬ್ಬಾಳ ಠಾಣೆಗೆ ತೆರಳಿ, ಪತ್ನಿ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ತಿಳಿಸಿದ್ದ. ಹೆಬ್ಬಾಳದ ಆರನೇ ಕ್ರಾಸ್‌ನಲ್ಲಿರುವ ಮನೆಗೆ ಪೋಷಕರು ತೆರಳಿ ಪರಿಶೀಲಿಸಿದಾಗ ಶೌಚಾಲಯದಲ್ಲಿ ನೇಣು ಬಿಗಿದುಕೊಂಡು ಆತ್ಮಹತ್ಯೆ ಮಾಡಿಕೊಂಡಿರುವುದು ಪತ್ತೆಯಾಗಿತ್ತು' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಸುದ್ದಿ 2 ನಿಮಿಷ

ಅಂಗಡಿಯ ಬಾಗಿಲು ಒಡೆದು ಕಳ್ಳತನ: ಇಬ್ಬರ ಸೆರೆ

ಬೆಂಗಳೂರು: ಕಳವು ಮಾಡಿದ್ದ ಕಾರು ಹಾಗೂ ಬೈಕ್‌ಗಳಲ್ಲಿ ಬಂದು ಮನೆ, ಅಂಗಡಿಗಳಿಗೆ ನುಗ್ಗಿ ಕಳ್ಳತನ ಮಾಡುತ್ತಿದ್ದ ಬೇಗೂರಿನ ಉಲ್ಲಾಸ್ ಅಲಿಯಾಸ್ ಡಾಲಿ(24), ಯಶವಂತಪುರ ನಿವಾಸಿ ಕಿರಣ್ (23) ಎಂಬುವವರನ್ನು ಎಸ್.ಜೆ.ಪಾರ್ಕ್ ಠಾಣೆ ಪೊಲೀಸರು ಬಂಧಿಸಿದ್ದಾರೆ.

ಠಾಣಾ ವ್ಯಾಪ್ತಿಯ ಅಂಗಡಿಯೊಂದರ ಬಾಗಿಲು ಒಡೆದು ₹7 ಸಾವಿರ ನಗದು ದೋಚಿ ಪರಾರಿ ಆಗಿದ್ದರು. ಈ ಸಂಬಂಧ ಪ್ರಕರಣ ದಾಖಲಿಸಿಕೊಂಡು ಹೇರೋಹಳ್ಳಿ ಬಸ್ ನಿಲ್ದಾಣದ ಬಳಿ ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಪೊಲೀಸರು ಹೇಳಿದರು.

ಎಂಟು ವರ್ಷಗಳಿಂದ ಆರೋಪಿಗಳು ಕಳ್ಳತನ ಮಾಡುತ್ತಿದ್ದರು. ಈ ಹಿಂದೆ ಬಾಲಾಪರಾಧಿಗಳಾಗಿ ಮಕ್ಕಳ ಕಲ್ಯಾಣ ಮಂಡಳಿ ಸೇರಿದ್ದರು. ಅಲ್ಲಿ ಇಬ್ಬರೂ ಪರಿಚಯವಾಗಿದ್ದರು. ಬಿಡುಗಡೆಯಾದ ಬಳಿಕ ಇಬ್ಬರೂ ಕಳ್ಳತನಕ್ಕೆ ಇಳಿದಿದ್ದರು ಎಂದು ಪೊಲೀಸರು ಹೇಳಿದರು.

ಆರೋಪಿಗಳ ವಿರುದ್ಧ ನಗರದ ವಿವಿಧ ಪೊಲೀಸ್ ಠಾಣೆಗಳಲ್ಲಿ 11ಕ್ಕೂ ಹೆಚ್ಚು ಕಳ್ಳತನ ಪ್ರಕರಣಗಳು ದಾಖಲಾಗಿದ್ದು, ಬಂಧಿತರಿಂದ ₹6 ಸಾವಿರ ನಗದು, 25 ಗ್ರಾಂ. ಚಿನ್ನಾಭರಣ, 124 ಗ್ರಾಂ. ಬೆಳ್ಳಿಯ ಸಾಮಗ್ರಿ ಹಾಗೂ ಬೈಕ್ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸರು ಹೇಳಿದರು.



ಆಭರಣ ಕಳ್ಳತನ: ನೇಪಾಳಿ ಗ್ಯಾಂಗ್ ಬಂಧನ

ಬೆಂಗಳೂರು: ಮನೆಗೆ ನುಗ್ಗಿ ಚಿನ್ನ, ವಜ್ರ ಹಾಗೂ ಬೆಳ್ಳಿ ಸಾಮಗ್ರಿಗಳನ್ನು ಕಳ್ಳತನ ಮಾಡುತ್ತಿದ್ದ ನೇಪಾಳಿ ತಂಡದ ಐವರನ್ನು ತಲಘಟ್ಟಪುರ ಠಾಣೆಯ ಪೊಲೀಸರು ಬಂಧಿಸಿದ್ದಾರೆ.

ನೇಪಾಳದ ಲಾಲ್ ಬಹದ್ದೂರ್ ಬೋರಾ, ಕಮಲ್ ಬಹದ್ದೂರ್, ಕಿರಣ್ ಬೋರಾ, ನೇತ್ರ ಬಹದ್ದೂರ್, ರಾಜೇಶ್ ಬಹದ್ದೂರ್ ಬಂಧಿತರು. ಬಂಧಿತರಿಂದ 502 ಗ್ರಾಂ. ಚಿನ್ನ ಹಾಗೂ ವಜ್ರಾಭರಣ, 4.5 ಕೆ.ಜಿ ಬೆಳ್ಳಿ ಸಾಮಗ್ರಿ, ಎರಡು ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದುಕೊಳ್ಳಲಾಗಿದೆ. ಇವುಗಳ ಮೌಲ್ಯ ₹ 50 ಲಕ್ಷ ಎಂದು ಅಂದಾಜಿಸಲಾಗಿದೆ.

ಠಾಣಾ ವ್ಯಾಪ್ತಿಯ ಗುಬ್ಬಲಾಳದ ಜೆ.ಎಚ್.ಬಿ.ಸಿ.ಎಸ್ ಲೇಔಟ್‌ನಲ್ಲಿ ವಾಸವಿರುವ ವ್ಯಕ್ತಿಯೊಬ್ಬರ ಮನೆಗೆ ನುಗ್ಗಿ ಆರೋಪಿಗಳು ಕಳ್ಳತನ ಮಾಡಿ ಪರಾರಿ ಆಗಿದ್ದರು. ಮನೆಯ ಮಾಲೀಕರು ನೀಡಿದ ದೂರು ಆಧರಿಸಿ ಆರೋಪಿಗಳನ್ನು ಬಂಧಿಸಲಾಯಿತು ಎಂದು ಪೊಲೀಸರು ಹೇಳಿದರು. 'ಅಪಾರ್ಟ್‌ಮೆಂಟ್ ಸೆಕ್ಯೂರಿಟಿ ಗಾರ್ಡ್ ಆಗಿ ಆರೋಪಿಗಳು ಕೆಲಸ ಮಾಡುತ್ತಿದ್ದರು. ಕೆಲಸ ಮುಗಿಸಿ ಮನೆಗೆ ತೆರಳುವಾಗ ಬೀಗ ಹಾಕಿದ ಮನೆಗಳನ್ನು ಗುರುತಿಸುತ್ತಿದ್ದರು. ರಾತ್ರಿ ವೇಳೆ ಹೊಂಚು ಹಾಕಿ ಬೀಗ ಒಡೆದು ಆಭರಣ ಹಾಗೂ ನಗದು ಕಳ್ಳತನ ಮಾಡುತ್ತಿದ್ದರು' ಎಂದು ಪೊಲೀಸರು ಹೇಳಿದರು.

ಕೇಂದ್ರಕ್ಕೆ ಪತ್ರ ಬರೆಯಲು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಸೂಚನೆ

ಹುಬ್ಬಳ್ಳಿಗೆ ಅಂತರರಾಷ್ಟ್ರೀಯ ನಿಲ್ದಾಣ?

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಹುಬ್ಬಳ್ಳಿ ವಿಮಾನ ನಿಲ್ದಾಣವನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಮೇಲ್ದರ್ಜೆಗೆ ಏರಿಸಬೇಕು. ಈ ಸಂಬಂಧ ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಿರಿ' ಎಂದು ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ.ಪಾಟೀಲ ಅವರು, ಇಲಾಖೆಯ ಅಧಿಕಾರಿಗಳಿಗೆ ಸೂಚಿಸಿದರು.

ರಾಜ್ಯದಲ್ಲಿ ವಿಮಾನಯಾನ ಸೌಕರ್ಯ ಹೆಚ್ಚಿಸುವ ಸಂಬಂಧ ಮೂಲಸೌಕರ್ಯ ಅಭಿವೃದ್ಧಿ ಇಲಾಖೆ ಅಧಿಕಾರಿಗಳು, ವಿಮಾನಯಾನ ಸಂಸ್ಥೆಗಳ ಪ್ರತಿನಿಧಿಗಳ ಜತೆಗೆ ಅವರು ಮಂಗಳವಾರ ಸಭೆ ನಡೆಸಿದರು. ಮಾಹಿತಿ ತಂತ್ರಜ್ಞಾನ ಸಚಿವ ಪ್ರಿಯಾಂಕ್ ಖರ್ಗೆ ಸಭೆಯಲ್ಲಿದ್ದರು.

'ಹುಬ್ಬಳ್ಳಿ ವಿಮಾನ ನಿಲ್ದಾಣದಿಂದ ಹಲವೆಡೆಗೆ ವಿಮಾನಯಾನ ಸಂಪರ್ಕವಿದೆ. ಅಲ್ಲಿ ಪ್ರಯಾಣಿಕರ ದಟ್ಟಣೆಯೂ ಹೆಚ್ಚಾಗಿದೆ. ಅದನ್ನು ಅಂತರರಾಷ್ಟ್ರೀಯ ವಿಮಾನ ನಿಲ್ದಾಣವಾಗಿ ಅಭಿವೃದ್ಧಿಪಡಿಸುವ ಹಲವು ಅವಕಾಶಗಳಿವೆ. ಈ ಸಂಬಂಧ ವಿಸ್ತೃತ ವರದಿಯನ್ನು ಸಿದ್ಧಪಡಿಸಿ, ಕೇಂದ್ರ ಸರ್ಕಾರಕ್ಕೆ ಪತ್ರ ಬರೆಯಬೇಕು. ಈ ಕೆಲಸವನ್ನು ತ್ವರಿತಗತಿಯಲ್ಲಿ ಮಾಡಿ' ಎಂದು ಸಚಿವ ಪಾಟೀಲ ಅಧಿಕಾರಿಗಳಿಗೆ ಸೂಚಿಸಿದರು.



ಭಾರತೀಯ ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳ ತಂಡವು ಕನಕಪುರ ರಸ್ತೆ ಸಮೀಪ ಗುರುತಿಸಲಾದ ಸ್ಥಳದ ಪರಿಶೀಲನೆ ನಡೆಸಿತು

ವಿಮಾನ ನಿಲ್ದಾಣಗಳ ಬಳಕೆಗೆ ಆಹ್ವಾನ: 'ಕಲಬುರಗಿ, ಮೈಸೂರು, ಬೀದರ್, ಹುಬ್ಬಳ್ಳಿ, ಬೆಳಗಾವಿ, ವಿದ್ಯಾನಗರ ವಿಮಾನ ನಿಲ್ದಾಣಗಳಿಂದ ಇತರ ರಾಜ್ಯಗಳ ನಗರಗಳಿಗೆ ವಿಮಾನಯಾನ ಸೇವೆ ಒದಗಿಸಿ' ಎಂದು ಸಚಿವ ಎಂ.ಬಿ. ಪಾಟೀಲ ಅವರು ವಿಮಾನಯಾನ ಸಂಸ್ಥೆಗಳಿಗೆ ಮನವಿ ಮಾಡಿದರು.

ಇಂಡಿಗೊ, ಸ್ಪೈಸ್‌ಜೆಟ್, ಸ್ಟಾರ್ ಏರ್, ಏರ್ ಇಂಡಿಯಾ, ಆಕಾಸಾ ಏರ್, ಅಲೈಯನ್ಸ್ ಏರ್‌ವೇಸ್, ಸ್ಪೈಸ್ ಜೆಟ್ ಕಂಪನಿಗಳ ಪ್ರತಿನಿಧಿಗಳು ಸಭೆಯಲ್ಲಿ ಭಾಗಿಯಾಗಿದ್ದರು.

'ವಿಜಯಪುರ ವಿಮಾನ ನಿಲ್ದಾಣವು ಸಿದ್ಧವಾಗಿದ್ದು, ಇನ್ನಷ್ಟೇ ಉದ್ಘಾಟನೆಯಾಗಬೇಕಿದೆ. ವಿಮಾನ ಸಂಪರ್ಕ ಕಲ್ಪಿಸುವ ಸಂದರ್ಭದಲ್ಲಿ ಈ ವಿಮಾನ ನಿಲ್ದಾಣವನ್ನೂ ಪರಿಗಣಿಸಬೇಕು' ಎಂದು ಸಚಿವ ಕೋರಿದರು.

ಎಲ್ಲ ಸವಲತ್ತು ನೀಡಲು ಸಿದ್ಧ: ಪ್ರಿಯಾಂಕ್

'ಕಲಬುರಗಿ ವಿಮಾನ ನಿಲ್ದಾಣದಿಂದ ವಿಮಾನಯಾನ ಸೇವೆ ಒದಗಿಸಲು ಅಗತ್ಯವಿರುವ ಎಲ್ಲ ಸವಲತ್ತುಗಳನ್ನ ನೀಡುತ್ತೇವೆ' ಎಂದು ಪ್ರಿಯಾಂಕ್ ಖರ್ಗೆ ಭರವಸೆ ನೀಡಿದರು.

'ಕಲಬುರಗಿ ವಿಮಾನ ನಿಲ್ದಾಣವನ್ನು ವಿಮಾನಯಾನ ಸಂಸ್ಥೆಗಳು ನಿರ್ವಹಣೆ ಮತ್ತು ರಿಪೇರಿ ಕೇಂದ್ರವಾಗಿಯೂ ಬಳಸಿಕೊಳ್ಳಬಹುದು. ಅದಕ್ಕೆ ಅಗತ್ಯವಿರುವ ಎಲ್ಲ ಸಹಕಾರವನ್ನು ಒದಗಿಸುತ್ತೇವೆ' ಎಂದರು.

2ನೇ ವಿಮಾನ ನಿಲ್ದಾಣಕ್ಕೆ ಸ್ಥಳ ಪರಿಶೀಲನೆ

ಬೆಂಗಳೂರು: ಬೆಂಗಳೂರು ಸಮೀಪ ಎರಡನೇ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆಂದು ಗುರುತಿಸಲಾದ ಎರಡು ಸ್ಥಳಗಳಿಗೆ ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ತಂಡವು ಮಂಗಳವಾರ ಭೇಟಿ ನೀಡಿ, ಪರಿಶೀಲನೆ ನಡೆಸಿತು.

ಎರಡನೇ ವಿಮಾನ ನಿಲ್ದಾಣಕ್ಕೆ ರಾಜ್ಯ ಸರ್ಕಾರ 3 ಸ್ಥಳಗಳನ್ನು ಗುರುತು ಮಾಡಿ, ಎಎಐಗೆ ಪ್ರಸ್ತಾವ ಸಲ್ಲಿಸಿತ್ತು.

ಎಎಐನ ಪ್ರಧಾನ ವ್ಯವಸ್ಥಾಪಕ ವಿಕ್ರಮ್ ಸಿಂಗ್, ಜಂಟಿ ಪ್ರಧಾನ ವ್ಯವಸ್ಥಾಪಕ ಕೆ.ಶ್ರೀನಿವಾಸರಾವ್ ಸೇರಿ ಆರು ಜನರ ತಂಡವು ಕನಕಪುರ ರಸ್ತೆ ಸಮೀಪ ಇರುವ ಚೂಡಹಳ್ಳಿ–ಸೋಮನಹಳ್ಳಿ ಬಳಿ ಗುರುತಿಸಲಾಗಿರುವ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿತು. ಜತೆಗೆ ಕರಿಯಾಳಕರೆನಹಳ್ಳಿ ಬಳಿ ಗುರುತಿಸಲಾದ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿತು.

ರಾಜ್ಯ ಮೂಲಸೌಕರ್ಯ ಇಲಾಖೆ ಅಧಿಕಾರಿಗಳು ಈ ವೇಳೆ ಹಾಜರಿದ್ದು, ಈ ಸ್ಥಳಗಳಲ್ಲಿ ಲಭ್ಯವಿರುವ ಸವಲತ್ತುಗಳು ಮತ್ತು ನಗರಕ್ಕೆ ಆಗುವ ಅನುಕೂಲಗಳ ಬಗ್ಗೆ ಮಾಹಿತಿ ನೀಡಿದರು. ನಂತರ ಮೂಲಸೌಕರ್ಯ ಅಭಿವೃದ್ಧಿ ಸಚಿವ ಎಂ.ಬಿ. ಪಾಟೀಲ ಅವರ ಜತೆಗೆ ಎಎಐ ತಂಡವು ಚರ್ಚೆ ನಡೆಸಿತು.

ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿ ನೆಲಮಂಗಲ ಜಂಕ್ಷನ್‌ನಿಂದ ಹತ್ತು ಕಿ.ಮೀ.ದೂರದಲ್ಲಿರುವ ಸೋಲದೇವನಹಳ್ಳಿ ಬಳಿಯ ಮಾರಗೊಂಡನಹಳ್ಳಿಯಲ್ಲಿ ಮೂರನೇ ಸ್ಥಳವನ್ನು ಗುರುತಿಸಲಾಗಿದೆ. ಎಎಐ ತಂಡವು ಅಲ್ಲಿಗೆ ಬುಧವಾರ ಭೇಟಿ ನೀಡಿ, ಪರಿಶೀಲನೆ ನಡೆಸಲಿದೆ.

ಮುಖ್ಯಾಂಶಗಳು

- ವಿಮಾನ ನಿಲ್ದಾಣ ಪ್ರಾಧಿಕಾರದ ಅಧಿಕಾರಿಗಳ ಭೇಟಿ
- ಕನಕಪುರ–ನೈಸ್ ರಸ್ತೆ ಜಂಕ್ಷನ್ ಸಮೀಪದ ಸ್ಥಳಗಳು
- ಬೆಂಗಳೂರು–ಮಂಗಳೂರು ಹೆದ್ದಾರಿಯಲ್ಲಿನ ಸ್ಥಳಕ್ಕೆ ಬುಧವಾರ ಭೇಟಿ

ನಕಲಿ ಚಿನ್ನಾಭರಣ ಅಡವಿಟ್ಟ ಪ್ರಕರಣ

ಶಿವಮೊಗ್ಗ ಡಿಸಿಸಿ ಅಧ್ಯಕ್ಷ ಇ.ಡಿ ವಶಕ್ಕೆ: 11 ತಾಸು ವಿಚಾರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು/ಶಿವಮೊಗ್ಗ: ಶಿವಮೊಗ್ಗ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್‌ನಲ್ಲಿ (ಡಿಸಿಸಿ) ನಕಲಿ ಚಿನ್ನಾಭರಣ ಅಡವಿಟ್ಟು ₹62.77 ಕೋಟಿ ಸಾಲ ಪಡೆದಿದ್ದ ಪ್ರಕರಣದಲ್ಲಿ, ಬ್ಯಾಂಕ್‌ನ ಹಾಲಿ ಅಧ್ಯಕ್ಷ ಆರ್.ಎಂ. ಮಂಜುನಾಥಗೌಡ ಅವರನ್ನು ಜಾರಿ ನಿರ್ದೇಶನಾಲಯದ (ಇ.ಡಿ) ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.



ಮಂಜುನಾಥ ಗೌಡ

ಬೆಂಗಳೂರು ಮತ್ತು ಶಿವಮೊಗ್ಗ ಸೇರಿ ಒಟ್ಟು ನಾಲ್ಕು ಕಡೆ ಮಂಗಳವಾರ ಬೆಳಿಗ್ಗೆಯೇ ದಾಳಿ ನಡೆಸಿದ ಇ.ಡಿ ಅಧಿಕಾರಿಗಳು ಸಂಜೆಯವರೆಗೂ ತಪಾಸಣೆ ನಡೆಸಿದರು. 2014ರಲ್ಲಿ ಮಂಜುನಾಥಗೌಡ ಅವರು ಬ್ಯಾಂಕ್‌ನ ಅಧ್ಯಕ್ಷರಾಗಿದ್ದಾಗ ಈ ಅಕ್ರಮ ನಡೆದಿತ್ತು. ಆಗ ತನಿಖೆ ನಡೆಸಿದ್ದ ಸಿಐಡಿ ಮಂಜುನಾಥಗೌಡ ಅವರನ್ನು ಬಂಧಿಸಿತ್ತು. ಅವರು ಜಾಮೀನು ಪಡೆದು ಬಿಡುಗಡೆಯಾಗಿದ್ದರು.

ಬ್ಯಾಂಕ್‌ನಲ್ಲಿ ನಡೆದ ಬಹುಕೋಟಿ ಪ್ರಕರಣವಾದ ಕಾರಣಕ್ಕೆ ಇ.ಡಿ ತನಿಖೆ ಆರಂಭಿಸಿತ್ತು. ಇ.ಡಿ ತನಿಖೆಗೆ ಮಂಜುನಾಥಗೌಡ ಹೈಕೋರ್ಟ್‌ನಿಂದ ತಂದಿದ್ದ ತಡೆ ಈಚೆಗಷ್ಟೇ ತೆರವಾಗಿತ್ತು.

ಬೆಂಗಳೂರಿನ ಚಾಮರಾಜಪೇಟೆಯಲ್ಲಿರುವ ಅಪೆಕ್ಸ್ ಬ್ಯಾಂಕ್ ಅತಿಥಿಗೃಹಕ್ಕೆ ಸೋಮವಾರ ರಾತ್ರಿ ಬಂದಿದ್ದ ಮಂಜುನಾಥ ಗೌಡ ಅಲ್ಲಿಯೇ ಉಳಿದಿದ್ದರು. ಈ ಬಗ್ಗೆ ಮಾಹಿತಿ ಪಡೆದಿದ್ದ ಇ.ಡಿ ಅಧಿಕಾರಿಗಳು ಬುಧವಾರ ಬೆಳಿಗ್ಗೆ 7ರ ಸುಮಾರಿಗೆ ದಾಳಿ ನಡೆಸಿ, ಅವರನ್ನು ವಿಚಾರಣೆಗೆ ಒಳಪಡಿಸಿದರು.

'ಬೆಳಿಗ್ಗೆ 7ರಿಂದ ಸಂಜೆ ಆರರವರೆಗೆ ಸುಮಾರು 11 ತಾಸು ಮಂಜುನಾಥ ಅವರನ್ನು ಅಧಿಕಾರಿಗಳು ವಿಚಾರಣೆಗೆ ಒಳಪಡಿಸಿದರು. ನಕಲಿ ಚಿನ್ನಾಭರಣ ತಂದ ಬಗೆ, ಸಾಲದ ಹಣವನ್ನು ಯಾರಿಗೆಲ್ಲಾ ವರ್ಗಾವಣೆ ಮಾಡಲಾಗಿತ್ತು, ಸಾಲ ಮರುಪಾವತಿ, ಸಾಲದ ಹಣದ ಬಳಕೆ ಸ್ವರೂಪ ಸೇರಿ ಹತ್ತಾರು ಪ್ರಶ್ನೆಗಳನ್ನು ಕೇಳಿದರು. ಅವರು ಯಾವುದಕ್ಕೂ ಸಮರ್ಪಕ ಉತ್ತರ ನೀಡಿಲ್ಲ' ಎಂದು ಮೂಲಗಳು ತಿಳಿಸಿವೆ.

ಸಂಜೆ ಆರರ ನಂತರ ಅವರನ್ನು ವಶಕ್ಕೆ ಪಡೆದ ಅಧಿಕಾರಿಗಳು, ಶಾಂತಿನಗರದಲ್ಲಿ ಇರುವ ಇ.ಡಿ ಕಚೇರಿಗೆ ಕರೆದೊಯ್ದರು. ವೈದ್ಯಕೀಯ ಪರೀಕ್ಷೆಗೆ ಒಳಪಡಿಸಿ, ನ್ಯಾಯಾಧೀಶರ ಎದುರು ಹಾಜರುಪಡಿಸುವ ಸಾಧ್ಯತೆ ಇದೆ. ಮಂಜುನಾಥಗೌಡ ಜತೆಗೆ ಇದ್ದ ಮತ್ತೊಬ್ಬ ವ್ಯಕ್ತಿಯನ್ನು ಕೆಲಕಾಲ ವಿಚಾರಣೆ ನಡೆಸಿ, ಕಳುಹಿಸಿದ್ದಾರೆ ಎನ್ನಲಾಗಿದೆ.

'ಮಂಜುನಾಥಗೌಡ ಅವರು ನೀಡಿದ ಹಲವು ಉತ್ತರಗಳು ಪರಸ್ಪರ ತಾಳೆಯಾಗುತ್ತಿರಲಿಲ್ಲ ಮತ್ತು ಕೆಲವು ಪ್ರಶ್ನೆಗಳಿಗೆ ಉತ್ತರಿಸಲು ನಿರಾಕರಿಸಿದರು. ಹೀಗಾಗಿ ಅವರನ್ನು ವಶಕ್ಕೆ ಪಡೆಯಲಾಗಿದೆ' ಎಂದು ಮೂಲಗಳು ತಿಳಿಸಿವೆ.

ಶಿವಮೊಗ್ಗದಲ್ಲಿ ಮೂರು ಕಡೆ ದಾಳಿ: ಇ.ಡಿ ಅಧಿಕಾರಿಗಳು ಶಿವಮೊಗ್ಗ ನಗರದ ಮೂರು ಕಡೆ ದಾಳಿ ನಡೆಸಿ, ಪರಿಶೀಲಿಸಿದ್ದಾರೆ.

ರೈಲ್ವೆ ರಕ್ಷಣಾ ದಳದ (ಆರ್‌ಪಿಎಫ್) ಸಿಬ್ಬಂದಿಯ ಬೆಂಗಾವಲಿನೊಂದಿಗೆ ನಾಲ್ಕು ವಾಹನಗಳಲ್ಲಿ ಬಂದಿದ್ದ ಇ.ಡಿ ಅಧಿಕಾರಿಗಳ ತಂಡ ಬ್ಯಾಂಕಿನ ಗಾಂಧಿ ಬಜಾರ್ ಶಾಖೆಯ ಹಿಂದಿನ ವ್ಯವಸ್ಥಾಪಕಿ ಶೋಭಾ, ಕಾರು ಚಾಲಕ ಶಿವಕುಮಾರ್ ಮನೆಗಳ ಮೇಲೆ ಹಾಗೂ ಮಾಡರ್ನ್ ಥಿಯೇಟರ್ ಬಳಿಯ ಡಿಸಿಸಿ ಬ್ಯಾಂಕ್ ಶಾಖೆಯ ಮೇಲೆ ದಾಳಿ ನಡೆಸಿ ಪರಿಶೀಲನೆ ನಡೆಸಿದೆ ಎಂದು ತಿಳಿದುಬಂದಿದೆ.

ಡಿಸಿಸಿ ಬ್ಯಾಂಕ್‌ನಲ್ಲಿ ಗುತ್ತಿಗೆ ಆಧಾರದಲ್ಲಿ ಕೆಲಸ ಮಾಡುತ್ತಿದ್ದ ಶಿವಕುಮಾರ್, ಆರ್.ಎಂ. ಮಂಜುನಾಥಗೌಡ ಅವರ ಕಾರು ಚಾಲಕ ಆಗಿದ್ದರು. ಪ್ರಕರಣ ಬೆಳಕಿಗೆ ಬಂದ ನಂತರ ಶೋಭಾ ಹಾಗೂ ಶಿವಕುಮಾರ್‌ನನ್ನು ಕೆಲಸದಿಂದ ವಜಾಗೊಳಿಸಲಾಗಿತ್ತು.

ಬಾಟಲಿ ನೀರು 'ಅಸುರಕ್ಷಿತ'

ಒಂದನೇ ಪುಟದಿಂದ...

ಅಸುರಕ್ಷಿತ ಮತ್ತು ಕಳಪೆ ಗುಣಮಟ್ಟದ ನೀರಿನ ಬಾಟಲಿಗಳನ್ನು ಪೂರೈಸುವ ಕಂಪನಿಗಳ ಪಟ್ಟಿಯನ್ನೂ ಅವರು ಬಿಡುಗಡೆ ಮಾಡಿದರು.

41 ಔಷಧಗಳ ಗುಣಮಟ್ಟ ಕಳಪೆ: 'ಮಾರ್ಚ್ ತಿಂಗಳಲ್ಲಿ 1,891 ಔಷಧ ಮಾದರಿಗಳನ್ನು ಔಷಧ ಪರೀಕ್ಷಾ ಪ್ರಯೋಗಾಲಯಗಳಲ್ಲಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅವುಗಳಲ್ಲಿ 41 ಔಷಧಗಳು ಕಳಪೆ ಗುಣಮಟ್ಟದ್ದೆಂದು ಪತ್ತೆಯಾಗಿವೆ. ಔಷಧ ಮತ್ತು ಕಾಂತಿವರ್ಧಕ ಕಾಯ್ದೆಯ ನಿಯಮಗಳನ್ನು ಉಲ್ಲಂಘಿಸಿದ ಸಂಸ್ಥೆಗಳ ವಿರುದ್ಧ ಫೆಬ್ರುವರಿ ತಿಂಗಳಲ್ಲಿ 10 ಮತ್ತು ಮಾರ್ಚ್ ತಿಂಗಳಲ್ಲಿ 18 ಮೊಕದ್ದಮೆಗಳನ್ನು ವಿವಿಧ ನ್ಯಾಯಾಲಯಗಳಲ್ಲಿ ದಾಖಲಿಸಲಾಗಿದೆ' ಎಂದರು.

'ರಿಂಗರ್ ಲ್ಯಾಕ್ಟೇಟ್ ದ್ರಾವಣಕ್ಕೆ ಸಂಬಂಧಿಸಿದಂತೆ 196 ಬ್ಯಾಚ್‌ನ ಮಾದರಿಗಳಲ್ಲಿ 113 ಕಳಪೆ ಗುಣಮಟ್ಟದ್ದೆಂದು ಘೋಷಿತವಾಗಿದ್ದು, ತಯಾರಿಕಾ ಕಂಪನಿಯಾದ ಪಶ್ಚಿಮ್ ಬಂಗಾ ಫಾರ್ಮಸೂಟಿಕಲ್ಸ್ ವಿರುದ್ಧ ಮಾರ್ಚ್ ಅಂತ್ಯದವರೆಗೆ 78 ಮೊಕದ್ದಮೆ ದಾಖಲಿಸಲಾಗಿದೆ. ಕಳಪೆ ಗುಣಮಟ್ಟದ ಔಷಧವೆಂದು ಘೋಷಿತವಾದ ಮತ್ತು ಇತರ ಉಲ್ಲಂಘನೆಗಾಗಿ ವಿವಿಧ ಕಂಪನಿಗಳ ವಿರುದ್ಧ 43 ಪ್ರಕರಣಗಳಲ್ಲಿ ಮೊಕದ್ದಮೆ ಹೂಡಲು ಅನುಮತಿ ನೀಡಲಾಗಿದೆ' ಎಂದರು.

'ಫೆಬ್ರುವರಿಯಲ್ಲಿ 1,872 ಔಷಧ ಮಾದರಿಗಳನ್ನು ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಅಲ್ಲದೆ, 2,078 ಔಷಧ ಮಳಿಗೆಗಳನ್ನು ಪರಿವೀಕ್ಷಣೆ ನಡೆಸಲಾಗಿದೆ. ಈ ಪೈಕಿ, ನಿಯಮ ಉಲ್ಲಂಘಿಸಿದ 251 ಸಂಸ್ಥೆಗಳ ಪರವಾನಗಿ ಅಮಾನತು ಮಾಡಲಾಗಿದೆ. ಅಲ್ಲದೆ, ವಿಶೇಷ ಅಭಿಯಾನ ನಡೆಸಿ ಗುಣಮಟ್ಟ ಇಲ್ಲದ (ಎನ್‌ಎಸ್‌ಕ್ಯೂ) ₹24,29,479 ಮೌಲ್ಯದ ಔಷಧಗಳನ್ನು ಮಾರುಕಟ್ಟೆಯಿಂದ ಹಿಂಪಡೆಯಲಾಗಿದೆ' ಎಂದರು.

ಕರಿದ ಹಸಿರು ಬಟಾಣಿ ಅಸುರಕ್ಷಿತ: 'ಕರಿದ ಹಸಿರು ಬಟಾಣಿಗಳಲ್ಲಿ ಕೃತಕ ಬಣ್ಣಗಳ ಬಳಕೆ ಬಗ್ಗೆ ಖಚಿತ ಪಡಿಸಿಕೊಳ್ಳಲು 115 ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಿದಾಗ 46 ಮಾದರಿಗಳು ಸುರಕ್ಷಿತ, 69 ಮಾದರಿಗಳು ಅಸುರಕ್ಷಿತ ಎಂದು ವರದಿಯಾಗಿವೆ' ಎಂದೂ ಸಚಿವರು ತಿಳಿಸಿದರು.

'ಖೋವಾ, ಪನೀರ್ ಗುಣಮಟ್ಟ ಕಳಪೆ'

'ಮಾರ್ಚ್ ತಿಂಗಳಲ್ಲಿ 3,204 ಆಹಾರ ಪದಾರ್ಥಗಳ ಮಾದರಿಗಳನ್ನು ವಿಶ್ಲೇಷಣೆ ಒಳಪಡಿಸಲಾಗಿದೆ. ವಿಶ್ಲೇಷಣೆಗೆ ಒಳಪಡಿಸಲಾದ ತುಪ್ಪದ ಎಲ್ಲ ಆರು ಮಾದರಿಗಳು ಸುರಕ್ಷಿತ ಎಂದು ವರದಿಯಾಗಿವೆ' ಎಂದು ದಿನೇಶ್ ಗುಂಡೂರಾವ್ ಹೇಳಿದರು.

'ಖೋವಾ ಒಂಬತ್ತು ಮಾದರಿಗಳಲ್ಲಿ ಮೂರು ಕಳಪೆ ಗುಣಮಟ್ಟ, ಆರು ಸುರಕ್ಷಿತ, ಪನೀರ್‌ಗಳ 32 ಮಾದರಿಗಳಲ್ಲಿ ಎರಡು ಅಸುರಕ್ಷಿತ, ಉಳಿದ 30 ಸುರಕ್ಷಿತ, ಸಿಹಿತಿಂಡಿಗಳ 83 ಮಾದರಿಗಳಲ್ಲಿ ಎರಡು ಅಸುರಕ್ಷಿತ, ಖಾರ ಮಿಕ್ಸರ್‌ಗಳ 27 ಮಾದರಿಗಳಲ್ಲಿ ನಾಲ್ಕು ಅಸುರಕ್ಷಿತ ಎಂದು ವರದಿಯಾಗಿವೆ' ಎಂದು ಅವರು ವಿವರಿಸಿದರು.

'ಸ್ಥಳೀಯವಾಗಿ ತಯಾರಿಸುವ ಜ್ಯೂಸ್, ಪಾನೀಯಗಳ 46, ಐಸ್ ಕ್ಯಾಂಡಿಗಳ 39, ಐಸ್ ಕ್ರೀಂಗಳ 107 ಮಾದರಿಗಳನ್ನು ಸಂಗ್ರಹಿಸಿ ವಿಶ್ಲೇಷಣೆಗೆ ಒಳಪಡಿಸಲಾಗಿದೆ. ಆ ವರದಿ ಇನ್ನೂ ಬಂದಿಲ್ಲ. ಆಹಾರ ಪದಾರ್ಥಗಳನ್ನು ತಯಾರಿಸುವ ಮತ್ತು ಮಾರಾಟ ಮಾಡುವ 92 ಘಟಕಗಳಿಗೆ ನೋಟಿಸ್ ನೀಡಲಾಗಿದೆ. ಆರು ಘಟಕಗಳಿಗೆ ₹38 ಸಾವಿರ ದಂಡ ವಿಧಿಸಲಾಗಿದೆ. ಅಲ್ಲದೆ, 590 ಹೋಟೆಲ್, ರೆಸ್ಟೋರೆಂಟ್‌ಗಳನ್ನು ಅಧಿಕಾರಿಗಳು ಪರಿಶೀಲನೆ ನಡೆಸಿದ್ದಾರೆ. ಈ ಪೈಕಿ, 214ಕ್ಕೆ ನೋಟಿಸ್ ನೀಡಲಾಗಿದೆ. 11 ಹೋಟೆಲ್, ರೆಸ್ಟೋರೆಂಟ್‌ಗಳಿಗೆ ಒಟ್ಟು ₹1.15 ಲಕ್ಷ ದಂಡ ವಿಧಿಸಲಾಗಿದೆ. ಆಹಾರ ಮಾದರಿಗಳ ವಿಶ್ಲೇಷಣಾ ಫಲಿತಾಂಶ ಆಧರಿಸಿ ಮುಂದಿನ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' ಎಂದೂ ಅವರು ತಿಳಿಸಿದರು.

'ಭಾರತದ ಜನ ಹೃದಯ ಗೆಲ್ಲಲು ಬಯಸುತ್ತಾರೆ'

ಲಿಸ್ಬನ್ (ಪೋರ್ಚುಗಲ್, ಪಿಟಿಐ): ಭಾರತೀಯರು ದೇಶಗಳನ್ನು ಗೆಲ್ಲಲು ಬಯಸುವುದಿಲ್ಲ, ಹೃದಯಗಳನ್ನು ಗೆಲ್ಲಲು ಇಷ್ಟಪಡುತ್ತಾರೆ ಎಂದು ಭಾರತದ ರಾಷ್ಟ್ರಪತಿ ದ್ರೌಪದಿ ಮುರ್ಮು ಹೇಳಿದರು.

ಲಿಸ್ಬನ್‌ನ 'ಚಂಪಾಲಿಮೌಡ್ ಸೆಂಟರ್ ಫಾರ್ ಅನ್‌ನೋನ್ಸ್'ನಲ್ಲಿ ಮಂಗಳವಾರ ಭಾರತ ಮೂಲದ ಸಂಶೋಧಕರ ಜತೆಗಿನ ಸಭೆಯಲ್ಲಿ ಅವರು ಮಾತನಾಡಿದರು.

ಭಾರತದಲ್ಲಿ ಮಹಿಳೆಯರ ಪಾತ್ರ ಹೇಗಿದೆ ಎಂಬ ಪ್ರಶ್ನೆಗೆ, 'ಸೀತಾರಾಮ, ಲಕ್ಷ್ಮೀನಾರಾಯಣ ಎನ್ನುವುದು ಭಾರತೀಯ ಸಂಸ್ಕೃತಿಯಲ್ಲೇ ಮಿಳಿತವಾಗಿದೆ' ಎಂದು ಉತ್ತರಿಸಿದರು.

ಪವನ್ ಕಲ್ಯಾಣ್ ಪುತ್ರನಿಗೆ ಗಾಯ

ಸಿಂಗಪುರ/ವಿಜಯವಾಡ (ಪಿಟಿಐ): ಸಿಂಗಪುರದ ಕಟ್ಟಡವೊಂದರಲ್ಲಿ ಮಂಗಳವಾರ ಬೆಂಕಿ ಅವಘಡ ಸಂಭವಿಸಿದ ಪರಿಣಾಮ ಬಾಲಕಿಯೊಬ್ಬಳು ಮೃತಪಟ್ಟಿದ್ದಾಳೆ. ಆಂಧ್ರಪ್ರದೇಶದ ಡಿಸಿಎಂ ಪವನ್ ಕಲ್ಯಾಣ್ ಪುತ್ರ ಸೇರಿದಂತೆ 20 ಮಂದಿ ಗಾಯಗೊಂಡಿದ್ದಾರೆ.

ಸಿಂಗಪುರದಲ್ಲಿ ನಡೆದ ಅವಘಡದಲ್ಲಿ ಪವನ್ ಕಲ್ಯಾಣ್ ಹಿರಿಯ ಪುತ್ರ ಮಾರ್ಕ್ ಶಂಕರ್ ಅವರು ಗಾಯಗೊಂಡಿದ್ದಾರೆ.

ಜೈಪುರ ಬಾಂಬ್ ಸ್ಫೋಟ ಪ್ರಕರಣ: ನಾಲ್ವರಿಗೆ ಜೀವಾವಧಿ ಶಿಕ್ಷೆ

ಜೈಪುರ (ಪಿಟಿಐ): 2008ರಲ್ಲಿ ಜೈಪುರದಲ್ಲಿ ನಡೆದ ಸರಣಿ ಬಾಂಬ್ ಸ್ಫೋಟ ಪ್ರಕರಣದ ನಾಲ್ವರು ಅಪರಾಧಿಗಳಿಗೆ ಇಲ್ಲಿನ ವಿಶೇಷ ನ್ಯಾಯಾಲಯವೊಂದು ಜೀವಾವಧಿ ಶಿಕ್ಷೆ ವಿಧಿಸಿದೆ.

ಸರ್ವಾರ್ ಅಜ್ಮಿ, ಶಾಬಾಜ್, ಸೈಫುರ್ ರೆಹಮಾನ್ ಮತ್ತು ಮೊಹಮ್ಮದ್ ಸೈಫ್ ಶಿಕ್ಷೆಗೆ ಗುರಿಯಾದವರು.

ಇವರನ್ನು ಐಪಿಸಿಯ ವಿವಿಧ ಸೆಕ್ಷನ್ನುಗಳು ಮತ್ತು ಯುಎಪಿಎ ಕಾಯ್ದೆ, ಸ್ಫೋಟಕ ವಸ್ತುಗಳ ಕಾಯ್ದೆಯ ಅಡಿಯಲ್ಲಿ ಅಪರಾಧಿಗಳು ಎಂದು ಘೋಷಿಸಲಾಗಿತ್ತು.

2008ರ ಮೇ 13ರಂದು ಜೈಪುರದಲ್ಲಿ ಸರಣಿ ಬಾಂಬ್ ಸ್ಫೋಟಗಳು ಸಂಭವಿಸಿದ್ದವು, ಇನ್ನೊಂದು ಬಾಂಬ್‌ಅನ್ನು ನಿಷ್ಕ್ರಿಯಗೊಳಿಸಲಾಗಿತ್ತು. ಬಾಂಬ್ ಸ್ಫೋಟಕ್ಕೆ ಸಿಲುಕಿ 71 ಮಂದಿ ಪ್ರಾಣ ಕಳೆದುಕೊಂಡಿದ್ದರು, 180 ಜನರಿಗೆ ಗಾಯಗಳಾಗಿದ್ದವು.

ಸ್ಫೋಟಕ್ಕೆ ಸಂಭವಿಸಿದ ಪ್ರತ್ಯೇಕ ಪ್ರಕರಣಗಳಲ್ಲಿ 2019ರ ಡಿಸೆಂಬರ್‌ನಲ್ಲಿ ನ್ಯಾಯಾಲಯವೊಂದು ಅಜ್ಮಿ, ಸೈಫ್, ರೆಹಮಾನ್ ಮತ್ತು ಮೊಹಮದ್ ಸಲ್ಮಾನ್‌ಗೆ ಮರಣ ದಂಡನೆಯನ್ನು ವಿಧಿಸಿತ್ತು. ಈ ಪ್ರಕರಣದಲ್ಲಿ ಶಾಬಾಜ್‌ನನ್ನು ದೋಷಮುಕ್ತಗೊಳಿಸಲಾಗಿತ್ತು.

ಮರಣ ದಂಡನೆಗೆ ಗುರಿಯಾದವರು ಈ ಆದೇಶವನ್ನು ಹೈಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ಅವರನ್ನು ಆ ಪ್ರಕರಣದಲ್ಲಿ ಹೈಕೋರ್ಟ್ ಖುಲಾಸೆಗೊಳಿಸಿದೆ.

ವಿಧಾನಸೌಧ ವೀಕ್ಷಣೆಗೆ ಇನ್ನು 'ಪ್ರವೇಶ ಶುಲ್ಕ'

ಒಂದನೇ ಪುಟದಿಂದ...

ವಿಧಾನಸೌಧ ಕಟ್ಟಡಕ್ಕೆ ಇತ್ತೀಚೆಗೆ ಶಾಶ್ವತ ದೀಪಾಲಂಕಾರ ಮಾಡಲಾಗಿದೆ. ಇದರಿಂದ, ಕಟ್ಟಡದ ಸೌಂದರ್ಯ ಹೆಚ್ಚಾಗಿದ್ದು, ಪ್ರವಾಸಿಗರು ವಿಧಾನಸೌಧ ವೀಕ್ಷಿಸಲು ಬರುತ್ತಿದ್ದಾರೆ. ಈ ವ್ಯವಸ್ಥೆ ಕಲ್ಪಿಸಿದರೆ ದೇಶೀಯ ಪ್ರವಾಸಿಗರಷ್ಟೇ ಅಲ್ಲದೆ, ವಿದೇಶಿಯರೂ ಹೆಚ್ಚಿನ ಸಂಖ್ಯೆಯಲ್ಲಿ ವಿಧಾನಸೌಧ ವೀಕ್ಷಿಸಲು ಬರುವ ನಿರೀಕ್ಷೆಯಿದೆ ಎಂದು ಪ್ರವಾಸೋದ್ಯಮ ಇಲಾಖೆ ಪ್ರಸ್ತಾವದಲ್ಲಿ ವಿವರಿಸಿದೆ.

ಡಿಪಿಎಆರ್ ಷರತ್ತು: ವಿಧಾನಸೌಧ ವೀಕ್ಷಣೆಗೆ ಬರುವ ಪ್ರವಾಸಿಗರನ್ನು ತಲಾ 30 ಜನರ ತಂಡಗಳಾಗಿ ಮಾಡಿ, ವೀಕ್ಷಣೆಗೆ ಅವಕಾಶ ಕಲ್ಪಿಸಬೇಕು. ಪ್ರತಿ ತಂಡಗಳ ಮೇಲ್ವಿಚಾರಣೆ ಮಾಡಲು ಪ್ರವಾಸೋದ್ಯಮ ಇಲಾಖೆಯಿಂದ ಪ್ರವಾಸಿ ಅಧಿಕಾರಿಗಳನ್ನು ನೇಮಿಸಬೇಕು. ಪ್ರವಾಸೋದ್ಯಮ ಇಲಾಖೆಯ ಉಪ ನಿರ್ದೇಶಕರನ್ನು ಉಸ್ತುವಾರಿ ಅಧಿಕಾರಿಯಾಗಿ ನೇಮಿಸಬೇಕು. ಪ್ರವಾಸಿಗರ ಸಂಖ್ಯೆ ಮತ್ತು ವಿವರವನ್ನು ಆಯಾ ದಿನ ವಿಧಾನಸೌಧದ ಭದ್ರತಾ ವಿಭಾಗಕ್ಕೆ ಸಲ್ಲಿಸಬೇಕು. ಈ ವ್ಯವಸ್ಥೆಗೆ ಅವಕಾಶ ಮಾಡಿಕೊಡಲು ಪ್ರವಾಸಿಗರು ಆನ್‌ಲೈನ್ ಮೂಲಕ ಟಿಕೆಟ್ ಪಡೆಯಲು ತಂತ್ರಾಂಶ ಅಭಿವೃದ್ಧಿಪಡಿಸಬೇಕು ಎಂದು ಪ್ರವಾಸೋದ್ಯಮ ಇಲಾಖೆಗೆ ಡಿಪಿಎಆರ್ ಸೂಚಿಸಿದೆ.

ಪ್ರವಾಸಿಗರಿಗೆ ನಿಗದಿಪಡಿಸುವ ಪ್ರವೇಶ ಶುಲ್ಕ ಜನಸ್ನೇಹಿ ಆಗಿರಬೇಕು. ಪ್ರವೇಶ ಶುಲ್ಕದಲ್ಲಿ ನಿರ್ದಿಷ್ಟ ಮೊತ್ತವನ್ನು ಸರ್ಕಾರದ ಖಾತೆಗೆ ಜಮೆ ಮಾಡಬೇಕು. ವಿಧಾನಸೌಧದ ಭದ್ರತೆಗೆ ಸಂಬಂಧಿಸಿದಂತೆ ಭದ್ರತಾ ವಿಭಾಗದ ಉಪ ಪೊಲೀಸ್ ಆಯುಕ್ತರು ನೀಡುವ ಸೂಚನೆಗಳನ್ನು ಕಡ್ಡಾಯವಾಗಿ ಪಾಲಿಸಬೇಕು. ಪ್ರವಾಸಿಗರ ಅಧಿಕೃತ ಗುರುತಿನ ಚೀಟಿ ಪರಿಶೀಲಿಸಿ, ಪ್ರವೇಶ ನೀಡಬೇಕು. ಪ್ರವಾಸಿಗರ ಪರಿವೀಕ್ಷಣೆಯ ಕುರಿತು ರೂಟ್ ಮ್ಯಾಪ್ ತಯಾರಿಸಿ ಅನುಮತಿ ಪಡೆದುಕೊಳ್ಳಬೇಕು.

ವೀಕ್ಷಣೆಗೆ ಬರುವವರಿಗೆ ಸೂಚನೆ: ವಿಧಾನಸೌಧದ ಆವರಣದ ಸ್ವಚ್ಛತೆ ಕಾಪಾಡಲು ಬದ್ಧರಾಗಿರಬೇಕು. ಡ್ರೋನ್ ಕ್ಯಾಮೆರಾ ಬಳಸಲು ಅವಕಾಶ ಇಲ್ಲ. ಪರಿವೀಕ್ಷಣೆಯ ಸಂದರ್ಭದಲ್ಲಿ ಕುಡಿಯುವ ನೀರು ಹೊರತುಪಡಿಸಿ ಇತರ ಯಾವುದೇ ಆಹಾರ ತಿಂಡಿ, ತಿನಿಸು ತರಬಾರದು. ಪ್ಲಾಸ್ಟಿಕ್ ಬಳಕೆ ಕಡ್ಡಾಯವಾಗಿ ನಿಷೇಧಿಸಲಾಗುವುದು. ವಿಧಾನಸೌಧ ಆವರಣದಲ್ಲಿ ವಾಹನ ನಿಲುಗಡೆಗೂ ಅವಕಾಶ ಇಲ್ಲ ಎಂದೂ ಡಿಪಿಎಆರ್ ತಿಳಿಸಿದೆ.

ಗೋಧ್ರಾ: ಮೂವರು ತಪ್ಪಿತಸ್ಥರು

ಅಹಮದಾಬಾದ್: 2002ರಲ್ಲಿ ಗೋಧ್ರಾದಲ್ಲಿ ಸಾಬರಮತಿ ಎಕ್ಸ್‌ಪ್ರೆಸ್ ರೈಲು ಬೋಗಿಗಳಿಗೆ ಬೆಂಕಿ ಹಚ್ಚಿದ್ದ ಪ್ರಕರಣದಲ್ಲಿ ತಪ್ಪಿತಸ್ಥರೆಂದು ಸಾಬೀತಾದ ಮೂವರನ್ನು ಗುಜರಾತ್‌ನ ಪಂಚಮಹಲ್ ಜಿಲ್ಲೆಯ ಬಾಲ ನ್ಯಾಯ ಮಂಡಳಿಯು (ಜೆಜೆಬಿ) 3 ವರ್ಷ ವೀಕ್ಷಣಾಲಯಕ್ಕೆ ಕಳುಹಿಸಿದೆ.

ಪ್ರಕರಣ ನಡೆದು 23 ವರ್ಷಗಳ ನಂತರ ತೀರ್ಪು ಹೊರಬಿದ್ದಿದೆ. ಘಟನೆ ನಡೆದ ಸಂದರ್ಭದಲ್ಲಿ ಈ ಮೂವರು 18 ವರ್ಷಕ್ಕಿಂತ ಕೆಳಗಿನವರಾಗಿದ್ದರು.

ಬೆಂಕಿ ಹಚ್ಚಿದ್ದ ಪ್ರಕರಣದಲ್ಲಿ ಬಂಧನಕ್ಕೊಳಗಾದವರಲ್ಲಿ ಕಾನೂನಿನ ಜೊತೆ ಸಂಘರ್ಷಕ್ಕೆ ಒಳಗಾದ ಒಟ್ಟು ಐವರು ಬಾಲಕರು ಇದ್ದರು.

ಒಬ್ಬ ಆರೋಪಿ ವಿಚಾರಣೆ ಅವಧಿಯಲ್ಲಿ ಮೃತಪಟ್ಟರೆ, ಇನ್ನೊಬ್ಬನನ್ನು ಜೆಜೆಬಿ ಖುಲಾಸೆಗೊಳಿಸಿದೆ.

ಮಂಗಳವಾರ ತೀರ್ಪು ಪ್ರಕಟಿಸಿದ ಗೋಧ್ರಾ ಜೆಜೆಬಿ ಪ್ರಧಾನ ಮ್ಯಾಜಿಸ್ಟ್ರೇಟ್ ಕೆ.ಎಸ್.ಮೋದಿ ಅವರು ಮೂವರಿಗೂ ತಲಾ ₹15 ಸಾವಿರ ದಂಡ ವಿಧಿಸಿದರು.

ಸುಶೀಲಾ ಹಾವನೂರು ನಿಧನ

ಬೆಂಗಳೂರು: ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ದಿವಂಗತ ಎಲ್.ಜಿ. ಹಾವನೂರು ಅವರ ಪತ್ನಿ ಸುಶೀಲಾ ಹಾವನೂರು (92) ಅವರು ಸೋಮವಾರ ಸಂಜೆ ನಿಧನರಾದರು.





ಸುಶೀಲಾ


ಸುಶೀಲಾ ಅವರು ಪೀಣ್ಯದಲ್ಲಿರುವ ಮಗನ ತೋಟದ ಮನೆಯಲ್ಲಿ ನೆಲಸಿದ್ದರು. ಅನಾರೋಗ್ಯದ ಕಾರಣದಿಂದ ಸೋಮವಾರ ಬೆಳಿಗ್ಗೆ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಸಂಜೆ 6 ಗಂಟೆಗೆ ಆಸ್ಪತ್ರೆಯಲ್ಲಿ ಕೊನೆಯುಸಿರೆಳೆದರು.

ಮೃತರಿಗೆ ನಾಲ್ವರು ಪುತ್ರಿಯರು ಮತ್ತು ಇಬ್ಬರು ಪುತ್ರರು ಇದ್ದಾರೆ. ಹರಿಶ್ಚಂದ್ರ ಘಾಟ್‌ನಲ್ಲಿರುವ ಚಿತಾಗಾರದಲ್ಲಿ ಮಂಗಳವಾರ ಸಂಜೆ ಮೃತರ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಅವರ ಕುಟುಂಬದ ಮೂಲಗಳು ತಿಳಿಸಿವೆ.

ತಂತ್ರಜ್ಞಾನ







ಉತ್ತಮ ಪರಿಹಾರ

ಹಲವು ಸಮಸ್ಯೆಗಳಿಗೆ ಈ ಹೊಸ ಪೇಸ್‌ಮೇಕರ್ ಉತ್ತಮ ಪರಿಹಾರವಾಗಲಿದೆ. ಇದು ಕೇವಲ ಒಂದು ಅಕ್ಕಿಕಾಳಿನ ಗಾತ್ರ ಇರುತ್ತದೆ. ಅಲ್ಲದೇ ಇದನ್ನು ಸಂಕೀರ್ಣ ಶಸ್ತ್ರಚಿಕಿತ್ಸೆ ಮಾಡಿ ಅಳವಡಿಸುವ ಅಗತ್ಯವಿಲ್ಲ. ಆ್ಯಂಜಿಯೋಗ್ರಾಂ ಅಥವಾ ಆ್ಯಂಜಿಯೋಪ್ಲಾಸ್ಟಿ ಮಾಡುವಂತೆ ರಕ್ತನಾಳದ ಮೂಲಕ ಒಳಪ್ರವೇಶಿಸಿ ಈ ಅಕ್ಕಿಕಾಳಿನ ಗಾತ್ರದ ಪೇಸ್‌ಮೇಕರನ್ನು ನೇರವಾಗಿ ಹೃದಯದ ಒಳಗೆ ಇರಿಸಲಾಗುತ್ತದೆ. ದೇಹದ ಶಾಖ ಹಾಗೂ ಹೊರಮೈನ ಅತಿ ಸಾಧಾರಣ ಬೆಳಕಿನಿಂದಲೇ ಇದು ಕೆಲಸ ಮಾಡುತ್ತದೆ.

ಇಂದಿನ ವೈದ್ಯಕೀಯ ದತ್ತಾಂಶದ ಪ್ರಕಾರ ಪ್ರತಿ ನೂರು ನವಜಾತ ಶಿಶುಗಳಲ್ಲಿ ಒಂದು ಶಿಶುವಿಗೆ ಹೃದಯದ ಸಮಸ್ಯೆ ಇದೆ. ಇದು ಭಾರತದಂತಹ ಅತಿ ಹೆಚ್ಚು ಜನಸಂಖ್ಯೆ ಇರುವ ರಾಷ್ಟ್ರಗಳಲ್ಲಿ ದೊಡ್ಡ ಸಂಖ್ಯೆಯೇ ಆಗುತ್ತದೆ. ಈ ಸಮಸ್ಯೆ ಇರುವ ಮಕ್ಕಳು ಬೆಳೆದಂತೆ ಅನೇಕ ಇತರ ವೈದ್ಯಕೀಯ ಸಮಸ್ಯೆಗಳಿಗೂ ಈಡಾಗಬಹುದು. ಈ ಹೊಸ ಸಾಧನವು ತೀರಾ ಸಣ್ಣಗಿರುವ ಕಾರಣ, ನವಜಾತ ಶಿಶುವಿಗೂ ಈ ಸಾಧನವನ್ನು ಅಳವಡಿಸಬಹುದಾಗಿದೆ. ವಯಸ್ಕ ರೋಗಿಗಳಿಗೂ ಈ ಸಾಧನವನ್ನು ಅಳವಡಿಸಬಹುದು.

ಅಕ್ಕಿಕಾಳಿನ ಗಾತ್ರದ ಪೇಸ್‌ಮೇಕರ್

ನೇಸರ ಕಾಡನಕುಪ್ಪೆ

ಹೃದಯದ ಮಿಡಿತವನ್ನು ಹದವಾಗಿ ನಿಯಂತ್ರಿಸುವ 'ಪೇಸ್‌ಮೇಕರ್' (ಗತಿನಿಯಂತ್ರಕ) ಸಾಧನವು ವೈದ್ಯಕೀಯ ಲೋಕದಲ್ಲಿ ಬಹು ಮಹತ್ವದ ಸ್ಥಾನವನ್ನು ಪಡೆದಿದೆ. ಹೃದಯದ ಸಮಸ್ಯೆ ಇರುವ ರೋಗಿಗಳಲ್ಲಿ ಈ ಸಾಧನವು ಹೃದಯಸ್ತಂಭನ ಆಗದಂತೆ, ರಕ್ತದ ಒತ್ತಡ ಸರಿ ಇರುವಂತೆ ನೋಡಿಕೊಳ್ಳುತ್ತದೆ. ಈ ಸಾಧನದೊಳಗೆ ಒಂದು ಪುಟ್ಟ ಬ್ಯಾಟರಿಯೂ ಇರುತ್ತದೆ. ಆದರೂ ಈ ಸಾಧನದ ಗಾತ್ರ ಕೊಂಚ ದೊಡ್ಡದೇ; ಸುಮಾರು 50 ಗ್ರಾಂ ತೂಕವಿರುವ ಸಾಧನ.

ಈ ಗಾತ್ರದ ಕಾರಣದಿಂದಾಗಿ ಈ ಸಾಧನದ ಯಶಸ್ವಿ ಅಳವಡಿಕೆ ಕೊಂಚ ಸವಾಲಿನ ವಿಷಯ. ಅದಕ್ಕಾಗಿಯೇ ಇದಕ್ಕೆ ಸಂಬಂಧಿಸಿದ ಶಸ್ತ್ರಚಿಕಿತ್ಸೆಯೂ ದುಬಾರಿ. ಅಲ್ಲದೇ, ಎಲ್ಲ ರೋಗಿಗಳಿಗೂ ಇದನ್ನು ಯಶಸ್ವಿಯಾಗಿ ಅಳವಡಿಸಲಾಗದು. ದೇಹದ ಗಾತ್ರ ತೀರ ಸಣ್ಣ ಇರುವ ರೋಗಿಗಳು, ಮಕ್ಕಳಲ್ಲಿ ಈ ಪೇಸ್‌ಮೇಕರ್ ಅಳವಡಿಕೆ ಕೆಲವೊಮ್ಮೆ ಅಸಾಧ್ಯವೇ ಸರಿ. ಈ ಸವಾಲಿಗೆ ಇದೀಗ ಉತ್ತರ ದೊರೆತಿದೆ. ಕೇವಲ ಒಂದು ಅಕ್ಕಿಕಾಳಿನಷ್ಟು ಗಾತ್ರವಿರುವ ಪೇಸ್‌ಮೇಕರ್‌ನ ಸಂಶೋಧನೆ ಆಗಿದೆ.

ಅಮೆರಿಕದ ನಾರ್ತ್ ವೆಸ್ಟರ್ನ್ ವಿಶ್ವವಿದ್ಯಾಲಯದ ಬಯೋ ಎಲೆಕ್ಟ್ರಾನಿಕ್ಸ್ ವಿಭಾಗದ ವಿಜ್ಞಾನಿ ಜಾನ್ ಎ. ರಾಜರ್ಸ್ ಅವರ ನೇತೃತ್ವದ ತಂಡವು ಅಕ್ಕಿಕಾಳಿನ ಗಾತ್ರದ ಈ ಪೇಸ್‌ಮೇಕರನ್ನು ಸಂಶೋಧಿಸಿದೆ. ಇದು ತೆಳ್ಳಗಿದೆ; ಕೇವಲ ಬೆಳಕಿನ ಶಕ್ತಿ ಹಾಗೂ ದೇಹದ ಶಾಖದ ಶಕ್ತಿಯಿಂದಲೇ ಕಾರ್ಯನಿರ್ವಹಿಸಬಲ್ಲದು. ಎಂದರೆ, ಈ ಸಾಧನಕ್ಕೆ ಬ್ಯಾಟರಿಯ ಅವಶ್ಯಕತೆಯೂ ಇಲ್ಲ. ಈ ಸಂಶೋಧನೆಯ ವಿವರ 'ನೇಚರ್' ವೈಜ್ಞಾನಿಕ ನಿಯತಕಾಲಿಕೆಯಲ್ಲಿ ಪ್ರಕಟವಾಗಿದೆ.

ಏನಿದರ ವೈಶಿಷ್ಟ್ಯ?

ಸದ್ಯಕ್ಕೆ ಇದು ವಿಶ್ವದ ಅತಿ ಚಿಕ್ಕ ಪೇಸ್‌ಮೇಕರ್. ಇದರ ಗಾತ್ರವೇ ಇದರ ವಿಶೇಷ. ಸಾಮಾನ್ಯವಾಗಿ ಸಾಂಪ್ರದಾಯಿಕ ಪೇಸ್‌ಮೇಕರನ್ನು ದೇಹದ ಭುಜದ ಮೂಳೆಯ ಕೆಳಗೆ ಅಳವಡಿಸಲಾಗುತ್ತದೆ. ಒಂದು ಸಣ್ಣ ರಂಧ್ರವನ್ನು ಮಾಡಿ ಅದರ ಮೂಲಕ ಪೇಸ್‌ಮೇಕರನ್ನು ತೂರಿಸಿ, ಪೇಸ್‌ಮೇಕರ್‌ಗೆ ಅಂಟಿಕೊಂಡಿರುವ ವೈರ್‌ಗಳನ್ನು ಹೃದಯದ ಕವಾಟಗಳಿಗೆ ನೇರವಾಗಿ ಅಳವಡಿಸಲಾಗುತ್ತದೆ. ಈ ಶಸ್ತ್ರಚಿಕಿತ್ಸೆ ತುಂಬ ಸಂಕೀರ್ಣವಾದುದು. ಅತಿ ನಿಪುಣ ಶಸ್ತ್ರಚಿಕಿತ್ಸಕರು ಇದಕ್ಕೆ ಬೇಕಿರುತ್ತಾರೆ. ಹಾಗಾಗಿ, ಇದು ದುಬಾರಿಯೂ ಹೌದು. ಒಂದು ಸಾಮಾನ್ಯ ಪೇಸ್‌ಮೇಕರ್‌ನ ಬೆಲೆ ಭಾರತದಲ್ಲಿ ಇಂದು ₹ 45 ಸಾವಿರ ₹ 3 ಲಕ್ಷ ಇದೆ. ಶಸ್ತ್ರಚಿಕಿತ್ಸೆಯ ಖರ್ಚು ಸರಿಸುಮಾರು ₹ 1.8 ಲಕ್ಷ ದಿಂದ ₹ 3 ಲಕ್ಷ ಆಗುತ್ತದೆ. ಅಂದರೆ ಒಟ್ಟಾರೆಯಾಗಿ ಸರಾಸರಿ ₹ 3 ಲಕ್ಷದವರೆಗೂ ಖರ್ಚು ಬರುತ್ತದೆ. ಒಂದು ಪೇಸ್‌ಮೇಕರ್ ಸಾಧರಣ 5ರಿಂದ 15 ವರ್ಷಗಳ ಕಾಲ ಬಾಳಿಕೆ ಬರಬಹುದು.

ಈ ಮೇಲೆ ನೀಡಿದ ಮಾಹಿತಿಯು ಬದಲಾಗಬಹುದು. ಅಂದರೆ, ವ್ಯಕ್ತಿಯಿಂದ ವ್ಯಕ್ತಿಗೆ, ಜಾಗದಿಂದ ಜಾಗಕ್ಕೆ, ಪ್ರಕರಣದಿಂದ ಪ್ರಕರಣಕ್ಕೆ ವ್ಯತ್ಯಾಸಗಳಿರುತ್ತವೆ. ಒಟ್ಟಾರೆಯಾಗಿ ಈ ಪ್ರಕ್ರಿಯೆ ದುಬಾರಿ ಹಾಗೂ ಸಂಕೀರ್ಣವಾದುದು ಎಂದೇ ಹೇಳಬಹುದು. ಜೊತೆಗೆ, ಮೇಲೆ ಉದಾಹರಿಸಿದಂತೆ ಮಕ್ಕಳಲ್ಲಿ ಪೇಸ್‌ಮೇಕರ್‌ನ ಅಳವಡಿಕೆ ಬಹು ಸಂಕೀರ್ಣವಾದುದು. ಮಕ್ಕಳ ಪೇಸ್‌ಮೇಕರ್ ದೊರೆಯುತ್ತದೆಯಾದರೂ, ಅದರ ಬಾಳಿಕೆ ತೀರಾ ಕಡಿಮೆ. ಮಕ್ಕಳ ದೇಹ ದಿನದಿಂದ ದಿನಕ್ಕೆ ಬೆಳೆಯುವ ಕಾರಣ, ಪೇಸ್‌ಮೇಕರ್ ಚಿಕ್ಕದಾಗಿ ಅದು ಬಳಕೆಗೆ ಯೋಗ್ಯವಾಗದಂತೆ ಆಗುತ್ತದೆ. ಆಗ ಅದನ್ನು ಬದಲಿಸಬೇಕು. ಆಗ, ಮತ್ತೆ ಅವರು ಈ ದುಬಾರಿ ಹಾಗೂ ಸಂಕೀರ್ಣ ಶಸ್ತ್ರಚಿಕಿತ್ಸೆಗೆ ಒಳಗಾಗಬೇಕಾಗುತ್ತದೆ. ❖

'ಪಿಡಿಎಫ್' ಎಂಬ ಕ್ಷಿಪಣಿಯ ದಾಳಿ!

ಕೃಷ್ಣ ಭಟ್

'ಪಿಡಿಎಫ್' ಅನ್ನು 1992ರಲ್ಲಿ ಹೊತ್ತಿಗೆ ಅಡೋಬ್ ಸಂಸ್ಥೆ ಪರಿಚಯಿಸಿದಾಗ ಅದೊಂದು ಅತ್ಯಂತ ಸುರಕ್ಷಿತ ಫೈಲ್ ಫಾರ್ಮ್ಯಾಟ್ ಎಂದು ಹೆಸರಾಗಿತ್ತು. ಕೆಲವು ಫೈಲ್ ಫಾರ್ಮ್ಯಾಟ್‌ಗಳು ಕಾಲ ಸರಿದಂತೆ ಮರೆಯಾದವು. ಆದರೆ, ಪಿಡಿಎಫ್ (PDF) ಜನಪ್ರಿಯತೆ ಹಾಗೆಯೇ ಮುಂದುವರಿದಿದೆ. ಅಷ್ಟೇ ಅಲ್ಲ, ಕಾಲ ಕಾಲಕ್ಕೆ ಅದಕ್ಕೆ ಬೇಡಿಕೆಯೂ ಹೆಚ್ಚಾಗಿದೆ. ಕಳೆದ ಕೆಲವು ವರ್ಷಗಳಿಂದ ಜನರ ಕೈಗೆ ಸ್ಮಾರ್ಟ್‌ಫೋನ್ ಬಂದಾಗಿಂದಲೂ ಪಿಡಿಎಫ್ ಬಳಸುವವರ ಸಂಖ್ಯೆಯೂ ಹೆಚ್ಚಾಗಿದೆ. ಜೊತೆಗೆ, ಅದೊಂದು ವಿಶ್ವಾಸಾರ್ಹ ಫೈಲ್ ಫಾರ್ಮ್ಯಾಟ್ ಎಂಬ ನಂಬಿಕೆಯೂ ಬಂದಿದೆ.

ಆದರೆ, ಈಗ ಹಾಗಿಲ್ಲ!

ಯಾರಾದರೂ ಪಿಡಿಎಫ್ ಕಳುಹಿಸಿದರೆ ಅದರ ಮೇಲೆ ನಾವೊಂದು ಅನುಮಾನದ ಹದ್ದಿನ ಕಣ್ಣನ್ನೂ ಇಡಬೇಕಾಗುತ್ತದೆ! ಕಳೆದ ಒಂದು ವರ್ಷದಲ್ಲಿ ಇಡೀ ವಿಶ್ವದಲ್ಲಿ 40 ಕೋಟಿ ಪಿಡಿಎಫ್‌ಗಳನ್ನು ಜನರು ಒಬ್ಬರಿಗೊಬ್ಬರು ಕಳುಹಿಸಿಕೊಂಡಿದ್ದಾರೆ. ಆದರೆ, ಅಚ್ಚರಿಯ ಮತ್ತು ಆಘಾತಕರ ಸಂಗತಿಯೆಂದರೆ, ಇಡೀ ವಿಶ್ವದಲ್ಲಿ ನಡೆದ ಶೇ 68ರಷ್ಟು ಸೈಬರ್ ದಾಳಿಗಳು ಪಿಡಿಎಫ್ ಮೂಲಕವೇ ನಡೆದಿವೆಯಂತೆ!

ಪಿಡಿಎಫ್‌ಗಳನ್ನು ಅಸಲಿ ಕಾಗದಪತ್ರಗಳು ಎಂಬ ರೀತಿಯಲ್ಲೇ ಕಳುಹಿಸಲಾಗುತ್ತದೆ. ಇದರಲ್ಲಿ ಯುಆರ್‌ಎಲ್ ಲಿಂಕ್‌ಗಳು, ಕೋಡ್ ಅಥವಾ ಅಪಾಯಕಾರಿ ಕಂಟೆಂಟ್ ಅನ್ನು ಅಡಗಿಸಿಡಲಾಗಿರುತ್ತದೆ. ಹೀಗೆ ಬಂದ ಪಿಡಿಎಫ್ ತೆರೆದರೆ, ಅಲ್ಲಿಗೆ ನಮ್ಮ ಮೊಬೈಲ್ ಅಥವಾ ಕಂಪ್ಯೂಟರ್‌ನಲ್ಲಿರುವ ಎಲ್ಲ ಮಾಹಿತಿಯನ್ನೂ ಪಡೆದುಕೊಳ್ಳಬಹುದಾದಷ್ಟು ಅತ್ಯಾಧುನಿಕ ಹ್ಯಾಕಿಂಗ್ ತಂತ್ರವನ್ನು ಈಗ ಬಳಸಲಾಗುತ್ತಿದೆ.

ನಮ್ಮ ಸಿಸ್ಟಮ್‌ಗಳು ಮತ್ತು ಸ್ಮಾರ್ಟ್‌ಫೋನ್‌ಗಳಲ್ಲಿರುವ ಆ್ಯಂಟಿವೈರಸ್‌ಗಳು ಕೂಡ ಸ್ಕ್ಯಾನ್ ಮಾಡಲು ಸಾಧ್ಯವಾಗದ ಲಿಂಕ್‌ಗಳನ್ನು ಈ ಪಿಡಿಎಫ್‌ನಲ್ಲಿ ಅಡಗಿಸಿಡಲಾಗುತ್ತದೆ. ಹೀಗಾಗಿ, ಇಂತಹ ಪಿಡಿಎಫ್ ಇರುವ ಇಮೇಲ್ ಅಥವಾ ಮೆಸೇಜ್ ಬಂದಾಗ ಅದನ್ನು ನಮ್ಮ ಆ್ಯಂಟಿವೈರಸ್‌ಗಳು ನಮ್ಮನ್ನು ಎಚ್ಚರಿಸುವುದೂ ಇಲ್ಲ ಸ್ವಯಂಚಾಲಿತವಾಗಿ ಅವುಗಳನ್ನು ಅಳಿಸುವುದೂ ಇಲ್ಲ. ಅದನ್ನು ತೆರೆದಾಗಲೇ ನಮಗೆ ನಾವು ಮೋಸ ಹೋಗಿದ್ದೇವೆ ಎಂದು ಗೊತ್ತಾಗುತ್ತದೆ. ಅಷ್ಟೇ ಯಾಕೆ, ನಾವು ಮೋಸ ಹೋಗಿದ್ದೇವೆ ಎಂದು ಕೂಡ ಕೆಲವು ಬಾರಿ ಗೊತ್ತಾಗುವುದಿಲ್ಲ. ನಮ್ಮ ಎಲ್ಲ ಮಾಹಿತಿಯನ್ನು ಅವರು ತೆಗೆದುಕೊಂಡು, ನಮ್ಮ ಖಾತೆಯಲ್ಲಿರುವ ಹಣವನ್ನು ಗುಳುಂ ಮಾಡಿದಾಗಲೇ ನಮಗೆ ನಾವು ಮೋಸ ಹೋಗಿರುವುದು ಅರಿವಿಗೆ ಬರುತ್ತದೆ.

ಈಗ ಸಾಮಾನ್ಯವಾಗಿ ಆ್ಯಂಟಿವೈರಸ್‌ಗಳಲ್ಲಿ ಎಐ ಕೂಡ ಅಳವಡಿಸಲಾಗಿರುತ್ತದೆ. ಆದರೆ, ಅದರ ಗಮನಕ್ಕೂ ಬರದಂತೆ ಹ್ಯಾಕರ್‌ಗಳು ಚಾಣಾಕ್ಷತೆ ಬಳಸಿ ಮಶಿನ್ ಲರ್ನಿಂಗ್‌ಗೂ ಪರ್ಯಾಯವನ್ನು ಕಂಡುಕೊಂಡಿದ್ದಾರೆ. ಇದರಿಂದ ಯಾವುದೇ ಹಂತದಲ್ಲೂ ಮಶಿನ್‌ಗಳಿಗೆ ಈ ಮಾನವರ ಕುಕೃತ್ಯ ಅರಿವಿಗೆ ಬರುವುದಿಲ್ಲ.

ಸಾಮಾನ್ಯವಾಗಿ ತೆರಿಗೆ ಪಾವತಿಯ ಸಮಯದಲ್ಲಿ ಹಾಗೂ ಇತರ ಕಾಗದಪತ್ರಗಳ ಶೇರ್ ಮಾಡಿಕೊಳ್ಳುವ ಸಮಯದಲ್ಲಿ ಈ ಪಿಡಿಎಫ್ ಹ್ಯಾಕರ್‌ಗಳು ಸಕ್ರಿಯವಾಗಿರುತ್ತಾರೆ. ಆ ಸಮಯದಲ್ಲಿ ಜನರು ಹೆಚ್ಚು ಹೆಚ್ಚು ಕಾಗದಪತ್ರಗಳನ್ನು ಒಬ್ಬರಿಗೊಬ್ಬರು ಕಳುಹಿಸಿಕೊಳ್ಳುತ್ತಿರುತ್ತಾರೆ. ಹೀಗಾಗಿ, ಇಂತಹ ಪಿಡಿಎಫ್‌ಗಳನ್ನು ಸುಲಭವಾಗಿ ಜನರು ನಂಬುವ ಸಾಧ್ಯತೆ ಹೆಚ್ಚಿರುತ್ತದೆ.

ಈ ಹಿಂದೆಯೂ ಪಿಡಿಎಫ್‌ಗಳನ್ನು ಹ್ಯಾಕರ್‌ಗಳು ಬಳಸಿಕೊಂಡಿದ್ದರು. ಆದರೆ, ಆಗೆಲ್ಲ ಪಿಡಿಎಫ್ ರೀಡರ್‌ಗಳಲ್ಲಿರುವ ಲೋಪದೋಷಗಳನ್ನೇ ತಮ್ಮ ಅನುಕೂಲಕ್ಕೆ ಬಳಸಿಕೊಂಡಿದ್ದರು. ಆಮೇಲೆ ಅಡೋಬ್ ಅದನ್ನು ಅಪ್‌ಡೇಟ್ ಮಾಡಿ, ಸುಧಾರಿಸಿದ ಮೇಲೆ ಈ ಸಮಸ್ಯೆ ತಪ್ಪಿತ್ತು. ಹೀಗಾಗಿ, ಈಗ ಹ್ಯಾಕರ್‌ಗಳು ಸೋಷಿಯಲ್ ಇಂಜಿನಿಯರಿಂಗ್ ಮತ್ತು ಲಿಂಕ್‌ಗಳನ್ನು ಅಡಗಿಸಿಡುವ ತಂತ್ರವನ್ನು ಕಲಿತುಕೊಂಡಿದ್ದಾರೆ. ಹೀಗಾಗಿ, ಇದನ್ನು ಪತ್ತೆ ಮಾಡುವುದು ಭಾರಿ ಕಷ್ಟದ್ದಾಗಿದೆ.

ಸಾಮಾನ್ಯವಾಗಿ ನಮಗೆ ಹ್ಯಾಕರ್‌ಗಳು ಕಳುಹಿಸುವ ಪಿಡಿಎಫ್‌ಗಳಲ್ಲಿ ಲಿಂಕ್‌ಗಳು ಇರುತ್ತವೆ. ಇವು ಅಮೆಜಾನ್, ಡೊಕುಸೈನ್ ಹಾಗೂ ಅಕ್ರೊಬಾಟ್ ರೀಡರ್‌ನಂತಹ ವಿಶ್ವಾಸಾರ್ಹ ಬ್ರ್ಯಾಂಡ್‌ಗಳ ಹೆಸರು ಮತ್ತು ಲೋಗೋ ಜೊತೆಗೆ ಹ್ಯಾಕರ್‌ಗಳು ಕಳುಹಿಸುತ್ತಾರೆ. ಇಂತಹ ಪಿಡಿಎಫ್‌ಗಳು ಬಂದ ತಕ್ಷಣ ನಾವು ಇದನ್ನು ಕ್ಲಿಕ್ ಮಾಡುತ್ತೇವೆ. ಕ್ಲಿಕ್ ಮಾಡಿದ ಕೂಡಲೇ ಅದು ನಮ್ಮನ್ನು ಫಿಶಿಂಗ್ ಸೈಟ್‌ಗಳಿಗೆ ಕರೆದೊಯ್ಯುತ್ತವೆ ಅಥವಾ ಮಾಲ್‌ವೇರ್ ಇರುವ ಫೈಲ್ ಡೌನ್‌ಲೋಡ್ ಆಗುತ್ತದೆ. ಸಾಮಾನ್ಯವಾಗಿ ಯುಆರ್‌ಎಲ್ ಅನ್ನು ಕಳುಹಿಸಿದರೆ ಅದನ್ನು ಸಿಸ್ಟಮ್‌ಗಳು ಪರಿಶೀಲನೆ ಮಾಡುತ್ತವೆ. ಆದರೆ, ಅದನ್ನೂ ಮರೆ ಮಾಡುವ ತಂತ್ರಗಳನ್ನು ಹ್ಯಾಕರ್‌ಗಳು ಕಲಿತುಕೊಂಡಿದ್ದಾರೆ. ಸಿಸ್ಟಮ್‌ಗೆ ಅದೊಂದು ಯುಆರ್‌ಎಲ್ ಎಂದೇ ಗೊತ್ತಾಗದ ಹಾಗೆ ಅದನ್ನು ಅಡಗಿಸಿಡುತ್ತಾರೆ. ಹೀಗಾಗಿ, ಯಾರಾದರೂ ಪಿಡಿಎಫ್ ಕಳುಹಿಸಿದರೆ ಮೊದಲು ಕಳುಹಿಸಿದವರು ಪರಿಚಯದವರೇ ಎಂದು ನೋಡಿಕೊಳ್ಳಿ. ಪರಿಚಯದವರು ಕಳುಹಿಸಿದರೂ ಕೂಡ ಸಂಬಂಧವಿಲ್ಲದ ಏನನ್ನೋ ಕಳುಹಿಸಿದ್ದರೆ, ತೆರೆಯಬೇಡಿ. ಇಂತಹ ಪಿಡಿಎಫ್ ತೆರೆಯುವುದಕ್ಕೂ ಮೊದಲು ಕಳುಹಿಸಿದವರ ಜೊತೆಗೆ ಮಾತನಾಡಿಕೊಳ್ಳಿ. ಪರಿಚಯದವರಲ್ಲದ ಯಾರೋ ಕಳುಹಿಸಿದರೆ ತಕ್ಷಣ ಡಿಲೀಟ್ ಮಾಡಿ.

ಹೀಗಾಗಿ, ಕೆಲವು ವರ್ಷಗಳ ಹಿಂದೆ ಅತ್ಯಂತ ವಿಶ್ವಾಸಾರ್ಹವಾಗಿದ್ದ ಪಿಡಿಎಫ್ ಈಗ ಅಪಾಯಕಾರಿ ಮಾಲ್‌ವೇರ್‌ಗಳ ಅಡಗುತಾಣವಾಗಿ ಕೆಲಸ ಮಾಡುತ್ತಿವೆ. ನಮ್ಮ ಎಚ್ಚರಿಕೆಯಿಂದ ನಾವು ಇದ್ದರೆ ಮಾತ್ರ ಇಂಥ ಅಪಾಯದಿಂದ ನಮ್ಮನ್ನು ನಾವು ರಕ್ಷಿಸಿಕೊಳ್ಳಬಹುದು. ❖



ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

PUC-CET:CHEMISTRY

MULTIPLE CHOICE QUESTIONS

52) $A_{(g)} \xrightarrow{\Delta} P_{(g)} + Q_{(g)} + R_{(g)}$, Follows first order kinetics with **a half-life of 69.3s at 500°C. Starting from the gas 'A' enclosed in a container at 500°C and at a pressure of 0.4 atm, the total pressure of the system after 230 s will be......................**

(a) 1.15 atm (b) 1.32 atm
(c) 1.22 atm (d) 1.12 atm

Soln: d:

$t_{1/2} = 69.3s$, $t = 230$ s, $a = 0.4$ atm

For first order reaction,

$$k = \frac{0.693}{t_{1/2}} = \frac{0.693}{69.3} = 0.01s^{-1}$$

$$k = \frac{2.303}{t}\log\frac{a}{a-x} = \frac{2.303}{230}\log\frac{0.4}{0.4-x}$$

$$0.01 = \frac{2.303}{230}\log\frac{.4}{0.4-x} = 0.01\log\frac{0.4}{0.4-x}$$

$$\frac{0.01}{0.01} = \log\frac{0.4}{0.4-x} \Rightarrow 1 = \text{loog}\frac{.4}{0.4-x}$$

$$\text{Anti}\log\text{ of }1 = \frac{0.4}{0.4-x} \Rightarrow 10 = \frac{0.4}{0.4-x}$$

$$x = 0.36$$

for the given reaction,

	$A_{(g)} \xrightarrow{\Delta}$	$P_{(g)}$ +	$Q_{(g)}$ +	$R_{(g)}$
Initial	0.4	0	0	0
Final	0.4−0.36	0.36	0.36	0.36

Total pressure

$= (0.4 - 0.36) + (3 \times 0.36) = 1.12$ atm

53) Graphite is a good conductor of electricity due to the presence of ....

a) long pair of electrons b) cations
c) free valence electrons
d) anions

Ans:-b

54) Which of the following oxides behave as conductor or insulator depending upon temperature?

a) TiO b) SiO_2
c) TiO_3 d) MgO

Ans:- C

55) Which of the following oxides show electrical properties like metals?

a) SiO_2 b) MgO
c) SO_2(s) d) CrO_2

Ans:-d

56) The lattice site in a pure crystal *cannot* be occupied by

a) molecule b) ion
c) electron d) atom

Ans: C

57) Cations are present in the interstitial sites in ....

a) Frenkel defect b) Schottky defect
c) vacancy defect d) Metal deficiency defect

Ans: a

58) On treating 100 mL of 0.1 M aqueous solution of the complex $CrCl_3.6H_2O$ with excess of $AgNO_3$, 2.86 g of AgCl was obtained. The complex is:

(A) $[Cr(H_2O)_3Cl_3].3H_2O$

(B) $[Cr(H_2O)_4Cl_2]Cl.2H_2O$

(C) $[Cr(H_2O)_5Cl]Cl_2.H_2O$

(D) $[Cr(H_2O)_6]Cl_3$

Ans:- C

59) Schottky defect is observed in crystals when ....

a) some cations move from their lattice site to interstitial sites.
b) equal number of cations and anions are missing from the lattice.
c) some lattice sites are occupied by electrons.
d) some impurity is present in the lattice.

Ans:-b

60) Which of the following is true about the charge acquired by *p*-type semiconductors?

a) positive b) neutral
c) negative
d) depends on concentration of *p* impurity

Ans:- d

61) To get a n-type semiconductor from silicon, it should be doped with a substance with valency ....

a) 2 b) 1
c) 3 d) 5


Ans:- d

62) Which of the following possess net dipole moment?

a) BF_3 b) SO_2
c) CO_2 d) $BeCl_2$

Ans: (b)

Expln:- By seeing geometry, we can easily find out the net dipole moment $BeCl_2$ and CO_2 have linear geometry, BF_3 has triangular planar geometry with zero dipole moment. While SO_2 geometry is in a bent shape.



62) The number of -bonds and -bonds present in naphthalene are respectively

a) 5, 19 b) 6, 19
c) 5, 20 d) 5, 11

Ans: (a)

NEET:PHYSICS

9) White light reflected from a soap film (RI=1.5) has a maxima at 600 nm and a minima at 450 nm with no minimum in between. Then the thickness of the film is

(a) 1 (b) 2
(c) 3 (d) 4

Ans:- (c)

Expln- (........Contd)

In given condition $2\mu t = (2n + 1)\frac{\lambda}{2}$

$$2 \times 1.5 \times t = (2 \times 1 + 1)\frac{600}{2}$$

$$3t = \frac{3 \times 600}{2}$$

$\Rightarrow t = 300\text{ nm} = 3 \times 10^{-6}\text{ m} = 3$ units

10) A small oil drop of mass 10^{-6} kg is hanging in at rest between two plates separated by 1 mm having a potential difference of 500 V. The charge on the drop is ($g = 10\ ms^{-2}$)

(a) 2×10^{-9} C (b) 2×10^{-11} C
(c) 2×10^{-6} C (d) 2×10^{-9} C

Ans:- (b)

Expn- Given, the drop rests between the two plates

$\therefore qE = mg$

(or) $q\frac{V}{r} = mg$ $\left(\because E = \frac{V}{r}\right)$

$\Rightarrow q = \frac{mgr}{V}$

Here, $m = 10^{-6}$ kg, $g = 10\ m/s^2$, $r = 1$ mm $= 10^{-3}$ m & $V = 500$ V

Substituting all the values, we get

$$q = \frac{10^{-6} \times 10 \times 10^{-3}}{500} = 2 \times 10^{-11}\text{ C}$$

11) A bullet is fired from a gun at the speed of 280 m/s in the direction 30° above the horizontal. The maximum height attained by the bullet is ($g = 9.8$ ms–2, $\sin 30° = 0.5$)

a) 3000 m b) 2800 m
c) 2000 m d) 1000 m

Ans:- d

$$h_{max} = \frac{u^2\sin^2\theta}{2g} = \frac{280 \times 280}{2 \times 9.8} \times \frac{1}{4}$$

$= 1000$ m

12) A cylindrical tube of length 0.2 m and radius R with sugar solution of concentration C produce a rotation of θ in the plane of vibration of a plane polarized light. The same sugar solution is transferred to another tube of length 0.3 m of same radius. The remaining gap is filled by distilled water. Now the optical rotation produced is

(a) θ (b) $2\frac{\theta}{3}$

(c) $3\frac{\theta}{2}$ (d) $9\frac{\theta}{4}$

Ans:- (a)

Expln- We know the specific rotation,

$$S = \frac{\theta}{1.c} = \frac{\theta.v}{1.m}$$

Where θ = rotation produced,
I = length of the tube
M = mass of sugar dissolved,
V = volume of sugar solution

$$\Rightarrow \theta = \frac{S.I.M}{V}$$

For first case, $\theta = \frac{S\,l\,m}{V}$ ....(i)

For second case, $\theta_1 = \frac{S\,l_1\,m_1}{V_1}$ ....(ii)

here, $l = 0.2$ m and $l_1 = 0.3$ m

also, $V_1 = V + \frac{V}{2} = 1.5\ V = \frac{3}{2}V$

On dividing Eq. (ii) by Eq. (i), we get

$$\frac{\theta_1}{\theta} = \frac{\frac{S\,l_1\,m}{V_1}}{\frac{S\,l\,m}{V}} = \frac{l_1}{l} \times \frac{V}{V_1} = \frac{l_1}{l} \times \frac{2V}{3V} = \frac{0.3}{0.2} \times \frac{2}{3} = 1$$

$\Rightarrow \theta_1 = \theta$

13) Two tangent galvanometers, which are identical except in their number of turns, are connected in parallel. The ratio of their resistances of the coils is 1 : 3. If the deflections in the two tangent galvanometers are 30° and 60° respectively, then the ratio of their number of turns is

(a) 1:3 (b) 3:1
(c) 1:2 (d) 1:6

Ans:- (a)

Expln- we know that the current passing through galvanometer coil is

$$I = K\tan\theta \text{ where, } K = \frac{2rB_H}{n\mu_0}$$

$\therefore$ Here, $I_1 = K_1\tan\theta_1$ and $I_2 = K_2\tan\theta_2$

$$(\text{or})\ \frac{I_1}{I_2} = \frac{K_1\tan\theta_1}{K_2\tan\theta_2} = \frac{\frac{2r\,B_H}{n_1\mu_0}\tan\theta_2}{\frac{2r\,B_H}{n_2\mu_0}\tan\theta_2}$$

$$\Rightarrow \frac{R_1}{R_2} = \frac{n_2\tan 30°}{n_1\tan 60°}$$

$$\Rightarrow \frac{3}{1} = \frac{n_2}{n_1}\cdot\frac{\sqrt{3}}{\sqrt{3}} \quad \left(\because I = \frac{V}{R}\right)$$

$$\Rightarrow \frac{n_1}{n_2} = \frac{1}{3}$$

14) Radii of curvature of a converging lens are in the ratio 1:2. Its focal length is 6 cm and refractive index is 1.5. Then its radii of curvature are .... respectively.

(a) 9 cm and 18 cm (b) 6 cm and 12 cm
(c) 3 cm and 6 cm (d) 4.5 cm and 9 cm

Ans:- (d)

ಮಂಡ್ಯ, ಹಾಸನದಲ್ಲಿ ಬಿಜೆಪಿ ಜನಾಕ್ರೋಶ ಯಾತ್ರೆ; ಅಡುಗೆ ಅನಿಲ ದರ ಹೆಚ್ಚಳಕ್ಕೆ ಸಮರ್ಥನೆ

‘ಡಕಾಯಿತರನ್ನು ಮೀರಿಸಿದ ಕಾಂಗ್ರೆಸ್ಸಿಗರು’

ಪ್ರಜಾವಾಣಿ ವಾರ್ತೆ

ಮಂಡ್ಯ/ಹಾಸನ: ಜಿಲ್ಲಾ ಕೇಂದ್ರಗಳಲ್ಲಿ ಮಂಗಳವಾರ ನಡೆದ ಬಿಜೆಪಿ ‘ಜನಾಕ್ರೋಶ ಯಾತ್ರೆ’ಯ ಎರಡನೇ ದಿನವೂ ಪಕ್ಷದ ಮುಖಂಡರು ಕಾಂಗ್ರೆಸ್ ನೇತೃತ್ವದ ರಾಜ್ಯ ಸರ್ಕಾರ ಮತ್ತು ಸಿ.ಎಂ.ಸಿದ್ದರಾಮಯ್ಯ ವಿರುದ್ಧ ವಾಗ್ದಾಳಿ ನಡೆಸಿದರು. ಇದೇ ವೇಳೆ, ಕೇಂದ್ರ ಸರ್ಕಾರವು ಅಡುಗೆ ಅನಿಲ ದರ ಹೆಚ್ಚಿರುವುದನ್ನು ಗಟ್ಟಿ ದನಿಯಲ್ಲಿ ಸಮರ್ಥಿಸಿಕೊಂಡರು.

‘ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಿ ಜನರ ಹಣವನ್ನು ಕಾಂಗ್ರೆಸ್ ಸರ್ಕಾರ ಹಗಲು ದರೋಡೆ ಮಾಡುತ್ತಿದೆ. ಲೂಟಿ ಮಾಡುವಲ್ಲಿ ಚಂಬಲ್ ಕಣಿವೆ ದರೋಡೆಕೋರರನ್ನೂ ಮೀರಿಸಿದ್ದಾರೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ. ರವಿ ಮಂಡ್ಯದಲ್ಲಿ ಆರೋಪಿಸಿದರು.

‘ಮೈಸೂರು ಮಹಾರಾಜರಿಗಿಂತ ಸಿದ್ದರಾಮಯ್ಯ ದೊಡ್ಡವರೆಂದು ಹೇಳಿಕೊಳ್ಳುತ್ತಾರೆ. ಮಹಾರಾಜರು ಪತ್ನಿಯ ಒಡವೆಗಳನ್ನು ಒತ್ತೆ ಇಟ್ಟು ಕೆಆರ್‌ಎಸ್ ಅಣೆಕಟ್ಟೆ ಕಟ್ಟಿಸಿದರು. ಆದರೆ, ಸಿದ್ದರಾಮಯ್ಯನವರು ಪತ್ನಿ ಹೆಸರಿನಲ್ಲಿ 14 ಮುಡಾ ನಿವೇಶನಗಳನ್ನು ಹೊಡೆದುಕೊಂಡರು. ಮಹಾರಾಜರ ವಂಶಸ್ಥರಿಗೆ ನಿರಂತರ ಕಿರುಕುಳ ಕೊಡುತ್ತಿದ್ದಾರೆ’ ಎಂದು ಪ್ರಶ್ನಿಸಿದರು.

ಹಾಸನದಲ್ಲಿ ಮಾತನಾಡಿದ ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ ವಿಜಯೇಂದ್ರ, ‘ಕಾಂಗ್ರೆಸ್ ಹೈಕಮಾಂಡ್ ಹುಂಡಿ ತುಂಬಿಸಲು ಲೂಟಿಗೆ ಇಳಿದಿರುವ ಬಡವರ ವಿರೋಧಿ ರಾಜ್ಯ ಸರ್ಕಾರ, ಬದುಕಿದ್ದೂ ಸತ್ತಂತೆ’ ಎಂದು ಪ್ರತಿಪಾದಿಸಿದರು.

‘ರಾಜ್ಯ ಕಾಂಗ್ರೆಸ್ ಸರ್ಕಾರ ಸತ್ತಿದ್ದು, ಅದರ ತಿಥಿ ಮಾಡಲು ಯಾತ್ರೆ ಹಮ್ಮಿಕೊಂಡಿದ್ದೇವೆ. ಅಧಿಕಾರಕ್ಕೆ ಬಂದು ಕೆಲ ವರ್ಷದಲ್ಲಿಯೇ ಬೆಲೆ ಹೆಚ್ಚಿಸಿ ಬಡವರಿಂದ ಛೀ–ಥೂ ಎಂದು ಉಗಿಸಿಕೊಳ್ಳುತ್ತಿದೆ. ಇತಿಹಾಸದಲ್ಲೇ ಇಂತಹ ಕೆಟ್ಟ, ಮೋಸದ ಸರ್ಕಾರ ನೋಡಲು ಸಾಧ್ಯವಿಲ್ಲ’ ಎಂದು ಪ್ರತಿಪಕ್ಷದ ನಾಯಕ ಆರ್. ಅಶೋಕ ಟೀಕಿಸಿದರು.

ಮಾಜಿ ಮುಖ್ಯಮಂತ್ರಿ ಡಿ.ವಿ. ಸದಾನಂದಗೌಡ, ಮಾಜಿ ಸಚಿವರಾದ ಬಿ.ಶ್ರೀರಾಮುಲು, ಸಿ.ಎನ್. ಅಶ್ವತ್ಥನಾರಾಯಣ, ಮುರುಗೇಶ ನಿರಾಣಿ, ಕೆ.ಸಿ.ನಾರಾಯಣಗೌಡ, ಶಾಸಕ ಟಿ.ಎನ್.ಶ್ರೀವತ್ಸ, ಮಾಜಿ ಸಂಸದೆ ಸುಮಲತಾ ಅಂಬರೀಷ್, ವಿಧಾನ ಪರಿಷತ್ ಸದಸ್ಯ ರವಿಕುಮಾರ್ ಪಾಲ್ಗೊಂಡಿದ್ದರು.



ಮಂಡ್ಯದಲ್ಲಿ ಮಂಗಳವಾರ ಬಿಜೆಪಿ ಜನಾಕ್ರೋಶ ಯಾತ್ರೆಯಲ್ಲಿ ಮುಖಂಡರಾದ ಮುರುಗೇಶ ನಿರಾಣಿ, ಸಿ.ಟಿ.ರವಿ, ಬಿ.ವೈ.ವಿಜಯೇಂದ್ರ, ಆರ್.ಅಶೋಕ, ಸಿ.ಎನ್.ಅಶ್ವತ್ಥನಾರಾಯಣ ಪಾಲ್ಗೊಂಡಿದ್ದರು ಪ್ರಜಾವಾಣಿ ಚಿತ್ರ

‘ಬೆಲೆ ಹೆಚ್ಚಿಸಲು ತಜ್ಞರ ಸಮಿತಿ’

ಮೈಸೂರು: ‘ಅಗತ್ಯ ವಸ್ತುಗಳ ಬೆಲೆ ಹೆಚ್ಚಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ತಜ್ಞರ ಸಮಿತಿ ಮಾಡಿಕೊಂಡಿದ್ದು, ನಾಡಿನ ಜನರಿಗೆ ಕಪಾಳಕ್ಕೆ ಹೊಡೆಯುತ್ತಿದ್ದಾರೆ’ ಎಂದು ಬಿಜೆಪಿ ರಾಜ್ಯ ಘಟಕದ ಅಧ್ಯಕ್ಷ ಬಿ.ವೈ.ವಿಜಯೇಂದ್ರ ದೂರಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ರಾಜ್ಯ ಬಿಟ್ಟರೆ ದೇಶದಲ್ಲಿ ಜನರಿಗೆ ಬೇರೆಲ್ಲೂ ತೆರಿಗೆಯ ಬರೆ ಎಳೆಯುತ್ತಿಲ್ಲ. ಕಚ್ಚಾ ತೈಲದ ಬೆಲೆ ಹೆಚ್ಚಾಗಿದ್ದರಿಂದ ಕೇಂದ್ರ ಸರ್ಕಾರ ಪೆಟ್ರೋಲ್, ಡೀಸೆಲ್ ದರವನ್ನು ₹2 ಹೆಚ್ಚಿಸಿದೆ. ಅದನ್ನು ಕಂಪನಿಗಳೇ ಭರಿಸುವುದರಿಂದ ಜನರಿಗೆ ಹೊರೆಯಾಗದು. 2023ರ ಮಾರ್ಚ್‌ನಲ್ಲಿ ಅಡುಗೆ ಅನಿಲ ಸಿಲಿಂಡರ್ ಬೆಲೆ ₹1,107 ಇತ್ತು. ಈಗ ₹ 800ರಿಂದ ₹ 850ಕ್ಕೆ ಹೆಚ್ಚಿದೆ. ರಾಹುಲ್ ಗಾಂಧಿಯಂಥ ಪುಣ್ಯಾತ್ಮ ಪ್ರಧಾನಿಯಾಗಿದಿದ್ದರೆ ₹ 2 ಸಾವಿರಕ್ಕೂ ಹೆಚ್ಚಿನ ದರವಿರುತ್ತಿತ್ತು’ ಎಂದು ಟೀಕಿಸಿದರು.

‘ಸುಳ್ಳು ಹೇಳುವುದು ಸಿ.ಎಂ ಕಲೆ’

ಪ್ರಜಾವಾಣಿ ವಾರ್ತೆ

ಮೈಸೂರು: ‘ಸುಳ್ಳನ್ನೇ ಸಾವಿರ ಬಾರಿ ಹೇಳಿ ಸತ್ಯ ಮಾಡುವುದು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ಕಲೆ’ ಎಂದು ವಿಧಾನ ಪರಿಷತ್ ಸದಸ್ಯ ಸಿ.ಟಿ.ರವಿ ಟೀಕಿಸಿದರು.

ನಗರದಲ್ಲಿ ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿ, ‘ಕಾಂಗ್ರೆಸ್ ಸರ್ಕಾರವು ತಾನು ಮಾಡಿರುವ ಬೆಲೆ ಏರಿಕೆ ಸಮರ್ಥನೆಗೆ ಅಡುಗೆ ಅನಿಲ ಸಿಲಿಂಡರ್ ಬೆಲೆ ಏರಿಕೆಯನ್ನು ಬಳಸಬಾರದು. ಪುಣ್ಯಾತ್ಮ ಮೋದಿ ಅವರು ಗ್ಯಾಸ್ ಸಿಲಿಂಡರ್ ಅನ್ನು ₹ 300 ಕಡಿಮೆ ಮಾಡಿ, ಈಗ ₹50 ಏರಿಕೆ ಮಾಡಿದ್ದಾರೆ. ಕೇಂದ್ರ ಸರ್ಕಾರ ರಾಜ್ಯಕ್ಕೆ ಯಾವ ಅನ್ಯಾಯವನ್ನೂ ಮಾಡಿಲ್ಲ’ ಎಂದರು.

‘ಮೋದಿ ಅಧಿಕಾರಕ್ಕೆ ಬರುವ ಮುನ್ನ ರಾಜ್ಯಕ್ಕೆ ಶೇ 31ರಷ್ಟು ತೆರಿಗೆ ಪಾಲು ಸಿಗುತ್ತಿತ್ತು. ಈಗ ಶೇ 42ರಷ್ಟು ಬರುತ್ತಿದೆ. ಕಾಂಗ್ರೆಸ್ ಆಡಳಿತಾವಧಿಯಲ್ಲಿ ರಾಜ್ಯಕ್ಕೆ 10 ವರ್ಷದಲ್ಲಿ ₹ 81,791 ಕೋಟಿ ಸಿಕ್ಕಿದ್ದರೆ, ಮೋದಿ ಸರ್ಕಾರ ಇದಕ್ಕೂ ಹೆಚ್ಚಿನ ಪಾಲನ್ನು ಕೊಟ್ಟಿದೆ’ ಎಂದರು.

‘ಸಿದ್ದರಾಮಯ್ಯ ಅವರಿಗೆ ಜಾಣ ಮರೆವಿದೆ. ಗೋಬೆಲ್ಸ್ ಸಿದ್ಧಾಂತದ ಮೇಲೆ ಅವರಿಗೆ ನಂಬಿಕೆ. ಸುಳ್ಳನ್ನೇ ಸಾವಿರ ಬಾರಿ ಹೇಳಿ ಸತ್ಯ ಮಾಡುವುದನ್ನು ಗೋಬೆಲ್ಸ್ ನೋಡಿದ್ದರೆ, ಸಿದ್ದರಾಮಯ್ಯ ತನ್ನ ಪ್ರೀತಿಯ ಶಿಷ್ಯ ಎನ್ನುತ್ತಿದ್ದರು’ ಎಂದು ವ್ಯಂಗ್ಯವಾಡಿದರು.

ಭ್ರಷ್ಟಾಚಾರದಲ್ಲಿ ಕರ್ನಾಟಕ ನಂಬರ್ ಒನ್: ಬಸವರಾಜ ರಾಯರಡ್ಡಿ

ಪ್ರಜಾವಾಣಿ ವಾರ್ತೆ

ಕೊಪ್ಪಳ: ‘ಯಾರೇ ಅಧಿಕಾರದಲ್ಲಿದ್ದರೂ ವ್ಯಾಪಕ ಭ್ರಷ್ಟಾಚಾರ ನಡೆಯುತ್ತದೆ. ಭ್ರಷ್ಟಾಚಾರದಲ್ಲಿ ಕರ್ನಾಟಕವೇ ನಂಬರ್ ಒನ್ ಆಗಿದೆ’ ಎಂದು ಮುಖ್ಯಮಂತ್ರಿ ಆರ್ಥಿಕ ಸಲಹೆಗಾರರೂ ಆಗಿರುವ ಯಲಬುರ್ಗಾ ಶಾಸಕ ಬಸವರಾಜ ರಾಯರಡ್ಡಿ ಹೇಳಿದರು.

ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿಯು ಮಂಗಳವಾರ ಇಲ್ಲಿ ಹಮ್ಮಿಕೊಂಡಿದ್ದ ಜಿಲ್ಲಾ ಮಟ್ಟದ ಸಂವಾದದಲ್ಲಿ ಮಾತನಾಡಿದ ಅವರು, ‘ಭ್ರಷ್ಟಾಚಾರ ವ್ಯಾಪಕವಾಗಿರುವುದರಿಂದಲೇ ಗುಣಮಟ್ಟದ ಕೆಲಸ ನಡೆಯುತ್ತಿಲ್ಲ. ಹಿಂದೆಲ್ಲ ಐದಾರು ದಶಕ ಬಾಳಿಕೆ ಬರುತ್ತಿದ್ದ ಸರ್ಕಾರಿ ಕಟ್ಟಡಗಳು ಹತ್ತು ವರ್ಷಗಳಲ್ಲಿಯೇ ಬಿದ್ದು ಹೋಗುತ್ತಿವೆ. ಅದರಲ್ಲೂ ಕಲ್ಯಾಣ ಕರ್ನಾಟಕದಲ್ಲಿ ಭ್ರಷ್ಟಾಚಾರ ಹೆಚ್ಚು ತಾಂಡವಾಗುತ್ತಿದೆ’ ಎಂದರು.

‘ದೊಡ್ಡ ಮಟ್ಟದಲ್ಲಿ ಭ್ರಷ್ಟಾಚಾರ ನಡೆಯುತ್ತಿರುವಾಗ ಪ್ರಾದೇಶಿಕ ಅಸಮತೋಲನ ನಿವಾರಣೆ ಹೇಗೆ ಸಾಧ್ಯವಾಗುತ್ತದೆ. ಜನಪ್ರತಿನಿಧಿಗಳು ಹೇಗೆ ಇರುತ್ತಾರೊ ಅದರಂತೆ ಅಧಿಕಾರಿಗಳೂ ಇರುತ್ತಾರೆ. ಮುಖ್ಯಮಂತ್ರಿ ಏನೇ ಹೇಳಿದರೂ ಭ್ರಷ್ಟಾಚಾರ ಕುರಿತು ನನ್ನ ವೈಯಕ್ತಿಕ ಅಭಿಪ್ರಾಯ ಇದೇ ಇರುತ್ತದೆ’ ಎಂದರು.

‘22 ವರ್ಷಗಳಷ್ಟು ಹಳೆಯದಾದ ಡಿ.ಎಂ.ನಂಜುಂಡಪ್ಪ ವರದಿ ಕುರಿತು ಅಧ್ಯಯನ ನಡೆಸಲು ರಾಜ್ಯ ಸರ್ಕಾರ ಆರ್ಥಿಕ ತಜ್ಞ ಪ್ರೊ. ಎಂ. ಗೋವಿಂದರಾವ್ ಅಧ್ಯಕ್ಷತೆಯಲ್ಲಿ ಕರ್ನಾಟಕ ಪ್ರಾದೇಶಿಕ ಅಸಮತೋಲನ ನಿವಾರಣಾ ಸಮಿತಿ ರಚಿಸಿದೆ. ಭ್ರಷ್ಟಾಚಾರದ ಕುರಿತು ಹೇಳಿಕೆಯನ್ನು ನನ್ನ ಹೆಸರನ್ನು ಉಲ್ಲೇಖಿಸಿಯೇ ಶಿಫಾರಸಿನಲ್ಲಿ ಸೇರಿಸಿ’ ಎಂದು ಸಮಿತಿಯ ಸದಸ್ಯ ಕಾರ್ಯದರ್ಶಿ ವಿಶಾಲ್ ಆರ್. ಅವರಿಗೆ ಹೇಳಿದರು.

‘ಬಿಜೆಪಿ ಹೋರಾಟ ಹಾಸ್ಯಾಸ್ಪದ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಕೇಂದ್ರ ಸರ್ಕಾರ ಅಡುಗೆ ಸಿಲಿಂಡರ್ ದರವನ್ನು ₹50 ಏರಿಕೆ ಮಾಡಿದೆ. ಈ ಸಂದರ್ಭದಲ್ಲಿ ಬೆಲೆ ಏರಿಕೆ ವಿರೋಧಿಸಿ ರಾಜ್ಯ ಸರ್ಕಾರದ ವಿರುದ್ಧ ಬಿಜೆಪಿ ಹೋರಾಟ ನಡೆಸುತ್ತಿರುವುದು ಹಾಸ್ಯಾಸ್ಪದ’ ಎಂದು ಸಮಾಜ ಕಲ್ಯಾಣ ಸಚಿವ ಎಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟಿದ್ದಾರೆ.

‘ಜನರ ಪರವಾಗಿ ಕೆಲಸ ಮಾಡುವ ಕಾಂಗ್ರೆಸ್ ಬಗ್ಗೆ ಅಪಪ್ರಚಾರ ಮಾಡುವ ಬದಲು ಅಡುಗೆ ಅನಿಲ, ಆಹಾರ ಧಾನ್ಯ ಮತ್ತು ತೈಲ ಬೆಲೆ ಕಡಿಮೆ ಮಾಡುವಂತೆ ಕೇಂದ್ರ ಸರ್ಕಾರಕ್ಕೆ ಸಲಹೆ ನೀಡಲಿ. ಜೊತೆಗೆ, ರಾಜ್ಯದ ತೆರಿಗೆ ಪಾಲು ಕೇಳುವ ಮನಸ್ಸು ಮಾಡಲಿ’ ಎಂದು ಒತ್ತಾಯಿಸಿದ್ದಾರೆ.

‘ಹಲವು ಭರವಸೆ ನೀಡಿ ಕೇಂದ್ರದಲ್ಲಿ ಅಧಿಕಾರಕ್ಕೆ ಬಂದಿರುವ ನರೇಂದ್ರ ಮೋದಿ ಸರ್ಕಾರ, ಬೆಲೆ ಏರಿಕೆಯ ಪ್ರವಾಹವನ್ನೇ ಹರಿಸಿದೆ. ಕಚ್ಚಾತೈಲದ ಬೆಲೆ ಕಡಿಮೆ ಇದ್ದರೂ ಪೆಟ್ರೋಲ್, ಡೀಸೆಲ್ ಬೆಲೆ ವಿಪರೀತ ಹೆಚ್ಚಿಸಿ ಜನರನ್ನು ಲೂಟಿ ಮಾಡಿದೆ. ಅವೈಜ್ಞಾನಿಕ ಜಿಎಸ್‌ಟಿ ಸುಲಿಗೆ, ಅಸಮರ್ಪಕ ತೆರಿಗೆ ನೀತಿಯ ಮೂಲಕ ಸಣ್ಣ ಪುಟ್ಟ ಉದ್ಯಮಿಗಳನ್ನು ಸುಲಿಗೆ ಮಾಡುತ್ತಿರುವ ಬಿಜೆಪಿಯವರಿಗೆ ತೆರಿಗೆ ಸಂಗ್ರಹಣೆ ಮಾಡುವುದು ಜನರಿಗಾಗಿ ಎಂಬ ಸಂಗತಿಯೇ ಮರೆತು ಹೋಗಿದೆ’ ಎಂದೂ ಟೀಕಿಸಿದ್ದಾರೆ.

ಸಚಿವರ ‘ಜೋಕರ್’ ಜಗಳ

ಪ್ರಜಾವಾಣಿ ವಾರ್ತೆ

ಮಂಡ್ಯ: ‘ಸಚಿವ ಚಲುವರಾಯಸ್ವಾಮಿ ನೂರಕ್ಕೆ ನೂರರಷ್ಟು ಜೋಕರ್. ಜೋಕರ್ ಸಂಸ್ಕೃತಿ ಶುರುವಾಗಿದ್ದು ಕಾಂಗ್ರೆಸ್ ಪಕ್ಷದಿಂದ ಎನ್ನುವುದನ್ನು ಮರೆಯಬಾರದು. ಅವರು ಎಲ್ಲಿದ್ದರು? ಆಮೇಲೆ ಎಲ್ಲಿಲ್ಲಿ ಹೋದರು? ಎಂಬುದು ಎಲ್ಲರಿಗೂ ಗೊತ್ತಿದೆ’ ಎಂದು ಕೇಂದ್ರ ಸಚಿವ ಎಚ್.ಡಿ.ಕುಮಾರಸ್ವಾಮಿ ವ್ಯಂಗ್ಯವಾಡಿದರು.



ಎಚ್.ಡಿ. ಕುಮಾರಸ್ವಾಮಿ

ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಆತ ನನ್ನನ್ನು ಸಿಎಂ ಮಾಡಿದ ಎನ್ನುವುದು ಬಹುದೊಡ್ಡ ಜೋಕ್. ಶಾಸಕರು ನನ್ನನ್ನು ಮುಖ್ಯಮಂತ್ರಿ ಮಾಡಿದ್ದು’ ಎಂದು ಹೇಳಿದರು.

ಧರ್ಮಸ್ಥಳಕ್ಕೆ ಬಂದು ಆಣೆ ಪ್ರಮಾಣಕ್ಕೆ ಆಹ್ವಾನ ನೀಡಿರುವ ಕೃಷಿ ಸಚಿವರ ಸವಾಲಿಗೆ ಪ್ರತಿಕ್ರಿಯಿಸಿ, ‘ನಾನು ಆಣೆ ಮಾಡಲು ತಯಾರಿದ್ದೇನೆ. ನಾನು ಸಿ.ಎಂ ಆಗುವಾಗ ಎಂಎಲ್‌ಎಗಳು ಆ ವ್ಯಕ್ತಿಯನ್ನು ನೋಡಿ ಬಂದ್ರಾ? ಆ ವ್ಯಕ್ತಿಯನ್ನು ಮಂತ್ರಿ ಮಾಡಲು ನಾನು ಪಟ್ಟ ಕಷ್ಟ ಅಷ್ಟಿಷ್ಟಲ್ಲ. ಬೆಳಗಿನ ಜಾವ ಮೂರು ಗಂಟೆವರೆಗೆ ನಿದ್ರೆ ಮಾಡಲು ಬಿಡುತ್ತಿರಲಿಲ್ಲ ಆ ಆಸಾಮಿ’ ಎಂದು ಕುಟುಕಿದರು.

‘ಆ ವ್ಯಕ್ತಿಗಿರುವ ಚಟ ನನಗಿಲ್ಲ. ಮಂಡ್ಯದಲ್ಲಿ ಆತನ ಚಟಗಳ ಬಗ್ಗೆ ಕೇಳಿದರೆ ಜನ ಹಾದಿ ಬೀದಿಯಲ್ಲಿ ಹೇಳುತ್ತಾರೆ. ಈ ಮನುಷ್ಯ ಎಷ್ಟು ಮನೆ ಹಾಳು ಮಾಡಿದ್ದಾರೆ ಎಂಬುದು ನನಗೆ ಗೊತ್ತು’ ಎಂದರು.

‘ಜೆಡಿಎಸ್ - ಬಿಜೆಪಿ ಮೈತ್ರಿ ಭದ್ರವಾಗಿದೆ. ಯಾರಿಗೂ ಸಂಶಯ ಬೇಡ. ಮೈತ್ರಿ ಸಮನ್ವಯ ಸಮಿತಿ ರಚನೆಯಾಗಬೇಕೆಂದು ಡಿ.ವಿ. ಸದಾನಂದಗೌಡರೇ ಹೇಳಿದ್ದಾರೆ. ಹಲವಾರು ಹಿರಿಯ ನಾಯಕರೂ ಅದನ್ನೇ ಹೇಳಿದ್ದಾರೆ. ಮೈತ್ರಿಗೆ ಧಕ್ಕೆ ಇಲ್ಲ’ ಎಂದು ಕುಮಾರಸ್ವಾಮಿ ಹೇಳಿದರು.

‘ಆಡಳಿತಕ್ಕಾಗಿ ಎಚ್‌ಡಿಕೆ ಜೋಕರ್’

ಮಂಡ್ಯ: ‘ರಮ್ಮಿ ಆಟದಲ್ಲಿ ಜೋಕರ್ ಅನ್ನು ಯಾವುದಕ್ಕಾದರೂ ಸೇರಿಸಬಹುದು. ಆಡಳಿತಕ್ಕಾಗಿ ಯಾರ ಜತೆ ಬೇಕಾದರೂ ಹೋಗುವ ಕುಮಾರಸ್ವಾಮಿ ಜೋಕರಾ? ಅಥವಾ ನಾನು ಜೋಕರಾ? ಆದ್ದರಿಂದ ಆ ಪದಕ್ಕೆ ಅವರೇ ಹೆಚ್ಚು ಸೂಕ್ತ’ ಎಂದು ಜಿಲ್ಲಾ ಉಸ್ತುವಾರಿ ಸಚಿವ ಎನ್. ಚಲುವರಾಯಸ್ವಾಮಿ ತಿರುಗೇಟು ನೀಡಿದರು.



ಚಲುವರಾಯ ಸ್ವಾಮಿ

ಮಂಗಳವಾರ ಮಾಧ್ಯಮದವರೊಂದಿಗೆ ಮಾತನಾಡಿ, ‘ಐಐಟಿ ಪದಕ್ಕೆ ಅರ್ಥ ಗೊತ್ತಿದೆಯೇ’ ಎನ್ನುವ ಎಚ್‌ಡಿಕೆ ಹೇಳಿಕೆಗೆ ಪ್ರತಿಕ್ರಿಯಿಸಿ, ‘ಮಂಡ್ಯಕ್ಕೆ ಐಐಟಿ ತರಲು ಅವರು ಪತ್ರ ಬರೆದಿದ್ದಾರಾ? ಅವರ ತಂದೆ ಪ್ರಧಾನಮಂತ್ರಿ, ನನ್ನ ತಂದೆ ರೈತ. ನಾನು ಜಿ.ಪಂ. ಸದಸ್ಯನಾಗಿಯೂ ರಾಜಕಾರಣ ಮಾಡಿದ್ದೇನೆ. ನನಗೆ ಜನರ ಕಷ್ಟ ಗೊತ್ತಿದೆ. ಅವರು ನನ್ನ ಮಂತ್ರಿ ಮಾಡಿದ್ದೇನೆ ಎನ್ನುವುದಾದರೆ, ನಾನು ಅವರನ್ನು ಸಿ.ಎಂ ಮಾಡಿದ್ದೀನಿ ಎನ್ನುವುದು ತಪ್ಪಲ್ಲ’ ಎಂದರು.

‘ಕುಮಾರಸ್ವಾಮಿಯಿಂದ ರಾಜಕಾರಣ ಕಲಿಯುವ ಅವಶ್ಯಕತೆ ನನಗಿಲ್ಲ. ಅವರನ್ನು ನಾಯಕರನ್ನಾಗಿ ಮಾಡಲು ನಾವು ಸಾಥ್ ಕೊಟ್ವಾ, ಇಲ್ವಾ ಎನ್ನುವುದನ್ನು ಧರ್ಮಸ್ಥಳಕ್ಕೆ ಬಂದು ಪ್ರಮಾಣ ಮಾಡುತ್ತಾರಾ?. ಅವರಿಗೆ ಸಿದ್ದರಾಮಯ್ಯ, ಡಿ.ಕೆ. ಶಿವಕುಮಾರ್ ಮತ್ತು ನನ್ನನ್ನು ಬಯ್ಯುವ ಚಪಲ. ಆದ್ದರಿಂದ ಅವರ ಬಗ್ಗೆ ಮಾತನಾಡಿ ನಾಲಗೆ ಹೊಲಸು ಮಾಡಿಕೊಳ್ಳಲು ಇಷ್ಟವಿಲ್ಲ’ ಎಂದರು.

‘ಸರ್ಕಾರ ಈಗ ಟೇಕಾಫ್’

ಪ್ರಜಾವಾಣಿ ವಾರ್ತೆ

ಮೊಳಕಾಲ್ಮುರು (ಚಿತ್ರದುರ್ಗ ಜಿಲ್ಲೆ): ‘ಗ್ಯಾರಂಟಿ ಯೋಜನೆಗಳ ಅನುಷ್ಠಾನದಿಂದ ಉಂಟಾಗಿದ್ದ ಆರ್ಥಿಕ ಸಮಸ್ಯೆಯಿಂದ ಸರ್ಕಾರ ಸಾವಕಾಶವಾಗಿ ಹೊರಬರುತ್ತಿದೆ. 2 ವರ್ಷಗಳ ನಂತರ ಸರ್ಕಾರ ಈಗ ಟೇಕಾಫ್ ಆಗುವ ಹಂತವನ್ನು ಮುಟ್ಟಿದೆ’ ಎಂದು ಸಚಿವ ಡಿ.ಸುಧಾಕರ್ ಹೇಳಿದರು.

ತಾಲ್ಲೂಕಿನ ದೇವಸಮುದ್ರದ ಪರಮೇಶ್ವರಪ್ಪ ತಾತಾ ಚೌಕಿಮಠದಲ್ಲಿ ಮಂಗಳವಾರ ನಡೆದ ‘ಕಾಂಗ್ರೆಸ್ ನಡಿಗೆ ಕಾರ್ಯಕರ್ತರ ಕಡೆಗೆ’ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

‘ಜನರಿಗೆ ನೇರವಾಗಿ ಸೌಲಭ್ಯ ಸಿಗುವಂತೆ ಮಾಡಿದ ಕೀರ್ತಿ ಗ್ಯಾರಂಟಿ ಯೋಜನೆಗಳ ಮೂಲಕ ಕಾಂಗ್ರೆಸ್ ಪಕ್ಷಕ್ಕೆ ದೊರೆತಿದೆ. ಈಗ ಆರ್ಥಿಕ ಸುಧಾರಣೆಯ ಬೆಳಕು ಮೂಡುತ್ತಿದ್ದು, ಅಭಿವೃದ್ಧಿ ಕಾರ್ಯಗಳಿಗೆ ಹೆಚ್ಚಿನ ಅನುದಾನ ಸಿಗುವ ನಿರೀಕ್ಷೆಯಿದೆ. ಸಚಿವ ಸಂಪುಟ ಸಭೆಯಲ್ಲಿ ಮುಖ್ಯಮಂತ್ರಿಯವರು ಅನುದಾನ ಒದಗಿಸುವ ಭರವಸೆ ನೀಡಿದ್ದಾರೆ’ ಎಂದರು.

‘ರಾಜ್ಯ ಸರ್ಕಾರ ಹಾಲಿನ ದರ ಏರಿಕೆ ಮಾಡಿದೆ ಎಂದು ಬೊಬ್ಬೆ ಹೊಡೆಯುತ್ತಿರುವ ಬಿಜೆಪಿ ಅಡುಗೆ ಅನಿಲದ ದರವನ್ನು ₹50 ಹೆಚ್ಚಿಸುವ ಮೂಲಕ ಗಾಯದ ಮೇಲೆ ಬರೆ ಎಳೆದಿದೆ. ಈ ಮೂಲಕ ಜನರ ಜೇಬಿಗೆ ನೇರವಾಗಿ ಕೈಹಾಕಿ ಹಣ ಕಿತ್ತುಕೊಂಡಿದೆ. ಬಿಜೆಪಿಗೆ ಜನಪರ ಕಾಳಜಿ, ಬದ್ಧತೆ ಇಲ್ಲ. ಆ ಪಕ್ಷದ ಮುಖಂಡರು ಅಧಿಕಾರಕ್ಕಾಗಿ ಸುಳ್ಳನ್ನು ನಿಜವಾಗಿಸಲು ಹೋರಾಡುತ್ತಿದ್ದಾರೆ’ ಎಂದು ದೂರಿದರು.

ಅಸಹಾಯಕತೆ: ‘ಬಯಲು ಸೀಮೆ ಜಿಲ್ಲೆಗಳಿಗೆ ಎಲ್ಲ ಪಕ್ಷಗಳ ಆಡಳಿತದಲ್ಲೂ ಅನ್ಯಾಯವಾಗುತ್ತಿದೆ. ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕಕ್ಕೆ ವಿಶೇಷ ಅನುದಾನ ನೀಡುವಂತೆ ಬಯಲುಸೀಮೆಗೂ ಪ್ರತ್ಯೇಕ ಅನುದಾನ ನೀಡಿದರೆ ಬದಲಾವಣೆ ಸಾಧ್ಯ. ಅಭಿವೃದ್ಧಿಯ ಕನಸು ಇಟ್ಟುಕೊಂಡು ವಿಧಾನಸಭೆಗೆ ಆಯ್ಕೆಯಾಗಿರುವ ನಾವು ಏನೂ ಮಾಡದೇ ಅಸಹಾಯಕರಾಗಿದ್ದೇವೆ’ ಎಂದು ಅಧ್ಯಕ್ಷತೆ ವಹಿಸಿದ್ದ ಹಿರಿಯ ಶಾಸಕ ಎನ್.ವೈ. ಗೋಪಾಲಕೃಷ್ಣ ಬೇಸರ ವ್ಯಕ್ತಪಡಿಸಿದರು.

‘ನಮ್ಮ ಪಕ್ಷದ ಕೆಲ ಮುಖಂಡರೇ ಗ್ಯಾರಂಟಿ ಯೋಜನೆಗಳಿಂದ ಅಭಿವೃದ್ಧಿಗೆ ಹೊಡೆತ ಬಿದ್ದಿದೆ ಎಂದು ಹೇಳುವುದನ್ನು ನಿಲ್ಲಿಸಬೇಕು’ ಎಂದು ಅವರು ಇದೇವೇಳೆ ಸಲಹೆ ನೀಡಿದರು.

‘ಕೇಂದ್ರದ ವಿರುದ್ಧ ಯಾತ್ರೆ ಮಾಡಲಿ’

ಬೆಂಗಳೂರು: ‘ಬಿಜೆಪಿಯವರು ಕೇಂದ್ರ ಸರ್ಕಾರದ ವಿರುದ್ಧ ಜನಾಕ್ರೋಶ ಯಾತ್ರೆ ಮಾಡಲಿ. ಮೋದಿಯವರ ವಿರುದ್ಧ ಯಾತ್ರೆ ಮಾಡಲಿ’ ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಹೇಳಿದರು.

‘ಕೇಂದ್ರ ಸರ್ಕಾರ ಅಡುಗೆ ಅನಿಲ ಸಿಲಿಂಡರ್ ದರ ಹೆಚ್ಚಿಸಿದೆ. ಬಿಜೆಪಿಯವರೂ ಜನರ ಪರವಾಗಿ ಕೆಲಸ ಮಾಡಬೇಕಲ್ಲವೇ? ಜನಾಕ್ರೋಶ ಯಾತ್ರೆ ಮುಂದುವರೆಸಬೇಕೊ, ಬೇಡವೊ ಎಂದು ಈಗ ಅವರು ನಿರ್ಧರಿಸಲಿ’ ಎಂದರು.

रजिस्ट्री सं. डी.एल. 33004/99 REGD. No. D.L. - 33004/99

भारत का राजपत्र
The Gazette of India

सी.जी.-डी.एल.-अ.-28032025-262065
CG - DL - E -28032025-262065

असाधारण
EXTRAORDINARY
भाग- II - खण्ड- 3 - उप खण्ड- (ii)
PART II - Section -3 - Sub section (ii)
प्राधिकार से प्रकाशित
PUBLISHED BY AUTHORITY

सं. 1419] नई दिल्ली, बृधवार, मार्च 26, 2025 / चैत्र 5, 1947
No. 1419] NEW DELHI, WEDNESDAY, MARCH 26, 2025 / CHAITRA 5, 1947

ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯ

ಅಧಿಸೂಚನೆ

ನವದೆಹಲಿ, 26ನೇ ಮಾರ್ಚ್, 2025

ಎಸ್.ಓ. ನಂ. 1437(ಇ).– ದಿನಾಂಕ: 26.03.2025 – ಭಾರತ ಸರ್ಕಾರದ ರಸ್ತೆ ಸಾರಿಗೆ ಮತ್ತು ಹೆದ್ದಾರಿಗಳ ಸಚಿವಾಲಯವು ಅನುಸೂಚಿಯಲ್ಲಿನ ವಿವರಿಸಿರುವ ಜಮೀನುಗಳನ್ನು **ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ. 150ಎ ರಲ್ಲಿನ stretch of land from Km. Design Ch. 485+240 Km (Existing Km 494.000) to Design Ch. 523+393 Km (Existing km 533.152) & From Design Ch. 530+393 (Existing Km 540.175) to Design Ch.534+476 (Existing Km 544.200) (ಕೆ.ಬಿ. ಕ್ರಾಸ್‌ನಿಂದ ಚುಂಚನಹಳ್ಳಿ ಸೆಕ್ಷನ್‌ವರೆಗೆ) ರಸ್ತೆ ನಿರ್ಮಾಣ, (ಅಗಲೀಕರಣ, ದ್ವಿಪಥ/ನಾಲ್ಕು ಪಥ ಇತ್ಯಾದಿ),** ಸಂರಕ್ಷಣೆ, ಕಾರ್ಯನಿರ್ವಹಣೆ ಮತ್ತು ಕಾರ್ಯಪ್ರಕ್ರಿಯೆ ಮಾಡುವ ಸಲುವಾಗಿ ಭೂಸ್ವಾಧೀನಪಡಿಸಿಕೊಳ್ಳುವುದು ಅವಶ್ಯವಾಗಿರುತ್ತದೆಂದು ಇಚ್ಛಿಸಿ ರಾಷ್ಟ್ರೀಯ ಹೆದ್ದಾರಿ ಕಾಯ್ದೆ 1956 (1956ರ 48)ರ 3ಎ (1)ರ ಪ್ರಕಾರ (ಇನ್ನು ಮುಂದೆ ಈ ಉಲ್ಲೇಖಿಸಲ್ಪಟ್ಟ ಕಾಯಿದೆ) ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (II) ರಂತೆ ಭಾರತ ವಿಶೇಷ ಪತ್ರಿಕೆಯಲ್ಲಿ ಪ್ರಕಟಿಸುವ ಮೂಲಕ ಘೋಷಿಸಲಾಗಿದೆ.

ಸದರಿ ಜಮೀನುಗಳ ಬಗ್ಗೆ ಯಾವುದೇ ಹಿತಾಸಕ್ತಿ ಉಳ್ಳವರು ಈ ಅಧಿಸೂಚನೆಯು ಗೆಜೆಟ್‌ನಲ್ಲಿ ಪ್ರಕಟಿಸಲಾದಂತೆ ಹಾಗೂ ಸಾರ್ವಜನಿಕರ ಅವಗಾಹನೆಗಾಗಿ ದಿನಪತ್ರಿಕೆಗಳಲ್ಲಿ ಪ್ರಕಟಿಸಿದ ದಿನಾಂಕದಿಂದ ಇಪ್ಪತ್ತೊಂದು ದಿನಗಳೊಳಗಾಗಿ ಉಲ್ಲೇಖಿತ ಭೂಸ್ವಾಧೀನ ಅಧಿನಿಯಮದ ಕಲಂ 3ಸಿ ಉಪಕಲಂ(1)ರ ಅನ್ವಯ ಉದ್ದೇಶಿತ ಭೂಸ್ವಾಧೀನಕ್ಕೆ ಆಕ್ಷೇಪಣೆಗಳನ್ನು ಸಲ್ಲಿಸಬಹುದಾಗಿರುತ್ತದೆ.

ಅಂತಹ ಆಕ್ಷೇಪಣೆಗಳನ್ನು, ವಿಶೇಷ ಗೆಜೆಟ್‌ನ ಭಾಗ 2, ಸೆಕ್ಷನ್ 3 ಸಬ್ ಸೆಕ್ಷನ್ (II) ರಂತೆ ಪ್ರಕಟಿಸಲಾಗಿರುವ ತಿದ್ದುಪಡಿಯು ಎಸ್.ಓ. 1285(ಇ), ದಿನಾಂಕ: 19.03.2025ರಂತೆ (ಎಫ್ ನಂ. 12037/56/2016–ಕೆಎನ್‌ಟಿ(ಪಿ–6) ಸಕ್ಷಮ ಪ್ರಾಧಿಕಾರವನ್ನು **ವಿಶೇಷ ಭೂಸ್ವಾಧೀನಾಧಿಕಾರಿಗಳು ಮತ್ತು ಸಕ್ಷಮ ಪ್ರಾಧಿಕಾರಿಗಳು, ಭಾರತದ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ, ತುಮಕೂರು ಘಟಕ, ಬೆಟ್ಟಶ್ರೀ ಕಾಂಪ್ಲೆಕ್ಸ್, 5ನೇ ಕ್ರಾಸ್, 60 ಅಡಿ ರಸ್ತೆ, ಸಪ್ತಗಿರಿ ಬಡಾವಣೆ, ತುಮಕೂರು–572102 ಎಂದು ಬದಲಾಯಿಸಿದ್ದು,** ಇವರಿಗೆ ಲಿಖಿತವಾಗಿ ಸಕಾರಣಗಳೊಂದಿಗೆ ನೋಂದಾಯಿತ ಅಂಚೆ ಮೂಲಕ ಸಲ್ಲಿಸತಕ್ಕದ್ದು. ಸಕ್ಷಮ ಪ್ರಾಧಿಕಾರಿಗಳು ಆಕ್ಷೇಪಣೆ ಸಲ್ಲಿಸಿದವರನ್ನಾಗಲಿ ಅಥವಾ ಅವರ ಪರ ವಕೀಲರನ್ನಾಗಲಿ, ಅವರು ಸಲ್ಲಿಸಿರುವ ಆಕ್ಷೇಪಣೆಗಳ ಬಗ್ಗೆ ವಿಚಾರಣೆ ನಡೆಸಿ, ಈ ಬಗ್ಗೆ ಇತರೆ ಅಂಶಗಳನ್ನು ಪರಿಗಣಿಸಿ ಆಕ್ಷೇಪಣೆಗಳನ್ನು ಪುರಸ್ಕರಿಸಬಹುದು ಅಥವಾ ತಿರಸ್ಕರಿಸಬಹುದು.

ಈ ಅಧಿಸೂಚನೆಯಲ್ಲಿ ಸೂಚಿಸಿರುವ ಜಮೀನುಗಳ ನಕ್ಷೆಗಳು ಮತ್ತು ಜಮೀನುಗಳ ಇತರೆ ವಿವರಗಳನ್ನು ಮೇಲ್ಕಂಡ ಸಕ್ಷಮ ಪ್ರಾಧಿಕಾರರವರ ಕಚೇರಿಯಲ್ಲಿ ಹಿತಾಸಕ್ತಿ ಹೊಂದಿರುವ ವ್ಯಕ್ತಿಗಳ ಪರಿಶೀಲನೆಗಾಗಿ ಇರಿಸಲಾಗಿದೆ.

ಅನುಸೂಚಿ

ಕರ್ನಾಟಕ ರಾಜ್ಯದ ತುಮಕೂರು ಜಿಲ್ಲೆಯ ರಾಷ್ಟ್ರೀಯ ಹೆದ್ದಾರಿ ನಂ. 150ಎ ರಲ್ಲಿನ stretch of land from Km. Design Ch. 485+240 Km (Existing Km 494.000) to Design Ch. 523+393 Km (Existing km 533.152) &From Design Ch. 530+393(Existing Km 540.175) to Design Ch.534+476 (Existing Km 544.200) (ಕೆ.ಬಿ. ಕ್ರಾಸ್‌ನಿಂದ ಚುಂಚನಹಳ್ಳಿ ಸೆಕ್ಷನ್‌ವರೆಗೆ) ರಸ್ತೆ ನಿರ್ಮಾಣ ಕಟ್ಟಡ ಸಹಿತ / ಕಟ್ಟಡ ರಹಿತವಾಗಿರುವ ಜಮೀನುಗಳ ಸಂಕ್ಷಿಪ್ತ ವಿವರಣೆ.

ರಾಜ್ಯ: ಕರ್ನಾಟಕ **ಜಿಲ್ಲೆಯ ಹೆಸರು : ತುಮಕೂರು**

ಕ್ರ. ಸಂ.	ಸರ್ವೆ / ಫ್ಲಾಟ್ ನಂಬರ್	ಜಮೀನಿನ ತಹರೆ	ಜಮೀನಿನ ಸ್ವರೂಪ	ವಿಸ್ತೀರ್ಣ (ಸ್ಥಳೀಯ ಮಾಪನದಲ್ಲಿ) (ಚ.ಮೀಟರ್‌ಗಳಲ್ಲಿ)	ವಿಸ್ತೀರ್ಣ (ಹೆಕ್ಟೇರ್‌ಗಳಲ್ಲಿ)
1	2	3	4	5	6
ತಾಲ್ಲೂಕು: ತಿಪಟೂರು					
ಗ್ರಾಮ : ಹಟ್ನ					
1	151/1	ಖಾಸಗಿ	ಖುಷ್ಕಿ	1000	0.1
2	151/3	ಖಾಸಗಿ	ಖುಷ್ಕಿ	100	0.01
3	151/4	ಖಾಸಗಿ	ಖುಷ್ಕಿ	100	0.01
4	151/5	ಖಾಸಗಿ	ಖುಷ್ಕಿ	100	0.01
5	151/6	ಖಾಸಗಿ	ಖುಷ್ಕಿ	100	0.01
ಗ್ರಾಮ : ಕಿಬ್ಬನಹಳ್ಳಿ					
6	17/1	ಖಾಸಗಿ	ಖುಷ್ಕಿ	200	0.02
7	17/2	ಖಾಸಗಿ	ಖುಷ್ಕಿ	500	0.05
8	30/1	ಖಾಸಗಿ	ಖುಷ್ಕಿ	100	0.01
9	34/4	ಸಾಮಾನ್ಯ (ಖಾಸಗಿ/ಸರ್ಕಾರಿ)	ಖುಷ್ಕಿ	4300	0.43
ಗ್ರಾಮ : ಕುಂದೂರು					
10	67/3	ಖಾಸಗಿ	ಖುಷ್ಕಿ	75	0.0075
11	67/7	ಖಾಸಗಿ	ಖುಷ್ಕಿ	200	0.02
12	69/3	ಖಾಸಗಿ	ಖುಷ್ಕಿ	2075	0.2075
13	69/4	ಖಾಸಗಿ	ಖುಷ್ಕಿ	700	0.07
14	88/3ಎ1	ಖಾಸಗಿ	ಖುಷ್ಕಿ	250	0.025
15	88/3ಎ2	ಖಾಸಗಿ	ಖುಷ್ಕಿ	1650	0.165
16	88/3ಎ3	ಖಾಸಗಿ	ಖುಷ್ಕಿ	250	0.025
17	ಖಾತಾ ಸಂಖ್ಯೆ 103	ಖಾಸಗಿ	ಬಿಲ್ಟಪ್ ಏರಿಯಾ	100	0.01
18	ಖಾತಾ ಸಂಖ್ಯೆ 106	ಖಾಸಗಿ	ಬಿಲ್ಟಪ್ ಏರಿಯಾ	100	0.01
19	ಖಾತಾ ಸಂಖ್ಯೆ 159	ಖಾಸಗಿ	ಬಿಲ್ಟಪ್ ಏರಿಯಾ	100	0.01
20	ಖಾತಾ ಸಂಖ್ಯೆ 161	ಖಾಸಗಿ	ಬಿಲ್ಟಪ್ ಏರಿಯಾ	50	0.005
21	ಖಾತಾ ಸಂಖ್ಯೆ 275	ಸಾಮಾನ್ಯ (ಖಾಸಗಿ/ಸರ್ಕಾರಿ)	ಬಿಲ್ಟಪ್ ಏರಿಯಾ	300	0.03
22	ಖಾತಾ ಸಂಖ್ಯೆ 305	ಖಾಸಗಿ	ಬಿಲ್ಟಪ್ ಏರಿಯಾ	225	0.0225
23	ಖಾತಾ ಸಂಖ್ಯೆ 57	ಖಾಸಗಿ	ಬಿಲ್ಟಪ್ ಏರಿಯಾ	100	0.01
24	ಖಾತಾ ಸಂಖ್ಯೆ 58	ಖಾಸಗಿ	ಬಿಲ್ಟಪ್ ಏರಿಯಾ	100	0.01
25	ಖಾತಾ ಸಂಖ್ಯೆ 59	ಖಾಸಗಿ	ಬಿಲ್ಟಪ್ ಏರಿಯಾ	125	0.0125
26	ಖಾತಾ ಸಂಖ್ಯೆ 60	ಖಾಸಗಿ	ಬಿಲ್ಟಪ್ ಏರಿಯಾ	200	0.02
27	ಖಾತಾ ಸಂಖ್ಯೆ 61	ಖಾಸಗಿ	ಬಿಲ್ಟಪ್ ಏರಿಯಾ	50	0.005
28	ಖಾತಾ ಸಂಖ್ಯೆ 62	ಖಾಸಗಿ	ಬಿಲ್ಟಪ್ ಏರಿಯಾ	50	0.005
29	ಖಾತಾ ಸಂಖ್ಯೆ 65	ಖಾಸಗಿ	ಬಿಲ್ಟಪ್ ಏರಿಯಾ	125	0.0125
30	ಖಾತಾ ಸಂಖ್ಯೆ 66	ಖಾಸಗಿ	ಬಿಲ್ಟಪ್ ಏರಿಯಾ	150	0.015
31	ಖಾತಾ ಸಂಖ್ಯೆ 67	ಖಾಸಗಿ	ಬಿಲ್ಟಪ್ ಏರಿಯಾ	150	0.015
32	ಖಾತಾ ಸಂಖ್ಯೆ 68	ಖಾಸಗಿ	ಬಿಲ್ಟಪ್ ಏರಿಯಾ	150	0.015
33	ಖಾತಾ ಸಂಖ್ಯೆ 69	ಖಾಸಗಿ	ಬಿಲ್ಟಪ್ ಏರಿಯಾ	75	0.0075
34	ಖಾತಾ ಸಂಖ್ಯೆ 70	ಖಾಸಗಿ	ಬಿಲ್ಟಪ್ ಏರಿಯಾ	25	0.0025
35	ಖಾತಾ ಸಂಖ್ಯೆ 71	ಖಾಸಗಿ	ಬಿಲ್ಟಪ್ ಏರಿಯಾ	75	0.0075
ತಾಲ್ಲೂಕು: ತುರುವೇಕೆರೆ					
ಗ್ರಾಮ : ಬಾಣಸಂದ್ರ (ಕುಣಸಂದ್ರ)					
36	100/1	ಖಾಸಗಿ	ಖುಷ್ಕಿ	6400	0.64
37	100/5	ಖಾಸಗಿ	ಖುಷ್ಕಿ	1350	0.135
38	114/3	ಖಾಸಗಿ	ಖುಷ್ಕಿ	325	0.0325
39	115/1	ಖಾಸಗಿ	ಖುಷ್ಕಿ	200	0.02
40	115/2ಎ	ಖಾಸಗಿ	ಖುಷ್ಕಿ	2575	0.2575
41	115/2ಬಿ	ಖಾಸಗಿ	ಖುಷ್ಕಿ	1100	0.11
42	117/1ಬಿ	ಖಾಸಗಿ	ಖುಷ್ಕಿ	1200	0.12
43	117/2	ಖಾಸಗಿ	ಖುಷ್ಕಿ	50	0.005
44	117/3	ಖಾಸಗಿ	ಖುಷ್ಕಿ	350	0.035
45	117/4	ಖಾಸಗಿ	ಖುಷ್ಕಿ	1125	0.1125
46	117/5	ಖಾಸಗಿ	ಖುಷ್ಕಿ	250	0.025
47	121/5ಬಿ	ಖಾಸಗಿ	ಖುಷ್ಕಿ	1350	0.135
48	121/6	ಖಾಸಗಿ	ಖುಷ್ಕಿ	1050	0.105
49	122	ಖಾಸಗಿ	ಖುಷ್ಕಿ	1950	0.195
50	123	ಖಾಸಗಿ	ಖುಷ್ಕಿ	350	0.035
51	138	ಖಾಸಗಿ	ಖುಷ್ಕಿ	2550	0.255
52	139	ಖಾಸಗಿ	ಖುಷ್ಕಿ	2700	0.27
53	6	ಖಾಸಗಿ	ಖುಷ್ಕಿ	4175	0.4175
54	70/1ಬಿ	ಖಾಸಗಿ	ಖುಷ್ಕಿ	600	0.06
55	71	ಖಾಸಗಿ	ಖುಷ್ಕಿ	300	0.03
56	80/1	ಖಾಸಗಿ	ಖುಷ್ಕಿ	300	0.03
57	96	ಖಾಸಗಿ	ಖುಷ್ಕಿ	1300	0.13
58	97/3	ಖಾಸಗಿ	ಖುಷ್ಕಿ	225	0.0225
59	97/4	ಖಾಸಗಿ	ಖುಷ್ಕಿ	725	0.0725
ಗ್ರಾಮ : ಮಂಚೇನಹಳ್ಳಿ					
60	34/7	ಖಾಸಗಿ	ಖುಷ್ಕಿ	2125	0.2125
ಗ್ರಾಮ : ಕುಣಿಕೇನಹಳ್ಳಿ					
61	194/2	ಖಾಸಗಿ	ಖುಷ್ಕಿ	1125	0.1125
62	194/3	ಖಾಸಗಿ	ಖುಷ್ಕಿ	650	0.065
63	194/4	ಖಾಸಗಿ	ಖುಷ್ಕಿ	650	0.065
64	194/5	ಖಾಸಗಿ	ಖುಷ್ಕಿ	625	0.0625
65	194/6	ಖಾಸಗಿ	ಖುಷ್ಕಿ	700	0.07
66	194/7	ಖಾಸಗಿ	ಖುಷ್ಕಿ	575	0.0575
67	195/4	ಖಾಸಗಿ	ಖುಷ್ಕಿ	2025	0.2025
68	237	ಖಾಸಗಿ	ಖುಷ್ಕಿ	375	0.0375
ಗ್ರಾಮ : ಲೊಕ್ಕಮ್ಮನಹಳ್ಳಿ					
69	65/1	ಖಾಸಗಿ	ಖುಷ್ಕಿ	1250	0.125
70	65/2	ಖಾಸಗಿ	ಖುಷ್ಕಿ	525	0.0525
71	65/3	ಖಾಸಗಿ	ಖುಷ್ಕಿ	100	0.01
72	65/4	ಖಾಸಗಿ	ಖುಷ್ಕಿ	50	0.005
73	67/1	ಖಾಸಗಿ	ಖುಷ್ಕಿ	5225	0.5225
74	67/2	ಖಾಸಗಿ	ಖುಷ್ಕಿ	75	0.0075
75	ಖಾತಾ ಸಂಖ್ಯೆ 11	ಖಾಸಗಿ	ಬಿಲ್ಟಪ್ ಏರಿಯಾ	75	0.0075
76	ಖಾತಾ ಸಂಖ್ಯೆ 14/1	ಖಾಸಗಿ	ಬಿಲ್ಟಪ್ ಏರಿಯಾ	75	0.0075
77	ಖಾತಾ ಸಂಖ್ಯೆ 1530/153	ಖಾಸಗಿ	ಬಿಲ್ಟಪ್ ಏರಿಯಾ	50	0.005
78	ಖಾತಾ ಸಂಖ್ಯೆ 22	ಖಾಸಗಿ	ಬಿಲ್ಟಪ್ ಏರಿಯಾ	125	0.0125
79	ಖಾತಾ ಸಂಖ್ಯೆ 23	ಖಾಸಗಿ	ಖುಷ್ಕಿ	200	0.02
80	ಖಾತಾ ಸಂಖ್ಯೆ 24	ಖಾಸಗಿ	ಖುಷ್ಕಿ	50	0.005
81	ಖಾತಾ ಸಂಖ್ಯೆ 32	ಖಾಸಗಿ	ಬಿಲ್ಟಪ್ ಏರಿಯಾ	100	0.01
82	ಖಾತಾ ಸಂಖ್ಯೆ 33	ಖಾಸಗಿ	ಬಿಲ್ಟಪ್ ಏರಿಯಾ	75	0.0075
83	ಖಾತಾ ಸಂಖ್ಯೆ 34	ಖಾಸಗಿ	ಬಿಲ್ಟಪ್ ಏರಿಯಾ	75	0.0075
84	ಖಾತಾ ಸಂಖ್ಯೆ 44	ಖಾಸಗಿ	ಬಿಲ್ಟಪ್ ಏರಿಯಾ	25	0.0025
85	ಖಾತಾ ಸಂಖ್ಯೆ 45	ಖಾಸಗಿ	ಬಿಲ್ಟಪ್ ಏರಿಯಾ	25	0.0025
86	ಖಾತಾ ಸಂಖ್ಯೆ 46	ಖಾಸಗಿ	ಬಿಲ್ಟಪ್ ಏರಿಯಾ	50	0.005
87	ಖಾತಾ ಸಂಖ್ಯೆ 47	ಖಾಸಗಿ	ಬಿಲ್ಟಪ್ ಏರಿಯಾ	50	0.005
88	ಖಾತಾ ಸಂಖ್ಯೆ 48	ಖಾಸಗಿ	ಬಿಲ್ಟಪ್ ಏರಿಯಾ	125	0.0125
89	ಖಾತಾ ಸಂಖ್ಯೆ 63	ಖಾಸಗಿ	ಬಿಲ್ಟಪ್ ಏರಿಯಾ	75	0.0075
90	ಖಾತಾ ಸಂಖ್ಯೆ 64	ಖಾಸಗಿ	ಬಿಲ್ಟಪ್ ಏರಿಯಾ	75	0.0075
91	ಖಾತಾ ಸಂಖ್ಯೆ 65	ಖಾಸಗಿ	ಬಿಲ್ಟಪ್ ಏರಿಯಾ	125	0.0125
92	ಖಾತಾ ಸಂಖ್ಯೆ 70	ಖಾಸಗಿ	ಬಿಲ್ಟಪ್ ಏರಿಯಾ	75	0.0075
93	ಖಾತಾ ಸಂಖ್ಯೆ 8	ಖಾಸಗಿ	ಬಿಲ್ಟಪ್ ಏರಿಯಾ	50	0.005
ಗ್ರಾಮ : ಚೌಡೇನಹಳ್ಳಿ					
94	99/1	ಖಾಸಗಿ	ಖುಷ್ಕಿ	600	0.06
95	99/2ಎ	ಖಾಸಗಿ	ಖುಷ್ಕಿ	150	0.015
96	99/2ಬಿ	ಖಾಸಗಿ	ಖುಷ್ಕಿ	125	0.0125
97	99/3	ಖಾಸಗಿ	ಖುಷ್ಕಿ	175	0.0175
98	ಖಾತಾ ಸಂಖ್ಯೆ 58	ಖಾಸಗಿ	ಬಿಲ್ಟಪ್ ಏರಿಯಾ	100	0.01
99	ಖಾತಾ ಸಂಖ್ಯೆ 59	ಖಾಸಗಿ	ಬಿಲ್ಟಪ್ ಏರಿಯಾ	125	0.0125
100	ಖಾತಾ ಸಂಖ್ಯೆ 60	ಖಾಸಗಿ	ಬಿಲ್ಟಪ್ ಏರಿಯಾ	200	0.02
ಗ್ರಾಮ : ತುರುವೇಕೆರೆ ಅಮಾನಿಕೆರೆ					
101	371/1	ಖಾಸಗಿ	ಖುಷ್ಕಿ	0.99	9.9ಇ–05
102	372/1	ಖಾಸಗಿ	ಖುಷ್ಕಿ	261.93	0.026193
103	372/2	ಖಾಸಗಿ	ಖುಷ್ಕಿ	20.76	0.002076
104	373/1	ಖಾಸಗಿ	ಖುಷ್ಕಿ	1058.6	0.10586
105	373/2	ಖಾಸಗಿ	ಖುಷ್ಕಿ	1161.39	0.116139
106	374/1	ಖಾಸಗಿ	ಖುಷ್ಕಿ	923.18	0.092318
107	374/2	ಖಾಸಗಿ	ಖುಷ್ಕಿ	1539.96	0.153996
108	375	ಖಾಸಗಿ	ಖುಷ್ಕಿ	77.1	0.00771
109	384	ಖಾಸಗಿ	ಖುಷ್ಕಿ	5275.2	0.52752
110	385	ಖಾಸಗಿ	ಖುಷ್ಕಿ	9.88	0.000988
111	386	ಖಾಸಗಿ	ಖುಷ್ಕಿ	238.21	0.023821
112	387	ಖಾಸಗಿ	ಖುಷ್ಕಿ	199.66	0.019966
113	388	ಖಾಸಗಿ	ಖುಷ್ಕಿ	244.14	0.024414
114	389	ಖಾಸಗಿ	ಖುಷ್ಕಿ	2219	0.2219
115	390	ಖಾಸಗಿ	ಖುಷ್ಕಿ	574.27	0.057427
116	391	ಖಾಸಗಿ	ಖುಷ್ಕಿ	1065.52	0.106552
117	392	ಖಾಸಗಿ	ಖುಷ್ಕಿ	2003.53	0.200353
118	393/1	ಖಾಸಗಿ	ಖುಷ್ಕಿ	1210.81	0.121081
119	393/2	ಖಾಸಗಿ	ಖುಷ್ಕಿ	768.99	0.076899
120	394/1	ಖಾಸಗಿ	ಖುಷ್ಕಿ	72.15	0.007215
121	394/2	ಖಾಸಗಿ	ಖುಷ್ಕಿ	4.94	0.000494
122	395	ಖಾಸಗಿ	ಖುಷ್ಕಿ	1264.19	0.126419
123	396/2	ಖಾಸಗಿ	ಖುಷ್ಕಿ	1275.06	0.127506
124	409/1	ಖಾಸಗಿ	ಖುಷ್ಕಿ	242.16	0.024216
125	409/2	ಖಾಸಗಿ	ಖುಷ್ಕಿ	3545.46	0.354546
126	411/3	ಖಾಸಗಿ	ಖುಷ್ಕಿ	491.24	0.049124
127	416/1	ಖಾಸಗಿ	ಖುಷ್ಕಿ	30.64	0.003064
128	416/2	ಖಾಸಗಿ	ಖುಷ್ಕಿ	345.95	0.034595
129	417/1	ಖಾಸಗಿ	ಖುಷ್ಕಿ	571.31	0.057131
130	417/2	ಖಾಸಗಿ	ಖುಷ್ಕಿ	1277.04	0.127704
131	417/3	ಖಾಸಗಿ	ಖುಷ್ಕಿ	2113.24	0.211324
132	418	ಖಾಸಗಿ	ಖುಷ್ಕಿ	13.84	0.001384
133	419/2	ಖಾಸಗಿ	ಖುಷ್ಕಿ	983.48	0.098348
134	424/1	ಖಾಸಗಿ	ಖುಷ್ಕಿ	3491.1	0.34911
135	424/2ಎ	ಖಾಸಗಿ	ಖುಷ್ಕಿ	257.98	0.025798
136	424/2ಬಿ	ಖಾಸಗಿ	ಖುಷ್ಕಿ	1064.53	0.106453
137	424/2ಬಿ2	ಖಾಸಗಿ	ಖುಷ್ಕಿ	732.42	0.073242
138	424/2ಬಿ3	ಖಾಸಗಿ	ಖುಷ್ಕಿ	450.72	0.045072
139	424/3	ಖಾಸಗಿ	ಖುಷ್ಕಿ	33.61	0.003361
140	424/4	ಖಾಸಗಿ	ಖುಷ್ಕಿ	466.53	0.046653
141	425/1	ಖಾಸಗಿ	ಖುಷ್ಕಿ	1344.25	0.134425
142	425/2	ಖಾಸಗಿ	ಖುಷ್ಕಿ	1047.73	0.104773
143	425/3	ಖಾಸಗಿ	ಖುಷ್ಕಿ	787.77	0.078777
144	425/4	ಖಾಸಗಿ	ಖುಷ್ಕಿ	547.58	0.054758
145	425/6	ಖಾಸಗಿ	ಖುಷ್ಕಿ	613.81	0.061381
146	432	ಖಾಸಗಿ	ಖುಷ್ಕಿ	1587.4	0.15874
147	433	ಖಾಸಗಿ	ಖುಷ್ಕಿ	58.32	0.005832
148	434/1	ಖಾಸಗಿ	ಖುಷ್ಕಿ	4141.48	0.414148
149	434/2	ಖಾಸಗಿ	ಖುಷ್ಕಿ	299.49	0.029949
150	435	ಖಾಸಗಿ	ಖುಷ್ಕಿ	2756.7	0.27567
151	439	ಖಾಸಗಿ	ಖುಷ್ಕಿ	968.65	0.096865
152	441/1	ಖಾಸಗಿ	ಖುಷ್ಕಿ	1575.54	0.157554
153	441/2	ಖಾಸಗಿ	ಖುಷ್ಕಿ	862.89	0.086289
154	443/1	ಖಾಸಗಿ	ಖುಷ್ಕಿ	878.71	0.087871
155	443/2	ಖಾಸಗಿ	ಖುಷ್ಕಿ	282.69	0.028269
156	444	ಖಾಸಗಿ	ಖುಷ್ಕಿ	1339.31	0.133931
157	ನಾಲಾ	ಖಾಸಗಿ	ಖುಷ್ಕಿ	74.13	0.007413
158	ಟ್ಯಾಂಕ್/ನಾಲಾ	ಖಾಸಗಿ	ಖುಷ್ಕಿ	3342.84	0.334284
ಗ್ರಾಮ : ಬಿಡಿಸ್ವಾಸ್ತಿ					
159	107	ಖಾಸಗಿ	ಖುಷ್ಕಿ	842.13	0.084213
160	108	ಖಾಸಗಿ	ಖುಷ್ಕಿ	3630.47	0.363047
161	109/3	ಖಾಸಗಿ	ಖುಷ್ಕಿ	102.8	0.01028
162	110	ಖಾಸಗಿ	ಖುಷ್ಕಿ	1745.55	0.174555
163	111/1	ಖಾಸಗಿ	ಖುಷ್ಕಿ	1244.42	0.124442
164	111/2ಬಿ	ಖಾಸಗಿ	ಖುಷ್ಕಿ	501.13	0.050113
165	111/2ಸಿ	ಖಾಸಗಿ	ಖುಷ್ಕಿ	520.9	0.05209
166	112/ಪಿ	ಖಾಸಗಿ	ಖುಷ್ಕಿ	1031.91	0.103191
167	119	ಖಾಸಗಿ	ಖುಷ್ಕಿ	228.33	0.022833
168	122	ಖಾಸಗಿ	ಖುಷ್ಕಿ	1162.38	0.116238
169	123	ಖಾಸಗಿ	ಖುಷ್ಕಿ	833.24	0.083324
170	124	ಖಾಸಗಿ	ಖುಷ್ಕಿ	864.87	0.086487
171	125/1	ಖಾಸಗಿ	ಖುಷ್ಕಿ	837.19	0.083719
172	125/2	ಖಾಸಗಿ	ಖುಷ್ಕಿ	179.89	0.017989
173	125/3	ಖಾಸಗಿ	ಖುಷ್ಕಿ	219.43	0.021943
174	125/4	ಖಾಸಗಿ	ಖುಷ್ಕಿ	168.03	0.016803
175	134	ಖಾಸಗಿ	ಖುಷ್ಕಿ	460.6	0.04606
176	135	ಖಾಸಗಿ	ಖುಷ್ಕಿ	2975.14	0.297514
177	136/2	ಖಾಸಗಿ	ಖುಷ್ಕಿ	60.29	0.006029
178	136/3	ಖಾಸಗಿ	ಖುಷ್ಕಿ	242.16	0.024216
179	136/4	ಖಾಸಗಿ	ಖುಷ್ಕಿ	157.16	0.015716
180	136/5	ಖಾಸಗಿ	ಖುಷ್ಕಿ	548.57	0.054857
181	14/2	ಖಾಸಗಿ	ಖುಷ್ಕಿ	240.19	0.024019
182	14/3	ಖಾಸಗಿ	ಖುಷ್ಕಿ	21.75	0.002175
183	15	ಖಾಸಗಿ	ಖುಷ್ಕಿ	30.64	0.003064
184	170/2	ಖಾಸಗಿ	ಖುಷ್ಕಿ	184.83	0.018483
185	171/1	ಖಾಸಗಿ	ಖುಷ್ಕಿ	328.16	0.032816
186	171/2	ಖಾಸಗಿ	ಖುಷ್ಕಿ	257.98	0.025798
187	171/3	ಖಾಸಗಿ	ಖುಷ್ಕಿ	245.13	0.024513
188	172/1	ಖಾಸಗಿ	ಖುಷ್ಕಿ	1023.01	0.102301
189	172/2	ಖಾಸಗಿ	ಖುಷ್ಕಿ	1553.8	0.15538
190	172/3	ಖಾಸಗಿ	ಖುಷ್ಕಿ	206.58	0.020658
191	173	ಖಾಸಗಿ	ಖುಷ್ಕಿ	1150.52	0.115052
192	174/1	ಖಾಸಗಿ	ಖುಷ್ಕಿ	905.39	0.090539
193	174/2	ಖಾಸಗಿ	ಖುಷ್ಕಿ	782.83	0.078283
194	174/3	ಖಾಸಗಿ	ಖುಷ್ಕಿ	563.4	0.05634
195	174/4	ಖಾಸಗಿ	ಖುಷ್ಕಿ	432.93	0.043293
196	174/5	ಖಾಸಗಿ	ಖುಷ್ಕಿ	469.5	0.04695
197	175/2	ಖಾಸಗಿ	ಖುಷ್ಕಿ	961.73	0.096173
198	176	ಖಾಸಗಿ	ಖುಷ್ಕಿ	113.67	0.011367
199	185	ಖಾಸಗಿ	ಖುಷ್ಕಿ	1582.46	0.158246
200	23/1	ಖಾಸಗಿ	ಖುಷ್ಕಿ	1455.94	0.145594
201	23/2	ಖಾಸಗಿ	ಖುಷ್ಕಿ	1271.11	0.127111
202	27/1	ಖಾಸಗಿ	ಖುಷ್ಕಿ	456.65	0.045665
203	28	ಖಾಸಗಿ	ಖುಷ್ಕಿ	710.67	0.071067
204	31	ಖಾಸಗಿ	ಖುಷ್ಕಿ	415.14	0.041514
205	32	ಖಾಸಗಿ	ಖುಷ್ಕಿ	455.66	0.045566
206	35	ಖಾಸಗಿ	ಖುಷ್ಕಿ	74.13	0.007413
207	41	ಖಾಸಗಿ	ಖುಷ್ಕಿ	94.89	0.009489
208	53/1	ಖಾಸಗಿ	ಖುಷ್ಕಿ	53.37	0.005337
209	53/2	ಖಾಸಗಿ	ಖುಷ್ಕಿ	234.26	0.023426
210	54	ಖಾಸಗಿ	ಖುಷ್ಕಿ	60.29	0.006029
211	64	ಖಾಸಗಿ	ಖುಷ್ಕಿ	0.99	9.9ಇ–05
212	78	ಖಾಸಗಿ	ಖುಷ್ಕಿ	2161.67	0.216167
213	79	ಖಾಸಗಿ	ಖುಷ್ಕಿ	3307.25	0.330725
214	85	ಖಾಸಗಿ	ಖುಷ್ಕಿ	3021.6	0.30216
215	86	ಖಾಸಗಿ	ಖುಷ್ಕಿ	580.2	0.05802
216	91	ಖಾಸಗಿ	ಖುಷ್ಕಿ	125.53	0.012553
217	92/2	ಖಾಸಗಿ	ಖುಷ್ಕಿ	170.01	0.017001
218	92/3ಎ	ಖಾಸಗಿ	ಖುಷ್ಕಿ	910.33	0.091033
219	92/3ಬಿ1	ಖಾಸಗಿ	ಖುಷ್ಕಿ	352.87	0.035287
220	92/3ಬಿ2	ಖಾಸಗಿ	ಖುಷ್ಕಿ	961.73	0.096173
221	93	ಖಾಸಗಿ	ಖುಷ್ಕಿ	698.81	0.069881
222	97	ಖಾಸಗಿ	ಖುಷ್ಕಿ	509.04	0.050904
223	98/1	ಖಾಸಗಿ	ಖುಷ್ಕಿ	484.33	0.048433
224	ನಾಲಾ	ಖಾಸಗಿ	ಖುಷ್ಕಿ	2080.62	0.208062
225	ನಾಲಾ	ಖಾಸಗಿ	ಖುಷ್ಕಿ	140.36	0.014036
226	ನಾಲಾ	ಖಾಸಗಿ	ಖುಷ್ಕಿ	575.26	0.057526
227	ನಾಲಾ	ಖಾಸಗಿ	ಖುಷ್ಕಿ	1705.02	0.170502
228	ರಸ್ತೆ	ಖಾಸಗಿ	ಖುಷ್ಕಿ	371.65	0.037165
229	ರಸ್ತೆ	ಖಾಸಗಿ	ಖುಷ್ಕಿ	505.08	0.050508
230	ರಸ್ತೆ	ಖಾಸಗಿ	ಖುಷ್ಕಿ	331.12	0.033112
231	ರಸ್ತೆ	ಖಾಸಗಿ	ಖುಷ್ಕಿ	356.82	0.035682
232	ರಸ್ತೆ	ಖಾಸಗಿ	ಖುಷ್ಕಿ	397.34	0.039734
233	ರಸ್ತೆ	ಖಾಸಗಿ	ಖುಷ್ಕಿ	375.6	0.03756
ಗ್ರಾಮ : ತಾವರೆಕೆರೆ					
234	128/1ಎ1ಎ1	ಖಾಸಗಿ	ಖುಷ್ಕಿ	200	0.02
235	128/1ಎ1ಎ2	ಖಾಸಗಿ	ಖುಷ್ಕಿ	200	0.02
236	128/1ಎ2ಬಿ	ಖಾಸಗಿ	ಖುಷ್ಕಿ	150	0.015
237	128/2	ಖಾಸಗಿ	ಖುಷ್ಕಿ	100	0.01
238	128/3ಎ3	ಖಾಸಗಿ	ಖುಷ್ಕಿ	25	0.0025
239	24/10	ಖಾಸಗಿ	ಖುಷ್ಕಿ	50	0.005

contd....

1	2	3	4	5	6
240	24/12	ಖಾಸಗಿ	ಖುಷ್ಕಿ	175	0.0175
241	24/13	ಖಾಸಗಿ	ಖುಷ್ಕಿ	400	0.04
242	24/6	ಖಾಸಗಿ	ಖುಷ್ಕಿ	325	0.0325
243	5/1ಎ3	ಖಾಸಗಿ	ಖುಷ್ಕಿ	500	0.05
244	ಗ್ರಾಮಠಾಣ	ಖಾಸಗಿ	ಬಿಲ್ಟಪ್ ಏರಿಯಾ	350	0.035
245	ಖಾತಾ ಸಂಖ್ಯೆ 92	ಖಾಸಗಿ	ಬಿಲ್ಟಪ್ ಏರಿಯಾ	100	0.01
246	ಖಾತಾ ಸಂಖ್ಯೆ 93	ಖಾಸಗಿ	ಬಿಲ್ಟಪ್ ಏರಿಯಾ	100	0.01
247	ಖಾತಾ ಸಂಖ್ಯೆ 94	ಖಾಸಗಿ	ಬಿಲ್ಟಪ್ ಏರಿಯಾ	125	0.0125
248	ಖಾತಾ ಸಂಖ್ಯೆ 94/1	ಖಾಸಗಿ	ಬಿಲ್ಟಪ್ ಏರಿಯಾ	50	0.005
249	ಖಾತಾ ಸಂಖ್ಯೆ 95	ಖಾಸಗಿ	ಬಿಲ್ಟಪ್ ಏರಿಯಾ	75	0.0075
250	ಖಾತಾ ಸಂಖ್ಯೆ 96	ಖಾಸಗಿ	ಬಿಲ್ಟಪ್ ಏರಿಯಾ	100	0.01
251	ಖಾತಾ ಸಂಖ್ಯೆ 101	ಖಾಸಗಿ	ಬಿಲ್ಟಪ್ ಏರಿಯಾ	25	0.0025
252	ಖಾತಾ ಸಂಖ್ಯೆ 102	ಖಾಸಗಿ	ಬಿಲ್ಟಪ್ ಏರಿಯಾ	25	0.0025
253	ಖಾತಾ ಸಂಖ್ಯೆ 103	ಖಾಸಗಿ	ಬಿಲ್ಟಪ್ ಏರಿಯಾ	25	0.0025
254	ಖಾತಾ ಸಂಖ್ಯೆ 104/1	ಖಾಸಗಿ	ಬಿಲ್ಟಪ್ ಏರಿಯಾ	50	0.005
255	ಖಾತಾ ಸಂಖ್ಯೆ 128/1	ಖಾಸಗಿ	ಬಿಲ್ಟಪ್ ಏರಿಯಾ	50	0.005
256	ಖಾತಾ ಸಂಖ್ಯೆ 129	ಖಾಸಗಿ	ಬಿಲ್ಟಪ್ ಏರಿಯಾ	50	0.005
257	ಖಾತಾ ಸಂಖ್ಯೆ 130	ಖಾಸಗಿ	ಬಿಲ್ಟಪ್ ಏರಿಯಾ	50	0.005
258	ಖಾತಾ ಸಂಖ್ಯೆ 206	ಖಾಸಗಿ	ಬಿಲ್ಟಪ್ ಏರಿಯಾ	25	0.0025
259	ಖಾತಾ ಸಂಖ್ಯೆ 208	ಖಾಸಗಿ	ಬಿಲ್ಟಪ್ ಏರಿಯಾ	25	0.0025
260	ಖಾತಾ ಸಂಖ್ಯೆ 209	ಖಾಸಗಿ	ಬಿಲ್ಟಪ್ ಏರಿಯಾ	50	0.005
261	ಖಾತಾ ಸಂಖ್ಯೆ 209/1	ಖಾಸಗಿ	ಬಿಲ್ಟಪ್ ಏರಿಯಾ	25	0.0025
262	ಖಾತಾ ಸಂಖ್ಯೆ 238	ಖಾಸಗಿ	ಬಿಲ್ಟಪ್ ಏರಿಯಾ	50	0.005
263	ಖಾತಾ ಸಂಖ್ಯೆ 239	ಖಾಸಗಿ	ಬಿಲ್ಟಪ್ ಏರಿಯಾ	50	0.005
264	ಖಾತಾ ಸಂಖ್ಯೆ 25	ಖಾಸಗಿ	ಬಿಲ್ಟಪ್ ಏರಿಯಾ	75	0.0075
265	ಖಾತಾ ಸಂಖ್ಯೆ 251	ಖಾಸಗಿ	ಬಿಲ್ಟಪ್ ಏರಿಯಾ	50	0.005
266	ಖಾತಾ ಸಂಖ್ಯೆ 252	ಖಾಸಗಿ	ಬಿಲ್ಟಪ್ ಏರಿಯಾ	25	0.0025
267	ಖಾತಾ ಸಂಖ್ಯೆ 254	ಖಾಸಗಿ	ಬಿಲ್ಟಪ್ ಏರಿಯಾ	25	0.0025
268	ಖಾತಾ ಸಂಖ್ಯೆ 254/1	ಖಾಸಗಿ	ಬಿಲ್ಟಪ್ ಏರಿಯಾ	25	0.0025
269	ಖಾತಾ ಸಂಖ್ಯೆ 255	ಖಾಸಗಿ	ಬಿಲ್ಟಪ್ ಏರಿಯಾ	75	0.0075
270	ಖಾತಾ ಸಂಖ್ಯೆ 26	ಖಾಸಗಿ	ಬಿಲ್ಟಪ್ ಏರಿಯಾ	100	0.01
271	ಖಾತಾ ಸಂಖ್ಯೆ 321	ಖಾಸಗಿ	ಬಿಲ್ಟಪ್ ಏರಿಯಾ	50	0.005
272	ಖಾತಾ ಸಂಖ್ಯೆ 325	ಖಾಸಗಿ	ಬಿಲ್ಟಪ್ ಏರಿಯಾ	25	0.0025
273	ಖಾತಾ ಸಂಖ್ಯೆ 38	ಖಾಸಗಿ	ಬಿಲ್ಟಪ್ ಏರಿಯಾ	25	0.0025
274	ಖಾತಾ ಸಂಖ್ಯೆ 39	ಖಾಸಗಿ	ಬಿಲ್ಟಪ್ ಏರಿಯಾ	100	0.01
275	ಖಾತಾ ಸಂಖ್ಯೆ 418/327	ಖಾಸಗಿ	ಬಿಲ್ಟಪ್ ಏರಿಯಾ	75	0.0075
276	ಖಾತಾ ಸಂಖ್ಯೆ 48	ಖಾಸಗಿ	ಬಿಲ್ಟಪ್ ಏರಿಯಾ	100	0.01
277	ಖಾತಾ ಸಂಖ್ಯೆ 49	ಖಾಸಗಿ	ಬಿಲ್ಟಪ್ ಏರಿಯಾ	50	0.005
278	ಖಾತಾ ಸಂಖ್ಯೆ 60	ಖಾಸಗಿ	ಬಿಲ್ಟಪ್ ಏರಿಯಾ	50	0.005
279	ಖಾತಾ ಸಂಖ್ಯೆ 61/1	ಖಾಸಗಿ	ಬಿಲ್ಟಪ್ ಏರಿಯಾ	125	0.0125
280	ಖಾತಾ ಸಂಖ್ಯೆ 70	ಖಾಸಗಿ	ಬಿಲ್ಟಪ್ ಏರಿಯಾ	125	0.0125
281	ಖಾತಾ ಸಂಖ್ಯೆ 82	ಖಾಸಗಿ	ಬಿಲ್ಟಪ್ ಏರಿಯಾ	75	0.0075
282	ಖಾತಾ ಸಂಖ್ಯೆ 85	ಖಾಸಗಿ	ಬಿಲ್ಟಪ್ ಏರಿಯಾ	75	0.0075
283	ಖಾತಾ ಸಂಖ್ಯೆ 86	ಖಾಸಗಿ	ಬಿಲ್ಟಪ್ ಏರಿಯಾ	75	0.0075
284	ಖಾತಾ ಸಂಖ್ಯೆ 87	ಖಾಸಗಿ	ಬಿಲ್ಟಪ್ ಏರಿಯಾ	100	0.01
285	ಖಾತಾ ಸಂಖ್ಯೆ 89	ಖಾಸಗಿ	ಬಿಲ್ಟಪ್ ಏರಿಯಾ	100	0.01
286	ಖಾತಾ ಸಂಖ್ಯೆ 97	ಖಾಸಗಿ	ಬಿಲ್ಟಪ್ ಏರಿಯಾ	75	0.0075
287	ಖಾತಾ ಸಂಖ್ಯೆ 97/1	ಖಾಸಗಿ	ಬಿಲ್ಟಪ್ ಏರಿಯಾ	125	0.0125
288	ಖಾತಾ ಸಂಖ್ಯೆ 98	ಖಾಸಗಿ	ಬಿಲ್ಟಪ್ ಏರಿಯಾ	75	0.0075
289	ಖಾತಾ ಸಂಖ್ಯೆ 99	ಖಾಸಗಿ	ಬಿಲ್ಟಪ್ ಏರಿಯಾ	75	0.0075
ಗ್ರಾಮ : ಅರಳೀಕೆರೆ					
290	100/11	ಖಾಸಗಿ	ಖುಷ್ಕಿ	0.99	9.9ಇ–05
291	108/4ಎ3	ಖಾಸಗಿ	ಖುಷ್ಕಿ	222.39	0.022239
292	108/4ಎ4	ಖಾಸಗಿ	ಖುಷ್ಕಿ	12.85	0.001285
293	110/10	ಖಾಸಗಿ	ಖುಷ್ಕಿ	1792.01	0.179201
294	110/12	ಖಾಸಗಿ	ಖುಷ್ಕಿ	1658.57	0.165857
295	110/13ಎ	ಖಾಸಗಿ	ಖುಷ್ಕಿ	113.67	0.011367
296	110/13ಬಿ	ಖಾಸಗಿ	ಖುಷ್ಕಿ	1136.68	0.113668
297	110/13ಸಿ	ಖಾಸಗಿ	ಖುಷ್ಕಿ	1099.12	0.109912
298	110/2	ಖಾಸಗಿ	ಖುಷ್ಕಿ	358.8	0.03588
299	110/3	ಖಾಸಗಿ	ಖುಷ್ಕಿ	1921.49	0.192149
300	110/4	ಖಾಸಗಿ	ಖುಷ್ಕಿ	847.08	0.084708
301	110/5	ಖಾಸಗಿ	ಖುಷ್ಕಿ	476.42	0.047642
302	110/6	ಖಾಸಗಿ	ಖುಷ್ಕಿ	551.54	0.055154
303	110/7	ಖಾಸಗಿ	ಖುಷ್ಕಿ	223.38	0.022338
304	110/8	ಖಾಸಗಿ	ಖುಷ್ಕಿ	473.45	0.047345
305	110/9	ಖಾಸಗಿ	ಖುಷ್ಕಿ	797.65	0.079765
306	111/11	ಖಾಸಗಿ	ಖುಷ್ಕಿ	1173.25	0.117325
307	116	ಖಾಸಗಿ	ಖುಷ್ಕಿ	67.21	0.006721
308	119/1	ಖಾಸಗಿ	ಖುಷ್ಕಿ	3259.81	0.325981
309	119/2ಎ	ಖಾಸಗಿ	ಖುಷ್ಕಿ	535.72	0.053572
310	119/3	ಖಾಸಗಿ	ಖುಷ್ಕಿ	2448.32	0.244832
311	120/1	ಖಾಸಗಿ	ಖುಷ್ಕಿ	3563.25	0.356325
312	120/5	ಖಾಸಗಿ	ಖುಷ್ಕಿ	369.67	0.036967
313	120/6	ಖಾಸಗಿ	ಖುಷ್ಕಿ	2731.99	0.273199
314	121/10	ಖಾಸಗಿ	ಖುಷ್ಕಿ	951.85	0.095185
315	121/3	ಖಾಸಗಿ	ಖುಷ್ಕಿ	2606.46	0.260646
316	121/4	ಖಾಸಗಿ	ಖುಷ್ಕಿ	1794.97	0.179497
317	121/5	ಖಾಸಗಿ	ಖುಷ್ಕಿ	146.29	0.014629
318	121/7	ಖಾಸಗಿ	ಖುಷ್ಕಿ	1593.33	0.159333
319	121/9	ಖಾಸಗಿ	ಖುಷ್ಕಿ	2474.02	0.247402
320	122/8	ಖಾಸಗಿ	ಖುಷ್ಕಿ	640.5	0.06405
321	134	ಖಾಸಗಿ	ಖುಷ್ಕಿ	717.59	0.071759
322	135/1	ಖಾಸಗಿ	ಖುಷ್ಕಿ	456.65	0.045665
323	135/2	ಖಾಸಗಿ	ಖುಷ್ಕಿ	323.21	0.032321
324	136/1	ಖಾಸಗಿ	ಖುಷ್ಕಿ	350.89	0.035089
325	136/2	ಖಾಸಗಿ	ಖುಷ್ಕಿ	701.78	0.070178
326	138/2ಬಿ	ಖಾಸಗಿ	ಖುಷ್ಕಿ	113.67	0.011367
327	139	ಖಾಸಗಿ	ಖುಷ್ಕಿ	1783.11	0.178311
328	140/1	ಖಾಸಗಿ	ಖುಷ್ಕಿ	1989.69	0.198969
329	140/2	ಖಾಸಗಿ	ಖುಷ್ಕಿ	1770.26	0.177026
330	53/1	ಖಾಸಗಿ	ಖುಷ್ಕಿ	1581.47	0.158147
331	53/2	ಖಾಸಗಿ	ಖುಷ್ಕಿ	332.11	0.033211
332	53/3	ಖಾಸಗಿ	ಖುಷ್ಕಿ	3178.76	0.317876
333	54/10	ಖಾಸಗಿ	ಖುಷ್ಕಿ	160.12	0.016012
334	54/11	ಖಾಸಗಿ	ಖುಷ್ಕಿ	392.4	0.03924
335	54/12	ಖಾಸಗಿ	ಖುಷ್ಕಿ	367.69	0.036769
336	54/3	ಖಾಸಗಿ	ಖುಷ್ಕಿ	112.68	0.011268
337	54/4	ಖಾಸಗಿ	ಖುಷ್ಕಿ	1577.52	0.157752
338	54/7	ಖಾಸಗಿ	ಖುಷ್ಕಿ	86.98	0.008698
339	54/8	ಖಾಸಗಿ	ಖುಷ್ಕಿ	194.72	0.019472
340	54/9	ಖಾಸಗಿ	ಖುಷ್ಕಿ	185.82	0.018582
341	55/1ಎ3	ಖಾಸಗಿ	ಖುಷ್ಕಿ	371.65	0.037165
342	55/1ಎ4	ಖಾಸಗಿ	ಖುಷ್ಕಿ	56.34	0.005634
343	55/1ಬಿ1	ಖಾಸಗಿ	ಖುಷ್ಕಿ	148.26	0.014826
344	55/1ಬಿ2	ಖಾಸಗಿ	ಖುಷ್ಕಿ	174.95	0.017495
345	55/1ಬಿ3	ಖಾಸಗಿ	ಖುಷ್ಕಿ	85.99	0.008599
346	55/8	ಖಾಸಗಿ	ಖುಷ್ಕಿ	635.55	0.063555
347	59	ಖಾಸಗಿ	ಖುಷ್ಕಿ	258.97	0.025897
348	60/23	ಖಾಸಗಿ	ಖುಷ್ಕಿ	50	0.005
349	60/8	ಖಾಸಗಿ	ಖುಷ್ಕಿ	50	0.005
350	61/10	ಖಾಸಗಿ	ಖುಷ್ಕಿ	25	0.0025
351	61/11	ಖಾಸಗಿ	ಖುಷ್ಕಿ	25	0.0025
352	61/12	ಖಾಸಗಿ	ಖುಷ್ಕಿ	25	0.0025
353	61/6	ಖಾಸಗಿ	ಖುಷ್ಕಿ	25	0.0025
354	61/7ಎ	ಖಾಸಗಿ	ಖುಷ್ಕಿ	50	0.005
355	61/7ಬಿ1	ಖಾಸಗಿ	ಖುಷ್ಕಿ	50	0.005
356	61/8	ಖಾಸಗಿ	ಖುಷ್ಕಿ	50	0.005
ಗ್ರಾಮ : ಕಳ್ಳನಕೆರೆ					
357	100	ಖಾಸಗಿ	ಖುಷ್ಕಿ	350	0.035
358	101/1	ಖಾಸಗಿ	ಖುಷ್ಕಿ	1400	0.14
359	101/2	ಖಾಸಗಿ	ಖುಷ್ಕಿ	2325	0.2325
360	102	ಖಾಸಗಿ	ಖುಷ್ಕಿ	25	0.0025
361	105	ಖಾಸಗಿ	ಖುಷ್ಕಿ	250	0.025
362	74/9	ಖಾಸಗಿ	ಖುಷ್ಕಿ	25	0.0025
363	75	ಸಾಮಾನ್ಯ (ಖಾಸಗಿ/ಸರ್ಕಾರಿ)	ಖುಷ್ಕಿ	900	0.09
ಗ್ರಾಮ : ಸಂಗಲಾಪುರ					
364	21/12	ಖಾಸಗಿ	ಖುಷ್ಕಿ	350	0.035
365	21/17	ಖಾಸಗಿ	ಖುಷ್ಕಿ	375	0.0375
366	39/3	ಖಾಸಗಿ	ಖುಷ್ಕಿ	925	0.0925
367	39/5	ಖಾಸಗಿ	ಖುಷ್ಕಿ	950	0.095
ಗ್ರಾಮ : ಚಿಕ್ಕೋನಹಳ್ಳಿ					
368	62/1	ಖಾಸಗಿ	ಖುಷ್ಕಿ	500	0.05
369	62/2	ಖಾಸಗಿ	ಖುಷ್ಕಿ	250	0.025
ಗ್ರಾಮ : ಬೊಮ್ಮೇನಹಳ್ಳಿ					
370	115/1ಬಿ	ಖಾಸಗಿ	ಖುಷ್ಕಿ	175	0.0175
371	115/4	ಖಾಸಗಿ	ಖುಷ್ಕಿ	150	0.015
372	116/2	ಖಾಸಗಿ	ಖುಷ್ಕಿ	3550	0.355
373	118/3	ಖಾಸಗಿ	ಖುಷ್ಕಿ	550	0.055
374	118/5	ಖಾಸಗಿ	ಖುಷ್ಕಿ	450	0.045
375	119/5	ಖಾಸಗಿ	ಖುಷ್ಕಿ	700	0.07
376	24/10	ಖಾಸಗಿ	ಖುಷ್ಕಿ	3000	0.3
377	24/11	ಖಾಸಗಿ	ಖುಷ್ಕಿ	2400	0.24
378	24/12	ಖಾಸಗಿ	ಖುಷ್ಕಿ	650	0.065
379	24/13	ಖಾಸಗಿ	ಖುಷ್ಕಿ	200	0.02
380	24/5	ಖಾಸಗಿ	ಖುಷ್ಕಿ	400	0.04
381	24/6	ಖಾಸಗಿ	ಖುಷ್ಕಿ	1200	0.12
382	24/7ಎ	ಖಾಸಗಿ	ಖುಷ್ಕಿ	1900	0.19
383	24/7ಬಿ	ಖಾಸಗಿ	ಖುಷ್ಕಿ	1700	0.17
384	24/7ಸಿ	ಖಾಸಗಿ	ಖುಷ್ಕಿ	600	0.06
385	24/8ಎ	ಖಾಸಗಿ	ಖುಷ್ಕಿ	1000	0.1
386	24/8ಬಿ	ಖಾಸಗಿ	ಖುಷ್ಕಿ	700	0.07
387	24/8ಸಿ	ಖಾಸಗಿ	ಖುಷ್ಕಿ	1300	0.13
388	45	ಖಾಸಗಿ	ಖುಷ್ಕಿ	3200	0.32
ಗ್ರಾಮ : ಕೋಡಿನಾಗಸಂದ್ರ					
389	10	ಖಾಸಗಿ	ಖುಷ್ಕಿ	400	0.04
390	13/10	ಖಾಸಗಿ	ಖುಷ್ಕಿ	25	0.0025
391	13/11	ಖಾಸಗಿ	ಖುಷ್ಕಿ	200	0.02
392	13/6	ಖಾಸಗಿ	ಖುಷ್ಕಿ	500	0.05
393	19/1	ಖಾಸಗಿ	ಖುಷ್ಕಿ	300	0.03
394	20/1	ಖಾಸಗಿ	ಖುಷ್ಕಿ	1300	0.13
395	20/10	ಖಾಸಗಿ	ಖುಷ್ಕಿ	50	0.005
396	20/2	ಖಾಸಗಿ	ಖುಷ್ಕಿ	175	0.0175
397	20/3	ಖಾಸಗಿ	ಖುಷ್ಕಿ	200	0.02
398	20/4	ಖಾಸಗಿ	ಖುಷ್ಕಿ	400	0.04
399	28	ಖಾಸಗಿ	ಖುಷ್ಕಿ	1025	0.1025
400	30/1	ಖಾಸಗಿ	ಖುಷ್ಕಿ	900	0.09
401	30/3ಎ1	ಖಾಸಗಿ	ಖುಷ್ಕಿ	350	0.035
402	30/5	ಖಾಸಗಿ	ಖುಷ್ಕಿ	1625	0.1625
ಗ್ರಾಮ : ಮಾಯಸಂದ್ರ					
403	265	ಖಾಸಗಿ	ಖುಷ್ಕಿ	425	0.0425
404	267/3	ಖಾಸಗಿ	ಖುಷ್ಕಿ	475	0.0475
405	267/4	ಖಾಸಗಿ	ಖುಷ್ಕಿ	850	0.085
406	267/5	ಖಾಸಗಿ	ಖುಷ್ಕಿ	1850	0.185
407	267/6	ಖಾಸಗಿ	ಖುಷ್ಕಿ	950	0.095
408	268	ಖಾಸಗಿ	ಖುಷ್ಕಿ	50	0.005
409	269/3	ಖಾಸಗಿ	ಖುಷ್ಕಿ	200	0.02
410	269/4	ಖಾಸಗಿ	ಖುಷ್ಕಿ	525	0.0525
411	269/5	ಖಾಸಗಿ	ಖುಷ್ಕಿ	200	0.02
412	269/6	ಖಾಸಗಿ	ಖುಷ್ಕಿ	225	0.0225
413	269/7	ಖಾಸಗಿ	ಖುಷ್ಕಿ	100	0.01
414	269/8	ಖಾಸಗಿ	ಖುಷ್ಕಿ	250	0.025
415	269/9	ಖಾಸಗಿ	ಖುಷ್ಕಿ	175	0.0175
416	275	ಖಾಸಗಿ	ಖುಷ್ಕಿ	75	0.0075
417	276/5	ಖಾಸಗಿ	ಖುಷ್ಕಿ	25	0.0025
418	279	ಖಾಸಗಿ	ಖುಷ್ಕಿ	225	0.0225
419	299/1	ಖಾಸಗಿ	ಖುಷ್ಕಿ	250	0.025
420	299/7	ಖಾಸಗಿ	ಖುಷ್ಕಿ	50	0.005
421	308/5	ಖಾಸಗಿ	ಖುಷ್ಕಿ	50	0.005
422	308/8	ಖಾಸಗಿ	ಖುಷ್ಕಿ	350	0.035
423	308/9	ಖಾಸಗಿ	ಖುಷ್ಕಿ	475	0.0475
424	318	ಖಾಸಗಿ	ಖುಷ್ಕಿ	250	0.025
425	323	ಖಾಸಗಿ	ಖುಷ್ಕಿ	150	0.015
426	326/2	ಖಾಸಗಿ	ಖುಷ್ಕಿ	50	0.005
427	328	ಖಾಸಗಿ	ಖುಷ್ಕಿ	175	0.0175
428	69/2	ಖಾಸಗಿ	ಖುಷ್ಕಿ	600	0.06
429	69/3	ಖಾಸಗಿ	ಖುಷ್ಕಿ	1325	0.1325
430	76/2	ಖಾಸಗಿ	ಖುಷ್ಕಿ	950	0.095
ಗ್ರಾಮ : ಚಿಕ್ಕಶೆಟ್ಟಿಕೆರೆ					
431	102	ಖಾಸಗಿ	ಖುಷ್ಕಿ	250	0.025
432	13/1	ಖಾಸಗಿ	ಖುಷ್ಕಿ	450	0.045
433	13/3	ಖಾಸಗಿ	ಖುಷ್ಕಿ	300	0.03
434	14	ಖಾಸಗಿ	ಖುಷ್ಕಿ	675	0.0675
435	63/3ಎ1	ಖಾಸಗಿ	ಖುಷ್ಕಿ	750	0.075
436	63/9	ಖಾಸಗಿ	ಖುಷ್ಕಿ	750	0.075
437	64/1	ಖಾಸಗಿ	ಖುಷ್ಕಿ	450	0.045
438	64/2	ಖಾಸಗಿ	ಖುಷ್ಕಿ	125	0.0125
ಗ್ರಾಮ : ದೊಡ್ಡಶೆಟ್ಟಿಕೆರೆ					
439	18	ಖಾಸಗಿ	ಖುಷ್ಕಿ	850	0.085
ಗ್ರಾಮ : ಧನನಾಯಕನಪುರದ ಕಾವಲ್					
440	1/1	ಖಾಸಗಿ	ಖುಷ್ಕಿ	1025	0.1025
441	1/2	ಖಾಸಗಿ	ಖುಷ್ಕಿ	1550	0.155
442	38	ಖಾಸಗಿ	ಖುಷ್ಕಿ	925	0.0925
443	4	ಖಾಸಗಿ	ಖುಷ್ಕಿ	425	0.0425
444	46	ಖಾಸಗಿ	ಖುಷ್ಕಿ	1200	0.12
445	47	ಖಾಸಗಿ	ಖುಷ್ಕಿ	2575	0.2575
446	5	ಖಾಸಗಿ	ಖುಷ್ಕಿ	600	0.06
ಗ್ರಾಮ : ಹರಿದಾಸನಹಳ್ಳಿ					
447	ಖಾತಾ ಸಂಖ್ಯೆ 11	ಖಾಸಗಿ	ಬಿಲ್ಟಪ್ ಏರಿಯಾ	75	0.0075
448	ಖಾತಾ ಸಂಖ್ಯೆ 11	ಖಾಸಗಿ	ಬಿಲ್ಟಪ್ ಏರಿಯಾ	75	0.0075
449	ಖಾತಾ ಸಂಖ್ಯೆ 14/1	ಖಾಸಗಿ	ಬಿಲ್ಟಪ್ ಏರಿಯಾ	75	0.0075
450	ಖಾತಾ ಸಂಖ್ಯೆ 1530/153	ಖಾಸಗಿ	ಬಿಲ್ಟಪ್ ಏರಿಯಾ	50	0.005
451	ಖಾತಾ ಸಂಖ್ಯೆ 22	ಖಾಸಗಿ	ಬಿಲ್ಟಪ್ ಏರಿಯಾ	125	0.0125
452	ಖಾತಾ ಸಂಖ್ಯೆ 23	ಖಾಸಗಿ	ಬಿಲ್ಟಪ್ ಏರಿಯಾ	200	0.02
453	ಖಾತಾ ಸಂಖ್ಯೆ 24	ಖಾಸಗಿ	ಬಿಲ್ಟಪ್ ಏರಿಯಾ	50	0.005
454	ಖಾತಾ ಸಂಖ್ಯೆ 32	ಖಾಸಗಿ	ಬಿಲ್ಟಪ್ ಏರಿಯಾ	100	0.01
455	ಖಾತಾ ಸಂಖ್ಯೆ 33	ಖಾಸಗಿ	ಬಿಲ್ಟಪ್ ಏರಿಯಾ	75	0.0075
456	ಖಾತಾ ಸಂಖ್ಯೆ 34	ಖಾಸಗಿ	ಬಿಲ್ಟಪ್ ಏರಿಯಾ	75	0.0075
457	ಖಾತಾ ಸಂಖ್ಯೆ 44	ಖಾಸಗಿ	ಬಿಲ್ಟಪ್ ಏರಿಯಾ	25	0.0025
458	ಖಾತಾ ಸಂಖ್ಯೆ 45	ಖಾಸಗಿ	ಬಿಲ್ಟಪ್ ಏರಿಯಾ	25	0.0025
459	ಖಾತಾ ಸಂಖ್ಯೆ 46	ಖಾಸಗಿ	ಬಿಲ್ಟಪ್ ಏರಿಯಾ	50	0.005
460	ಖಾತಾ ಸಂಖ್ಯೆ 47	ಖಾಸಗಿ	ಬಿಲ್ಟಪ್ ಏರಿಯಾ	50	0.005
461	ಖಾತಾ ಸಂಖ್ಯೆ 48	ಖಾಸಗಿ	ಬಿಲ್ಟಪ್ ಏರಿಯಾ	125	0.0125
462	ಖಾತಾ ಸಂಖ್ಯೆ 63	ಖಾಸಗಿ	ಬಿಲ್ಟಪ್ ಏರಿಯಾ	75	0.0075
463	ಖಾತಾ ಸಂಖ್ಯೆ 64	ಖಾಸಗಿ	ಬಿಲ್ಟಪ್ ಏರಿಯಾ	75	0.0075
464	ಖಾತಾ ಸಂಖ್ಯೆ 65	ಖಾಸಗಿ	ಬಿಲ್ಟಪ್ ಏರಿಯಾ	125	0.0125
465	ಖಾತಾ ಸಂಖ್ಯೆ 70	ಖಾಸಗಿ	ಬಿಲ್ಟಪ್ ಏರಿಯಾ	75	0.0075
466	ಖಾತಾ ಸಂಖ್ಯೆ8	ಖಾಸಗಿ	ಬಿಲ್ಟಪ್ ಏರಿಯಾ	50	0.005
				ಒಟ್ಟು	30.615799

[F.No.12037/56/2016-KNT(P-6)/3A1]
ಶೇಖ್ ಅಮೀನ್‌ಖಾನ್, ನಿರ್ದೇಶಕರು



❦ ಸುಭಾಷಿತ ❦
ಇತರರೊಂದಿಗೆ ನಿಮ್ಮನ್ನು ಹೋಲಿಸಿಕೊಳ್ಳಬೇಡಿ. ಯಾರೊಬ್ಬರಿಗೂ ನಿಮ್ಮ ಪಾತ್ರವನ್ನು ನಿಮ್ಮಷ್ಟು ಚೆನ್ನಾಗಿ ನಿರ್ವಹಿಸಲು ಸಾಧ್ಯವಾಗುವುದಿಲ್ಲ.
–ಎ.ಪಿ.ಜೆ. ಅಬ್ದುಲ್ ಕಲಾಂ

ಟ್ರಂಪ್ ಸಾರಿದ ಸುಂಕ ಸಮರ ವ್ಯಾಪಾರ ವ್ಯವಸ್ಥೆ ಬುಡಮೇಲು?

ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ವಿಧಿಸಿರುವ ಪ್ರತಿಸುಂಕ ಹಾಗೂ ಅದಕ್ಕೆ ತಿರುಗೇಟು ನೀಡುವ ಉದ್ದೇಶದಿಂದ ಚೀನಾ ದೇಶವು ಅಮೆರಿಕದ ಮೇಲೆ ವಿಧಿಸಿರುವ ಸುಂಕವು ಜಾಗತಿಕ ಬಂಡವಾಳ ಮಾರುಕಟ್ಟೆಗಳಲ್ಲಿ ಕೋಲಾಹಲ ಸೃಷ್ಟಿಸಿವೆ. ಇಂತಹ ಕಠಿಣ ಕ್ರಮಗಳ ಮೊದಲ ಏಟು ಬೀಳುವುದು ಷೇರುಪೇಟೆಗಳಿಗೆ. ಸೋಮವಾರದ ವಹಿವಾಟಿನಲ್ಲಿ ಜಗತ್ತಿನ ಬಹುತೇಕ ಷೇರುಪೇಟೆಗಳು ಕುಸಿತ ದಾಖಲಿಸಿವೆ. ಹ್ಯಾಂಗ್‌ಸೆಂಗ್ ಸೂಚ್ಯಂಕ ಶೇಕಡ 13ರಷ್ಟು, ನಿಕ್ಕಿ ಶೇ 8ರಷ್ಟು, ಕೊಸ್ಪಿ ಶೇ 5.6ರಷ್ಟು ಕುಸಿತ ಕಂಡಿವೆ. ಯುರೋಪಿನ ದೇಶಗಳ ಷೇರುಪೇಟೆಗಳೂ ಭಾರಿ ಇಳಿಕೆ ದಾಖಲಿಸಿವೆ. ಅಮೆರಿಕದ ಷೇರುಪೇಟೆಗಳಲ್ಲಿ ತೀರಾ ಚಂಚಲ ವಹಿವಾಟು ನಡೆದಿದೆ. ಭಾರತದ ಷೇರುಪೇಟೆಯ ಪ್ರಮುಖ ಸೂಚ್ಯಂಕಗಳಾದ ಸೆನ್ಸೆಕ್ಸ್ ಮತ್ತು ನಿಫ್ಟಿ ಸರಿಸುಮಾರು ಶೇ 3ರಷ್ಟು ಇಳಿಕೆ ಕಂಡವು. ದೇಶದಲ್ಲಿ ಹೂಡಿಕೆದಾರರು ಕಳೆದುಕೊಂಡ ಸಂಪತ್ತಿನ ಮೌಲ್ಯ ₹14 ಲಕ್ಷ ಕೋಟಿ. ಮಂಗಳವಾರದ ವಹಿವಾಟಿನಲ್ಲಿ ಭಾರತದ ಷೇರುಪೇಟೆಗಳಲ್ಲಿ ಒಂದಿಷ್ಟು ಚೇತರಿಕೆ ಕಂಡುಬಂದಿದೆ. ಮುಂಬರುವ ದಿನಗಳಲ್ಲಿ ಷೇರುಪೇಟೆಗಳಲ್ಲಿ ಅನಿಶ್ಚಿತ ಸ್ಥಿತಿಯು ಮುಂದುವರಿಯುವ ಸಾಧ್ಯತೆಗಳು ಹೆಚ್ಚಿವೆ. ಜಾಗತಿಕ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯು ಕಡಿಮೆ ಆಗಿದೆ. ಬ್ರೆಂಟ್ ಕಚ್ಚಾ ತೈಲದ ಬೆಲೆಯು ಏಪ್ರಿಲ್ ತಿಂಗಳಲ್ಲೇ ಶೇ 15ರಷ್ಟು ಕಡಿಮೆ ಆಗಿದೆ. ಚಿನ್ನದ ಬೆಲೆ ಕೂಡ ತಗ್ಗಿದೆ.



ಸುಂಕ ಸಮರ ಮುಂದುವರಿದರೆ, ವಿಶ್ವದ ವ್ಯಾಪಾರ ಸಂಬಂಧದಲ್ಲಿನ ಪದ್ಧತಿಗಳಲ್ಲಿ ಬಹಳಷ್ಟು ಬದಲಾವಣೆಗಳು ಆಗಲಿವೆ

ಅಮೆರಿಕದಿಂದ ಆಮದಾಗುವ ಸರಕುಗಳ ಮೇಲೆ ಶೇ34ರಷ್ಟು ಸುಂಕವನ್ನು ಚೀನಾ ವಿಧಿಸಿದೆ. ಚೀನಾದಿಂದ ಆಮದಾಗುವ ಸರಕುಗಳ ಮೇಲೆ ಹೊಸದಾಗಿ ಶೇ 50ರಷ್ಟು ಸುಂಕ ವಿಧಿಸುವುದಾಗಿ ಟ್ರಂಪ್ ಅವರು ಎಚ್ಚರಿಕೆ ನೀಡಿದ್ದಾರೆ. ಇದಕ್ಕೆ ತಿರುಗೇಟು ನೀಡಿರುವ ಚೀನಾ, 'ನಮ್ಮ ಹಕ್ಕುಗಳನ್ನು ರಕ್ಷಿಸಿಕೊಳ್ಳಲು' ಕ್ರಮ ಕೈಗೊಳ್ಳಲಾಗುತ್ತದೆ ಎಂದು ಹೇಳಿದೆ. ಮಾರುಕಟ್ಟೆಗಳಲ್ಲಿ ಆತಿಥ್ಯದ ರಕ್ಷಣಾತ್ಮಕ ಕ್ರಮಗಳನ್ನು ಎದುರಿಸಲು ಹಾಗೂ ಅಂತರರಾಷ್ಟ್ರೀಯ ವ್ಯಾಪಾರ ವ್ಯವಸ್ಥೆಯನ್ನು ರಕ್ಷಿಸಲು ಮೈತ್ರಿಕೂಟವೊಂದನ್ನು ರಚಿಸುವ ಆಲೋಚನೆ ಇರುವುದಾಗಿ ಚೀನಾ ಹೇಳಿದೆ. ಟ್ರಂಪ್ ಅವರು ಆರಂಭಿಸಿದ ಸುಂಕ ಸಮರಕ್ಕೆ ಜಗತ್ತಿನ ಬೇರೆ ಬೇರೆ ದೇಶಗಳು ಭಿನ್ನ ಬಗೆಯಲ್ಲಿ ಪ್ರತಿಕ್ರಿಯೆ ನೀಡಿವೆ. ಕೆಲವು ದೇಶಗಳು ಪ್ರತೀಕಾರ ಕ್ರಮವಾಗಿ ಸುಂಕ ವಿಧಿಸಿವೆ. ಇನ್ನು ಕೆಲವು ದೇಶಗಳು, ಅಮೆರಿಕದ ಜೊತೆ ವ್ಯಾಪಾರ ಒಪ್ಪಂದ ಮಾಡಿಕೊಳ್ಳಲು ಸಿದ್ಧವಿರುವುದಾಗಿ ಹೇಳಿವೆ. ಮಾತುಕತೆಯ ಪ್ರಸ್ತಾವದೊಂದಿಗೆ 50ಕ್ಕೂ ಹೆಚ್ಚು ದೇಶಗಳು ತನ್ನನ್ನು ಸಂಪರ್ಕಿಸಿವೆ ಎಂದು ಅಮೆರಿಕ ಹೇಳಿದೆ. ಟ್ರಂಪ್ ಅವರ ಕ್ರಮ ವಿರೋಧಿಸಿ ಅಮೆರಿಕದಲ್ಲಿಯೇ ಪ್ರತಿಭಟನೆಗಳು ನಡೆದಿವೆ. ಸುಂಕ ವಿಧಿಸುವ ಕ್ರಮವು ಅಂತಿಮವಾಗಿ ಅಮೆರಿಕದ ಗ್ರಾಹಕರಿಗೆ ನಷ್ಟ ಎಂದೂ ಅಲ್ಲಿನ ಅರ್ಥಶಾಸ್ತ್ರಜ್ಞರು ಹೇಳಿದ್ದಾರೆ. ಸುಂಕ ವಿಧಿಸುವ ಟ್ರಂಪ್ ಅವರ ಕ್ರಮದಿಂದಾಗಿ ಅಮೆರಿಕಕ್ಕೆ ಲಾಭ ಆಗುವುದಿಲ್ಲ, ಈ ಕ್ರಮದಿಂದಾಗಿ ಹಣದುಬ್ಬರ ಹೆಚ್ಚಾಗುತ್ತದೆ, ಆರ್ಥಿಕ ಹಿಂಜರಿತ ಎದುರಾಗುತ್ತದೆ ಎಂಬ ಅಭಿಪ್ರಾಯವು ಅಮೆರಿಕದಲ್ಲಿ ಇದೆ. ಅಮೆರಿಕದಲ್ಲಿ ಹಾಗೂ ಜಗತ್ತಿನ ಇತರೆಡೆಗಳಲ್ಲಿ ಆರ್ಥಿಕ ಬೆಳವಣಿಗೆ ದರವು ಕಡಿಮೆ ಆಗುವುದು ಖಚಿತ.

ಸುಂಕ ಸಮರವು ಮುಂದುವರಿದರೆ, ವಿಶ್ವದ ವ್ಯಾಪಾರ ಸಂಬಂಧದಲ್ಲಿ ಚಾಲ್ತಿಯಲ್ಲಿರುವ ಪದ್ಧತಿಗಳಲ್ಲಿ ಬಹಳಷ್ಟು ಬದಲಾವಣೆಗಳು ಆಗಲಿವೆ. [illegible] ಅಗ್ಗದ ಉತ್ಪನ್ನಗಳನ್ನು ತಂದು ಸುರಿಯುವ ಕಳವಳವು ಚೀನಾ ವಿಚಾರವಾಗಿ ಹೆಚ್ಚು ಮಹತ್ವದ್ದಾಗುತ್ತದೆ. ಟ್ರಂಪ್ ಅವರ ಕ್ರಮಗಳಿಂದಾಗಿ ವಿವಿಧ ದೇಶಗಳು ದ್ವಿಪಕ್ಷೀಯ ವಾಣಿಜ್ಯ ಒಪ್ಪಂದಗಳನ್ನು ಹೆಚ್ಚಾಗಿ ನೆಚ್ಚಿಕೊಳ್ಳುವ ಸಾಧ್ಯತೆ ಇದೆ. ಆದರೆ ಇಂತಹ ಒಪ್ಪಂದಗಳು ಕಾರ್ಯರೂಪಕ್ಕೆ ಬರಲು ಹೆಚ್ಚು ಸಮಯ ಬೇಕಾಗುತ್ತದೆ. ಟ್ರಂಪ್ ಅವರ ಕ್ರಮಗಳ ತಕ್ಷಣದ ಪರಿಣಾಮ ಎಂದರೆ, ಜಾಗತಿಕ ವ್ಯಾಪಾರ ವ್ಯವಸ್ಥೆಯು ಬುಡಮೇಲಾಗುತ್ತದೆ, ಪ್ರತಿ ದೇಶವೂ ತನ್ನ ಹಿತಾಸಕ್ತಿ ರಕ್ಷಿಸಿಕೊಳ್ಳಲು ತನ್ನದೇ ಆದ ಮಾರ್ಗವನ್ನು ಅನುಸರಿಸುತ್ತದೆ.

ದಿನದ ಟ್ವೀಟ್

ರಸ್ತೆ ಅಪಘಾತ ತಪ್ಪಿಸಿ



ಬಹುತೇಕರು ಸಂಚಾರ ನಿಯಮಗಳನ್ನು ಪಾಲಿಸುವುದಿಲ್ಲ, ಹಲವರಿಗೆ ರಸ್ತೆಗಳನ್ನು ಹೇಗೆ ಬಳಸಬೇಕು ಎಂಬುದು ತಿಳಿದಿರುವುದಿಲ್ಲ, ಹೆಚ್ಚಿನವರು ವೇಗದ ಮಿತಿಯನ್ನು ಪಾಲಿಸುವುದಿಲ್ಲ, ಮದ್ಯಪಾನ ಮಾಡಿ ವಾಹನ ಚಲಾಯಿಸುವುದು ಸಾಮಾನ್ಯ ಸಂಗತಿಯಾಗಿದೆ, ದ್ವಿಚಕ್ರ ವಾಹನಗಳ ಗೇರು ಸರಿಯಿರುವುದಿಲ್ಲ; ಹೌದು, ನಾವು ಭಾರತೀಯರು ಕಲಿಯಬೇಕಾದುದು ಬಹಳಷ್ಟಿದೆ.

ಡಾ. ಸುಂದರ್, ಕೃಷಿ ವಿಜ್ಞಾನಿ

ಕಿಡಿನುಡಿ



'ಬೆಂಗಳೂರಿನ ಸಂಕಷ್ಟಗಳನ್ನು ದೇವರಷ್ಟೇ ಸರಿಪಡಿಸಲು ಸಾಧ್ಯ' ಎಂದು ಬೆಂಗಳೂರು ಅಭಿವೃದ್ಧಿ ಸಚಿವರು ಹೇಳಿದ್ದರು. ನಗರದಲ್ಲಿ ಮಹಿಳೆಯರ ಮೇಲೆ ಹೆಚ್ಚುತ್ತಿರುವ ಅಪರಾಧ ಕೃತ್ಯಗಳಿಗೆ ಸಂಬಂಧಿಸಿದಂತೆ 'ದೊಡ್ಡ ನಗರದಲ್ಲಿ ಅಲ್ಲಿ ಇಲ್ಲಿ ಇಂತಹ ಘಟನೆಗಳು ನಡೆಯುತ್ತವೆ' ಎಂದು ಗೃಹ ಸಚಿವರು ಹೇಳಿದ್ದಾರೆ. ಇದು, ವರ್ತನೆ, ಸೇವೆ ಮಾಡುವಲ್ಲಿ ಇರುವ ಒಲವು ಮತ್ತು ವೃತ್ತಿಯ ಬಗೆಗಿನ ಬದ್ಧತೆಯನ್ನು ತೋರಿಸುತ್ತದೆ!...

ವೆಂಕಟೇಶ್ ಪೈ ಜೆ.

25 ವರ್ಷಗಳ ಹಿಂದೆ

ಭಾನುವಾರ, 9-4-2000

● **ಪ್ರಯಾಣಿಕರ ದರೋಡೆ ಆರೋಪ ಇಬ್ಬರು ಪೊಲೀಸರ ಬಂಧನ**

ಚಿಕ್ಕಮಗಳೂರು, ಏ. 8– ಪ್ರಯಾಣಿಕರ ವಾಹನವನ್ನು ಅಡ್ಡಗಟ್ಟಿ ದರೋಡೆ ಮಾಡಿದ ಆರೋಪದ ಹಿನ್ನೆಲೆಯಲ್ಲಿ ಮೂಡಿಗೆರೆ ಠಾಣೆಯ ಹೆಡ್ ಕಾನ್‌ಸ್ಟೆಬಲ್ ಮತ್ತು ಇಬ್ಬರು ಕಾನ್‌ಸ್ಟೆಬಲ್‌ಗಳನ್ನು ಜಿಲ್ಲಾ ಪೊಲೀಸ್ ಅಧೀಕ್ಷಕರು ಅಮಾನತು ಮಾಡಿದ್ದಾರೆ.

ಬಾಬಾಬುಡನ್‌ಗಿರಿಯಲ್ಲಿ ಈಚೆಗೆ ನಡೆದ ಉರುಸ್‌ಗೆ ಬಂದಿದ್ದ ಬೆಳ್ತಂಗಡಿಯ ಐವರು ಯಾತ್ರಿಗಳು, ಊರಿಗೆ ವಾಪಸಾಗುತ್ತಿದ್ದ ವೇಳೆ ಅವರ ವಾಹನವನ್ನು ಕೊಟ್ಟಿಗೆಹಾರದ ಬಳಿ ತಡೆದು ನಿಲ್ಲಿಸಿದ ಪೊಲೀಸರು, ಪ್ರಯಾಣಿಕರ ಮೇಲೆ ವಿನಾಕಾರಣ ಹಲ್ಲೆ ಮಾಡಿ ಸಿಗರೇಟ್‌ನಿಂದ ಅವರ ಮೈಕೈಗಳನ್ನು ಸುಟ್ಟಿದ್ದಲ್ಲದೆ, 5 ಸಾವಿರ ರೂಪಾಯಿಗಳನ್ನು ದೋಚಿರುವುದಾಗಿ ಆರೋಪಿಸಲಾಗಿದೆ.

● **ನಟ ಕಿಶನ್ ಕುಮಾರ್ ಶಾಮೀಲು**

ನವದೆಹಲಿ, ಏ. 8 (ಯುಎನ್‌ಐ, ಪಿಟಿಐ)– ದಕ್ಷಿಣ ಆಫ್ರಿಕಾ ಕ್ರಿಕೆಟ್ ತಂಡದ ನಾಯಕ ಹ್ಯಾನ್ಸಿ ಕ್ರೊನಿಯೆ ಮತ್ತು ತಂಡದ ಮೂವರು ಆಟಗಾರರನ್ನು ಒಳಗೊಂಡ ಪೂರ್ವ ನಿಯೋಜಿತ ಪಂದ್ಯ ಮತ್ತು ಬೆಟ್ಟಿಂಗ್ ಪ್ರಕರಣದಲ್ಲಿ ಚಿತ್ರನಟ ಕಿಶನ್ ಕುಮಾರ್ ಅವರೂ ಶಾಮೀಲಾಗಿದ್ದಾರೆ ಎಂದು ಪೊಲೀಸರ ಬಂಧನದಲ್ಲಿರುವ ರಾಜೇಶ್ ಕಲ್ರಾ ಹೇಳಿದ್ದು, ಪ್ರಕರಣ ಹೊಸ ತಿರುವು ಪಡೆದಿದೆ.

ಸುದ್ದಿಸಂಸ್ಥೆಗೆ ಈ ಕುರಿತ ವಿವರಗಳನ್ನು ನೀಡಿರುವ ಪೊಲೀಸ್ ಜಂಟಿ ಆಯುಕ್ತ ಕೆ.ಕೆ. ಪಾಲ್ ಅವರು ಕಿಶನ್ ಕುಮಾರ್ ಅವರ ವಿಚಾರಣೆ ನಡೆಸಲಾಗುವುದು ಎಂದಿದ್ದಾರೆ.

50 ವರ್ಷಗಳ ಹಿಂದೆ

ಬುಧವಾರ, 9-4-1975

● **ವೈದ್ಯಕೀಯ ವಿ.ವಿ. ಸ್ಥಾಪನೆಗೆ ಒಪ್ಪಿಗೆ**

ಬೆಂಗಳೂರು, ಏ. 8– ಭಾರತದಲ್ಲೇ ಅತಿ ಹೆಚ್ಚು ವೈದ್ಯಕೀಯ ಕಾಲೇಜುಗಳನ್ನು ಪಡೆದಿರುವ ಕರ್ನಾಟಕ, ರಾಷ್ಟ್ರದಲ್ಲೇ ಪ್ರಥಮ ವೈದ್ಯಕೀಯ ವಿಶ್ವವಿದ್ಯಾಲಯ ಸ್ಥಾಪಿಸುವ ಬಗ್ಗೆ ಇಂದು ಪ್ರಥಮ ಹೆಜ್ಜೆಯನ್ನಿಟ್ಟಿತು.

ಆರೋಗ್ಯ ಸಚಿವ ಎಚ್. ಸಿದ್ಧವೀರಪ್ಪ ಅವರು ಮಂಡಿಸಿದ್ದ ವೈದ್ಯಕೀಯ ವಿಶ್ವವಿದ್ಯಾಲಯ ಮಸೂದೆಯ ಬಗ್ಗೆ ಜಂಟಿ ಪರಿಶೀಲಕ ಸಮಿತಿಯು ಸಲ್ಲಿಸಿದ್ದ ವರದಿಯ ಮೇಲೆ ಹಲವಾರು ತಿದ್ದುಪಡಿ ಮಂಡಿಸಿದ್ದನ್ನು ಸರ್ವಾನುಮತದಿಂದ ಇಂದು ಒಪ್ಪಿದ ವಿಧಾನಸಭೆ, ವಿರೋಧವಿಲ್ಲದೆ ಅನುಮೋದನೆ ನೀಡಿತು.

● **ದೂಳು ತಿನ್ನುತ್ತಿರುವ ಪುಸ್ತಕಗಳು**

ಬೆಂಗಳೂರು, ಏ. 8– ಅರವತ್ತು ಸಾವಿರ ರೂಪಾಯಿ ವೆಚ್ಚದಲ್ಲಿ ಲಲಿತಕಲಾ ಅಕಾಡೆಮಿ ಪ್ರಕಟಿಸಿರುವ ಚಿತ್ರಗಳ ಸಂಕಲನವೊಂದು ಕೊಳ್ಳುವವರೇ ಇಲ್ಲದೆ, ಅದರ ಪ್ರತಿಗಳೆಲ್ಲಾ ದೂಳು ತಿನ್ನುತ್ತಿವೆ.

'ದೇವಾಲಯ ಶಿಲ್ಪಗಳು' ಎನ್ನುವ ಹೆಸರಿನಲ್ಲಿ ಇಂಗ್ಲಿಷಿನಲ್ಲಿ ಪ್ರಕಟವಾಗಿರುವ ಈ ಪುಸ್ತಕದಲ್ಲಿರುವ ಚಿತ್ರಗಳು, ವಿಗ್ರಹಗಳ ಛಾಯಾಚಿತ್ರದ ಆಧಾರದ ಮೇಲೆ ಬರೆದಿರುವ ರೇಖಾಚಿತ್ರಗಳು.

ಕೇಂದ್ರ ಮತ್ತು ರಾಜ್ಯಗಳಲ್ಲಿರುವ ಅಕಾಡೆಮಿಗಳ ಸ್ಥಿತಿಗತಿಯನ್ನು ಪರಿಶೀಲಿಸಿ ಸಲಹೆ ನೀಡಲು ನೇಮಕವಾಗಿದ್ದ ಖೋಸ್ಲಾ ಸಮಿತಿಯು ತನ್ನ ವರದಿಯಲ್ಲಿ (1972) ಈ ಪುಸ್ತಕದ ಕುರಿತು ಹೀಗೆ ಹೇಳಿದೆ:

'ಈ ಚಿತ್ರಗಳು ಈಗಾಗಲೇ ಪ್ರಕಟವಾಗಿರುವ ದೇವಾಲಯದ ವಿಗ್ರಹಗಳ ಛಾಯಾಚಿತ್ರದ ಪ್ರತಿಕೃತಿಗಳು. ಇವು ಅಸಮರ್ಪಕ ಮತ್ತು ಚಿತ್ರಗಳು ನೋಡಲು ಹಿತವಾಗಿಲ್ಲ... ಆದರೂ ಐವತ್ತು ಸಾವಿರ ರೂಪಾಯಿಗಳಿಗಿಂತ ಹೆಚ್ಚಿನ ಹಣವನ್ನು ಇದರ ಮುದ್ರಣಕ್ಕಾಗಿ ವೆಚ್ಚ ಮಾಡಲಾಗಿದೆ. ಈ ಹಣ ದುರದೃಷ್ಟವಶಾತ್ ಲಲಿತಕಲಾ ಅಕಾಡೆಮಿಯದ್ದು'.

ಕಾರಂತದ್ವಯರ ಅಪೂರ್ವ ಸೃಷ್ಟಿ 'ಚೋಮನ ದುಡಿ' ಸಿನಿಮಾ ತೆರೆಕಂಡು 50 ವರ್ಷ

ಚೋಮ ಸತ್ತಿಲ್ಲ, ಅವನಿಗೆ ಸಾವಿಲ್ಲ...



ಪಡಸಾಲೆ

ರಘುನಾಥ ಚ.ಹ.

ಬೆಳ್ಳಿ, ನೆಲದ ಮೇಲೆ ಬಿದ್ದಿದ್ದಾಳೆ. ಅವಳ ತಮ್ಮ ಕಾಳ ಅಕ್ಕನನ್ನೊಮ್ಮೆ, ಅಪ್ಪನನ್ನೊಮ್ಮೆ ಅಸಹಾಯಕತೆಯಿಂದ ನೋಡುತ್ತಿದ್ದಾನೆ. ಮಕ್ಕಳೊಂದಿಗಿನ ಸಂಬಂಧ ಕಡಿದುಕೊಳ್ಳುವುದರ ಜೊತೆಗೆ, ತನ್ನ ಜೀವದ ಭಾಗವಾದ ಎತ್ತುಗಳನ್ನೂ ಚೋಮ ಬಿಟ್ಟುಕೊಟ್ಟಿದ್ದಾನೆ. ನೇಗಿಲನ್ನು ಮುರಿದು ಬೆಂಕಿಯಿಟ್ಟು, ಗುಡಿಸಲ ಒಳಗೆ ಹೋಗಿ ಬಾಗಿಲು ಹಾಕಿಕೊಳ್ಳುತ್ತಾನೆ. ಒಳಗಿನಿಂದ ದುಡಿಯ ದನಿ. ಸ್ವಲ್ಪ ಸಮಯದಲ್ಲಿ ಆ ದನಿಯೂ ನಿಲ್ಲುವುದು. ದುಡಿ ಹಾಗೂ ಚೋಮನ ಹೃದಯ ಭಿನ್ನವಲ್ಲ. ದುಡಿಯ ದನಿ ನಿಲ್ಲುವುದರೊಂದಿಗೆ ಚೋಮನ ಹೃದಯವೂ ಸ್ತಬ್ಧ. ಎಲ್ಲವೂ ಕತ್ತಲು ಕತ್ತಲು.

ಇದು, ಐವತ್ತು ವರ್ಷಗಳ ಹಿಂದೆ ತೆರೆಕಂಡ 'ಚೋಮನ ದುಡಿ' ಸಿನಿಮಾದ ಅಂತ್ಯ. ಚೋಮನೇನೋ ಕೊನೆಯುಸಿರೆಳೆದ. ಆದರೆ, ಅವನ ಮಕ್ಕಳ ಪಾಡೇನು? ಬೆಳ್ಳಿ ಏನಾದಳು? ಅವಳ ತಮ್ಮ ಕಾಳ ಏನಾದ?

ಸಿನಿಮಾ ಚೌಕಟ್ಟನ್ನು ಮೀರಿ ನೋಡಿದರೆ, ಚೋಮ ಸತ್ತ ಎನ್ನುವುದೇ ಒಂದು ಸುಳ್ಳು. ಚೋಮ ಯಾಕೆ ಸತ್ತಿಲ್ಲ ಎಂದು ನಿರ್ಣಯಿಸುವುದಕ್ಕೆ ಮೊದಲು, ಚೋಮನ ಹುಟ್ಟು ಹಾಗೂ ಬದುಕನ್ನು ತಿಳಿಯಬೇಕು. ಈ ಚೋಮ ಹುಟ್ಟಿದ್ದು 1931ರಲ್ಲಿ; ಒಂಬತ್ತೂವರೆ ದಶಕಗಳ ಹಿಂದೆ ಶಿವರಾಮ ಕಾರಂತರು ಬರೆದ 'ಚೋಮನ ದುಡಿ' ಕಾದಂಬರಿ ಮೂಲಕ. ಈ ಚೋಮನ ಕಥನ ಬಿ.ವಿ. ಕಾರಂತರ ನಿರ್ದೇಶನದಲ್ಲಿ ಸಿನಿಮಾ ಆಗಿ 1975ರಲ್ಲಿ ತೆರೆಕಂಡಿತು. 'ಸಂಸ್ಕಾರ' ಸಿನಿಮಾ ನಂತರ ಕನ್ನಡ ಚಿತ್ರರಂಗಕ್ಕೆ ಎರಡನೇ ಸ್ವರ್ಣಕಮಲ ತಂದುಕೊಟ್ಟಿತು. ದೇಶದ ಅತ್ಯುತ್ತಮ ಸಿನಿಮಾಗಳಲ್ಲೊಂದಾದ 'ಚೋಮನ ದುಡಿ', ದಲಿತ ಪ್ರಜ್ಞೆಯನ್ನೊಳಗೊಂಡ ಯಾವುದೇ ಭಾಷೆಯ ಅತ್ಯುತ್ತಮ ಸಿನಿಮಾಗಳ ಜೊತೆಗೆ ನಿಲ್ಲುವಂತಹದ್ದು.

ಚೋಮನಿಗೆ ಇದ್ದುದು ಒಂದೇ ಕನಸು. ತುಂಡು ಭೂಮಿಯನ್ನು ಹೊಂದುವುದು. ಸಾಯೋದರೊಳಗೆ ತನ್ನದೇ ಒಂದು ತುಂಡು ಗೇಣಿ ನೆಲ ಉತ್ತರೆ ಬದುಕಿಗೂ ಸಾರ್ಥಕ ಎನ್ನುವ ನಂಬಿಕೆ ಅವನದು. ವಡೇರು ಒಂದು ಚೂರು ನೆಲವನ್ನು ಈ ಬಡವನಿಗೆ ಕೊಟ್ಟೇ ಕೊಡುತ್ತಾರೆ ಹಾಗೂ ಹಾಗೆ ಕೊಡುವ ಮನಸ್ಸನ್ನು ಪಂಜುರ್ಲಿ ಕರುಣಿಸುತ್ತಾನೆ ಎನ್ನುವುದು ಚೋಮನ ಭರವಸೆ. ಆದರೆ, ಚೋಮನಿಗೆ ಭೂಮಿ ದಕ್ಕುವುದಿಲ್ಲ. ಮತಾಂತರ ಹೊಂದುವ ಮೂಲಕ ಭೂಮಿ ಪಡೆಯುವ ಅವಕಾಶ ಎದುರಿಗಿದ್ದರೂ, ಜಾತಿಯನ್ನು ಬಿಟ್ಟುಕೊಡುವುದು ಅವನಿಗೆ ಸಾಧ್ಯವಾಗುವುದಿಲ್ಲ. ತನ್ನ ಜಾತಿಯನ್ನು ಬಿಟ್ಟುಹೋಗಲಿಕ್ಕೆ ಅವನಿಗೆ ಯಾವ ದೈವ–ನಂಬಿಕೆ ಅಡ್ಡಿ ಆಗಿದೆಯೋ, ಅದುವೇ ಸಂಕಪ್ಪಯ್ಯನಿಗೆ ತುಂಡು ಭೂಮಿಯನ್ನು ಚೋಮನಿಗೆ ಕೊಡದಿರಲೂ ಕಾರಣವಾಗಿದೆ. ಹೊಲೆಯರು ನೇಗಿಲು ಹಿಡಿದರೆ ಪ್ರಳಯವೇ ಬಂದೀತೆನ್ನುವುದು ಸಂಕಪ್ಪಯ್ಯನ ತಾಯಿಯ ನಂಬಿಕೆ. ಅಮ್ಮನ ಮಾತಿಗೆ ವಿರುದ್ಧವಾಗಿ ಸಂಕಪ್ಪಯ್ಯ ನಡೆದುಕೊಳ್ಳಲಾರ.

ಜಾತಿ, ಧರ್ಮ ಹಾಗೂ ನಂಬಿಕೆಗಳ ಉರುಳಿಗೆ ಚೋಮ ಬಲಿಯಾದರೆ, ಅಪ್ಪ ಮಾಡಿದ ಸಾಲಕ್ಕೆ ಅವನ ಮಕ್ಕಳು ಮಿಕಗಳಾಗಿದ್ದಾರೆ. ಚನಿಯಾ ಘಟ್ಟದ ಜ್ವರಕ್ಕೆ ಬಲಿಯಾಗುತ್ತಾನೆ. ಮತಾಂತರಗೊಂಡು ಮೇರಿಯನ್ನು ಮದುವೆಯಾಗುವ ಗುರುವನನ್ನು ಚೋಮನೇ ತ್ಯಜಿಸಿದ್ದಾನೆ. ಮತ್ತೊಬ್ಬ ಮಗ ನೀಲ ನೀರಿನಲ್ಲಿ ಕೊಚ್ಚಿ ಹೋಗುವುದನ್ನು ಊರಿನ ಜನ ನಿಂತು ನೋಡುತ್ತಾರೆ. ಹೊಲೆಯ ಹುಡುಗನನ್ನು ರಕ್ಷಿಸದೆ ಸಾಯಲು ಬಿಡುವ ಜನರನ್ನು ನೋಡಿದಾಗ ಚೋಮನಿಗೆ ಅನ್ನಿಸುವುದು: 'ಹೊಲೇರ ಕುಲ ದೇವರಿಗೂ ಬೇಡವಾದೀತು'. ಗುರುವನ ದಾರಿಯೇ ಸರಿಯೆಂದು ಅವನಿಗೆ ಅನ್ನಿಸಿದರೂ ಪಂಜುರ್ಲಿಯ ಪ್ರಭಾವಳಿಯನ್ನು ದಾಟಲಾರ.

ಚೋಮನ ಪಾಲಿಗೆ ಉಳಿಯುವ ಏಕೈಕ ಆಶಾಕಿರಣ ಬೆಳ್ಳಿ. ಆದರೆ, ಎಸ್ಟೇಟ್‌ನ ಮಾಲೀಕ (ಬ್ರಿಟಿಷ್) ಹಾಗೂ ಅವನ ಕೈಕೆಳಗಿನ ರೈಟರ್ ಬೆಳ್ಳಿಯನ್ನು ಸುಲಿದು ಮುಕ್ಕಿದ್ದಾರೆ. ಮಗಳ ಬದುಕಿನ ದುರಂತ ತಿಳಿದ ನಂತರ ಚೋಮನಿಗೆ ಬದುಕಿನ ಎಲ್ಲ ಸಾಧ್ಯತೆಗಳೂ ಮುಚ್ಚಿಹೋಗಿ, ಅವನ ಬದುಕು, ಅವನ ದುಡಿ, ಎರಡೂ ಸ್ತಬ್ಧಗೊಳ್ಳುತ್ತವೆ.

ಚೋಮನನ್ನು ಸೃಷ್ಟಿಸಿದ ಶಿವರಾಮ ಕಾರಂತರು ಹಾಗೂ ಚೋಮನನ್ನು ಸಿನಿಮಾಕ್ಕೆ ಕರೆತಂದ ಬಿ.ವಿ. ಕಾರಂತರು, ತಮ್ಮ ಕಥಾನಾಯಕನನ್ನು ಕೊನೆಗೊಳಿಸುವ ಮೂಲಕ ನಿರಾಳತೆಯನ್ನು ಪಡೆದರೋ ಇಲ್ಲವೇ ಮತ್ತಷ್ಟು ಕ್ಷೋಭೆಗೊಂಡರೋ ತಿಳಿಯದು. ಆದರೆ, ಸೃಷ್ಟಿಕರ್ತರ ಹಿಡಿತ ಮೀರಿ ಚೋಮ ಇಂದಿಗೂ ಜೀವಂತವಾಗಿದ್ದಾನೆ. ಅವನಿಗೆ ಸಾವೆನ್ನುವುದೇ ಇಲ್ಲ. ಏಕೆಂದರೆ, ನಮ್ಮ ಕಾಲ ಚೋಮನನ್ನು ಮತ್ತೆ ಮತ್ತೆ ಸೃಷ್ಟಿಸುತ್ತಿದೆ; ಅವನನ್ನು ಚಿರಂಜೀವಿಯನ್ನಾಗಿಸಿದೆ.

ಅಧಿಕಾರ, ಜಾತಿ, ಹಣ, ರಾಜಕೀಯ ವ್ಯವಸ್ಥೆ, ದೈವ, ಎಲ್ಲವೂ ಚೋಮನಿಗೆ ವಿರುದ್ಧವಾಗಿದ್ದವು. ಅವುಗಳಿಗೆ ಚೋಮ ಸಾಯುವುದು ಬೇಕಿಲ್ಲ. ಏಕೆಂದರೆ, ಚೋಮನ ಸಾವು ಈ ಅನೈತಿಕ ವ್ಯವಸ್ಥೆಯ ಸಾವೂ ಹೌದು. ಚೋಮ ಜೀವಂತವಾಗಿದ್ದರಷ್ಟೇ ಇವುಗಳ ಅಸ್ತಿತ್ವ. ಹಾಗಾಗಿ, ಒಬ್ಬ ಚೋಮ ಕೊನೆಯುಸಿರೆಳೆದರೂ, ಅವನ ಜಾಗದಲ್ಲಿ ಅಸಂಖ್ಯ ಚೋಮರನ್ನು ಕಾಲ ಸೃಷ್ಟಿಸುತ್ತಿದೆ.

ಚೋಮ ಜನಸಾಮಾನ್ಯರ ಪ್ರತಿನಿಧಿ. ದಲಿತಲೋಕ ಈಗ ದೊಡ್ಡದಾಗಿದೆ. ವ್ಯವಸ್ಥೆಯ ಕಪಿಮುಷ್ಟಿಯೂ ಬಲಗೊಂಡಿದೆ. ಶೋಷಣೆಯ ವರ್ತುಲದೊಳಗೆ ಚೋಮ, ಚೋಮನಂಥ ಅಸಂಖ್ಯಾತರು ಪತರುಗುಟ್ಟುವ ಅಸಹಾಯಕ ಹುಳುಗಳು. ಕಾಲಚಕ್ರದಲ್ಲಿ ಕೆಲವು ಚೋಮಂದಿರಿಗೆ ತುಂಡು ಭೂಮಿ ದಕ್ಕಿರಬಹುದು. ಆದರೆ, ದೊರೆತ ಭೂಮಿಯನ್ನು (ಸೂರನ್ನು) ಉಳಿಸಿಕೊಳ್ಳುವುದು ಸುಲಭವಲ್ಲ. ಅಧಿಕಾರ ಮತ್ತು ಧರ್ಮಗಳು ಬುಲ್ಡೋಜರ್ ರೂಪದಲ್ಲಿ ಕೆಲವರ ಮನೆಗಳ ಮೇಲೆ ದಾಳಿ ಮಾಡುತ್ತಿವೆ. ಭೂಮಿಯನ್ನು, ಸೂರನ್ನು ಕಳೆದುಕೊಳ್ಳುವವರೆಲ್ಲ ಚೋಮನ ಒಕ್ಕಲೇ ಆಗಿದ್ದಾರೆ. ಈ ಬುಲ್ಡೋಜರ್ ಸಂಕಥನದಿಂದ ತನ್ನ ಆತ್ಮಸಾಕ್ಷಿ ಅಲುಗಾಡಿದೆ ಎಂದು ಸುಪ್ರೀಂ ಕೋರ್ಟ್ ಹೇಳಿದೆ. ಸುಪ್ರೀಂ ಕೋರ್ಟ್ ಆತ್ಮಸಾಕ್ಷಿಯ ಬಗ್ಗೆ ಮಾತನಾಡುವುದಕ್ಕಿಂತಲೂ ಮಿಗಿಲಾದ ವ್ಯಂಗ್ಯ ಮತ್ತು ಅಸಹಾಯಕತೆ ಮತ್ತೊಂದಿದೆಯೇ?

'ಚೋಮನ ದುಡಿ' ಚೋಮನ ಕಥನ ಆಗಿರುವಂತೆಯೇ ಬೆಳ್ಳಿಯ ಕಥನವೂ ಹೌದು. ಚೋಮನ ಒಡಲುರಿ ಪ್ರಕಟಗೊಳ್ಳುವುದಕ್ಕೆ ದುಡಿಯಾದರೂ ಜೊತೆಗಿತ್ತು. ಬೆಳ್ಳಿಗೆ ಯಾವುದರ ಆಸರೆ? ಅವಳ ದುರಂತ ವರ್ತಮಾನದಲ್ಲೂ ದೇಶದ ಒಂದಲ್ಲಾ ಒಂದು ಭಾಗದಿಂದ ಅನುರಣನಗೊಳ್ಳುತ್ತಲೇ ಇದೆ. ಕುಡಿಯುವ ನೀರು, ದೇವರು, ಊರು–ಸೂರು, ಅಸ್ಪೃಶ್ಯತೆ ಆಚರಣೆಯ ಘಟನೆಗಳಿಗೆ ಕೊನೆಮೊದಲಿಲ್ಲ.

ಐವತ್ತು ವರ್ಷಗಳ ನಂತರವೂ 'ಚೋಮನ ದುಡಿ' ನಮ್ಮ ಕಾಲದ ಕಥನವೆಂಬಂತೆ ಕಾಣಿಸುತ್ತಿರುವುದೇ ಚೋಮ ಚಿರಂಜೀವಿ ಎನ್ನುವುದಕ್ಕೆ ನಿದರ್ಶನದಂತಿದೆ. ಚೋಮನ ದುಡಿಯಂಥ ಮತ್ತೊಂದು ಸಿನಿಮಾವನ್ನು ಕಟ್ಟಿಕೊಡುವುದು ಕನ್ನಡ ಚಿತ್ರರಂಗಕ್ಕೆ ಸಾಧ್ಯವಾಗಿಲ್ಲ. ದಲಿತ ಬದುಕಿನ ಸಂಕಟದ ಆತ್ಯಂತಿಕ ರೂಪದಲ್ಲಿ ಚೋಮನ ಬದುಕಿಗಿಂತಲೂ ದಾರುಣವಾಗಿರುವುದೂ ಇರಲಿಕ್ಕಿಲ್ಲ. ದಲಿತ ಬದುಕಿನ ಅಧಿಕೃತ ದಾಖಲೆಯಂತಿರುವ ಚೋಮನ ಕಥನ, ಜಾತಿ–ಧರ್ಮ–ರಾಜಕೀಯದ ಭ್ರಷ್ಟತೆಯ ಆತ್ಯಂತಿಕ ರೂಪದ ದಾಖಲೆಯೂ ಆಗಿದೆ.

ಕಲುಷಿತಗೊಂಡ ಜಾತಿ, ಧರ್ಮ, ರಾಜಕೀಯ ವ್ಯವಸ್ಥೆಯ ವಿರುದ್ಧ ಕನ್ನಡದ ಕಲಾಜಗತ್ತಿನ ಪ್ರತಿಭಟನೆ ಕಾರಂತದ್ವಯರ 'ಚೋಮನ ದುಡಿ'. ಈ ಸೊಲ್ಲು ಅಸಹಾಯಕತೆಯಲ್ಲಿ ಕೊನೆಗೊಳ್ಳುತ್ತದೆಯಾದರೂ ಚೋಮನ 'ದುಡಿ'ಯ ದನಿ ಸಾವಿಲ್ಲದ ನಾದವಾಗಿ, ಜೀವಪರ ಮನಸ್ಸುಗಳನ್ನೆಲ್ಲ ವಿಷಣ್ಣಗೊಳಿಸುತ್ತ ತಬ್ಬಿಕೊಂಡಿದೆ. ಕನಿಷ್ಠ ಇಂಥದೊಂದು ಸೊಲ್ಲು ಜೀವಂತವಾಗಿದೆ ಎನ್ನುವುದನ್ನೇ ಆಶಾದಾಯಕ ಸಂಗತಿ ಎಂದು ಭಾವಿಸುವಷ್ಟು ನಮ್ಮ ಕಾಲಘಟ್ಟ ದುರ್ಬರವಾಗಿದೆ.

ಅಪ್ಪನ ಭೂಮಿಯ ಹಂಬಲವನ್ನು ಮಗಳು 'ಬೋಳು ಭ್ರಮೆ' ಎನ್ನುತ್ತಾಳೆ. ಕಟ್ಟಕಡೆಯ ಮನುಷ್ಯ ಘನತೆಯ ಬದುಕಿಗಾಗಿ ಹಂಬಲಿಸುವುದು ಈಗಲೂ ಭ್ರಮೆಯೇ. 'ಚೋಮನ ದುಡಿ' ನಮ್ಮೊಳಗಿನ ಹಾಗೂ ಹೊರಗಿನ ಪೊಳ್ಳುತನವನ್ನು ಬಯಲು ಮಾಡುವ ಕಲಾಕೃತಿ.



ಚುರುಮುರಿ



ಬೆಲೆ ಬಾಧೆ

● ಮಣ್ಣೆ ರಾಜು

'ನಾಳೆ ಮಗಳ ಬರ್ತ್‌ಡೇ, ಕೇಕ್ ಆರ್ಡರ್ ಮಾಡಿದ್ದೇನೆ, ಹೊಸ ಡ್ರೆಸ್ ತಂದಿದ್ದೇನೆ' ಕಾಫಿ ತಂದುಕೊಟ್ಟ ಸುಮಿ, 'ಹಾಲು, ಕಾಫಿಪುಡಿ ರೇಟೂ ಜಾಸ್ತಿಯಾಗಿದೆ' ಎಂದು ಎಚ್ಚರಿಸಿದಳು.

'ಹಬ್ಬಹರಿದಿನಗಳ ಜೊತೆಗೆ ಮನೆಮಂದಿಯ ಬರ್ತ್‌ಡೇ, ವೆಡ್ಡಿಂಗ್ ಆ್ಯನಿವರ್ಸರಿಯಂತಹ ಕ್ಯಾಲೆಂಡರ್‌ನಲ್ಲಿ ಇಲ್ಲದ ಖರ್ಚಿನ ಆಚರಣೆಗಳನ್ನು ತಪ್ಪಿಸಲಾಗಲ್ಲ' ಕಾಫಿ ಹೀರಿದ ಶಂಕ್ರಿ.

'ಹೋದ ವರ್ಷಕ್ಕೆ ಹೋಲಿಸಿದರೆ ಕೇಕ್ ರೇಟ್ ಡಬಲ್ ಆಗಿದೆ, ಮಗಳ ಡ್ರೆಸ್ ಬೆಲೆಯೂ ದುಬಾರಿಯಾಗಿದೆ'.

'ಮಗಳು ಬೆಳೆಯುತ್ತಿದ್ದಾಳೆ, ಪದಾರ್ಥಗಳ ಬೆಲೆಯೂ ಮಕ್ಕಳು ಬೆಳೆಯುವಂತೆ ಬೆಳೆಯುವುದು ಕಾಲಧರ್ಮ'.

'ಇಲ್ನೋಡಿ, ಆರು ತಿಂಗಳ ಹಿಂದಿನ ಮನೆಯ ತಿಂಗಳ ಸಾಮಾನಿನ ಬೆಲೆ ಈಗ 30-40 ಪರ್ಸೆಂಟ್ ಏರಿಕೆಯಾಗಿದೆ' ಹಳೆ, ಹೊಸ ಬಿಲ್ ಹೋಲಿಕೆ ಮಾಡಿ ಹೇಳಿದಳು ಸುಮಿ.

'ಒಂದರ ಬೆಲೆ ಹೆಚ್ಚಾದರೆ ಇತರ ಪದಾರ್ಥಗಳ ಬೆಲೆಯೂ ಹೆಚ್ಚಾಗಿಬಿಡುತ್ತದೆ. ಬೆಲೆ ಏರಿಕೆ ಎಂಬುದು ಸಾಂಕ್ರಾಮಿಕ ರೋಗದಂತೆ'.

'ಬೆಲೆ ಏರಿಕೆ ವಿರುದ್ಧ ರಾಜಕಾರಣಿಗಳ ಹೋರಾಟ ಶುರುವಾಗಿದೆ. ಹಾಲು, ಕರೆಂಟು, ಡೀಸೆಲ್ ಬೆಲೆ ಏರಿಕೆ ಖಂಡಿಸಿ ಈ ಪಕ್ಷದವರ ಹೋರಾಟ, ಅಡುಗೆ ಅನಿಲ್ ದರ ಏರಿಕೆ ವಿರುದ್ಧ ಆ ಪಕ್ಷದವರ ರೇಗಾಟ. ಈ ಆಟಗಳ ನಡುವೆ ನಮ್ಮ ಗೃಹಲಕ್ಷ್ಮಿ ಮೊತ್ತ ಏರಿಸಿ ಎಂದು ಸರ್ಕಾರವನ್ನು ಒತ್ತಾಯಿಸಿ ನಾವೂ ಕೂಗಾಟ ಮಾಡ್ತೀವಿ'.

'ಸರ್ಕಾರವನ್ನು ನಂಬಿಕೊಂಡು ಸಂಸಾರ ಮಾಡಲಾಗದು. ಬೆಲೆ ಏರಿಕೆಗೆ ತಕ್ಕಂತೆ ನಮ್ಮ ಆದಾಯವನ್ನೂ ಹೆಚ್ಚಿಸಿಕೊಳ್ಳಬೇಕು'.

'ಹೌದು, ಸಂಬಳ ಜಾಸ್ತಿ ಮಾಡಿ ಅಂತ ನಿಮ್ಮ ಆಫೀಸ್ ಬಾಸ್‌ಗೆ ಒತ್ತಾಯ ಮಾಡ್ರೀ'.

'ಮಾಡಿದ್ವಿ, ಬೇಕೆನಿಸಿದಾಗಲೆಲ್ಲಾ ವೇತನ ಜಾಸ್ತಿ ಮಾಡಲು ನಾನು ಸರ್ಕಾರವೂ ಅಲ್ಲ, ನೀವು ಶಾಸಕರೂ ಅಲ್ಲ ಅಂತ ಗದರಿ ಕಳಿಸಿದರು' ಶಂಕ್ರಿ ನಿಟ್ಟುಸಿರುಬಿಟ್ಟ.

ಸಂಗತ

ಒಂದು ಮಳೆ, ನೂರಾರು ಸಿಂಚನ

ಮಳೆ ಏನೆಲ್ಲ ಬದಲಾವಣೆ ತರಬಹುದು, ಎಷ್ಟೆಲ್ಲ ವಿಸ್ಮಯಗಳಿಗೆ ಕಾರಣ ಆಗಬಹುದು ಎಂಬುದು ಯಾರ ಊಹೆಗೂ ನಿಲುಕಲಾರದು

● ಸಂಜಯ್ ಗುಬ್ಬಿ

ಬಂಡೀಪುರದ ಹತ್ತಿರ ಕಾಡಿನ ಪಕ್ಕದಲ್ಲೇ ನನ್ನದೊಂದು ಜಮೀನು. ಆನೆಯಂತಹ ವನ್ಯಜೀವಿಗಳು ಓಡಾಡುವ ಕಾಡು. ಇದು ನೂರಾರು ಎಕರೆ ಖಾಸಗಿ ಜಮೀನುಗಳಿರುವ ಪ್ರದೇಶ. ಹಾಗಾಗಿ, ಈ ಭೂಮಿಯನ್ನು ಸರ್ಕಾರ ತೆಗೆದುಕೊಂಡು ವನ್ಯಜೀವಿಗಳ ಸಂರಕ್ಷಣೆಗೆ ಅನುವು ಮಾಡಿಕೊಡಬೇಕು, ಇಲ್ಲವಾದಲ್ಲಿ ಖಾಸಗಿಯವರು ತಮ್ಮ ಜಮೀನುಗಳನ್ನು ವನ್ಯಜೀವಿಸ್ನೇಹಿಯಾಗಿ ಬಳಸಬೇಕು. ಎರಡನೇ ದೃಷ್ಟಿಕೋನದಿಂದ ಜಮೀನು ಕೊಂಡು ವನ್ಯಜೀವಿ ಸಂರಕ್ಷಣೆಯೊಡನೆ ನಿಸರ್ಗದ ಬಗ್ಗೆ ಹಲವಾರು ಹೊಸ ವಿಚಾರಗಳನ್ನು ಅರಿತಿದ್ದೇನೆ.

ಇದೇ ವರ್ಷದ ಮಾರ್ಚ್ 11. ಸಂಜೆ ಸುಮಾರು 5.40ರ ಹೊತ್ತಿಗೆ ವರ್ಷದ ಮೊದಲ ಮಳೆಹನಿಗಳು ಬೀಳಲು ಪ್ರಾರಂಭಿಸಿದವು. ಆದರೆ ಬರೀ ಐದು ನಿಮಿಷ ತುಂತುರು ಹನಿಸಿ ಭೂಮಿಯನ್ನು ಇನ್ನಷ್ಟು ಬಾಯಾರಿಸಿ ಮರೆಯಾದ ಮಳೆರಾಯ. ಆದರೆ ಅದಾದ ಐದೇ ದಿನಗಳಲ್ಲಿ ವರುಣದೇವ ನಮ್ಮ ಮೇಲೆ ದಯೆ ತೋರಿದ. ಮೋಡಗಳಲ್ಲಿ ತಾನು ತಿಂಗಳುಗಟ್ಟಲೆ ಅವಿತು ಕೂತಿದ್ದು ಸಾಕಾಯಿತು ಎನ್ನುವಂತೆ 16ನೇ ತಾರೀಕು ಎರಡು ತಾಸು ಮಳೆ ಸುರಿಯಿತು.

ಅಂದು ರಾತ್ರಿ ಎಂದಿಗಿಂತ ಹತ್ತರಷ್ಟು ಸೊಳ್ಳೆಗಳ ಕಾಟ, ನಿದ್ದೆಗೆ ಅವಕಾಶವೇ ಇಲ್ಲದಂತಾಯಿತು. ಬೆಳಗಾದರೆ ಅದ್ಭುತ ಲೋಕವೊಂದು ತೆರೆದುಕೊಂಡಿತು. ಅದೆಲ್ಲಿದ್ದವೋ ಅನ್ನುವಂತೆ ನೂರಾರು ಕವಲು ತೋಕೆಗಳು ತಮ್ಮ ಕಾರುಬಾರು ಪ್ರಾರಂಭಿಸಿದ್ದವು. ಸಾಮಾನ್ಯವಾಗಿ ಬಿಸಿಲೇರಿದ ಮೇಲೆ ಕೆಲ ಕವಲು ತೋಕೆಗಳು ನಮ್ಮ ಮನೆಯ ಸುತ್ತಮುತ್ತ ತಮ್ಮ ದಿನಚರಿ ಪ್ರಾರಂಭಿಸಿದರೆ, ಅಂದು ಬೆಳಕು ಹರಿದೊಡನೆ ನೂರಾರು ಕವಲುತೋಕೆಗಳು ನೆಲಕ್ಕೆ ಹತ್ತಿರವೇ ಹಾರಾಡುತ್ತಿದ್ದವು. ಹೆಚ್ಚಾಗಿ ಸೊಳ್ಳೆ, ಪತಂಗದಂತಹ ಹಾರುವ ಕೀಟಗಳನ್ನು ತಿನ್ನುವ ಕವಲುತೋಕೆಗಳಿಗೆ ಮಳೆರಾಯ ಕೀಟಗಳ ಔತಣಕೂಟವನ್ನೇ ಏರ್ಪಡಿಸಿದ್ದ.

ಸ್ವಲ್ಪ ಬಿಸಿಲೇರುತ್ತಿದ್ದಂತೆ ಪಶ್ಚಿಮದಿಂದ ಪೂರ್ವಕ್ಕೆ ಚಿಟ್ಟೆಗಳು ಹಾರುವುದು ಪ್ರಾರಂಭವಾಯಿತು. ಎಲ್ಲಿ ನೋಡಿದರೂ ತಿಳಿನೀಲಿ, ಕಪ್ಪು ಬಣ್ಣದ ನೀಲಿ ನಂಜ (ಬ್ಲೂ ಟೈಗರ್) ಮತ್ತು ತಿಳಿ ಕಪ್ಪು, ಬಿಳಿ ಬಣ್ಣದ ಪುಟ್ಟಮುದ್ರೆ ಕಾಗಕ್ಕ (ಕಾಮನ್ ಕ್ರೋ) ಚಿಟ್ಟೆಗಳು. ಸಂಜೆಯ ವೇಳೆಗೆ ಸಾವಿರಾರು ಚಿಟ್ಟೆಗಳು ನಮಗೆ ಏನನ್ನೂ ತಿಳಿಸದೆ ಎಲ್ಲಿಗೋ ವಲಸೆ ಹೋಗಿದ್ದವು. ಸೂರ್ಯ ಇಳಿಯುವ ಹೊತ್ತಿಗೆ ಸೊಳ್ಳೆಗಿಂತಲೂ ಸಣ್ಣದಾದ ಬಿಳಿ ಹುಳುಗಳು ಮತ್ತು ಅವುಗಳನ್ನು ತಿನ್ನಲು ನಾ ಮೊದಲು ತಾ ಮೊದಲು ಎಂಬಂತೆ ಇನ್ನೂ ಹೆಚ್ಚಿನ ಕವಲುತೋಕೆಗಳು.

ಸೂರ್ಯದೇವ ಭೂಮಿಯ ಇನ್ನೊಂದು ಭಾಗದಲ್ಲಿ ಲಾಗಿನ್ ಆಗಲು ಹೋದರೆ, ಇಲ್ಲಿ ಸಾವಿರಾರು ಗೆದ್ದಲು ಹುಳುಗಳು ತಮ್ಮ ಇರುವಿಕೆಯನ್ನು ಪ್ರಪಂಚಕ್ಕೆ ತೆರೆದಿಟ್ಟವು. ಕತ್ತಲಾದ ಮೇಲೆ ಯಾವುದೋ ಭಾರವಾದ ಹಕ್ಕಿ ತನ್ನ ರೆಕ್ಕೆಗಳನ್ನು ರಭಸವಾಗಿ ಬಡಿಯುತ್ತ ಹಾರಿಹೋದಂತೆ ಸದ್ದಾಯಿತು. ಇಷ್ಟು ಹೊತ್ತಿನಲ್ಲಿ ಇದ್ಯಾವುದು ಇಷ್ಟು ಶಬ್ದ ಮಾಡುವ ಪಕ್ಷಿ ಎಂದು ಕೈದೀಪ ಹಾಕಿ ನೋಡಿದರೆ, ನಮ್ಮ ನಾಲ್ಕು ಅಂಗೈಯಗಲದ ಹತ್ತಾರು ದೊಡ್ಡ ಬಾವಲಿಗಳು! ಗಾಳಿಯಲ್ಲಿ ಗೆದ್ದಲುಹುಳುಗಳ ಮೇಲೆ ತಮ್ಮ ವೈಮಾನಿಕ ದಾಳಿಯನ್ನು ಪ್ರಾರಂಭಿಸಿದ್ದವು ಬಾವಲಿಗಳು.

ಪ್ರಕೃತಿಯಲ್ಲಿ ಆಗುತ್ತಿದ್ದ ಬದಲಾವಣೆಗಳನ್ನು ಆಸ್ವಾದಿಸುತ್ತಿದ್ದ ನನಗೆ ಸಮಯ ಹೋದದ್ದೇ ತಿಳಿಯಲಿಲ್ಲ. ಬೇಲಿಯ ಪಕ್ಕದಲ್ಲಿಯೇ ಏನೋ ಸರ ಸರ ಸದ್ದು. ಸೂಕ್ಷ್ಮವಾಗಿ ಗಮನಿಸಿದರೆ, ದೊಡ್ಡ ಕರಡಿಯೊಂದು ಅಲ್ಲಿದ್ದ ಮಣ್ಣಿನ ಗುಪ್ಪೆಯನ್ನು ಕೆರೆಯುತ್ತಿದೆ. ಇಷ್ಟು ದಿನ ಸುಳ್ಳಿ, ಬಾರೆ ಹಣ್ಣುಗಳ ಡಯಟ್‌ನಲ್ಲಿದ್ದ ಕರಡಿಗೆ ಆಗ ನಾಲಿಗೆ ರುಚಿ ಬದಲಾಯಿಸುವ ಸಮಯವಾಗಿತ್ತು. ತನ್ನದೇ ಪ್ರಪಂಚದಲ್ಲಿ ಮುಳುಗಿಹೋಗಿದ್ದ ಕರಡಿಗೆ ತನ್ನ ಪಕ್ಕದಲ್ಲಿ ಪುನುಗುಬೆಕ್ಕು ಬಂದದ್ದು ತಿಳಿಯಲೇ ಇಲ್ಲ. ಅದನ್ನು ನೋಡಿದ ತಕ್ಷಣವೇ ಸ್ವಲ್ಪ ಗಲಿಬಿಲಿಯಾಗಿ ಅದಕ್ಕೆ ಹಾದಿ ಬಿಟ್ಟು ಬೇರೆಡೆಗೆ ತನ್ನ ಪಯಣ ಎಂಬಂತೆ ಹೋಗಿಬಿಟ್ಟ ಕರಡಿಯಣ್ಣ.

ಪುನುಗುಬೆಕ್ಕು ಕೂಡ ಗೆದ್ದಲುಹುಳುಗಳ ಪಾಲು ಪಡೆಯಲು ಬಂದಿತ್ತು. ಅದು ಸರಿಯೇ, ಇಷ್ಟೊಂದು ಗೆದ್ದಲುಗಳಿದ್ದ ಮೇಲೆ ಅದರಲ್ಲಿ ಸಿಕ್ಕುವ ಪ್ರೋಟೀನ್ ನಿರುಪಯುಕ್ತವಾಗುವುದನ್ನು ತಡೆಯಲು ಬಂದಿದ್ದವು ಎನ್ನುವಂತಿತ್ತು ಈ ಸಸ್ತನಿಗಳ ಆಗಮನ. ಅಷ್ಟು ಹೊತ್ತಿಗೆ ನಾನು ಮಲಗುವ ಸಮಯವಾಗಿತ್ತು.



24 ಗಂಟೆಗಳಲ್ಲಿ ಎಷ್ಟೆಲ್ಲ ನಡೆದುಹೋಗಿತ್ತು. ನಾ ಕಂಡಿದ್ದು ಇಷ್ಟು. ನನಗೆ ತಿಳಿಯದೆ, ಕಾಣದೆ, ಕೇಳದೆ ಇನ್ನೆಷ್ಟು ವಿಸ್ಮಯಗಳು ಅಂದು ನಡೆದುಹೋಗಿದ್ದವೋ ಏನೋ, ಆ ಪ್ರಕೃತಿಯೇ ಬಲ್ಲದು. ಒಂದು ಮಳೆ ಏನೆಲ್ಲ ಬದಲಾವಣೆಗಳನ್ನು ತರಬಹುದು ಎಂಬುದು ಯಾರ ಊಹೆಗೂ ನಿಲುಕದಂತಹದು. ಪ್ರಾಣಿ-ಪಕ್ಷಿಗಳು, ಮರಗಿಡಗಳು ನಮಗಿಂತ ಹೆಚ್ಚು ಸೂಕ್ಷ್ಮಮತಿಗಳು. ವಾತಾವರಣದಲ್ಲಿನ ಆಗುಹೋಗುಗಳನ್ನು ಗುರುತಿಸಿ ತಮ್ಮ ನೈಸರ್ಗಿಕ ಕಾರ್ಯಚಟುವಟಿಕೆಗಳಲ್ಲಿ ತೊಡಗಿಕೊಳ್ಳುತ್ತವೆ ಅಥವಾ ಆ ಪ್ರಕ್ರಿಯೆಯನ್ನು ಬದಲಾಯಿಸಿಕೊಳ್ಳುತ್ತವೆ. ಅದನ್ನು ಅರಿತುಕೊಳ್ಳದೆ 'ಪ್ರಾಣಿಗಳಿಗೆ ನೀರು ಕೊಡಿ', 'ಹಣ್ಣು ಬಿಡುವ ಗಿಡಗಳನ್ನು ಕಾಡಿನಲ್ಲಿ ನೆಡಿ' ಎಂದೆಲ್ಲ ಮಾನವಜನ್ಯ ಸಲಹೆಗಳನ್ನು ನೀಡುತ್ತೇವೆ. ನಿಸರ್ಗದಲ್ಲಿ ಒಂದಕ್ಕೊಂದು ಸಂಬಂಧಿಸಿದ ತನ್ನದೇ ನೀತಿ ನಿಯಮಗಳಿವೆ, ಕಾಲಗಳಿವೆ. ಒಂದಾದ ಮೇಲೆ ಒಂದರಂತೆ, ಅದರದೇ ಪದ್ಧತಿಯಂತೆ ಪ್ರಕೃತಿಕಾರ್ಯಗಳು ಯಾವುದೂ ಹೆಚ್ಚು ಕಡಿಮೆ ಆಗದಂತೆ ಸರಿಸಮನಾಗಿ ನಡೆಯಬೇಕು. ನಾವು ಪಾಯಸಕ್ಕೆ ಅಳೆದು ತೂಗಿ ಬೆಲ್ಲ, ಏಲಕ್ಕಿ, ಹಾಲು, ಗೋಡಂಬಿ, ದ್ರಾಕ್ಷಿ ಎಲ್ಲವನ್ನೂ ಹಾಕುವ ಹಾಗೆ ಪ್ರಕೃತಿಯು ಯಾವುದು ಎಷ್ಟರ ಮಟ್ಟಿಗೆ, ಯಾವಾಗ ಆಗಬೇಕೆಂದು ನಿರ್ಧರಿಸುತ್ತದೆ. ಅದಕ್ಕೆ ಸ್ವಲ್ಪ ಸ್ಥಳಾವಕಾಶ ಮಾಡಿಕೊಟ್ಟರೆ ಸಾಕು. ಆದರೆ ನಮ್ಮ ದೃಷ್ಟಿಕೋನದಲ್ಲೇ ನೋಡುವ ನಾವು, ಪ್ರಕೃತಿ ನಿಯಮವನ್ನು ಪಾಲಿಸಿದರೆ ಸಾಕು ಎಂದು ಈ ಜಗತ್ತಿಗೆ ಹೇಗೆ ಹೇಳುವುದು ಎನ್ನುವುದೇ ತಿಳಿಯುವುದಿಲ್ಲ.

ವಾಚಕರ ವಾಣಿ

ಪೂರಕ ಪರೀಕ್ಷೆಯ ಅವಕಾಶವೇ ಮುಳುವಾಯಿತೆ?

2024– 25ನೇ ಶೈಕ್ಷಣಿಕ ವರ್ಷದ ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ, ಹಿಂದಿನ ವರ್ಷಕ್ಕೆ ಹೋಲಿಸಿದರೆ ಸ್ಪಷ್ಟವಾದ ಕುಸಿತ ಕಂಡುಬಂದಿದೆ. ಈ ಪತನಕ್ಕೆ ಕಾರಣವೇನು ಎಂಬ ಗಂಭೀರವಾದ ಪ್ರಶ್ನೆ ಶಿಕ್ಷಣ ಇಲಾಖೆಯ ಮುಂದೆ ಇದೆ. ವಿದ್ಯಾರ್ಥಿಗಳಿಗೆ ಎರಡು ಪೂರಕ ಪರೀಕ್ಷೆಗಳ ಅವಕಾಶ ನೀಡಲಾಗಿದೆ. ಇದರ ಪರಿಣಾಮವಾಗಿ ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸದ ಬದಲಿಗೆ ಉದಾಸೀನ ಮತ್ತು ನಿರ್ಲಕ್ಷ್ಯದ ಮನೋಭಾವ ಹೆಚ್ಚಾಗಿ ಕಂಡುಬಂದಂತೆ ಇದೆ. ಮೊದಲು ಇದ್ದ ನಿಯಮದಂತೆ, ಅತೃಪ್ತ ಫಲಿತಾಂಶ ಪಡೆದವರಿಗೆ ಅದೇ ವರ್ಷದೊಳಗೆ ಒಂದೇ ಪೂರಕ ಪರೀಕ್ಷೆಯ ಅವಕಾಶ ಇತ್ತು. ಆದರೆ ಈ ಹೊಸ ವ್ಯವಸ್ಥೆಯು ವಿದ್ಯಾರ್ಥಿಗಳಿಗೆ ಹಂಬಲವನ್ನು ನೀಡುವ ಬದಲಿಗೆ, ಅವರಲ್ಲಿ ಶೈಕ್ಷಣಿಕ ಗಾಂಭೀರ್ಯವನ್ನು ಕಡಿಮೆ ಮಾಡಿದೆ ಎನ್ನುವ ಟೀಕೆ ಕೇಳಿಬರುತ್ತಿದೆ. ಇದನ್ನು ಗಮನದಲ್ಲಿಟ್ಟು ಇಲಾಖೆ ಈ ಬಗ್ಗೆ ಪುನರ್‌ಚಿಂತನೆ ನಡೆಸಬೇಕು.

ಕೆ.ಎನ್.ರಂಗನಾಥ್, ಉಜಿರೆ

ಕೃಷಿ ಭೂಮಿಯ ಆಪೋಶನ ಆಗದಿರಲಿ

ಬೆಂಗಳೂರು ನಗರದ ಸಮೀಪ ಎರಡನೆಯ ವಿಮಾನ ನಿಲ್ದಾಣ ನಿರ್ಮಾಣಕ್ಕೆ ಸೂಕ್ತ ಸ್ಥಳ ಗುರುತಿಸಲು ಭಾರತೀಯ ವಿಮಾನ ನಿಲ್ದಾಣಗಳ ಪ್ರಾಧಿಕಾರದ (ಎಎಐ) ಅಧಿಕಾರಿಗಳ ತಂಡವು ಕನಕಪುರ ರಸ್ತೆ ಮತ್ತು ನೆಲಮಂಗಲ–ಕುಣಿಗಲ್ ರಸ್ತೆಯಲ್ಲಿನ ಸ್ಥಳಗಳಿಗೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾಗಿ ವರದಿಯಾಗಿದೆ. ಈ ನಿಲ್ದಾಣಕ್ಕಾಗಿ ಸಾವಿರಾರು ಎಕರೆ ಭೂಮಿಯ ಅಗತ್ಯವಿದೆ. ಈ ಉದ್ದೇಶಕ್ಕಾಗಿ ಸರ್ಕಾರವು ಕೃಷಿ ಭೂಮಿಯನ್ನು ವಶಪಡಿಸಿಕೊಳ್ಳದೆ, ಕೃಷಿಗೆ ಸಾಧ್ಯವಾಗದ ಜಮೀನುಗಳನ್ನು ಬಳಸಲಿ. ಈಗಾಗಲೇ ರೈತರು ಹಲವೆಡೆ ತಮ್ಮ ಕೃಷಿ ಭೂಮಿಯನ್ನು ಕೈಗಾರಿಕೆಗಳಿಗೆ ಕೊಟ್ಟು ಹೈರಾಣಾಗಿದ್ದಾರೆ ಎಂಬುದು ಗಮನದಲ್ಲಿರಲಿ. ಈ ಮುನ್ನ ಬಳಸುತ್ತಿದ್ದ ಎಚ್‌ಎಎಲ್ ವಿಮಾನ ನಿಲ್ದಾಣವನ್ನು ದೇಶೀಯ ವಿಮಾನಗಳಿಗೆ ಮಾತ್ರ ಬಳಸಿಕೊಂಡು ದೇವನಹಳ್ಳಿಯ ನಿಲ್ದಾಣವನ್ನು ಅಂತರರಾಷ್ಟ್ರೀಯ ವಿಮಾನಗಳಿಗೆ ಮಾತ್ರ ಬಳಸುವುದು ಎಲ್ಲ ರೀತಿಯಿಂದಲೂ ಸೂಕ್ತ. ಹಣ, ಭೂಮಿ ಎಲ್ಲವೂ ಉಳಿಯುತ್ತದೆ. ಈ ಬಗ್ಗೆ ಸರ್ಕಾರ ಮತ್ತು ತಜ್ಞರು ಚಿಂತಿಸಲಿ.

ಪತ್ತಂಗಿ ಎಸ್. ಮುರಳಿ, ಬೆಂಗಳೂರು

ನಮ್ಮ ಗಂಗಾಳ ನಾವೇ ಬಾರಿಸಿಕೊಳ್ಳುವುದು!

ನಮ್ಮ ಭಾಗದಲ್ಲಿ ಮಗು ಜನಿಸಿದಾಗ, ಮಗು ಆಗಿದೆ ಎಂಬುದನ್ನು ಎಲ್ಲರಿಗೂ ತಿಳಿಸಲು ಹಿರಿಯರಿಂದ ಗಂಗಾಳ ಬಾರಿಸುವ ಅಭ್ಯಾಸವಿದೆ. ಒಂದು ವೇಳೆ ಯಾರೂ ಹಿರಿಯರು ಸಿಗದಿದ್ದಾಗ ಮಗುವಿನ ಅಜ್ಜಿಯೇ ಗಂಗಾಳ ಬಾರಿಸುತ್ತಾಳೆ. ಅದೇ ರೀತಿ ಆಗಿದೆ ಪ್ರಸ್ತುತ ಕನ್ನಡ ಸಾಹಿತ್ಯದ ಪ್ರಕಾಶನ ವ್ಯವಸ್ಥೆ ಕೂಡ. 'ಪ್ರಚಾರಪ್ರಿಯ ಲೇಖಕ: ನೇಪಥ್ಯಕ್ಕೆ ವಾಚಕ' ಎಂಬ ರಾಜಕುಮಾರ ಕುಲಕರ್ಣಿ ಅವರ ಲೇಖನದಲ್ಲಿ (ಸಂಗತ, ಏ. 7), ಹೊಸದಾಗಿ ಬಿಡುಗಡೆಯಾಗುವ ಪುಸ್ತಕಗಳು ಓದುಗರಿಗಿಂತ ಹೆಚ್ಚಾಗಿ ಲೇಖಕರನ್ನು ತಲುಪುತ್ತಿವೆ ಮತ್ತು ಲೇಖಕರಾದವರು ತಮ್ಮ ಪುಸ್ತಕವನ್ನು ತಾವೇ ಪ್ರಕಟಿಸುತ್ತಿದ್ದಾರೆ ಎಂದಿರುವುದು ನಿಜವೇ ಆಗಿದೆ. ಆದರೆ ಲೇಖಕರಿಗೆ ಅದು ಅನಿವಾರ್ಯ ಕೂಡ. ಏಕೆಂದರೆ ಪ್ರಕಾಶನ ಸಂಸ್ಥೆಗಳು ಹೊಸ ಲೇಖಕರ ಪುಸ್ತಕಗಳನ್ನು ಪ್ರಕಟಿಸಬೇಕೆಂದರೆ, ಆ ಲೇಖಕರು ಪ್ರಕಾಶನ ಸಂಸ್ಥೆಯ ಮುಖ್ಯಸ್ಥರಿಗೆ ಆತ್ಮೀಯರಾಗಿರಬೇಕು. ಉದಯೋನ್ಮುಖ ಲೇಖಕರ ಸಾಹಿತ್ಯವನ್ನು ಅವರು ಪ್ರಕಟಿಸುವುದು ಇರಲಿ ಕರಡು ಪ್ರತಿಯನ್ನು ಓದುವುದು ಕೂಡ ಅನುಮಾನ ಎನ್ನಿಸುತ್ತದೆ! ಅದೊಂದು ವ್ಯವಸ್ಥಿತ ಪ್ರಕ್ರಿಯೆ.

ಪ್ರಕಾಶನ ಸಂಸ್ಥೆಗಳು ಕೆಲವೇ ಕೆಲವು ಲೇಖಕರ ಪುಸ್ತಕಗಳನ್ನು ಹೊರತರುವುದು, ಅವುಗಳನ್ನು ಪ್ರಚಾರ ಮಾಡಿಕೊಳ್ಳುವುದು, ನಂತರ ತಮಗೆ ಬೇಕಾದ ಲೇಖಕರ ಬಗ್ಗೆ ಬರೆಸುವುದು ಇವೆಲ್ಲಾ ಮೇಲೆ ಹೇಳಿದಂತೆ, ನಮ್ಮ ಗಂಗಾಳವನ್ನು ನಾವೇ ಬಾರಿಸಿಕೊಳ್ಳುವ ಚಾಳಿ ಎಂದೆನಿಸುತ್ತದೆ. ದುರಂತವೆಂದರೆ, ಒಬ್ಬ ಲೇಖಕನು ಪ್ರಕಾಶಕ ಕೂಡ ಆಗಬೇಕು ಎಂಬುದು ಆಧುನಿಕ ಕನ್ನಡ ಸಾಹಿತ್ಯದ ಲೇಖಕರಿಗೆ ಇರಬೇಕಾದ ಇನ್ನೊಂದು ಅರ್ಹತೆ!

ರಂಗಸ್ವಾಮಿ ಮಾರ್ಲಬಂಡಿ, ದೊಡ್ಡ ಹರಿವಾಣ, ಆದವಾನಿ

ಏನಾಗಿರಬಹುದು ರಾಜಮನೆತನದ ನಡೆ?!

ಚಾಮರಾಜನಗರ ಜಿಲ್ಲೆಯಲ್ಲಿ ರಾಜವಂಶಸ್ಥರಿಗೆ ಸೇರಿರುವ 5,119 ಎಕರೆಯಷ್ಟು ಜಾಗಕ್ಕೆ ಕೂಡಲೇ ಖಾತೆ ಮಾಡಿಕೊಡುವಂತೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಅವರು ಜಿಲ್ಲಾಧಿಕಾರಿ ಹಾಗೂ ಸರ್ಕಾರದ ವಿವಿಧ ವಿಭಾಗಗಳಿಗೆ ಪತ್ರ ಬರೆದಿರುವುದು ಪತ್ರಿಕೆಯಲ್ಲಿ ವರದಿಯಾಗಿದೆ. ಒಂದು ವೇಳೆ ಅವರಿಗೆ ಖಾತೆಯಾದರೂ ಇಷ್ಟೊಂದು ಜಮೀನನ್ನು ತೆಗೆದುಕೊಂಡು ಏನು ಮಾಡಬಹುದು ಎಂಬುದು ಜನಸಾಮಾನ್ಯರಾದ ನಮಗಿರುವ ಕುತೂಹಲ. ಬಡವರಿಗೆ ಹಂಚುವ ಯೋಜನೆ ಏನಾದರೂ ಇದೆಯೇ? ಈ ವಿಚಾರದಲ್ಲಿ, ಬಹಳ ಒಳ್ಳೆಯ ಪರಂಪರೆ ಇರುವ ಮೈಸೂರು ರಾಜಮನೆತನದ ಮುಂದಿನ ನಡೆ ಏನಾಗಿರಬಹುದು?

ಗುರು ಜಗಳೂರು, ಹರಿಹರ

ಅರಿಯಬೇಕಿದೆ ಕೊಡುಗೆಗಳ ಹಿಂದಿನ ಮರ್ಮ

ರಾಜ್ಯ ಸರ್ಕಾರ ಹಾಲು, ವಿದ್ಯುತ್, ಪೆಟ್ರೋಲ್, ಡೀಸೆಲ್ ಬೆಲೆಯೇರಿಸಿದರೆ, ಪೈಪೋಟಿಗೆ ಬಿದ್ದಂತೆ ಕೇಂದ್ರ ಸರ್ಕಾರವು ಅಡುಗೆ ಅನಿಲ, ಪೆಟ್ರೋಲ್, ಡೀಸೆಲ್ ಮೇಲಿನ ಅಬಕಾರಿ ಸುಂಕವನ್ನು ಏರಿಸಿ ಜನಸಾಮಾನ್ಯರ ಮೇಲೆ ಹೊರೆ ಹಾಕಿದೆ. 2024ರ ಮಾರ್ಚ್‌ನಲ್ಲಿ ಅಡುಗೆ ಅನಿಲದ ದರವನ್ನು ನೂರು ರೂಪಾಯಿ ಇಳಿಸಿ ಉಪಕಾರ ಮಾಡುವ ಇರಾದೆ ತೋರಿದ್ದು ತನಗಾಗಿ ಅಲ್ಲ, ಏಪ್ರಿಲ್‌ನಲ್ಲಿ ನಡೆದ ಲೋಕಸಭಾ ಚುನಾವಣೆ ಮತ್ತು ನಂತರದ ಹಲವು ರಾಜ್ಯಗಳ ವಿಧಾನಸಭಾ ಚುನಾವಣೆಯ ದೃಷ್ಟಿಯಿಂದ ಎಂಬುದು ಈಗ ಸಮಾಜದ ಅರಿವಿಗೆ ಬಂದಿರಬಹುದು.

ಯಾವುದೇ ಪಕ್ಷದ ನೇತೃತ್ವದ ಸರ್ಕಾರ ಏನಾದರೂ ಒಳ್ಳೆಯ ಕೆಲಸ ಮಾಡಿತು ಅಂದರೆ, ಅದರ ಹಿಂದೆ ಜನರನ್ನು ಮರುಳು ಮಾಡುವ ಉದ್ದೇಶ ಇದ್ದೇ ಇರುತ್ತದೆ ಅನ್ನುವುದು ನಗ್ನಸತ್ಯ. ಚುನಾವಣಾ ಪ್ರಕ್ರಿಯೆ ಕೊನೆಗೊಂಡ ತಕ್ಷಣ ಕೊಡುಗೆಗಳನ್ನು ಹಿಂತೆಗೆದುಕೊಳ್ಳುವ ಕೆಲಸ ಆರಂಭವಾಗುತ್ತದೆ. ತಮ್ಮ ಜ್ಞಾಪಕಶಕ್ತಿಗೆ ಗರ ಬಡಿದಿದೆಯೇನೋ ಎನ್ನುವಂತೆ ಜನಸಾಮಾನ್ಯರು ಮೋಸ ಹೋಗುತ್ತಲೇ ಇರುತ್ತಾರೆ. ಅಡುಗೆ ಅನಿಲಕ್ಕೆ ಹಿಂದೆ ನೀಡುತ್ತಿದ್ದ ಸಹಾಯಧನವನ್ನು ನಿಲ್ಲಿಸಿ, ಅದನ್ನು ಬ್ಯಾಂಕ್ ಖಾತೆಗೆ ಪ್ರತ್ಯೇಕವಾಗಿ ಜಮಾ ಮಾಡುವ ಭರವಸೆ ನೀಡಲಾಗಿತ್ತು. ಅದರಂತೆ ದರ ಹೆಚ್ಚಿಸಿದ್ದನ್ನು ಮತ್ತು ಆ ಸಹಾಯಧನದ ಕತೆ ಏನಾಯಿತು ಎನ್ನುವುದನ್ನು ಜನಸಾಮಾನ್ಯರು ಸ್ಮರಿಸಿಕೊಳ್ಳಬೇಕಾಗಿದೆ.

ಶಾಂತಕುಮಾರ್, ಸರ್ಜಾಪುರ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Praveen Kulkarni. Editorial Office: 75, Mahatma Gandhi Road, Bengaluru-560 001. E-mail: editorpv@prajavani.co.in. Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಸುಪ್ರೀಂ ಕೋರ್ಟ್ ಮತ್ತು ಮಹಿಳಾ ನ್ಯಾಯಮೂರ್ತಿಗಳು

33 ಸುಪ್ರೀಂ ಕೋರ್ಟ್‌ನಲ್ಲಿರುವ ಹಾಲಿ ನ್ಯಾಯಮೂರ್ತಿಗಳ ಸಂಖ್ಯೆ (ಸಿಜೆಐ ಸೇರಿ)

2 ಒಟ್ಟು ನ್ಯಾಯಮೂರ್ತಿಗಳಲ್ಲಿರುವ ಮಹಿಳೆಯರ ಸಂಖ್ಯೆ

279 ಇದುವರೆಗೆ ಸುಪ್ರೀಂ ಕೋರ್ಟ್‌ಗೆ ನೇಮಕಗೊಂಡಿರುವ ನ್ಯಾಯಮೂರ್ತಿಗಳು

11 ಈವರೆಗೆ ನೇಮಕವಾಗಿರುವ ಮಹಿಳಾ ನ್ಯಾಯಮೂರ್ತಿಗಳು

ನ್ಯಾಯಾಂಗ ಮಹಿಳೆಯರ ಪ್ರಾತಿನಿಧ್ಯ ಅತ್ಯಲ್ಪ

ಭಾರತದ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹಿಳೆಯರು ಅನೇಕ ಸಾಧನೆಗಳನ್ನು ಮಾಡಿದ್ದಾರೆ. ಇದರ ನಡುವೆಯೂ ನ್ಯಾಯ ವ್ಯವಸ್ಥೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಕೊರತೆ ಇರುವುದು ಅಂಕಿಅಂಶಗಳಿಂದ ತಿಳಿಯುತ್ತದೆ. ಭಾರತದ ಸುಪ್ರೀಂ ಕೋರ್ಟ್‌ನಲ್ಲಿ ಪ್ರಸ್ತುತ ಇಬ್ಬರು ಮಹಿಳಾ ನ್ಯಾಯಮೂರ್ತಿಗಳಿದ್ದಾರೆ. ಸುಪ್ರೀಂ ಕೋರ್ಟ್‌ನ 75 ವರ್ಷಗಳ ಇತಿಹಾಸದಲ್ಲಿ ಒಬ್ಬ ಮಹಿಳೆಯೂ ಮುಖ್ಯ ನ್ಯಾಯಮೂರ್ತಿ ಆಗಿಲ್ಲ. ದೇಶದ 25 ಹೈಕೋರ್ಟ್‌ಗಳಲ್ಲಿ ಕಾರ್ಯನಿರ್ವಹಿಸುತ್ತಿರುವ 763 ನ್ಯಾಯಮೂರ್ತಿಗಳ ಪೈಕಿ 110 ಮಹಿಳಾ ನ್ಯಾಯಮೂರ್ತಿಗಳು ಇದ್ದಾರೆ



ಪ್ರಜಾವಾಣಿ ವಾರ್ತೆ

ಮಹಿಳೆಯರು ಸುಪ್ರೀಂ ಕೋರ್ಟ್, ಹೈಕೋರ್ಟ್ ಮತ್ತು ಕೆಳಹಂತದ ನ್ಯಾಯಾಲಯಗಳ ನ್ಯಾಯಾಧೀಶರಾಗಿ ಕೆಲಸ ಮಾಡಿದ್ದಾರೆ. ಇತ್ತೀಚೆಗೆ ನ್ಯಾಯಾಂಗ ಅಧಿಕಾರಿಗಳ ಹುದ್ದೆಗೆ ನೇಮಕವಾಗುತ್ತಿರುವ ಮಹಿಳೆಯರ ಸಂಖ್ಯೆಯಲ್ಲಿ ಹೆಚ್ಚಳವಾಗುತ್ತಿದ್ದರೂ ಒಟ್ಟಾರೆ ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹಿಳಾ ಪ್ರಾತಿನಿಧ್ಯದ ಕೊರತೆ ಇದೆ ಎನ್ನುವ ಮಾತು ವ್ಯಾಪಕವಾಗಿದೆ. ಅಂಕಿಅಂಶಗಳು ಕೂಡ ಇದನ್ನು ಪುಷ್ಟೀಕರಿಸುತ್ತವೆ. ಸೆಂಟರ್ ಫಾರ್ ಲಾ ಆ್ಯಂಡ್ ಪಾಲಿಸಿ ರಿಸರ್ಚ್ (ಸಿಎಲ್‌ಪಿಆರ್) ನ್ಯಾಯಾಂಗದಲ್ಲಿ ಮಹಿಳೆಯರ ಪ್ರಮಾಣದ ಬಗ್ಗೆ ಇತ್ತೀಚೆಗೆ ವರದಿ ಪ್ರಕಟಿಸಿದೆ.

ಸುಪ್ರೀಂ ಕೋರ್ಟ್ ತನ್ನ 75 ವರ್ಷಗಳ ಇತಿಹಾಸದಲ್ಲಿ 279 ನ್ಯಾಯಮೂರ್ತಿಗಳನ್ನು ಕಂಡಿದೆ. ಅವರಲ್ಲಿ 11 ಮಂದಿ (ಶೇ 3.94) ಮಾತ್ರ ಮಹಿಳಾ ನ್ಯಾಯಮೂರ್ತಿಗಳು. ಸುಪ್ರೀಂ ಕೋರ್ಟ್‌ನಲ್ಲಿ ಪ್ರಸ್ತುತ ಇಬ್ಬರು ಮಹಿಳಾ ನ್ಯಾಯಮೂರ್ತಿಗಳು ಮಾತ್ರ (ಬಿ.ವಿ.ನಾಗರತ್ನ ಮತ್ತು ಬೇಲಾ ತ್ರಿವೇದಿ) ಕಾರ್ಯನಿರ್ವಹಿಸುತ್ತಿದ್ದಾರೆ. ಇವರಲ್ಲಿ ನ್ಯಾ. ಬೇಲಾ ತ್ರಿವೇದಿ ಅವರು 2025ರ ಜೂನ್‌ನಲ್ಲಿ ನಿವೃತ್ತರಾಗಲಿದ್ದು, ನಂತರ ದೇಶದ ಅತ್ಯುನ್ನತ ನ್ಯಾಯಾಲಯದಲ್ಲಿ ಒಬ್ಬರು ಮಹಿಳಾ ನ್ಯಾಯಮೂರ್ತಿ ಮಾತ್ರವೇ ಇರುತ್ತಾರೆ.

ಸುಪ್ರೀಂ ಕೋರ್ಟ್‌ನಲ್ಲಿ 75 ವರ್ಷದಲ್ಲಿ 51 ಮಂದಿ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಏರಿದ್ದಾರೆ. ಆದರೆ, ಅವರಲ್ಲಿ ಒಬ್ಬರೂ ಮಹಿಳೆ ಇಲ್ಲ. ಕರ್ನಾಟಕದ ಬಿ.ವಿ.ನಾಗರತ್ನ ಅವರು ಸುಪ್ರೀಂ ಕೋರ್ಟ್‌ನ ಮೊದಲ ಮಹಿಳಾ ಮುಖ್ಯ ನ್ಯಾಯಮೂರ್ತಿ ಆಗಲಿದ್ದಾರೆ. ಆದರೆ, ಮುಖ್ಯ ನ್ಯಾಯಮೂರ್ತಿಯಾಗಿ ಅವರು 36 ದಿನ ಮಾತ್ರ ಕಾರ್ಯನಿರ್ವಹಿಸಲಿದ್ದು, ನಂತರ ನಿವೃತ್ತರಾಗಲಿದ್ದಾರೆ.

ಸೆ.2021ರಿಂದ ಸುಪ್ರೀಂ ಕೋರ್ಟ್‌ಗೆ 23 (ಈಗಿನ ಒಟ್ಟು ಸಂಖ್ಯೆಯಲ್ಲಿ ಶೇ 69.7ರಷ್ಟು) ನ್ಯಾಯಮೂರ್ತಿಗಳನ್ನು ಆಯ್ಕೆ ಮಾಡಲಾಗಿದೆ. ಅವರಲ್ಲಿ ಒಬ್ಬರೂ ಮಹಿಳೆಯರಿಲ್ಲ. ಕಳೆದ 75 ವರ್ಷಗಳಲ್ಲಿ ಒಂಬತ್ತು ವಕೀಲರನ್ನು ಸುಪ್ರೀಂ ಕೋರ್ಟ್‌ನ ನ್ಯಾಯಮೂರ್ತಿಗಳಾಗಿ ನೇರವಾಗಿ ನೇಮಿಸಲಾಗಿದೆ; ಅವರಲ್ಲಿ ಒಬ್ಬರು ಮಾತ್ರ ಮಹಿಳೆ (ಇಂದು ಮಲ್ಹೋತ್ರಾ–2018).

ಹೈಕೋರ್ಟ್‌ಗಳ ಸ್ಥಿತಿಯೂ ಭಿನ್ನವಾಗಿಲ್ಲ. ವಿವಿಧ ರಾಜ್ಯಗಳ ಹೈಕೋರ್ಟ್‌ಗಳಲ್ಲಿರುವ ಮಹಿಳಾ ನ್ಯಾಯಮೂರ್ತಿಗಳ ಪ್ರಮಾಣ ಶೇ 14.42. (763 ನ್ಯಾಯಮೂರ್ತಿಗಳ ಪೈಕಿ 110). ಎಂಟು ಹೈಕೋರ್ಟ್‌ಗಳಲ್ಲಿ ತಲಾ ಒಬ್ಬರು ಮಾತ್ರ ಮಹಿಳಾ ನ್ಯಾಯಮೂರ್ತಿ ಇದ್ದಾರೆ. ಉತ್ತರಾಖಂಡ, ಮೇಘಾಲಯ ಮತ್ತು ತ್ರಿಪುರಾ ಹೈಕೋರ್ಟ್‌ಗಳಲ್ಲಿ ಮಹಿಳಾ ನ್ಯಾಯಮೂರ್ತಿಯೇ ಇಲ್ಲ. ದೇಶದಲ್ಲಿ ಅತಿ ದೊಡ್ಡ ಹೈಕೋರ್ಟ್ ಆಗಿರುವ ಅಲಹಾಬಾದ್ ಹೈಕೋರ್ಟ್‌ನಲ್ಲಿ (ಒಟ್ಟು 79 ನ್ಯಾಯಮೂರ್ತಿಗಳು) ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಮೂರು ಮಾತ್ರ. ತೆಲಂಗಾಣ ಹೈಕೋರ್ಟ್‌ನಲ್ಲಿ ಅತಿ ಹೆಚ್ಚು (30 ನ್ಯಾಯಮೂರ್ತಿಗಳ ಪೈಕಿ 10– ಶೇ 33.3ರಷ್ಟು) ಮಹಿಳಾ ನ್ಯಾಯಮೂರ್ತಿಗಳಿದ್ದಾರೆ. ದೇಶದಲ್ಲಿರುವ 25 ಹೈಕೋರ್ಟ್‌ಗಳ ಪೈಕಿ ಗುಜರಾತ್ ಹೈಕೋರ್ಟ್‌ನಲ್ಲಿ ಮಾತ್ರ ಮುಖ್ಯ ನ್ಯಾಯಮೂರ್ತಿ ಮಹಿಳೆಯಾಗಿದ್ದಾರೆ. ಮೂರು ಹೈಕೋರ್ಟ್‌ಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳೇ ಇಲ್ಲ

ಜಿಲ್ಲಾ ನ್ಯಾಯಾಲಯಗಳಿಂದ ಮತ್ತು 10 ವರ್ಷಕ್ಕೂ ಹೆಚ್ಚಿನ ಅನುಭವ ಹೊಂದಿರುವ ಹಿರಿಯ ವಕೀಲರ ಸಮೂಹದಿಂದ ಹೈಕೋರ್ಟ್‌ಗಳಿಗೆ ನ್ಯಾಯಮೂರ್ತಿಗಳನ್ನು ನೇಮಿಸಲಾಗುತ್ತದೆ. ಈ ಎರಡೂ ವಿಧಾನಗಳಲ್ಲಿಯೂ ಮಹಿಳೆಯರಿಗೆ ಕಡಿಮೆ ಪ್ರಾತಿನಿಧ್ಯ ಸಿಗುತ್ತಿದೆ. ಹೈಕೋರ್ಟ್‌ಗಳ ನ್ಯಾಯಮೂರ್ತಿಗಳನ್ನು ಹಿರಿತನದ ಆಧಾರದಲ್ಲಿ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳನ್ನಾಗಿ ನೇಮಿಸಲಾಗುತ್ತದೆ. ಹೈಕೋರ್ಟ್‌ಗಳಿಗೆ ಪುರುಷ ನ್ಯಾಯಮೂರ್ತಿಗಳು ನೇಮಕವಾಗುತ್ತಿರುವ ಸರಾಸರಿ ವಯಸ್ಸು 51.86 ವರ್ಷ. ಆದರೆ, ಮಹಿಳಾ ನ್ಯಾಯಮೂರ್ತಿಗಳ ನೇಮಕದ ಸರಾಸರಿ ವಯಸ್ಸು 53.17 ವರ್ಷ. ಇದು ಮಹಿಳಾ ನ್ಯಾಯಮೂರ್ತಿಗಳು ನ್ಯಾಯಾಂಗದಲ್ಲಿ ಅತ್ಯುನ್ನತ ಪದವಿಗೇರುವ ವಿಚಾರದಲ್ಲಿ ತೊಡಕಾಗಿದೆ.

ಹೈಕೋರ್ಟ್ ನ್ಯಾಯಮೂರ್ತಿಗಳಾಗಿ ಮಹಿಳೆಯರು ಪುರುಷರಿಗಿಂತ ತಡವಾಗಿ ನೇಮಕವಾಗುತ್ತಿರುವುದರಿಂದ ಸುಪ್ರೀಂ ಕೋರ್ಟ್ ನ್ಯಾಯಮೂರ್ತಿಗಳಲ್ಲಿ ಮಹಿಳೆಯರ ಸಂಖ್ಯೆ ಕಡಿಮೆ ಇದೆ. ಸುಪ್ರೀಂ ಕೋರ್ಟ್‌ಗೆ ನೇಮಕವಾಗುತ್ತಿರುವ ಮಹಿಳಾ ನ್ಯಾಯಮೂರ್ತಿಗಳ ಸರಾಸರಿ ಸೇವಾವಧಿ ಪುರುಷ ನ್ಯಾಯಮೂರ್ತಿಗಳ ಸರಾಸರಿ ಸೇವಾವಧಿಗಿಂತ ಒಂದು ವರ್ಷ ಕಡಿಮೆ ಇದೆ. ಹೀಗಾಗಿಯೇ ಒಬ್ಬ ಮಹಿಳಾ ನ್ಯಾಯಮೂರ್ತಿಗೂ ದೇಶದ ಅತ್ಯುನ್ನತ ನ್ಯಾಯಾಲಯದ ಮುಖ್ಯ ನ್ಯಾಯಮೂರ್ತಿ ಹುದ್ದೆಗೆ ಏರಲು ಇದುವರೆಗೆ ಸಾಧ್ಯವಾಗಿಲ್ಲ.

ಸುಪ್ರೀಂ ಕೋರ್ಟ್, ಹೈಕೋರ್ಟ್ ಮತ್ತು ಇತರ ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಮೂರ್ತಿಗಳ ಸಂಖ್ಯೆ ಹೆಚ್ಚಾಗಬೇಕು; ಅದರಲ್ಲಿ ಹಿಂದುಳಿದ, ದಲಿತ, ಅಲ್ಪಸಂಖ್ಯಾತ ವರ್ಗಗಳಿಗೆ ಪ್ರಾತಿನಿಧ್ಯ ಸಿಗಬೇಕು ಎನ್ನುವ ಆಶಯ ವ್ಯಕ್ತವಾಗಿದೆ.




50 ಕರ್ನಾಟಕ ಹೈಕೋರ್ಟ್‌ನ ಹಾಲಿ ನ್ಯಾಯಮೂರ್ತಿಗಳು

8 ಮಹಿಳಾ ನ್ಯಾಯಮೂರ್ತಿಗಳು

195 ರಾಜ್ಯ ಹೈಕೋರ್ಟ್‌ನಲ್ಲಿ ಇಲ್ಲಿಯವರೆಗೆ ಕಾರ್ಯನಿರ್ವಹಿಸಿರುವ ನ್ಯಾಯಮೂರ್ತಿಗಳು

11 ಕಾರ್ಯನಿರ್ವಹಿಸಿರುವ ಮಹಿಳಾ ನ್ಯಾಯಮೂರ್ತಿಗಳು

25 ಹೈಕೋರ್ಟ್‌ಗಳಲ್ಲಿ ನ್ಯಾಯಮೂರ್ತಿಗಳು



ವಜಾ ಆದೇಶ ರದ್ದು

ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಾಧೀಶರ ಪರಿಸ್ಥಿತಿಗಳ ಬಗ್ಗೆ ಸುಪ್ರೀಂ ಕೋರ್ಟ್‌ನ ಇತ್ತೀಚಿನ ತೀರ್ಪು ಬೆಳಕು ಚೆಲ್ಲಿದೆ.


'ಕಾರ್ಯನಿರ್ವಹಣೆ ಸಮಾಧಾನಕರವಾಗಿಲ್ಲ' ಎಂಬ ಕಾರಣಕ್ಕೆ 2023ರಲ್ಲಿ ಮಧ್ಯಪ್ರದೇಶದಲ್ಲಿ ಕಿರಿಯ ವಿಭಾಗದ ಇಬ್ಬರು ಸಿವಿಲ್ ನ್ಯಾಯಾಧೀಶರನ್ನು ಕೆಲಸದಿಂದ ವಜಾ ಮಾಡಿದ್ದನ್ನು ಸುಪ್ರೀಂ ಕೋರ್ಟ್ ಈ ವರ್ಷದ ಫೆಬ್ರುವರಿಯಲ್ಲಿ ರದ್ದುಪಡಿಸಿತ್ತು.

ಈ ಕ್ರಮದ ವಿರುದ್ಧ ಸ್ವಯಂಪ್ರೇರಿತ ಪ್ರಕರಣ ದಾಖಲಿಸಿಕೊಂಡಿದ್ದ ಸುಪ್ರೀಂ ಕೋರ್ಟ್, 15 ದಿನಗಳ ಒಳಗಾಗಿ ಇಬ್ಬರನ್ನೂ ಮತ್ತೆ ಕೆಲಸಕ್ಕೆ ತೆಗೆದುಕೊಳ್ಳಬೇಕು ಎಂದು ಹೇಳಿತ್ತು.

ಅರ್ಜಿ ವಿಚಾರಣೆ ನಡೆಸಿದ್ದ ನ್ಯಾಯಮೂರ್ತಿಗಳಾದ ಬಿ.ವಿ.ನಾಗರತ್ನ ಮತ್ತು ಎನ್.ಕೋಟೀಶ್ವರ ಸಿಂಗ್ ಅವರ ನ್ಯಾಯಪೀಠವು 'ನ್ಯಾಯಾಂಗ ಅಧಿಕಾರಿಗಳ ವಜಾ ನಿರ್ಧಾರವು ಶಿಕ್ಷಾರೂಪದ, ಮನಸೋಇಚ್ಛೆ ಮತ್ತು ಕಾನೂನುಬಾಹಿರ ಕ್ರಮ' ಎಂದು ಅಭಿಪ್ರಾಯಪಟ್ಟಿತ್ತು.

ನ್ಯಾಯಮೂರ್ತಿ ಬಿ.ವಿ.ನಾಗರತ್ನ ನೇತೃತ್ವದ ಪೀಠವು ಮಹಿಳಾ ನ್ಯಾಯಾಧೀಶರು ಎದುರಿಸುವ ಸವಾಲುಗಳ ಬಗ್ಗೆಯೂ ತೀರ್ಪಿನಲ್ಲಿ ಪ್ರಸ್ತಾಪಿಸಿತ್ತು. 'ನ್ಯಾಯಾಲಯಗಳಲ್ಲಿ ಮಹಿಳಾ ನ್ಯಾಯಾಧೀಶರಿಗೆ ಅಗತ್ಯವಾದ ಸೂಕ್ಷ್ಮ ಕೆಲಸದ ವಾತಾವರಣ ಮತ್ತು ಪೂರಕ ಮಾರ್ಗದರ್ಶನ ಒದಗಿಸದೆ, ನ್ಯಾಯಾಂಗ ವ್ಯವಸ್ಥೆಯಲ್ಲಿ ಮಹಿಳಾ ನ್ಯಾಯಾಂಗ ಅಧಿಕಾರಿಗಳ ಸಂಖ್ಯೆ ಹೆಚ್ಚಾಗುತ್ತಿರುವ ಬಗ್ಗೆ ಸಮಾಧಾನ ಪಟ್ಟುಕೊಳ್ಳುವುದರಲ್ಲಿ ಯಾವುದೇ ಅರ್ಥ ಇಲ್ಲ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿತ್ತು.

ಹೈಕೋರ್ಟ್‌ಗಳಲ್ಲಿ ಮಹಿಳಾ ಪ್ರಾತಿನಿಧ್ಯ



ಮೀಸಲಾತಿಗೆ ಅವಕಾಶವಿಲ್ಲ

ದೇಶದ ಅತ್ಯುನ್ನತ ಕೋರ್ಟ್‌ಗಳಲ್ಲಿ ಹಿಂದುಳಿತ, ದಲಿತ ಮತ್ತು ಅಲ್ಪಸಂಖ್ಯಾತ ನ್ಯಾಯಮೂರ್ತಿಗಳ ಪ್ರಮಾಣ ಕಡಿಮೆ ಇದ್ದು, ಸಾಮಾಜಿಕ ನ್ಯಾಯದ ದೃಷ್ಟಿಯಿಂದ ಮೀಸಲಾತಿ ಕಲ್ಪಿಸಬೇಕು ಎನ್ನುವ ಬೇಡಿಕೆ ಕೇಳಿಬರುತ್ತಲೇ ಇದೆ. ಆದರೆ, ಸಂವಿಧಾನದ 124, 217 ಮತ್ತು 224ನೇ ವಿಧಿಗಳ ಅನ್ವಯ ಸುಪ್ರೀಂ ಕೋರ್ಟ್ ಮತ್ತು ಹೈಕೋರ್ಟ್‌ಗಳಲ್ಲಿ ಯಾವುದೇ ಜಾತಿ ಮತ್ತು ವರ್ಗಗಳಿಗೆ ಮೀಸಲಾತಿ ಇರುವುದಿಲ್ಲ ಎಂದು ಕೇಂದ್ರದ ಕಾನೂನು ಸಚಿವ ಅರ್ಜುನ್ ರಾಮ್ ಮೇಘವಾಲ್ ಅವರು ಲೋಕಸಭೆಯಲ್ಲಿ (2024ರ ನ. 28) ತಿಳಿಸಿದ್ದರು.

ಆದರೆ, 2018ರ ನಂತರ ಹೈಕೋರ್ಟ್ ನ್ಯಾಯಮೂರ್ತಿಗಳ ನೇಮಕಾತಿ ಸಂದರ್ಭದಲ್ಲಿ ಅವರ ಸಾಮಾಜಿಕ ಹಿನ್ನೆಲೆಯ ಮಾಹಿತಿ ಪಡೆಯಲಾಗುತ್ತಿದೆ. ಅದರ ಆಧಾರದಲ್ಲಿ 2018ರಿಂದ ನೇಮಕವಾದ ವಿವಿಧ ರಾಜ್ಯಗಳ ಒಟ್ಟು 684 ಹೈಕೋರ್ಟ್ ನ್ಯಾಯಮೂರ್ತಿಗಳಲ್ಲಿ 21 ಎಸ್‌ಸಿ, 14 ಎಸ್‌ಟಿ, 82 ಒಬಿಸಿ, 37 ಅಲ್ಪಸಂಖ್ಯಾತ ನ್ಯಾಯಮೂರ್ತಿಗಳು ಇದ್ದಾರೆ (2024 ಅ. 31ರವರೆಗಿನ ಮಾಹಿತಿ) ಎಂದು ಸಚಿವರು ಹೇಳಿದ್ದರು.

ಆಧಾರ: ಸಿಎಲ್‌ಪಿಆರ್‌ನ 'ಈಕ್ವಲ್ ಜಸ್ಟೀಸ್' ವರದಿ, ಸುಪ್ರೀಂ ಕೋರ್ಟ್ ವೆಬ್‌ಸೈಟ್, ಕರ್ನಾಟಕ ಹೈಕೋರ್ಟ್ ವೆಬ್‌ಸೈಟ್, ಲೋಕಸಭೆಯಲ್ಲಿ ಸಚಿವರ ಉತ್ತರ

'ಅಮೆಜಾನ್ ಪ್ರೈಂ'ನಲ್ಲಿ ಪಾರು ಪಾರ್ವತಿ



'ಬಿಗ್‌ಬಾಸ್' ಖ್ಯಾತಿಯ ದೀಪಿಕಾ ದಾಸ್ ಅಭಿನಯದ 'ಪಾರು ಪಾರ್ವತಿ' ಸಿನಿಮಾ ಒಟಿಟಿ ವೇದಿಕೆ ಪ್ರವೇಶಿಸಿದೆ. ಅಮೆಜಾನ್ ಪ್ರೈಂನಲ್ಲಿ ಈ ಸಿನಿಮಾ ವೀಕ್ಷಣೆಗೆ ಲಭ್ಯವಿದೆ. ರೋಹಿತ್ ಕೀರ್ತಿ ನಿರ್ದೇಶನದ ಈ ಚಿತ್ರವನ್ನು ಎಯಿಟೀನ್ ಥರ್ಟೀ ಸಿಕ್ಸ್ ಪಿಕ್ಚರ್ಸ್ ಲಾಂಛನದಡಿ ಪಿ.ಬಿ.ಪ್ರೇಂನಾಥ್ ನಿರ್ಮಿಸಿದ್ದಾರೆ. ತಿಳಿಯಾದ ಹಾಸ್ಯ, ಜೀವನ ಪಾಠ, ಯುವಜನತೆಗೆ ಸಂದೇಶ ಹೊಂದಿರುವ ಭಿನ್ನ ಶೈಲಿಯ ಈ ಸಿನಿಮಾ ಜ.31ರಂದು ಬಿಡುಗಡೆಯಾಗಿತ್ತು. 'ಪಾಯಲ್' ಎಂಬ ಪಾತ್ರದಲ್ಲಿ ದೀಪಿಕಾ ದಾಸ್, ಪೂನಂ ಸರ್ನಾಯಕ್ 'ಪಾರ್ವತಿ' ಎಂಬ ಪಾತ್ರದಲ್ಲಿ ಹಾಗೂ 'ಮಿದುನ್' ಎಂಬ ಪಾತ್ರದಲ್ಲಿ ಫವಾಜ್ ಅಶ್ರಫ್ ಮುಖ್ಯಭೂಮಿಕೆಯಲ್ಲಿ ನಟಿಸಿದ್ದಾರೆ.

ಈ ಚಿತ್ರವು ಅಡ್ವೆಂಚರ್ ಕಾಮಿಡಿ ಜಾನರ್‌ನಲ್ಲಿದೆ. ಅಬಿನ್ ರಾಜೇಶ್ ಛಾಯಾಚಿತ್ರಗ್ರಹಣ ಹಾಗೂ ಆರ್.ಹರಿ ಸಂಗೀತ ನೀಡಿರುವ ಈ ಚಿತ್ರದಲ್ಲಿ ಟ್ರಾವೆಲ್ ಕಥೆಯಿದ್ದು, ಬೆಂಗಳೂರು, ಗೋವಾ, ಮಹಾರಾಷ್ಟ್ರ, ರಾಜಸ್ಥಾನ ಹಾಗೂ ಉತ್ತರಾಖಂಡ್‌ನಲ್ಲಿ ಚಿತ್ರದ ಚಿತ್ರೀಕರಣ ನಡೆದಿದೆ.

'ಕಪಟ ನಾಟಕ'ಕ್ಕೆ ಡಾಲಿ ಸಾಥ್



ಬಹುತೇಕ ಹೊಸಬರಿಂದಲೇ ಕೂಡಿರುವ 'ಕಪಟ ನಾಟಕ ಸೂತ್ರಧಾರಿ' ಚಿತ್ರದ ಫಸ್ಟ್‌ಲುಕ್ ಇತ್ತೀಚೆಗಷ್ಟೇ ಬಿಡುಗಡೆಗೊಂಡಿದೆ. ನಟ ಡಾಲಿ ಧನಂಜಯ ಪೋಸ್ಟರ್ ಬಿಡುಗಡೆಗೊಳಿಸಿ ತಂಡಕ್ಕೆ ಶುಭ ಹಾರೈಸಿದರು. ಧೀರಜ್ ಎಂ.ವಿ ಈ ಚಿತ್ರದ ನಿರ್ದೇಶಕ.

'ಈ ಸಮಾಜಕ್ಕೆ ಕನ್ನಡಿ ಹಿಡಿಯುವ ಕಥೆ. ಇಲ್ಲಿ ಹಾಸುಹೊಕ್ಕಾಗಿರುವ ತಾರತಮ್ಯ, ಶೋಷಣೆಗಳ ಕುರಿತಾಗಿ ಚಿತ್ರ ಬೆಳಕು ಚೆಲ್ಲುತ್ತದೆ. ರಾಜಕೀಯ ವಿಡಂಬನೆಯಿದೆ. ಬಹುಪಾಲು ಚಿತ್ರೀಕರಣ ಸಾವಿರ ವರ್ಷಗಳಷ್ಟು ಇತಿಹಾಸ ಹೊಂದಿರುವ ಉತ್ತರ ಕರ್ನಾಟಕದ ದೇವಸ್ಥಾನವೊಂದರ ಆವರಣದಲ್ಲಿ ನಡೆದಿದೆ. ದೇವಸ್ಥಾನದ ಹೆಸರನ್ನು ಉದ್ದೇಶಪೂರ್ವಕವಾಗಿ ಬಹಿರಂಗಪಡಿಸುತ್ತಿಲ್ಲ. ಈಗ ಸಿನಿಮಾ ಪೋಸ್ಟ್ ಪ್ರೊಡಕ್ಷನ್ ಹಂತದಲ್ಲಿದೆ' ಎಂದರು ನಿರ್ದೇಶಕರು.

ವಿಎಸ್‌ಕೆ ಸಿನಿಮಾಸ್ ಚಿತ್ರವನ್ನು ನಿರ್ಮಿಸಿದ್ದು, ಧೀರಜ್, ಅಭಿರಾಮ ಅರ್ಜುನ ಪ್ರಮುಖ ಪಾತ್ರಗಳಲ್ಲಿದ್ದಾರೆ. ನೂರಕ್ಕೂ ಹೆಚ್ಚು ಮಂದಿ ಕಲಾವಿದರು ಈ ಚಿತ್ರದ ತಾರಾಗಣದಲ್ಲಿದ್ದಾರೆ. ವೀರೇಶ್ ಎನ್. ಟಿ.ಎ ಛಾಯಾಚಿತ್ರಗ್ರಹಣ, ಪ್ರಸನ್ನ ಕುಮಾರ್ ಎಂ.ಎಸ್ ಸಂಗೀತ ನಿರ್ದೇಶನ ಚಿತ್ರಕ್ಕಿದೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ **9606038256**

ಪ್ರಧಾನಿ ನರೇಂದ್ರ ಮೋದಿ ಅವರು ರಾಜಕೀಯದಿಂದ ನಿವೃತ್ತಿ ಘೋಷಿಸಿದ್ದಾರೆ ಮತ್ತು ಸೆ.16ರಂದು ಪ್ರಧಾನಿಯಾಗಿ ಅವರು ಕೊನೆಯ ದಿನ ಕಾರ್ಯನಿರ್ವಹಿಸಲಿದ್ದಾರೆ ಎಂದು 'ಟೈಮ್ಸ್ ನೌ' ಸುದ್ದಿ ಚಾನೆಲ್ ವರದಿ ಮಾಡಿದೆ ಎಂಬ ಪ್ರತಿಪಾದನೆಯೊಂದಿಗೆ 'ಎಕ್ಸ್' ಬಳಕೆದಾರರೊಬ್ಬರು ಗ್ರಾಫಿಕ್ ಒಂದನ್ನು ಇತ್ತೀಚೆಗೆ ಪೋಸ್ಟ್ ಮಾಡಿದ್ದರು. ಆ ಗ್ರಾಫಿಕ್‌ನಲ್ಲಿ, ಮೋದಿ ಅವರು ನಾಗ್ಪುರದ ಆರ್‌ಎಸ್‌ಎಸ್ ಪ್ರಧಾನ ಕಚೇರಿಗೆ ಭೇಟಿ ನೀಡಿದ ನಂತರ ಈ ಘೋಷಣೆ ಮಾಡಿದ್ದಾರೆ ಎಂಬ ಒಕ್ಕಣೆಯೂ ಇದೆ. ಆದರೆ, ಇದು ಸುಳ್ಳು ಸುದ್ದಿ.



ಮೋದಿ ಅವರು ಆರ್‌ಎಸ್‌ಎಸ್ ಕಚೇರಿಗೆ ನೀಡಿದ ಭೇಟಿ ಕುರಿತು ನಿರ್ದಿಷ್ಟ ಪದಗಳನ್ನು ಬಳಸಿ ಹುಡುಕಾಟ ನಡೆಸಿದಾಗ, ಯಾವ ವರದಿಯಲ್ಲೂ ಮೋದಿ ಅವರ ನಿವೃತ್ತಿ ಬಗ್ಗೆ ಪ್ರಸ್ತಾಪವಿರಲಿಲ್ಲ. ಟೌಮ್ಸ್ ನೌ ವೆಬ್‌ಸೈಟ್‌ನಲ್ಲಿ ಈ ಕುರಿತಾಗಿ ಹುಡುಕಿದಾಗಲೂ ಮೋದಿ ರಾಜಕೀಯ ನಿವೃತ್ತಿಗೆ ಸಂಬಂಧಿಸಿದ ಯಾವುದೇ ಮಾಹಿತಿ ಸಿಗಲಿಲ್ಲ. ಶಿವಸೇನಾ ಉದ್ಧವ್ ಠಾಕ್ರೆ ಬಣದ ಸಂಸದ ಸಂಜಯ್ ರಾವುತ್ ಅವರು ಸೆ.17ರಂದು ಪ್ರಧಾನಿಯವರು ರಾಜೀನಾಮೆ ನೀಡಲಿದ್ದಾರೆ ಎಂದು ಹೇಳಿದ ನಂತರ ಈ ಬಗ್ಗೆ ಚರ್ಚೆ ಶುರುವಾಗಿತ್ತು. ರಾವುತ್ ಹೇಳಿಕೆ ಕುರಿತು ಮಹಾರಾಷ್ಟ್ರ ಬಿಜೆಪಿ ಮುಖ್ಯಸ್ಥ ಚಂದ್ರಶೇಖರ್ ಬವಾಂಕುಲೆ 75 ವರ್ಷಕ್ಕೆ ನಿವೃತ್ತರಾಗಬೇಕು ಎಂಬ ನಿಯಮ ಇಲ್ಲ ಎಂದು ಸ್ಪಷ್ಟನೆ ನೀಡಿರುವುದು ಹಲವು ಮಾಧ್ಯಮಗಳಲ್ಲಿ ವರದಿಯಾಗಿತ್ತು. 'ಟೌಮ್ಸ್ ನೌ' ಚಾನೆಲ್ ಸಂಪರ್ಕಿಸಿದಾಗ, 'ಆ ವರದಿಯನ್ನು ನಾವು ಮಾಡಿಲ್ಲ' ಎಂಬ ಸ್ಪಷ್ಟನೆಯನ್ನೂ ನೀಡಿದೆ ಎಂದು ಪಿಟಿಐ ಫ್ಯಾಕ್ಟ್ ಚೆಕ್ ವರದಿ ತಿಳಿಸಿದೆ.

ಗುಂಡಣ್ಣ



ಇಲ್ಲಿ ಯಾವುದೂ ನಮ್ಮದಲ್ಲ!

ನುಡಿ ಬೆಳಗು



ಗವಿಸಿದ್ಧೇಶ್ವರ ಸ್ವಾಮೀಜಿ, ಗವಿಮಠ, ಕೊಪ್ಪಳ

169

ಮನುಷ್ಯನ ಜೀವನವು ಎರಡು ಮಿತಿಗಳಲ್ಲಿ ಚಲಿಸುತ್ತದೆ. ಒಂದು ಹುಟ್ಟು, ಇನ್ನೊಂದು ಸಾವು. ಈ ಎರಡು ಮಿತಿಗಳ ನಡುವೆ ನಮ್ಮ ಬದುಕು ಇದೆ. ಯಾವುದಕ್ಕೆ ನಾವು ನಮ್ಮ ಹುಟ್ಟು ಅಂತ ಕರೀತೀವಿ, ವಾಸ್ತವದಲ್ಲಿ ಅದು ನಮ್ಮ ಹುಟ್ಟೇನು? ಯಾರಾದರೂ ಇಲ್ಲಿ ಹುಟ್ಟುವಾಗ ಯಾರಲ್ಲಾದರೂ ಚರ್ಚೆ ಮಾಡಿ ಯೋಜನೆ ಸಿದ್ಧಪಡಿಸಿ ಜನ್ಮ ಪಡೆದಿದ್ದಾರೇನು? ನಾನು ಯಾವ ದೇಶದಲ್ಲಿ ಹುಟ್ಟಬೇಕು, ಯಾರ ಗರ್ಭದಲ್ಲಿ ಹುಟ್ಟಬೇಕು, ಗಂಡಾಗಿ ಹುಟ್ಟಬೇಕು, ಹೆಣ್ಣಾಗಿ ಹುಟ್ಟಬೇಕು ಎನ್ನುವುದು ನನ್ನ ಇಚ್ಛೆಯಾಗಿತ್ತೇನು? ಅಥವಾ ಯಾರಾದರೂ ನನ್ನೊಂದಿಗೆ ಚರ್ಚಿಸಿ ಈ ಭೂಮಿಗೆ ಕರೆದುಕೊಂಡು ಬಂದಿದ್ದಾರೇನು? ಅಂದರೆ, ಹುಟ್ಟು ನನ್ನ ಇಚ್ಛೆಯಂತೆ ನಡೆದಿಲ್ಲ. ಸಾವು ಕೂಡಾ ಹಾಗೆಯೆ. 'ನನ್ನ ಮಕ್ಕಳ ಮದುವೆ ಇದೆ. ಸ್ವಲ್ಪ ತಡೆದು ಬಾ' ಎಂದು ಹೇಳಿದರೆ ಸಾವು ಕೇಳುತ್ತದೇನು? ಸಾವು ಎಂದರೆ ಕರೆಯದೆ ಬರುವ ಅತಿಥಿ. ಅದೇನು ನೋಟಿಸ್ ಕೊಟ್ಟಿಲ್ಲ. ಅಂದರೆ, ಸಾವು ಕೂಡಾ ನಮ್ಮ ಇಚ್ಛೆಯಂತೆ ನಡೆದಿಲ್ಲ. ನಮ್ಮ ಬಯಕೆಯಲ್ಲದ ಸಾವು, ನಮ್ಮ ಆಯ್ಕೆ ಇಲ್ಲದ ಹುಟ್ಟು. ಇದರ ನಡುವಿನ ಬದುಕು ನಮ್ಮದು ಎಂದು ನಾವು ಹೇಗೆ ಹೇಳುವುದು? ಈಗ ಒಂದು ಹೊಳೆ ಹರಿಯುತ್ತದೆ. ಹೊಳೆಗೆ ಎರಡು ದಡಗಳಿರುತ್ತವೆ.

ಹಾಗೆಯೇ ಜೀವನ ಎನ್ನುವ ನದಿಗೆ ಹುಟ್ಟು ಸಾವು ಎಂಬ ಎರಡು ದಂಡೆಗಳು. ಈ ಎರಡು ದಂಡೆಗೆ ಸೇತುವೆ ಕಟ್ಟಲು ಪ್ರಯತ್ನಿಸಿದ್ದಾನೆ ಮನುಷ್ಯ. ನದಿಗೆ ಸೇತುವೆ ಕಟ್ಟುವಾಗ ಆ ಕಡೆ ಈ ಕಡೆ ಎರಡು ಪಿಲ್ಲರ್ ಹಾಕ್ತಾರೆ. ಆದರೆ, ಮನುಷ್ಯ ಕಟ್ಟಲು ಬಯಸಿರುವ ಸೇತುವೆಯಲ್ಲಿ ಆ ಕಡೆ ಹುಟ್ಟು ಎಂಬುದಿದೆ. ಈ ಕಡೆ ಸಾವು ಎಂಬುದಿದೆ. ಹುಟ್ಟೂ ನಂದಲ್ಲ, ಸಾವೂ ನಂದಲ್ಲ. ಆದರೂ ಸೇತುವೆ ಕಟ್ಟುವ ಪ್ರಯತ್ನ ಬಿಟ್ಟಿಲ್ಲ. ಸೇತುವೆ ಇರುವುದು ವಸತಿ ಮಾಡಲು ಅಲ್ಲ. ಅದು ಇರುವುದು ದಾಟಿ ಹೋಗಲು ಎನ್ನುವ ಸತ್ಯ ತಿಳಿದುಕೊಳ್ಳಬೇಕು ಮನುಷ್ಯ.

ನಮ್ಮ ಆಯ್ಕೆ ಇಲ್ಲದ ಹುಟ್ಟು, ನಮ್ಮ ಬಯಕೆಗೆ ವಿರುದ್ಧದ ಸಾವು ಎರಡೂ ನಮ್ಮದಲ್ಲ ಎಂದ ಮೇಲೆ ಇವೆರಡರ ನಡುವೆ ಇರುವ ಬದುಕಾದರೂ ನಮ್ಮದಾಗುವುದು ಹೇಗೆ? ಇದು ನನ್ನದು, ಅದು ನನ್ನದು, ಎಲ್ಲವೂ ನನ್ನ ನಿಯಂತ್ರಣದಲ್ಲಿ ಇರಬೇಕು ಎನ್ನುತ್ತೇವಲ್ಲ. ಯಾವುದು ನಮ್ಮ ನಿಯಂತ್ರಣದಲ್ಲಿದೆ ಹೇಳಿ? ಈ ದೇಹ ಇದೆ. ನಾವು ನಮ್ಮ ಎದೆ ಮುಟ್ಟಿಕೊಂಡು ಇದು ನನ್ನ ದೇಹ ಎನ್ನುತ್ತೇವೆ. ನಮ್ಮ ದೇಹ ಆದರೆ ಅದು ನಮ್ಮ ಮಾತು ಕೇಳಬೇಕಲ್ಲ. ನಮ್ಮ ಕಣ್ಣಿನಿಂದ ನೋಡುತ್ತೇವೆ, ಕಿವಿಯಿಂದ ಕೇಳುತ್ತೇವೆ, ಕಾಲಿನಿಂದ ನಡೆಯುತ್ತೇವೆ. ಈ ಕಣ್ಣು, ಕಿವಿ, ಕಾಲು ಎಲ್ಲ ನಮ್ಮದೇ ಆಗಿದ್ದರೆ ಸತ್ತ ನಂತರ ಹೆಣ ಮಲಗಿಸಿರುತ್ತಾರಲ್ಲ, ಆಗಲೂ ಅವು ಕೆಲಸ ಮಾಡಬೇಕಿತ್ತಲ್ಲ. ನಮ್ಮ ದೇಹ ಅಂದರೂ ಅದು ನಮ್ಮ ಬಯಕೆಯಂತೆ ನಡೆಯುತ್ತಿಲ್ಲ. ಮನುಷ್ಯನ ಜಾಗ್ರತಾವಸ್ಥೆ, ನಿದ್ರಾವಸ್ಥೆ, ಸ್ವಪ್ನಾವಸ್ಥೆ ಯಾವುದೂ ನಮ್ಮ ನಿಯಂತ್ರಣದಲ್ಲಿ ಇಲ್ಲ. ನಾವು ನಿದ್ದೆ ಮಾಡಿದಾಗ ಕಳ್ಳರು ಬಂದು ಎಲ್ಲ ತೆಗೆದುಕೊಂಡು ಹೋಗುತ್ತಾರೆ. ಅಂದರೆ, ಅವಸ್ಥೆಗಳು ನಮ್ಮ ನಿಯಂತ್ರಣದಲ್ಲಿ ಇಲ್ಲ ಎಂದೇ ಅರ್ಥ. ಅದನ್ನು ಅರ್ಥ ಮಾಡಿಕೊಳ್ಳಬೇಕು.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಬುಧವಾರ ಏಪ್ರಿಲ್ 9, 2025

ಶ್ರೀ ವಿಶ್ವಾವಸು ನಾಮ ಸಂವತ್ಸರ ಉತ್ತರಾಯಣ ವಸಂತ ಋತು ತಿಥಿ: ಚೈತ್ರ ಶುದ್ಧ ದ್ವಾದಶಿ ಗಂ. 22-56 ನಕ್ಷತ್ರ: ಮಘ ಗಂ. 09-57 ಯೋಗ: ಗಂಡ ಗಂ. 18-25 ಕರಣ: ಬವ ಗಂ. 10-01, ಮೀನ ಮಾಸದ 26 ನೇ ದಿನ, ಮಳೆನಕ್ಷತ್ರ: ರೇವತಿ 3.
ರಾಹುಕಾಲ : ಮಧ್ಯಾಹ್ನ 12-00 – 01-30
ಸೂರ್ಯೋದಯ : 06-24 ಸೂರ್ಯಾಸ್ತ : 06-39
ಮುಸ್ಲಿಂ ದಿನಾಂಕ : 10 ಶವ್ವಾಲ್
ಅದೃಷ್ಟ ಸಂಖ್ಯೆ : 5, 3

ಮೇಷ: ಆಲೋಚನೆಯ ಹೊಸ ಕಾರ್ಯಗಳು ಸ್ವಲ್ಪ ತಡವಾಗಿ ಪ್ರಾರಂಭವಾದರೂ, ದಿನದ ಸ್ವಲ್ಪ ಸಮಯ ಕಳೆದ ಹಾಗೇ ಎಲ್ಲವೂ ಆಸೆಗೆ ತಕ್ಕಂತೆ ನಡೆಯಲಿದೆ. ಶುಭ ಕಾರ್ಯ ನಡೆಸಿಕೊಡುವಲ್ಲಿ ಪಾತ್ರ ವಹಿಸುವಿರಿ.

ವೃಷಭ: ಸರ್ಕಾರಿ ಅಧಿಕಾರಿಗಳಿಗೆ ಸಹೋದ್ಯೋಗಿಗಳಿಂದ ನಿರೀಕ್ಷೆಗೆ ಮೀರಿದ ಸಹಾಯ ದೊರೆಯುವುದು. ನಿಧಾನಗತಿಯಲ್ಲಿ ತಂದೆಯವರ ಆರೋಗ್ಯ ಉತ್ತಮ ಆಗಲಿದೆ. ದೇವತಾ ಉಪಾಸನೆಯಿಂದ ಉನ್ನತಿ ಒದಗಿಬರಲಿದೆ.

ಮಿಥುನ: ಮಗನ ಕೆಲಸದ ವಿಚಾರದಲ್ಲಿ ವಿದೇಶದಲ್ಲಿರುವ ಸ್ನೇಹಿತ ನೆರವಿಗೆ ಬರಲಿದ್ದಾರೆ. ಯುವ ಕಲಾವಿದರಿಗೆ ಹೆಚ್ಚು ಅವಕಾಶಗಳು ಲಭಿಸುವುದು. ಅಧ್ಯಾಪಕ ವರ್ಗದವರಿಗೆ ಕೆಲಸ ಅನಿವಾರ್ಯವಾಗಬಹುದು.

ಕರ್ಕಾಟಕ: ಶುಭ ಸಮಾಚಾರಗಳನ್ನು ಕೇಳುವುದಲ್ಲದೆ ಪ್ರಯತ್ನಿಸಿದ ಎಲ್ಲಾ ಕಾರ್ಯಗಳಲ್ಲಿ ಯಶಸ್ಸು ಪಡೆಯುವಿರಿ. ಆರೋಗ್ಯದ ವಿಚಾರವಾಗಿ ದೇಹ ಪ್ರಕೃತಿಗೆ ಅನುಗುಣವಾಗಿ ವೈದ್ಯರು ನೀಡಿರುವ ಸಲಹೆ ಚಾಚೂ ತಪ್ಪದೆ ಪಾಲಿಸಿ.

ಸಿಂಹ: ಎರಡು ದೋಣಿಗೆ ಕಾಲು ಹಾಕಿರುವ ನಿಮ್ಮ ಜೀವನಶೈಲಿಯಿಂದ ಸಮಸ್ಯೆಗಳು ಎದುರಾಗಬಹುದು. ಆರ್ಥಿಕ ವಿಚಾರದಲ್ಲಿ ಅತ್ಯಂತ ಉದಾರತೆ ತೋರಿ ಸಮಸ್ಯೆಯನ್ನು ಸೃಷ್ಟಿಸಿಕೊಳ್ಳಬೇಡಿ.

ಕನ್ಯಾ: ಸಹೋದ್ಯೋಗಿಗಳು ಸಹಕಾರ ನೀಡಿದರೂ ಸ್ವಾರ್ಥ ಮನೋಭಾವವನ್ನು ಹೊಂದಿರುತ್ತಾರೆ. ತರಕಾರಿ ಮತ್ತು ಹಣ್ಣು ವ್ಯಾಪಾರಿಗಳಿಗೆ ಜೋರಿನ ವ್ಯಾಪಾರ ಇರುವುದು. ವ್ಯವಹಾರಿಕ ಒಪ್ಪಂದ ಮುರಿದು ಬೀಳದಂತೆ ಎಚ್ಚರವಹಿಸಿ.

ತುಲಾ: ಸಂಶೋಧನಾ ಕಾರ್ಯಗಳಲ್ಲಿ ಆಸಕ್ತಿ ವೃದ್ಧಿಯಾಗುವುದು ಅಥವಾ ಸಂಶೋಧನಾ ವೃತ್ತಿಯಲ್ಲಿರುವವರಿಗೆ ಅಧ್ಯಯನಕ್ಕೆ ಸುಸಮಯ. ಸಜ್ಜನರ ಒಡನಾಟದಿಂದ ಮನಸ್ಸಿಗೆ ನೆಮ್ಮದಿ ಇರುವುದು.

ವೃಶ್ಚಿಕ: ಬಿರುಕು ಬಿಟ್ಟಿರುವ ಸಂಬಂಧಗಳನ್ನು ಸರಿಪಡಿಸುವ ಆಲೋಚನೆಯ ಮಾರ್ಗಕ್ಕೆ ಪುನಃ ಅಡೆತಡೆ ಉಂಟಾಗಬಹುದು. ಪ್ರೀತಿ ಪಾತ್ರರೊಂದಿಗೆ ಕಳೆಯುವ ಸಮಯವು ಹಿಂದಿನ ಲವಲವಿಕೆಯನ್ನು ಪುನಃ ಮೂಡಿಸುತ್ತದೆ.

ಧನು: ದಿನಸಿ ವರ್ತಕರಿಗೆ ಉತ್ತಮ ಲಾಭ ಪ್ರಾಪ್ತಿಯಾಗುವುದರ ಜೊತೆಗೆ ಹೊಸ ವ್ಯಾಪಾರಿಗಳ ಬಳಕೆಯಾಗುವುದು. ಸ್ನೇಹಿತರ ಹಾಗೂ ಕುಟುಂಬದವರ ಸಲಹೆ ಮೇರೆಗೆ ಕೆಲವು ಉತ್ತಮ ಬದಲಾವಣೆಗಳನ್ನು ಮಾಡಿಕೊಳ್ಳುವಿರಿ.

ಮಕರ: ನ್ಯಾಯಾಲಯದ ಮೆಟ್ಟಿಲನ್ನು ಏರುವ ವಿಚಾರಗಳು ನಡೆಯದಂತೆ ಎಚ್ಚರವಹಿಸಿ. ಬದುಕಿನಲ್ಲಿ ನಡೆಯುತ್ತಿರುವ ಅನೇಕ ಸಮಸ್ಯೆಗಳಿಗೆ ಮೂಲ ಏನೆಂಬುದನ್ನು ಕಂಡುಕೊಂಡರೆ ಪರಿಸ್ಥಿತಿಯು ಸುಧಾರಿಸುವುದು.

ಕುಂಭ: ನೀರಿಗೆ ಸಂಬಂಧಿಸಿದ ಸರ್ಕಾರದ ಬೃಹತ್ ಯೋಜನೆಗಳ ಗುತ್ತಿಗೆ ಕೆಲಸಗಳನ್ನು ಪಾಲುದಾರಿಕೆಯಲ್ಲಿ ಪಡೆಯುವುದಕ್ಕೆ ಪ್ರಯತ್ನ ಮಾಡಿ. ಉತ್ತಮ ನಿರ್ಧಾರಗಳನ್ನು ತೆಗೆದುಕೊಳ್ಳಬೇಕಾದಾಗ ಭವಿಷ್ಯದ ಬಗ್ಗೆ ದೃಷ್ಟಿ ಇರಲಿ.

ಮೀನ: ವೈಯಕ್ತಿಕ ವಿಚಾರಗಳನ್ನು ಸಮಾಧಾನಕ್ಕಾಗಿ ಆಪ್ತರೊಬ್ಬರಲ್ಲಿ ಹೇಳಿಕೊಳ್ಳಲೇ ಬೇಕಾದ ಸಂದರ್ಭ ಎದುರಾಗುವುದು. ವೃತ್ತಿ ಜೀವನಕ್ಕೆ ಸಂಬಂಧಿಸಿದಂಥ ಗುರಿಗಳನ್ನು ಈಡೇರಿಸಿಕೊಳ್ಳುವಲ್ಲಿ ಸಫಲರಾಗುವಿರಿ.

ಪದಬಂಧ 6006


– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

2.ಆರಾಣೆಯಲ್ಲಿಯೇ ಆಜ್ಞೆ ಇದೆ (2)
3.ಕಗ್ಗೊಲೆಯ ಘಟನೆ (4)
5.ಸೊಂಟದಿಂದ ಪ್ರಾರಂಭವಾದ ಕಂಪನ (3)
6.ಮಿಡಿಗೂ ಹಣ್ಣಿಗೂ ನಡುವಿನ ಸ್ಥಿತಿ (2)
7.ಕಣದಲ್ಲಿರುವ ಹತೋಟಿ (4)
10.ಮನದೊಳಗಿರುವ ಕುಲ (4)
13.ಛಂದೋಬದ್ಧವಲ್ಲದ ವಾಕ್ಯ (2)
14.ಸಲೀಸು ಎಂದು ಹೀಗೆನ್ನಿ (3)
15.ಮರವನ್ನು ಕೊಯ್ಯುವ ಸಾಧನ (4)
16.ಕ್ಷೇಮವಲ್ಲ!ಬರ ಹೀಗೆ ಬಂದಿದೆ! (2)

ಮೇಲಿಂದ ಕೆಳಕ್ಕೆ

1.ವರ ಪಡೆದಿರುವ ಬೇಡ (4)
2.ಅನಿರೀಕ್ಷಿತ ಘಟನೆ (4)
3.ಹಣಕ್ಕಾಗಿಯೇ ಈ ಗೊಂದಲ (4)
4.ಕಾಯಿ ಹಿಡಿದೇ ಮಾಡಿದ ಕೊಳ್ಳೆ! (4)
8.ಒಳ್ಳೆಯ ಅಥವಾ ಕೆಟ್ಟ ನಾತ (3)
9.ರಾಗವನ್ನು ಕೇಳುತ್ತಾ ಮಾಡಿದ ಸುಗಂಧ ಲೇಪನ (4)
10.ಜೇನಿನೊಡನೆ ಬಂದಿರುವ ತಿಂಗಳು (4)
11.ಅದೇ ತಾನೆ ಅರಳಿದ ಹೊಸ ಹೂವಿದು (4)
12.ಅರಮನೆ ಹತ್ತಿರವಿರುವ ಬಂದೀಖಾನೆ (4)



6005ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅನುರೂಪ 3.ಪದ್ಮವ್ಯೂಹ
5.ದಾವಣಿ 6.ಅವಸರ
8.ತಡಬಡ 10.ಅಂತರ್ದಾನ
12.ಜನ್ಮವರ್ಣ 13.ಕ್ಷತ್ರಿಯ
16.ಲಾಕ್ಷಣಿಕ 17.ಲಿಖಾವಟ್ಟು

ಮೇಲಿಂದ ಕೆಳಕ್ಕೆ:
1.ಅಹ್ನ 2.ಪತ್ತೇದಾರ
3.ಪರಿಣಿತ 4.ಹಣ್ಣು
7.ವಸಂತ 9.ಬಡವ
11.ನಕ್ಷತ್ರಕ 12.ಜಯಶಾಲಿ
14.ಭಲಾ 15.ಹೊಟ್ಟು

ಸುಡೊಕು 6391

2		6					5	
	4		5		6	3		2
3							6	
	2					9		4
			2	4	7			
	7					5		8
		9			8		4	
4		2						1
	6		4		2	7	9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6390 ಸುಡೊಕು

3	9	1	8	7	5	6	4	2
7	6	5	2	4	9	3	8	1
2	8	4	3	1	6	7	9	5
1	5	9	7	2	4	8	6	3
4	2	7	6	8	3	5	1	9
8	3	6	5	9	1	2	7	4
6	1	2	4	5	8	9	3	7
9	7	8	1	3	2	4	5	6
5	4	3	9	6	7	1	2	8

ಆಶಿಫಾಗೆ ಸಂಸ್ಕೃತದಲ್ಲಿ 96 ಅಂಕ

ಪ್ರಜಾವಾಣಿ ವಾರ್ತೆ


ಆಶಿಫಾ ಹುಸೈನ್

ಮಂಗಳೂರು: ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಆಶಿಫಾ ಹುಸೈನ್ ಸಂಸ್ಕೃತದಲ್ಲಿ 100ಕ್ಕೆ 96 ಅಂಕ ಪಡೆದಿದ್ದಾರೆ.

ಬೆಂಗಳೂರಿನ ನಾರಾಯಣ ಟೆಕ್ನೋ ಸ್ಕೂಲ್‌ನಲ್ಲಿ ಪಿಯು ವಿಜ್ಞಾನ ವಿಭಾಗದಲ್ಲಿ ಅಭ್ಯಾಸ ಮಾಡಿರುವ ಆಶಿಫಾ ಹುಸೈನ್, ಸಂಸ್ಕೃತವನ್ನು ದ್ವಿತೀಯ ಭಾಷೆಯಾಗಿ ಆಯ್ಕೆ ಮಾಡಿಕೊಂಡಿದ್ದರು. ದ್ವಿತೀಯ ಪಿಯು ನಲ್ಲಿ ಒಟ್ಟು 563 ಅಂಕ ಗಳಿಸಿದ್ದಾರೆ. ದಕ್ಷಿಣ ಕನ್ನಡ ಜಿಲ್ಲೆ ಪುತ್ತೂರು ತಾಲ್ಲೂಕಿನ ಕಾವು ಅಮ್ಚಿನಡ್ಕದ, ಪ್ರಸ್ತುತ ಬೆಂಗಳೂರಿನಲ್ಲಿ ಕೇಂದ್ರ ಸಂಪರ್ಕ ಇಲಾಖೆಯಲ್ಲಿ ಅಧಿಕಾರಿಯಾಗಿರುವ ಖೈರುನ್ನೀಸಾ ಮತ್ತು ಜಾಕೀರ್ ದಂಪತಿ ಪುತ್ರಿ ಈಕೆ.

ಎಸ್‌ಎಸ್‌ಎಲ್‌ಸಿ ಮುಗಿಸಿ 20 ವರ್ಷಗಳ ಬಳಿಕ ಪಿಯು ಪರೀಕ್ಷೆ ಬರೆದ ಅಂಗನವಾಡಿ ಸಹಾಯಕಿ

ಮಗನ ಜತೆಗೆ ಅಮ್ಮನೂ ಪಾಸು

• ಬಾಲಕೃಷ್ಣ ಪಿ.ಎಚ್.


ಕರಿಯಮ್ಮ


ಯಶವಂತ

ಬೆಂಗಳೂರು: ಎಸ್‌ಎಸ್‌ಎಲ್‌ಸಿ ಉತ್ತೀರ್ಣರಾಗಿ 20 ವರ್ಷಗಳ ಬಳಿಕ ದ್ವಿತೀಯ ಪಿಯುಸಿ ಪರೀಕ್ಷೆ ಬರೆದ ತಾಯಿ ಮತ್ತು ವಿಜ್ಞಾನ ವಿಭಾಗದಲ್ಲಿ ದ್ವಿತೀಯ ಪಿಯುಸಿ ಓದುತ್ತಿದ್ದ ಮಗ ಇಬ್ಬರೂ ಉತ್ತೀರ್ಣರಾಗಿದ್ದಾರೆ. ತಾಯಿ, ಮಗ ಏಕಕಾಲದಲ್ಲಿ ಉತ್ತೀರ್ಣರಾಗಿರುವುದು ಅವರ ಮನೆಯಲ್ಲಿ ಸಂಭ್ರಮವನ್ನು ಉಂಟು ಮಾಡಿದೆ.

ತುಮಕೂರು ಜಿಲ್ಲೆ ಚಿಕ್ಕನಾಯಕನಹಳ್ಳಿ ತಾಲ್ಲೂಕಿನ ದಬ್ಬಗುಂಟೆ ಅಂಗನವಾಡಿ ಸಹಾಯಕಿ ಕರಿಯಮ್ಮ ಪಿ.ಜಿ. ಮತ್ತು ಯಶವಂತ ಎಚ್. ಒಟ್ಟಿಗೆ ಪಿಯುಸಿ ತೇರ್ಗಡೆ ಹೊಂದಿರುವ ತಾಯಿ-ಮಗ.

ಶಿರಾ ತಾಲ್ಲೂಕಿನ ಪುರಲೇಹಳ್ಳಿ ಗಿರಿಯಪ್ಪ-ಪುಟ್ಟಮ್ಮ ದಂಪತಿಯ ಮೂರನೇ ಮಗಳಾದ ಕರಿಯಮ್ಮ ಅವರು ಎಸ್‌ಎಸ್‌ಎಲ್‌ಸಿವರೆಗೆ ವಿದ್ಯಾಭ್ಯಾಸ ಮಾಡಿದ್ದರು. ಬಡತನದಿಂದಾಗಿ ವಿದ್ಯಾಭ್ಯಾಸ ನಿಲ್ಲಿಸಿ ಹೆತ್ತವರೊಂದಿಗೆ ಕೂಲಿ ಕೆಲಸ ಶುರು ಮಾಡಿದ್ದರು. ಒಂದು ವರ್ಷದ ನಂತರ ದಬ್ಬಗುಂಟೆ ಹನುಮಂತರಾಜು ಅವರೊಂದಿಗೆ ಮದುವೆ ಮಾಡಿಕೊಡಲಾಗಿತ್ತು. ನಾಲ್ಕು ವರ್ಷದ ಹಿಂದೆ ಕೋವಿಡ್‌ನಿಂದ ಹನುಮಂತರಾಜು ಮೃತಪಟ್ಟಿದ್ದರು.

‘ಇದಕ್ಕಿಂತ ದೊಡ್ಡ ಸಂತೋಷವೇನಿದೆ?’

‘ಅವ್ವ ನನ್ನ ಜತೆ ನೀನೂ ಪಾಸಾಗಿದ್ದಿ ಎಂದು ಮಗ ಯಶವಂತ ಹೇಳಿದಾಗ ಉಂಟಾದ ಅನುಭೂತಿಗಿಂತ ಬೇರೆ ಸಂತೋಷ ಏನಿದೆ? ಇನ್ನೊಬ್ಬ ಮಗ ರೋಹಿತ್ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆದಿದ್ದು, ಫಲಿತಾಂಶಕ್ಕಾಗಿ ಕಾಯುತ್ತಿದ್ದಾನೆ. ಮಕ್ಕಳಿಬ್ಬರನ್ನು ಓದಿಸಿ ಒಳ್ಳೆಯ ಸ್ಥಾನ ಪಡೆಯುವಂತೆ ಮಾಡಬೇಕು. ಬಡತನ ನನ್ನ ಕಾಲಕ್ಕೆ ಮುಗಿಯಬೇಕು’ ಎಂದು ಕರಿಯಮ್ಮ ಅವರು ತಿಳಿಸಿದರು.

ಮಕ್ಕಳಾದ ಯಶವಂತ ಮತ್ತು ರೋಹಿತ್ ಅವರನ್ನು ಸಾಕಲು ಕಷ್ಟವಾಗಿದ್ದ ಸಮಯದಲ್ಲಿ ಊರಿನ ಅಂಗನವಾಡಿಯಲ್ಲಿ ಸಹಾಯಕಿಯಾಗಿ ನೇಮಕಗೊಂಡಿದ್ದರು. ಸುತ್ತಮುತ್ತಲಿನ ನಾಲ್ಕೈದು ಅಂಗನವಾಡಿಗಳ ಸಹಾಯಕಿಯರೆಲ್ಲ ಗೆಳತಿಯರಾಗಿದ್ದು, ಎಲ್ಲರೂ ಪಿಯು ಪರೀಕ್ಷೆ ಬರೆಯಲು ನಿರ್ಧರಿಸಿದ್ದರು. ಅವರೊಂದಿಗೆ ಕರಿಯಮ್ಮ ಕೂಡ ಪರೀಕ್ಷೆ ಕಟ್ಟಿದ್ದರು. ಆಂತರಿಕ ಅಂಕಗಳಿಲ್ಲದೇ 251 ಅಂಕ ಪಡೆದು ಉತ್ತೀರ್ಣರಾಗಿದ್ದಾರೆ. ಅವರೊಂದಿಗೆ ಪರೀಕ್ಷೆ ಬರೆದಿದ್ದ ಗೆಳತಿಯರು ಕೂಡ ತೇರ್ಗಡೆ ಹೊಂದಿದ್ದಾರೆ.

‘ನಾನು ಕಲಾ ವಿಭಾಗದಲ್ಲಿ ಪರೀಕ್ಷೆ ಕಟ್ಟಿದ್ದೆ. ಕೆಂಕೆರೆ ಸರ್ಕಾರಿ ಪಿಯು ಕಾಲೇಜು ಪರೀಕ್ಷಾ ಕೇಂದ್ರವಾಗಿತ್ತು. ಮಗ ಯಶವಂತ ಕೋಡಿಮುದ್ದನಹಳ್ಳಿಯಲ್ಲಿರುವ ಮೊರಾರ್ಜಿ ದೇಸಾಯಿ ವಸತಿ ಪಿಯು ಕಾಲೇಜಿನಲ್ಲಿ ವಿಜ್ಞಾನ ಆಯ್ಕೆ ಮಾಡಿಕೊಂಡು ಓದುತ್ತಿದ್ದ. ಅವನು ಶೇ 80ಕ್ಕೂ (485) ಅಧಿಕ ಅಂಕ ಪಡೆದಿದ್ದಾನೆ. ಯಾವುದೇ ಪುಸ್ತಕಗಳಿಲ್ಲದೇ ಗೂಗಲ್, ಯೂಟ್ಯೂಬ್‌ಗಳನ್ನು ನೋಡಿಕೊಂಡು, ಬೇರೆಯವರಿಂದ ಪ್ರಶ್ನೆಪತ್ರಿಕೆ ತರಿಸಿಕೊಂಡು ಅಂಗನವಾಡಿ ಕೆಲಸ, ಮನೆ ಕೆಲಸದ ನಡುವೆ ಸ್ವಲ್ಪ ಓದಿದ್ದೆ. ಒಂದೇ ಬಾರಿಗೆ ಉತ್ತೀರ್ಣಳಾಗಿರುವುದು ಬಹಳ ಖುಷಿಯಾಗಿದೆ’ ಎಂದು ಕರಿಯಮ್ಮ ಅವರು ‘ಪ್ರಜಾವಾಣಿ’ಯೊಂದಿಗೆ ಸಂತಸ ಹಂಚಿಕೊಂಡರು.

ಸಾಧಕಿಯರ ಸಂಭ್ರಮ


ಶಿವಮೊಗ್ಗ ಜಿಲ್ಲೆಯ ತೀರ್ಥಹಳ್ಳಿ ತಾಲ್ಲೂಕಿನ ಮೇಲಿನಕುರುವಳ್ಳಿಯ ವಾಗ್ದೇವಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಆರ್.ದೀಕ್ಷಾ ವಿಜ್ಞಾನ ವಿಭಾಗದಲ್ಲಿ ಪ್ರಥಮ ರ‍್ಯಾಂಕ್ ಹಂಚಿಕೊಂಡಿದ್ದಾರೆ. ಬೆಟ್ಟಮಕ್ಕಿಯ ಮನೆಯಲ್ಲಿ ಪೋಷಕರು ಸಿಹಿ ತಿನ್ನಿಸಿ ಸಂಭ್ರಮಿಸಿದರು



ಮಂಗಳೂರಿನ ಎಕ್ಸ್‌ಪರ್ಟ್ ಕಾಲೇಜ್‌ನ ವಿದ್ಯಾರ್ಥಿನಿ ಅಮೂಲ್ಯ ಕಾಮತ್ ವಿಜ್ಞಾನ ವಿಭಾಗದಲ್ಲಿ ರಾಜ್ಯದಲ್ಲಿ ಪಿಯು ಪರೀಕ್ಷೆಯಲ್ಲಿ ಪ್ರಥಮ ಸ್ಥಾನ ಪಡೆದುಕೊಂಡಿದ್ದು, ಅಮ್ಮ ಡಾ.ಅನುರಾಧಾ ಕಾಮತ್, ತಂದೆ ಡಾ.ದಿನೇಶ್ ಕಾಮತ್ ಸಿಹಿ ತಿನ್ನಿಸಿ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರಗಳು


ವಾಣಿಜ್ಯ ವಿಭಾಗದಲ್ಲಿ ಪ್ರಥಮ ಸ್ಥಾನ ಪಡೆದ ಮಂಗಳೂರಿನ ಕೆನರಾ ಪದವಿ ಪೂರ್ವ ಕಾಲೇಜಿನ ದೀಪಶ್ರೀ ಎಸ್ ಅವರಿಗೆ ಸೋದರಿ, ತಾಯಿ ಸುಮಾ ಮತ್ತು ತಂದೆ ಅಶೋಕ್ ಎಸ್. ಅವರು ಸಿಹಿ ತಿನ್ನಿಸಿ ಸಂಭ್ರಮಿಸಿದರು ಪ್ರಜಾವಾಣಿ ಚಿತ್ರ



ಕಲಾ ವಿಭಾಗದಲ್ಲಿ ಪ್ರಥಮ ಸ್ಥಾನ ಗಳಿಸಿರುವ ವಿಜಯನಗರ ಜಿಲ್ಲೆಯ ಕೊಟ್ಟೂರಿನ ಇಂದು ಕಾಲೇಜಿನ ವಿದ್ಯಾರ್ಥಿನಿ ಎಲ್.ಆರ್. ಸಂಜನಾಬಾಯಿ ಅವರು ಹೊಸಪೇಟೆ ತಾಲ್ಲೂಕು ಗುಂಡಾ ಗ್ರಾಮದ ನಿವಾಸಿ. ಅವರಿಗೆ ತಂದೆ ರಾಮನಾಯ್ಕ ಮತ್ತು ತಾಯಿ ಕಾವೇರಿ ಸಿಹಿ ತಿನ್ನಿಸಿ ಖುಷಿಪಟ್ಟರು

ಸಾಧಕರ ಖುಷಿಯ ಮಾತು

ಯುಪಿಎಸ್‌ಸಿ ಪರೀಕ್ಷೆ ಬರೆಯುವೆ


ಶ್ರೀ ಜಯದರ್ಶಿನಿ

ಉತ್ತಮ ಅಂಕ ಬರುವ ವಿಶ್ವಾಸ ಇತ್ತು. ಕಾಲೇಜಿನ ಉಪನ್ಯಾಸಕರು, ಪೋಷಕರು ಸಂಪೂರ್ಣ ಸಹಕಾರ ನೀಡಿದರು. ಕಲಿಕೆಗೆ ಕಾಲೇಜಿನಲ್ಲಿ ಉತ್ತಮ ವಾತಾವರಣ ಇತ್ತು. ಪಠ್ಯದ ವಿಷಯಗಳ ಬಗ್ಗೆ ವಿದ್ಯಾರ್ಥಿಗಳ ಜತೆ ಚರ್ಚಿಸುತ್ತಿದ್ದೆ. ಮುಂದೆ ಯುಪಿಎಸ್‌ಸಿ ಪರೀಕ್ಷೆ ಬರೆಯುವೆ. ಮತ್ತಷ್ಟು ಸಾಧನೆ ಮಾಡಬೇಕೆಂಬ ಆಸೆ ಇದೆ

ಶ್ರೀ ಜಯದರ್ಶಿನಿ, ಮಹಾರಾಣಿ ಲಕ್ಷ್ಮೀ ಅಮ್ಮಣ್ಣಿ ಪಿಯು ಕಾಲೇಜು, ಬೆಂಗಳೂರು

(ಕಲಾವಿಭಾಗ, 3ನೇ ಸ್ಥಾನ, 595 ಅಂಕ)

ಲೆಕ್ಕ ಪರಿಶೋಧಕಿ ಆಗುವ ಆಸೆ


ಪಿ.ಪ್ರತೀಕ್ಷಾ

ಫಲಿತಾಂಶ ಖುಷಿ ತಂದಿದೆ. ನನ್ನ ಅಧ್ಯಯನ ದೃಢ ನಿಲುವಿನಿಂದ ಕೂಡಿದ್ದರಿಂದ ಉತ್ತಮ ಫಲಿತಾಂಶ ಬಂದಿದೆ. ಕಾಲೇಜಿನ ಉಪನ್ಯಾಸಕರು ಸರಿಯಾದ ಮಾರ್ಗದರ್ಶನ ನೀಡಿದರು. ತಂದೆ, ತಾಯಿ ಬೆನ್ನೆಲುಬಾಗಿ ನಿಂತಿದ್ದರಿಂದ ಈ ಸಾಧನೆ ಸಾಧ್ಯವಾಯಿತು. ಮುಂದೆ ಲೆಕ್ಕ ಪರಿಶೋಧಕಿ ಆಗುವ ಆಸೆ ಇದೆ

ಪಿ.ಪ್ರತೀಕ್ಷಾ, ಎಎಸ್‌ಸಿ ಪಿಯು ಕಾಲೇಜು, ರಾಜಾಜಿನಗರ, ಬೆಂಗಳೂರು

(ವಾಣಿಜ್ಯ ವಿಭಾಗ–ಮೂರನೇ ಸ್ಥಾನ 597 ಅಂಕ)

ವಾಣಿಜ್ಯ: ಭಾರ್ಗವಿ 3ನೇ ಸ್ಥಾನ, ಹಾಸಿಕಾ 5ನೇ ಸ್ಥಾನ

ಪ್ರಜಾವಾಣಿ ವಾರ್ತೆ


ಎಚ್.ಬಿ.ಭಾರ್ಗವಿ


ಹಾಸಿಕಾ

ಕೋಲಾರ: ದ್ವಿತೀಯ ಪಿಯು ವಾಣಿಜ್ಯ ವಿಭಾಗದಲ್ಲಿ ಕೋಲಾರದ ಮಹಿಳಾ ಸಮಾಜ ಪಿಯು ಕಾಲೇಜಿನ ವಿದ್ಯಾರ್ಥಿನಿ ಎಚ್.ಬಿ.ಭಾರ್ಗವಿ 600ಕ್ಕೆ 597 ಅಂಕ ಪಡೆದು ರಾಜ್ಯಕ್ಕೆ ಮೂರನೇ ರ‍್ಯಾಂಕ್ ಮತ್ತು ನಗರದ ಎಸ್‌ಡಿಸಿ ಪಿಯು ಕಾಲೇಜಿನ ಹಾಸಿಕಾ ಎಲ್.ಆನೂರ್ (595 ಅಂಕ) 5ನೇ ರ‍್ಯಾಂಕ್ ಪಡೆದಿದ್ದಾರೆ.

'ರ‍್ಯಾಂಕ್ ನಿರೀಕ್ಷೆ ಇರಲಿಲ್ಲ. ಉತ್ತಮ ಅಂಕ ಬರುವ ವಿಶ್ವಾಸವಿತ್ತು. ಚಾರ್ಟರ್ಡ್ ಅಕೌಂಟೆಂಟ್ (ಸಿ.ಎ) ಮಾಡುವ ಗುರಿ ಇದೆ. ಅದಕ್ಕಾಗಿಯೇ ವಾಣಿಜ್ಯ ವಿಭಾಗಕ್ಕೆ ಸೇರಿದ್ದೆ. ಪೋಷಕರ ಒತ್ತಡ ಇರಲಿಲ್ಲ. ಕಾಲೇಜಿನಿಂದ ಪ್ರೋತ್ಸಾಹ ಸಿಕ್ಕಿತು. ಬೆಳಗಿನ ಅವಧಿಯಲ್ಲಿ ಹೆಚ್ಚು ಓದುತ್ತಿದ್ದೆ. ಅಂದಿನ ಪಾಠವನ್ನು ಅಂದೇ ಓದುತ್ತಿದ್ದೆ' ಎಂದು ಭಾರ್ಗವಿ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದರು. ಈಕೆಯ ತಂದೆ ಎಚ್.ಬಿ.ಭಾಸ್ಕರ್ ಬಂಗಾರಪೇಟೆ ತಾಲ್ಲೂಕಿನ ಹುದುಕುಳ ಗ್ರಾಮದಲ್ಲಿ ಪುರೋಹಿತರಾಗಿದ್ದಾರೆ.

'ಪರೀಕ್ಷೆಗಳಿಗೆ ಕಾಲೇಜಿನಲ್ಲಿಯೇ ಹೆಚ್ಚು ತಯಾರಿ ನಡೆಸುತ್ತಿದ್ದೆ. ಯಾವುದೇ ಒತ್ತಡ ಇರಲಿಲ್ಲ. ಎಸಿಸಿಎ ಕೋರ್ಸ್ ಮಾಡುವ ಗುರಿ ಇದೆ. ನಂತರ ಎಂಬಿಎ ಮಾಡುತ್ತೇನೆ' ಎಂದು 5ನೇ ರ‍್ಯಾಂಕ್ ಪಡೆದ ಹಾಸಿಕಾ ಪ್ರತಿಕ್ರಿಯಿಸಿದರು.

‘ಪ್ರಜಾವಾಣಿ’ ಹಂಚುವ ಹುಡುಗನ ಸಾಧನೆ


ಮಾಗಡಿ ತಾಲ್ಲೂಕಿನ ಬಿಜಿಎಸ್ ಪಿಯು ಕಾಲೇಜಿನ ಕಲಾ ವಿಭಾಗದಲ್ಲಿ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದ ಸಿ.ಜಿ.ಚಂದನ್‌ಗೆ ಸಿಹಿ ತಿನ್ನಿಸುತ್ತಿರುವ ಪೋಷಕರು.

ಮಾಗಡಿ (ರಾಮನಗರ): ನಾಲ್ಕು ವರ್ಷದಿಂದ ಮಾಗಡಿಯಲ್ಲಿ ‘ಪ್ರಜಾವಾಣಿ’ ಪತ್ರಿಕೆಯನ್ನು ಮನೆ, ಮನೆಗೆ ಹಂಚುತ್ತಿದ್ದ ಹುಡುಗ ಸಿ.ಜಿ. ಚಂದನ್ ಪಿಯು ಪರೀಕ್ಷೆಯಲ್ಲಿ 584 ಅಂಕ (ಶೇ 97.33) ಪಡೆಯುವ ಮೂಲಕ ಕಲಾ ವಿಭಾಗದಲ್ಲಿ ಜಿಲ್ಲೆಗೆ ದ್ವಿತೀಯ ಸ್ಥಾನ ಪಡೆದಿದ್ದಾನೆ.

ತಾಲ್ಲೂಕಿನ ಬಿಜಿಎಸ್ ಪಿಯು ಕಾಲೇಜಿನ ವಿದ್ಯಾರ್ಥಿ ಚಂದನ್‌ಗೆ ತಂದೆ ಗಿರೀಶ್ ಮತ್ತು ತಾಯಿ ಗಂಗಮ್ಮ ಸಿಹಿ ತಿನ್ನಿಸಿ ಸಂಭ್ರಮಿಸಿದರು.

ವಿದ್ಯಾರ್ಥಿಗಳ ದಾರಿದೀಪ ‘ಎಡ್ಯುವರ್ಸ್’

ಬೆಂಗಳೂರು: ದ್ವಿತೀಯ ಪಿಯು ಫಲಿತಾಂಶ ಪ್ರಕಟವಾಗಿದ್ದು, ವೈದ್ಯಕೀಯ, ಎಂಜಿನಿಯರಿಂಗ್ ಸೇರಿದಂತೆ ವಿವಿಧ ವೃತ್ತಿಪರ ಕೋರ್ಸ್‌ಗಳಿಗಾಗಿ ನೀಟ್, ಸಿಇಟಿ ಸಿದ್ಧತೆ ನಡೆಸಿರುವ ವಿದ್ಯಾರ್ಥಿಗಳಿಗೆ ಉತ್ತಮ ಕೋರ್ಸ್, ಕಾಲೇಜುಗಳನ್ನು ಆಯ್ಕೆ ಮಾಡಿಕೊಳ್ಳಲು, ಸೂಕ್ತ ಮಾರ್ಗದರ್ಶನ ನೀಡಲು ಕರ್ನಾಟಕದ ವಿಶ್ವಾಸಾರ್ಹ ಪತ್ರಿಕೆಗಳಾದ ‘ಪ್ರಜಾವಾಣಿ’ ಹಾಗೂ ‘ಡೆಕ್ಕನ್ ಹೆರಾಲ್ಡ್’ ಆಯೋಜಿಸಿರುವ ಕರ್ನಾಟಕದ ಅತಿ ದೊಡ್ಡ ಶೈಕ್ಷಣಿಕ ಮೇಳ ‘ಎಡ್ಯುವರ್ಸ್’ ನೆರವಾಗುತ್ತಿದೆ.

ಪ್ರಜಾವಾಣಿ DH ಎಡ್ಯುವರ್ಸ್™ ಪ್ರೀಮಿಯರ್ ಎಜುಕೇಷನ್ ಎಕ್ಸ್‌ಪೋ

ಬೆಂಗಳೂರು ಹಾಗೂ ಹುಬ್ಬಳ್ಳಿಯಲ್ಲಿ ನಡೆಯಲಿರುವ ‘ಎಡ್ಯುವರ್ಸ್’ನಲ್ಲಿ ರಾಜ್ಯದ ಹೆಸರಾಂತ 60ಕ್ಕೂ ಹೆಚ್ಚು ಶಿಕ್ಷಣ ಸಂಸ್ಥೆಗಳು, ವಿಶ್ವವಿದ್ಯಾಲಯಗಳು ಭಾಗವಹಿಸುತ್ತಿದ್ದು, ವಿದ್ಯಾರ್ಥಿಗಳ ಭವಿಷ್ಯಕ್ಕೆ ಅಗತ್ಯವಾದ ಮಾಹಿತಿಯ ಕಣಜವೇ ದೊರಕಲಿದೆ. ಸಮಗ್ರ ಮಾಹಿತಿ, ಸಹಾಯಹಸ್ತದ ಜತೆಗೆ, ವಿದ್ಯಾರ್ಥಿಗಳು, ಪೋಷಕರ ಎಲ್ಲ, ಅನುಮಾನ, ಗೊಂದಲಗಳ ನಿವಾರಣೆ ಮಾಡಲಿವೆ. ‘ಆ್ಯಡ್ 6 ಅಡ್ವರ್ಟೈಸಿಂಗ್’ ಸಹಯೋಗದ ಈ ಶೈಕ್ಷಣಿಕ ಮೇಳ ನಡೆಯಲಿದೆ.

ಪ್ರವೇಶ ನೋಂದಣಿಗಾಗಿ ಉಪಯೋಗಿಸಿ..

ಕಾವೇರಿ ಪವಾಡಿ ರಾಜ್ಯಕ್ಕೆ 4ನೇ ಸ್ಥಾನ

ಚಂದ್ರಶೇಖರ ಎಸ್. ಚಿನಕೇಕರ


ಕಾವೇರಿ ಪವಾಡಿ ಮಲ್ಲಾಪುರೆ

ಚಿಕ್ಕೋಡಿ (ಬೆಳಗಾವಿ ಜಿಲ್ಲೆ): ತಾಲ್ಲೂಕಿನ ಮಜಲಟ್ಟಿ ಗ್ರಾಮದ ಸರ್ಕಾರಿ ಪಿಯು ಕಾಲೇಜಿನ ಕಲಾ ವಿಭಾಗದ ವಿದ್ಯಾರ್ಥಿನಿ ಕಾವೇರಿ ಪವಾಡಿ ಮಲ್ಲಾಪುರೆ ಶೇ 99 ಅಂಕ ಪಡೆದು, ರಾಜ್ಯಕ್ಕೆ 4ನೇ ಸ್ಥಾನ ಪಡೆದಿದ್ದಾರೆ. ಕನ್ನಡ–99, ಇಂಗ್ಲಿಷ್–97, ಇತಿಹಾಸ–99, ಅರ್ಥಶಾಸ್ತ್ರ–100, ಸಮಾಜಶಾಸ್ತ್ರ–100, ರಾಜ್ಯಶಾಸ್ತ್ರ–99 ಅಂಕ ಪಡೆದಿದ್ದಾರೆ.

ರಾಯಬಾಗ ತಾಲ್ಲೂಕಿನ ನಿಪನಾಳ ಗ್ರಾಮದ ಕಾವೇರಿ ಬಾಲ್ಯದಲ್ಲೇ ತಂದೆಯವರನ್ನು ಕಳೆದುಕೊಂಡಿದ್ದಾರೆ. ತಾಯಿ ಮಹಾದೇವಿ, ಅಣ್ಣಂದಿರಾದ ಈರಣ್ಣ ಮತ್ತು ಮಾಳಪ್ಪ ಕೂಲಿ ಮಾಡಿ, ಕಾವೇರಿಗೆ ಓದಿಸಿದ್ದಾರೆ. 1 ರಿಂದ 10ನೇ ತರಗತಿವರೆಗೆ ಸ್ವಗ್ರಾಮ ನಿಪನಾಳ ಗ್ರಾಮದ ಸರ್ಕಾರಿ ಶಾಲೆಯಲ್ಲಿ ಓದಿದ ಕಾವೇರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಶೇ 97 ಅಂಕ ಪಡೆದಿದ್ದರು.

ಪಿಯುಸಿ ಪ್ರಥಮ ವರ್ಷದಲ್ಲಿ ಮಜಲಟ್ಟಿ ಗ್ರಾಮದಲ್ಲಿ ಮುತ್ತುರಾಜ ಕಾಂಬಳೆ ಅವರಿಗೆ ಸೇರಿದ ಶ್ರೇಯಸ್ ಮೆಸ್‌ನಲ್ಲಿ ಉಚಿತ ಊಟ, ವಸತಿ ಪಡೆದು ಓದು ಮುಂದುವರಿಸಿದರು. ದ್ವಿತೀಯ ವರ್ಷದಲ್ಲಿ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ಬಾಲಕಿಯರ ವಸತಿ ನಿಲಯದಲ್ಲಿ ಪ್ರವೇಶ ಪಡೆದು ಸಾಧನೆ ಮಾಡಿದರು.

‘ಬಿಎ ಪದವಿ ಬಳಿಕ ಕೆಪಿಎಸ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು, ಉನ್ನತ ಹುದ್ದೆ ಗಳಿಸಿ ಸಾರ್ವಜನಿಕ ಆಡಳಿತ ಕ್ಷೇತ್ರದಲ್ಲಿ ಕರ್ತವ್ಯ ನಿರ್ವಹಿಸುವ ಗುರಿಯಿದೆ’ ಎಂದು ಕಾವೇರಿ ‘ಪ್ರಜಾವಾಣಿ’ಗೆ ತಿಳಿಸಿದರು.


ರಕ್ಷಾ ಹೆಗಡೆ


ದಕ್ಷ ಹೆಗಡೆ

ಅವಳಿ ಮಕ್ಕಳಿಂದ ಸಮ ಫಲಿತಾಂಶ

ಪ್ರಜಾವಾಣಿ ವಾರ್ತೆ

ಶಿರಸಿ: ಇಲ್ಲಿನ ವೈದ್ಯ ದಂಪತಿಯ ಅವಳಿ ಮಕ್ಕಳು ದ್ವಿತೀಯ ಪಿಯುಸಿ ಪರೀಕ್ಷೆಯ ವಿಜ್ಞಾನ ವಿಭಾಗದಲ್ಲಿ ಶೇ 99ರಷ್ಟು ಸಮಾನ ಫಲಿತಾಂಶ ಪಡೆದಿದ್ದಾರೆ.

ಮಕ್ಕಳ ತಜ್ಞ ಡಾ. ದಿನೇಶ ಹೆಗಡೆ ಹಾಗೂ ರೋಗಶಾಸ್ತ್ರ ಸಲಹೆಗಾರ್ತಿ ಡಾ. ಸುಮನ್ ಹೆಗಡೆ ಅವರ ಮಕ್ಕಳಾದ ದಕ್ಷ ಹೆಗಡೆ ನಾಲ್ಕು ವಿಷಯಗಳಲ್ಲಿ 100ರಷ್ಟು ಅಂಕ ಪಡೆದರೆ, ರಕ್ಷಾ ಹೆಗಡೆ ಎರಡು ವಿಷಯಗಳಲ್ಲಿ 100 ಅಂಕ ಪಡೆದಿದ್ದಾರೆ. 600ಕ್ಕೆ 594 ಅಂಕ ಪಡೆದಿರುವ ಇಬ್ಬರು ವಿದ್ಯಾರ್ಥಿಗಳು ಬೆಂಗಳೂರಿನ ದೀಕ್ಷಾ ಕಾಲೇಜಿನ ವಿದ್ಯಾರ್ಥಿಗಳಾಗಿದ್ದಾರೆ.

‘590ಕ್ಕೂ ಹೆಚ್ಚು ಅಂಕ ಬರುವ ನಿರೀಕ್ಷೆ ಮಕ್ಕಳಿಗಿತ್ತು. ಇಬ್ಬರಿಗೂ ಸಮಾನವಾಗಿ ಅಂಕ ಬಂದಿರುವುದು ವಿಶೇಷ. ಎಸ್ಸೆಸ್ಸೆಲ್ಸಿ ಪರೀಕ್ಷೆಯಲ್ಲಿ ಫಲಿತಾಂಶದಲ್ಲಿ ಇಬ್ಬರ ನಡುವೆ ಎರಡು ಅಂಕಗಳ ವ್ಯತ್ಯಾಸವಿತ್ತು. ಈಗ ಅದು ಸರಿಯಾದಂತಾಗಿದೆ’ ಎಂದು ಡಾ.ಸುಮನ್ ಹೆಗಡೆ ತಿಳಿಸಿದರು.

ವಾಣಿಜ್ಯ: ತೇಜಸ್ವಿನಿ 2ನೇ ಟಾಪರ್

ಪ್ರಜಾವಾಣಿ ವಾರ್ತೆ


ಎಂ.ಎ.ತೇಜಸ್ವಿನಿ

ಮೈಸೂರು: ಜಿಲ್ಲೆಯ ಪಿರಿಯಾಪಟ್ಟಣದ ಕೊಪ್ಪದಲ್ಲಿರುವ ಭಾರತ್‌ಮಾತಾ ಪಿಯು ಕಾಲೇಜಿನ ವಿದ್ಯಾರ್ಥಿನಿ ಎಂ.ಎ.ತೇಜಸ್ವಿನಿ ದ್ವಿತೀಯ ಪಿಯು ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ 600ಕ್ಕೆ 598 ಅಂಕ ಪಡೆದು ರಾಜ್ಯಕ್ಕೆ 2ನೇ ಟಾಪರ್ ಆಗಿ ಹೊಮ್ಮಿದ್ದಾರೆ.

ಕನ್ನಡ, ಕಂಪ್ಯೂಟರ್ ಸೈನ್ಸ್, ಅಕೌಂಟೆನ್ಸಿ, ವ್ಯವಹಾರ ಅಧ್ಯಯನ, ಅರ್ಥಶಾಸ್ತ್ರದಲ್ಲಿ 100ಕ್ಕೆ 100 ಅಂಕ, ಇಂಗ್ಲಿಷ್‌ನಲ್ಲಿ 98 ಅಂಕ ಪಡೆದಿದ್ದಾರೆ.

ಕೊಡಗು ಜಿಲ್ಲೆಯ ಕುಶಾಲನಗರ ನಿವಾಸಿಯಾದ ಅರಣ್ಯ ಇಲಾಖೆಯ ಡಿಆರ್‌ಎಫ್‌ಒ ಎಂ.ಎ.ಆನಂದ ಮತ್ತು ಸುಜಾತಾ ದಂಪತಿ, ಮಗಳ ಸಾಧನೆಗೆ ಸಂತಸ ವ್ಯಕ್ತಪಡಿಸಿದ್ದಾರೆ.

ಟ್ಯೂಷನ್‌ಗೆ ಹೋಗಿಲ್ಲ: ‘ಅಂದಿನ ಪಾಠ ಅಂದೇ ಓದುತ್ತಿದ್ದೆ. ಮೂರು ತಿಂಗಳಿಂದ ಓದಿಗೆ ಹೆಚ್ಚು ಸಮಯ ಮೀಸಲಿಟ್ಟೆ. ಉಪನ್ಯಾಸಕರು ನೀಡಿದ ಉತ್ತೇಜನವನ್ನು ಮರೆಯಲಾರೆ. ಟ್ಯೂಷನ್‌ಗೆ ಹೋಗಿಲ್ಲ. ಚಾರ್ಟರ್ಡ್ ಅಕೌಂಟೆಂಟ್ ಆಗುವ ಕನಸಿದೆ. ತಂದೆ– ತಾಯಿ ಪ್ರೋತ್ಸಾಹ ನೀಡಿದ್ದಾರೆ’ ಎಂದು ತೇಜಸ್ವಿನಿ ಹೇಳಿದರು.


ಬಿಂದು ನವಲೆ


ವಿಜೇತ್ ಜಿ. ಗೌಡ


ರಾಜ ಯದುವಂಶಿ ಯಾದವ್

ಆಳ್ವಾಸ್: ಮೂವರಿಗೆ ಅತ್ಯುತ್ತಮ

ಮೂಡುಬಿದಿರೆ (ದಕ್ಷಿಣ ಕನ್ನಡ): ದ್ವಿತೀಯ ಪಿಯುಸಿ ಫಲಿತಾಂಶದಲ್ಲಿ ಆಳ್ವಾಸ್ ಪದವಿಪೂರ್ವ ಕಾಲೇಜಿನ ವಿಜ್ಞಾನ, ವಾಣಿಜ್ಯ ಹಾಗೂ ಕಲಾ ವಿಭಾಗಗಳಲ್ಲಿ ಒಟ್ಟು 45 ವಿದ್ಯಾರ್ಥಿಗಳು 10 ಸ್ಥಾನಗಳ ಒಳಗಿದ್ದಾರೆ.

ವಿಜ್ಞಾನ ವಿಭಾಗದಲ್ಲಿ ಬಿಂದು ನವಲೆ, ರಾಜ ಯದುವಂಶಿ ಯಾದವ್, ವಿಜೇತ್ ಜಿ. ಗೌಡ (598 ಅಂಕ) ರಾಜ್ಯ ಮಟ್ಟದಲ್ಲಿ ದ್ವಿತೀಯ ಸ್ಥಾನ ಗಳಿಸಿದ್ದಾರೆ. ಅಕ್ಷಯ್ ಎಂ. ಹೆಗ್ಡೆ, ಪ್ರೇಕ್ಷಾ ಎಂ.ಎಸ್ (597 ಅಂಕ) ತೃತೀಯ ರ‍್ಯಾಂಕ್, ಪದ್ಮಾವತಿ ಮಲ್ಲೇಶಪ್ಪ (596 ಅಂಕ) ನಾಲ್ಕನೇ ಸ್ಥಾನ ಪಡೆದಿದ್ದಾರೆ.

ವಾಣಿಜ್ಯ ವಿಭಾಗದಲ್ಲಿ ಪ್ರಣಯ್ ಹಾಗೂ ವೈಷ್ಣವಿ ಪ್ರಸಾದ್ ಭಟ್ (597 ಅಂಕ) ರಾಜ್ಯಕ್ಕೆ ತೃತೀಯ ಸ್ಥಾನ, ಕಲಾ ವಿಭಾಗದಲ್ಲಿ ಪ್ರಕೃತಿ ಎನ್ (591 ಅಂಕ) 7ನೇ ಸ್ಥಾನ ಗಳಿಸಿದ್ದಾರೆ. 44 ವಿದ್ಯಾರ್ಥಿಗಳು 590ಕ್ಕಿಂತ ಅಧಿಕ ಅಂಕ, 93 ವಿದ್ಯಾರ್ಥಿಗಳು 588ಕ್ಕಿಂತ ಅಧಿಕ ಅಂಕ, 468 ವಿದ್ಯಾರ್ಥಿಗಳು 570ಕ್ಕಿಂತ ಅಧಿಕ ಅಂಕ ಪಡೆದಿದ್ದಾರೆ ಎಂದು ಪ್ರತಿಷ್ಠಾನದ ಮೋಹನ್ ಆಳ್ವ ತಿಳಿಸಿದ್ದಾರೆ.

ಸರ್ಕಾರಿ ಕಾಲೇಜಿನ ನಾಗವೇಣಿ ರಾಜ್ಯಕ್ಕೆ 5ನೇ ಸ್ಥಾನ


ನಾಗವೇಣಿ ರಾಯಚೂರು

ಹುಬ್ಬಳ್ಳಿ: ಕಡುಬಡತನ ಕುಟುಂಬದ ಹಿನ್ನೆಲೆಯುಳ್ಳ ನಾಗವೇಣಿ ರಾಯಚೂರು ಇಲ್ಲಿನ ಗೋಪನಕೊಪ್ಪದ ಸರ್ಕಾರಿ ಪಿಯು ಕಾಲೇಜಿನಲ್ಲಿ ಓದಿ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಕಲಾ ವಿಭಾಗದಲ್ಲಿ 593 ಅಂಕ ಗಳಿಸಿ, ರಾಜ್ಯಕ್ಕೆ 5ನೇ ಸ್ಥಾನ ಪಡೆದಿದ್ದಾರೆ.

ಅಂಗವಿಕಲರಾದ ತಂದೆ ಅಂಥೋಣಿ ಕೂಲಿಗೆಲಸ ಮಾಡುತ್ತಾರೆ. ಅವರ ತಾಯಿ ಮನೆಗಳಿಗೆ ತೆರಳಿ ಪಾತ್ರೆ ತೊಳೆಯುವ ಕೆಲಸ ಮಾಡುತ್ತಾರೆ. ನಾಗವೇಣಿಯವರು ಸರ್ಕಾರಿ ಶಾಲೆ ಮತ್ತು ಕಾಲೇಜಿನಲ್ಲೇ ಓದಿರುವುದು ವಿಶೇಷ.

‘ರಾಜ್ಯಕ್ಕೆ 5ನೇ ಸ್ಥಾನ ಬಂದಿರುವುದು ಖುಷಿ ತಂದಿದೆ. ನನ್ನ ಯಶಸ್ಸಿನಲ್ಲಿ ಕಾಲೇಜು ಪ್ರಾಧ್ಯಾಪಕರದ್ದು ಪ್ರಮುಖ ಪಾತ್ರವಿದೆ. ಬಡತನದ ಮಧ್ಯೆಯೂ ತಂದೆ ಮತ್ತು ತಾಯಿಯವರು ಅಕ್ಕ ಮತ್ತು ನನ್ನನ್ನು ಚೆನ್ನಾಗಿ ಓದಿಸಿದರು. ಸರ್ಕಾರಿ ಶಾಲೆ ಮತ್ತು ಕಾಲೇಜಿನಲ್ಲಿ ಓದಿಯೇ ಸಾಧನೆ ಮಾಡಿದ್ದು, ಖುಷಿ ತಂದಿದೆ’ ಎಂದು ನಾಗವೇಣಿ ‘ಪ್ರಜಾವಾಣಿ’ಗೆ ತಿಳಿಸಿದರು.

‘ಮುಂದಿನ ಶಿಕ್ಷಣವನ್ನು ಸರ್ಕಾರಿ ಕಾಲೇಜಿನಲ್ಲೇ ಮುಂದುವರಿಸುವೆ. ಸ್ಪರ್ಧಾತ್ಮಕ ಪರೀಕ್ಷೆಗಳಿಗೂ ಸಿದ್ಧತೆ ಮಾಡಿಕೊಳ್ಳುವೆ. ಸರ್ಕಾರಿ ಅಧಿಕಾರಿ ಆಗಬೇಕು ಎಂಬ ಕನಸಿದೆ’ ಎಂದರು.

ಕೋವಿಡ್ ಸಂತ್ರಸ್ತ ವಿದ್ಯಾರ್ಥಿಗಳ ಸಾಧನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋವಿಡ್ ಅವಧಿಯಲ್ಲಿ ತಮ್ಮ ತಂದೆಯನ್ನು ಕಳೆದುಕೊಂಡ ಇಬ್ಬರು ವಿದ್ಯಾರ್ಥಿಗಳು ದ್ವಿತೀಯ ಪಿಯು ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದು ತೇರ್ಗಡೆಯಾಗಿದ್ದಾರೆ.

ಚಿಕ್ಕಬಾಣಾವರದ ಧನ್ವಂತರಿ ಕಾಲೇಜಿನ ವಿದ್ಯಾರ್ಥಿಗಳಾದ ನಿಖಿಲ್ ಬಳಿಗಾರ್ ವಿಜ್ಞಾನ ವಿಭಾಗದಲ್ಲಿ ಶೇ 73 ಮತ್ತು ಜೀವಿಕಾ ಅವರು ವಾಣಿಜ್ಯ ವಿಭಾಗದಲ್ಲಿ ಶೇ 86 ಅಂಕ ಗಳಿಸಿದ್ದಾರೆ.

ಉತ್ತರ ಕರ್ನಾಟಕದ ನಿಖಿಲ್ ಮತ್ತು ರಾಮನಗರದ ಜೀವಿಕಾ ಕೋವಿಡ್ ನಂತರ ‘ವಿ ಕೇರ್ ಫಾರ್ ಯು’ ಮೂಲಕ ಸ್ಪರ್ಶಟ್ರಸ್ಟ್‌ನಲ್ಲಿ ಆಶ್ರಯ ಪಡೆದಿದ್ದರು.

‘ನನಗೆ ಶಿಕ್ಷಣ ನೀಡುವುದು ನನ್ನ ತಂದೆಯ ಕನಸಾಗಿತ್ತು. ಈಗ ನನಸಾಗಿದೆ. ಎಂಜಿನಿಯರಿಂಗ್ ಸೇರಲು ಜಂಟಿ ಪ್ರವೇಶ ಪರೀಕ್ಷೆಗೆ (ಜೆಇಇ) ತಯಾರಿ ನಡೆಸುತ್ತಿದ್ದೇನೆ’ ಎಂದು ನಿಖಿಲ್ ತಮ್ಮ ಕನಸನ್ನು ಬಿಚ್ಚಿಟ್ಟರು.

‘ನನ್ನ ತಾಯಿ ದಿನಗೂಲಿ ಕಾರ್ಮಿಕರು. ತಂದೆಯನ್ನು ಕಳೆದುಕೊಂಡ ನಂತರ ತಾಯಿ ಓದಿಸಲು ಕಷ್ಟಪಟ್ಟರು. ನಂತರ ಸ್ಪರ್ಶಟ್ರಸ್ಟ್ ಆಶ್ರಯ ಸಿಕ್ಕಿತ್ತು. ಚಾರ್ಟರ್ಡ್ ಅಕೌಂಟೆಂಟ್ ಆಗುವ ಗುರಿ ಇದೆ’ ಎಂದು ಜೀವಿಕಾ ಪ್ರತಿಕ್ರಿಯಿಸಿದರು.

ಪಿಯು: ಹೆಣ್ಣು ಮಕ್ಕಳಿಗೆ ಕಿರೀಟ

ಒಂದನೇ ಪುಟದಿಂದ...

ಗ್ರಾಮೀಣರಿಗಿಂತ ನಗರ ಪ್ರದೇಶದ ವಿದ್ಯಾರ್ಥಿಗಳೇ ಈ ಬಾರಿ ಅಧಿಕ ಸಂಖ್ಯೆಯಲ್ಲಿ ಉತ್ತೀರ್ಣರಾಗಿದ್ದಾರೆ. ಪರೀಕ್ಷೆ ಬರೆದಿದ್ದ ನಗರ ಪ್ರದೇಶದ 5.03 ಲಕ್ಷ ವಿದ್ಯಾರ್ಥಿಗಳಲ್ಲಿ 3.75 ಲಕ್ಷ (ಶೇ 74.55) ಹಾಗೂ 1.34 ಲಕ್ಷ ಗ್ರಾಮೀಣ ವಿದ್ಯಾರ್ಥಿಗಳಲ್ಲಿ 93,251 (ಶೇ 69.33) ಮಂದಿ ತೇರ್ಗಡೆಯಾಗಿದ್ದಾರೆ.

ದಕ್ಷಿಣ ಕನ್ನಡ ಹಿಂದಿಕ್ಕಿದ ಉಡುಪಿ: ಫಲಿತಾಂಶದಲ್ಲಿ ಮೊದಲ ಸ್ಥಾನ ಪಡೆಯುತ್ತಿದ್ದ ದಕ್ಷಿಣ ಕನ್ನಡ ಜಿಲ್ಲೆಯನ್ನು ಈ ಬಾರಿ ಉಡುಪಿ ಜಿಲ್ಲೆ ಹಿಂದಿಕ್ಕಿದೆ. ಶೇ 93.90 ಫಲಿತಾಂಶ ಪಡೆದ ಉಡುಪಿ, ಜಿಲ್ಲಾವಾರು ಪಟ್ಟಿಯಲ್ಲಿ ಅಗ್ರಸ್ಥಾನ ಪಡೆದಿದೆ. ಶೇ 93.57 ಸ್ಥಾನ ಪಡೆದ ದಕ್ಷಿಣ ಕನ್ನಡ ಎರಡನೇ ಸ್ಥಾನಕ್ಕೆ ಇಳಿದಿದೆ. ಕೊಪ್ಪಳ, ಚಿಕ್ಕೋಡಿ, ಗದಗ, ಬೆಳಗಾವಿ, ಬಳ್ಳಾರಿ, ಚಿತ್ರದುರ್ಗ, ವಿಜಯಪುರ, ರಾಯಚೂರು, ಕಲಬುರಗಿ, ಯಾದಗಿರಿ ಕೊನೆಯ 10 ಸ್ಥಾನಗಳಲ್ಲಿವೆ.

ಖಾಸಗಿ, ಸರ್ಕಾರಿ ಕಾಲೇಜುಗಳ ಫಲಿತಾಂಶ ವಿಶ್ಲೇಷಿಸಲಾಗುತ್ತದೆ. ಸರ್ಕಾರಿ ಕಾಲೇಜುಗಳ ಶೈಕ್ಷಣಿಕ ಗುಣಮಟ್ಟ ಹೆಚ್ಚಿಸಲು ಈ ವಿಶ್ಲೇಷಣಾ ವರದಿಯನ್ನು ಬಳಸಿಕೊಳ್ಳಲಾಗುತ್ತದೆ

ಮಧು ಬಂಗಾರಪ್ಪ, ಶಾಲಾ ಶಿಕ್ಷಣ ಸಚಿವ

ಸರ್ಕಾರಿ	ಅನುದಾನಿತ	ಖಾಸಗಿ	ವಿಭಜಿತ	ಬಿಬಿಎಂಪಿ	ವಸತಿಶಾಲೆ
57.11 %	62.69 %	82.66 %	78.58 %	68.88 %	86.18 %

ಮೊದಲ 10 ಸ್ಥಾನ ಪಡೆದ ಜಿಲ್ಲೆಗಳು (ಶೇಕಡಾವಾರು)	
ಉಡುಪಿ ಜಿಲ್ಲೆ	93.90
ದಕ್ಷಿಣ ಕನ್ನಡ	93.57
ಬೆಂಗಳೂರು ದಕ್ಷಿಣ	85.36
ಕೊಡಗು	83.84
ಬೆಂಗಳೂರು ಉತ್ತರ	83.31
ಉತ್ತರ ಕನ್ನಡ	82.93
ಶಿವಮೊಗ್ಗ	79.91
ಬೆಂಗಳೂರು ಗ್ರಾಮಾಂತರ	79.70
ಚಿಕ್ಕಮಗಳೂರು	79.56
ಹಾಸನ	77.56

ಕನ್ನಡ ಮಾಧ್ಯಮ	ಶೇ 56.37
ಇಂಗ್ಲಿಷ್ ಮಾಧ್ಯಮ	ಶೇ 81.75

ಸಂಯೋಜನೆ	ಶೇಕಡವಾರು ಫಲಿತಾಂಶ
ಕಲಾ ವಿಭಾಗ	53.29
ವಾಣಿಜ್ಯ	76.07
ವಿಜ್ಞಾನ	82.54

ಉನ್ನತ ಶ್ರೇಣಿ	1 ಲಕ್ಷ
ಪ್ರಥಮ ದರ್ಜೆ	2.78 ಲಕ್ಷ
ದ್ವಿತೀಯ ದರ್ಜೆ	70,969
ತೃತೀಯ ದರ್ಜೆ	18,845

ಪರೀಕ್ಷೆ–2, 3ಕ್ಕೆ ಶುಲ್ಕವಿಲ್ಲ

ಒಂದನೇ ಪುಟದಿಂದ...

ಸರ್ಕಾರದ ಈ ನಿರ್ಧಾರ ಬಡ ವಿದ್ಯಾರ್ಥಿಗಳಿಗೆ ನೆರವಾಗಲಿದೆ. ಅನುತ್ತೀರ್ಣತೆಯ ಕಾರಣ ಪದವಿ ಶಿಕ್ಷಣದಿಂದ ವಂಚಿತರಾಗುವ ಪ್ರಮಾಣವೂ ಕಡಿಮೆಯಾಗಲಿದೆ ಎಂದು ಅಭಿಪ್ರಾಯಪಟ್ಟರು.

123 ಕಾಲೇಜುಗಳಿಗೆ ಶೂನ್ಯ ಫಲಿತಾಂಶ

ರಾಜ್ಯದ 123 ಕಾಲೇಜುಗಳು ಶೂನ್ಯ ಫಲಿತಾಂಶ ಪಡೆದಿವೆ. 90 ಖಾಸಗಿ, 20 ಅನುದಾನಿತ, ಎಂಟು ಸರ್ಕಾರಿ, ಹಾಗೂ ಐದು ವಸತಿ ಶಾಲೆಗಳಲ್ಲಿ ಒಬ್ಬ ವಿದ್ಯಾರ್ಥಿಯೂ ತೇರ್ಗಡೆಯಾಗಿಲ್ಲ. 134 ಕಾಲೇಜುಗಳು ಶೇ 100ರಷ್ಟು ಫಲಿತಾಂಶ ಪಡೆದಿವೆ.

ಹಾಜರಾತಿ ಕೊರತೆ; ಎರಡನೇ ಪರೀಕ್ಷೆ



ದ್ವಿತೀಯ ಪಿಯುಸಿಯಲ್ಲಿ ಹಾಜರಾತಿ ಕೊರತೆಯ ಕಾರಣ ಮೊದಲ ಪರೀಕ್ಷೆಯಿಂದ ವಂಚಿತರಾಗಿದ್ದ ವಿದ್ಯಾರ್ಥಿಗಳು ಪರೀಕ್ಷೆ–2 ಮತ್ತು ಪರೀಕ್ಷೆ–3 ಬರೆಯಲು ಮಂಡಳಿ ಅವಕಾಶ ನೀಡಿದೆ. ಅವರು ಖಾಸಗಿ ಅಭ್ಯರ್ಥಿಗಳಾಗಿ ಹೆಸರು ನೋಂದಣಿ ಮಾಡಿಕೊಳ್ಳಬೇಕು.

ನ್ಯೂನತೆಯ 123 ವಿದ್ಯಾರ್ಥಿಗಳು ತೇರ್ಗಡೆ

ಕಲಿಕಾ ನ್ಯೂನತೆ, ಮಂದಬುದ್ಧಿ, ದೃಷ್ಟಿ ದುರ್ಬಲತೆ, ನಿಧಾನಗತಿಯ ಕಲಿಕೆ ಮೊದಲಾದ ನ್ಯೂನತೆ ಇರುವ 191 ಮಕ್ಕಳು ಈ ಬಾರಿಯ ಪಿಯು ಪರೀಕ್ಷೆ ಬರೆದಿದ್ದರು. ಅವರಲ್ಲಿ 123 ಮಕ್ಕಳು (ಶೇ 64.40) ತೇರ್ಗಡೆಯಾಗಿದ್ದಾರೆ.

4,830 ಖಾಸಗಿ ವಿದ್ಯಾರ್ಥಿಗಳು ತೇರ್ಗಡೆ

ತರಗತಿಗಳಿಗೆ ಹಾಜರಾಗದೆ ವಯೋಮಿತಿಯ ಆಧಾರದಲ್ಲಿ ಖಾಸಗಿ ಅಭ್ಯರ್ಥಿಗಳಾಗಿ ಪರೀಕ್ಷೆ ಬರೆದಿದ್ದ 17,297 ವಿದ್ಯಾರ್ಥಿಗಳಲ್ಲಿ 4,830 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ. 33,576 ಪುನರಾವರ್ತಿತ ವಿದ್ಯಾರ್ಥಿಗಳಲ್ಲಿ 2,987 ಮಂದಿ ಉತ್ತೀರ್ಣರಾಗಿದ್ದಾರೆ.

8,293 ಮಂದಿಗೆ ‘ಕೃಪಾಂಕ’ ಬಲ

ಸರ್ಕಾರ 2017ರಲ್ಲಿ ರೂಪಿಸಿದ ಮೌಲ್ಯಮಾಪನ ನಿಯಮಗಳಂತೆ ವಿದ್ಯಾರ್ಥಿ ಮೂರು ವಿಷಯಗಳಲ್ಲಿ 35 ಅಂಕ ಪಡೆದಿದ್ದು, ಉಳಿದ ಮೂರು ವಿಷಯಗಳಲ್ಲಿ ಅನುತ್ತೀರ್ಣರಾಗಿದ್ದರೆ ಪ್ರತಿ ವಿಷಯದಲ್ಲೂ ಕನಿಷ್ಠ ಕೃಪಾಂಕ ನೀಡಿ ತೇರ್ಗಡೆ ಮಾಡಲಾಗುತ್ತದೆ. ಈ ವರ್ಷ 8,293 ವಿದ್ಯಾರ್ಥಿಗಳು ಈ ನಿಯಮದಡಿ ತೇರ್ಗಡೆಯಾಗಿದ್ದಾರೆ.

ಧಾರವಾಡ, ಕೊಡಗಿನಲ್ಲಿ ಮಳೆ

ಪ್ರಜಾವಾಣಿ ವಾರ್ತೆ

ನಾಪೋಕ್ಲು(ಕೊಡಗು ಜಿಲ್ಲೆ): ನಾಪೋಕ್ಲು ವ್ಯಾಪ್ತಿಯಲ್ಲಿ ಹಾಗೂ ಕುಶಾಲನಗರ ಹಾಗೂ ಸುತ್ತಮುತ್ತಲ ಪ್ರದೇಶದಲ್ಲಿ ಮಂಗಳವಾರ ಮಧ್ಯಾಹ್ನ ಗುಡುಗು ಸಹಿತ ಬಿರುಸಿನ ಮಳೆಯಾಗಿದ್ದು, ಮರಗಳು ಬಿದ್ದು ಹಾನಿಯಾಗಿದೆ.

ಸಮೀಪದ ಬೇತು, ಕೈಕಾಡು, ಪಾರಾಣೆ, ಕಕ್ಕಬ್ಬೆ, ಮರಂದೋಡ ಗ್ರಾಮಗಳಲ್ಲಿ ಮಧ್ಯಾಹ್ನ 2.45ರಿಂದ ಅರ್ಧಗಂಟೆಗೂ ಹೆಚ್ಚು ಕಾಲ ಮಳೆ ಸುರಿಯಿತು.

ಮಡಿಕೇರಿಯ ಹಲವೆಡೆ ಹಾಗೂ ಮೈಸೂರಿನಲ್ಲಿ ಮಂಗಳವಾರ ಸಂಜೆ ಕೆಲಕಾಲ ತುಂತುರು ಮಳೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಹಾಗೂ ಹುಬ್ಬಳ್ಳಿ-ಧಾರವಾಡದಲ್ಲಿ ಮಂಗಳವಾರ ಮಳೆಯಾಯಿತು.

ಧಾರವಾಡದ ಸುತ್ತಮುತ್ತ ಮಳೆಯಾಯಿತು. ಹುಬ್ಬಳ್ಳಿಯ ಬಹುತೇಕ ಕಡೆ ಅರ್ಧ ಗಂಟೆಗೂ ಹೆಚ್ಚು ಹೊತ್ತು ಮಳೆಯಾಯಿತು. ಉತ್ತರ ಕನ್ನಡ ಜಿಲ್ಲೆಯ ವಿವಿಧೆಡೆ ಗಾಳಿ ಸಹಿತ ಮಳೆಯಾಯಿತು. ಮುಂಡಗೋಡದಲ್ಲಿ ಸಂಜೆ ಆಲಿಕಲ್ಲು ಸಹಿತ ಮಳೆ ಸುರಿಯಿತು. ಸಾಲಗಾಂವ ಬಳಿ ಹುಬ್ಬಳ್ಳಿ-ಶಿರಸಿ ರಾಜ್ಯ ಹೆದ್ದಾರಿ ಮೇಲೆ ಮರ ಬಿದ್ದು, ಅರ್ಧ ಗಂಟೆ ವಾಹನಗಳ ಸಂಚಾರ ಸ್ಥಗಿತಗೊಂಡಿತ್ತು.

ಟಿಎಂಸಿ ಸಂಸದರ ವಾಗ್ವಾದ: ವಿಡಿಯೊ ಬಹಿರಂಗ


ಕಲ್ಯಾಣ್ ಬ್ಯಾನರ್ಜಿ

ನವದೆಹಲಿ (ಪಿಟಿಐ): ಟಿಎಂಸಿಯ ಇಬ್ಬರು ಸಂಸದರು ವಾಗ್ವಾದ ನಡೆಸಿರುವ ವಿಡಿಯೊವನ್ನು ಬಿಜೆಪಿ ನಾಯಕ ಅಮಿತ್ ಮಾಳವೀಯ ಅವರು ಮಂಗಳವಾರ ‘ಎಕ್ಸ್’ ಖಾತೆಯಲ್ಲಿ ಹಂಚಿಕೊಂಡಿದ್ದಾರೆ.

ಸಂಸದ ಕಲ್ಯಾಣ್ ಬ್ಯಾನರ್ಜಿ ಅವರು ತಮ್ಮ ಸಹೋದ್ಯೋಗಿಗಳ ಮೇಲೆ ರೇಗಾಡಿದ ಮತ್ತು ಪಕ್ಷದ ಇತರ ನಾಯಕರು ಅವರನ್ನು ಶಾಂತಗೊಳಿಸಲು ಪ್ರಯತ್ನಿಸುತ್ತಿರುವ ದೃಶ್ಯ ವಿಡಿಯೊದಲ್ಲಿದೆ.

ಪಶ್ಚಿಮ ಬಂಗಾಳದ ಬಿಜೆಪಿ ಸಹ-ಉಸ್ತುವಾರಿ ಆಗಿರುವ ಮಾಳವೀಯ ಅವರು ಟಿಎಂಸಿ ಸಂಸದರ ಚಾಟ್ ಗ್ರೂಪ್‌ನಿಂದ ತಮಗೆ ಲಭಿಸಿದೆ ಎನ್ನಲಾದ ಕೆಲವು ಸ್ಕ್ರೀನ್‌ಶಾಟ್‌ಗಳನ್ನೂ ಹಂಚಿಕೊಂಡಿದ್ದಾರೆ.


‘ಏ.4 ರಂದು ಭಾರತ ಚುನಾವಣಾ ಆಯೋಗದ ಕೇಂದ್ರ ಕಚೇರಿಯಲ್ಲಿ ಇಬ್ಬರು ಸಂಸದರು ಮಾತಿನ ಚಕಮಕಿ ನಡೆಸಿದ್ದಾರೆ. ಪಕ್ಷದ ವತಿಯಿಂದ ಮನವಿ ಸಲ್ಲಿಸಲು ಅವರು ಅಲ್ಲಿಗೆ ತೆರಳಿದ್ದರು’ ಎಂದು ಮಾಳವೀಯ ಅವರು ಬರೆದುಕೊಂಡಿದ್ದಾರೆ.

‘ಎಐಟಿಸಿ ಎಂಪಿ 2024’ ಎಂಬ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಸಂಸದರಾದ ಕಲ್ಯಾಣ್ ಬ್ಯಾನರ್ಜಿ ಮತ್ತು ಕೀರ್ತಿ ಆಜಾದ್ ಪರಸ್ಪರ ಆರೋಪ– ಪ್ರತ್ಯಾರೋಪ ನಡೆಸಿರುವ ಸ್ಕ್ರೀನ್‌ಶಾಟ್‌ಗಳನ್ನೂ ಅವರು ಹಂಚಿಕೊಂಡಿದ್ದಾರೆ.

ಈ ಬಗ್ಗೆ ಪ್ರತಿಕ್ರಿಯೆ ಕೇಳಿದಾಗ ಟಿಎಂಸಿ ಸಂಸದರೊಬ್ಬರು, ‘ವಾಗ್ವಾದ ನಡೆದಿರುವುದು ಹೌದು. ಆದರೆ ಹೆಚ್ಚಿನ ಮಾಹಿತಿ ನೀಡುವುದಿಲ್ಲ’ ಎಂದರು.

‘ಘಟನೆ ನಡೆದಿರುವ ಬಗ್ಗೆ ನನಗೆ ತಿಳಿದಿಲ್ಲ. ಆದರೆ ವಿಡಿಯೊ ಮತ್ತು ಚಾಟ್‌ಗಳು ಪಕ್ಷದ ಘನತೆಗೆ ಧಕ್ಕೆ ತಂದಿದೆ’ ಎಂದು ಟಿಎಂಸಿ ಮುಖಂಡ ಸೌಗತ ರಾಯ್ ಹೇಳಿದ್ದಾರೆ.

ಷೇರುಪೇಟೆ ವಹಿವಾಟು 1089



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,161
ಇಂದಿನ ಅಂತ್ಯ	22,535
▲	374
ದಿನದ ಗರಿಷ್ಠ	22,697

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹470
12 ಕ್ಕೆ	₹65
ಮೈಸೂರು	
100ಕ್ಕೆ	₹470

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹300-572

ದ್ವಿತಳಿ (ಬಿ.ವಿ) ₹366-644

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4 ₹193

ಆರ್‌ಎಸ್‌ಎಸ್-5 ₹188

ಗುಡ್ ಲಾಟ್ ₹180

(ಪ್ರತಿ ಕೆ.ಜಿಗೆ)

ಮುದ್ರೆಮನೆ ಕಾಫಿ (50 ಕೆಜಿಗೆ)

ಎಪಿ	₹26000
ಎಸಿ	₹15820
ಆರ್‌ಪಿ	₹21000
ಆರ್‌ಸಿ	₹12000

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹16000-16000
ದಾವಣಗೆರೆ	₹12400-13800

ಮುಂಬೈ ಧಾರಣೆ

ಶೇಂಗಾ

08-04-2025

ಜಾವಾ 70/80(ಹೊಸ)	9600-9700
ಜಾವಾ 80/90(ಹೊಸ)	9100-9200
ದಪ್ಪ ಮಧ್ಯಪ್ರದೇಶ(ಹೊಸ)	7500-7600
ದಪ್ಪ ಗುಜರಾತ್(ಹೊಸ)	7800-7900

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1380 (1380)
ಒಂದು ವಾರದ ಡೆಲಿವರಿ	1375 (1375)
ಪಾಮ್ ವಾರದ ಡೆಲಿವರಿ	1323 (1323)
ಸೂರ್ಯಕಾಂತಿ ಎಣ್ಣೆ ಕಚ್ಚಾ	1340 (1335)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ

₹88,300 (88,300)

ಬೆಳ್ಳಿ ಕೆ.ಜಿ ₹90,500 (90,300)

ಆವರಣದಲ್ಲಿ ಹಿಂದಿನ ವಹಿವಾಟಿನ ದರ

ಈರುಳ್ಳಿ (ಕ್ವಿಂಟಲ್‌ಗೆ)

ದಪ್ಪ	₹1,200-1,700
ಮಧ್ಯಮ	₹800-1,200
ಸಣ್ಣ	₹400-800

ವಿನಿಮಯ ದರ

$ ಡಾಲರ್	86.26
£ ಪೌಂಡ್	109.97
€ ಯುರೊ	94.20
¥ ಯೆನ್ (100ಕ್ಕೆ)	58

ಖಾದ್ಯ ತೈಲ ಮುಂಬೈ (10 ಕೆಜಿಗೆ)

(ಆವರಣದಲ್ಲಿ ಹಿಂದಿನ ವಹಿವಾಟಿನ ದರ)

ಶೇಂಗಾ (ರಿಫೈನ್ಡ್)	₹1370 (1370)
ಸೋಯಾ (ರಿಫೈನ್ಡ್)	₹1280 (1290)
ಸೂರ್ಯಕಾಂತಿ (ರಿಫೈನ್ಡ್)	₹1405 (1400)
ಪಾಮೋಲಿನ್	₹1325 (1325)

ಅಡಿಕೆ ಧಾರಣೆ (₹ಗಳಲ್ಲಿ)

ಕಾರ್ಕಳ		ಗೊರಬಲು	21490-30000	ಬಿಳಿಗೋಟು	16099-32200
ಹೊಸತು	25000-44000	ರಾಶಿ	46099-56759	ಚಾಲಿ	35218-41511
ಹಳತು	30000-50000	ಸರಕು	70069-90410	ಕೆಂಪುಗೋಟು	12999-24321
ಪುತ್ತೂರು		ಸಿದ್ದಾಪುರ		ರಾಶಿ	40099-46561
ಕೋಕ	22000-28000	ಬಿಳಿಗೋಟು	25159-30979	ಯಲ್ಲಾಪುರ	
ಸಾಗರ		ಚಾಲಿ	33049-40509	ಅಪಿ	58421-58421
ಬಿಳಿಗೋಟು	12700-26019	ಕೋಕ	13399-22229	ಬಿಳಿಗೋಟು	13872-31900
ಚಾಲಿ	32099-37200	ಹಳೆಚಾಲಿ	35099-38599	ಚಾಲಿ	32309-41799
ಕೋಕ	8700-16299	ಕೆಂಪುಗೋಟು	19109-21309	ಕೋಕ	4612-16499
ಕೆಂಪುಗೋಟು	12700-27100	ರಾಶಿ	40499-46599	ಕೆಂಪುಗೋಟು	17369-24398
ರಾಶಿ	39699-53899	ತಟ್ಟಿಬೆಟ್ಟೆ	28309-40909	ರಾಶಿ	40921-56809
ಸಿಪ್ಪೆಗೋಟು	17910-18410	ಶಿರಸಿ		ತಟ್ಟಿಬೆಟ್ಟೆ	27705-38869
ಶಿವಮೊಗ್ಗ					
ಬೆಟ್ಟೆ	52389-55399	ಬೆಟ್ಟೆ	26019-38698		

ಹೂಡಿಕೆದಾರರ ಸಂಪತ್ತು ₹7.37 ಲಕ್ಷ ಕೋಟಿ ವೃದ್ಧಿ

ಮತ್ತೆ ಪುಟಿದೆದ್ದ ಷೇರುಪೇಟೆ

ಮುಂಬೈ (ಪಿಟಿಐ): ಅಮೆರಿಕದ ಪ್ರತಿ ಸುಂಕ ನೀತಿಯಿಂದಾಗಿ ಮಹಾಪತನ ಕಂಡಿದ್ದ ದೇಶದ ಷೇರುಪೇಟೆಯು ಮಂಗಳವಾರ ನಡೆದ ವಹಿವಾಟಿನಲ್ಲಿ ಪುಟಿದೆದ್ದಿದೆ. ಹೂಡಿಕೆದಾರರ ಸಂಪತ್ತು ₹7.37 ಲಕ್ಷ ಕೋಟಿ ಹೆಚ್ಚಳವಾಗಿದೆ.

ಏಷ್ಯಾ ಹಾಗೂ ಯುರೋಪ್ ಮಾರುಕಟ್ಟೆಗಳಲ್ಲಿನ ಸಕಾರಾತ್ಮಕ ವಹಿವಾಟು ದೇಶೀಯ ಮಾರುಕಟ್ಟೆಯು ಏರಿಕೆ ಕಾಣಲು ನೆರವಾಗಿದೆ. ಎಂದು ತಜ್ಞರು ಹೇಳಿದ್ದಾರೆ.

ಡೊನಾಲ್ಡ್ ಟ್ರಂಪ್ ಅವರ ಸುಂಕ ಸಮರವು ಅಮೆರಿಕದಲ್ಲಿ ಹಣ ದುಬ್ಬರ ಏರಿಕೆ ಹಾಗೂ ಆರ್ಥಿಕ ಹಿಂಜರಿತ ಸೃಷ್ಟಿಸಲಿದೆ ಎಂಬ ಭೀತಿಯಿಂದಾಗಿ ಸೋಮವಾರ ನಡೆದ ವಹಿವಾಟಿನಲ್ಲಿ ಸೂಚ್ಯಂಕಗಳು ಇಳಿಕೆ ಕಂಡಿದ್ದವು.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 1,089 ಅಂಶ ಏರಿಕೆ (ಶೇ 1.40) ಕಂಡು, 74,227 ಅಂಶಗಳಲ್ಲಿ ಸ್ಥಿರಗೊಂಡಿತು. ವಹಿವಾಟಿನ ಒಂದು ಸಂದರ್ಭದಲ್ಲಿ 1,721 ಅಂಶ ಏರಿಕೆ ಕಂಡಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 374 ಅಂಶ (ಶೇ 1.69) ಹೆಚ್ಚಳ ಕಂಡು, 22,535 ಅಂಶಗಳಲ್ಲಿ ವಹಿವಾಟು ಮುಕ್ತಾಯಗೊಂಡಿತು.

‘ಅಮೆರಿಕದ ಸುಂಕ ನೀತಿಯಿಂದ ಎದುರಾಗುವ ಸವಾಲುಗಳನ್ನು ಎದುರಿಸಲು ಹಲವು ರಾಷ್ಟ್ರಗಳು ಕಾರ್ಯತತ್ಪರವಾಗಿವೆ. ಇದು ಜಾಗತಿಕ ಮಾರುಕಟ್ಟೆಯಲ್ಲಿ ಸಕಾರಾತ್ಮಕ ವಹಿವಾಟಿಗೆ ಕಾರಣವಾಗಿದ್ದು, ದೇಶೀಯ ಷೇರುಪೇಟೆ ಚೇತರಿಸಿಕೊಳ್ಳಲು ನೆರವಾಗಿದೆ’ ಎಂದು ಮೆಹ್ತಾ ಈಕ್ವಿಟೀಸ್ ಲಿಮಿಟೆಡ್‌ನ ಹಿರಿಯ ಉಪಾಧ್ಯಕ್ಷ ಪ್ರಶಾಂತ್ ತಾಪ್ಸೆ ಹೇಳಿದ್ದಾರೆ.

ಸೆನ್ಸೆಕ್ಸ್ **1,089** ಅಂಶ ಏರಿಕೆ

ಸೆನ್ಸೆಕ್ಸ್ ಗುಚ್ಛದಲ್ಲಿನ ಟೈಟನ್, ಬಜಾಜ್ ಫೈನಾನ್ಸ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಎಲ್ ಆ್ಯಂಡ್ ಟಿ, ಎಕ್ಸಿಸ್ ಬ್ಯಾಂಕ್, ಬಜಾಜ್ ಫಿನ್‌ಸರ್ವ್, ಏಷ್ಯನ್ ಪೇಂಟ್ಸ್, ಜೊಮಾಟೊ ಷೇರಿನ ಮೌಲ್ಯ ಏರಿಕೆಯಾಗಿದೆ. ಅದಾನಿ ಸಮೂಹದ 11 ಕಂಪನಿಗಳ ಷೇರಿನ ಮೌಲ್ಯದಲ್ಲಿ ಏರಿಕೆಯಾಗಿದೆ. ಒಟ್ಟು ಎಂ–ಕ್ಯಾಪ್ ₹12.18 ಲಕ್ಷ ಕೋಟಿ ಆಗಿದೆ.

ಸೋಮವಾರ ನಡೆದ ವಹಿವಾಟಿನಲ್ಲಿ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹9,040 ಕೋಟಿ ಮೌಲ್ಯದ ಷೇರುಗಳನ್ನು ಮಾರಾಟ ಮಾಡಿದ್ದಾರೆ. ದೇಶೀಯ ಸಾಂಸ್ಥಿಕ ಹೂಡಿಕೆದಾರರು ₹12,122 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ.

ಜಪಾನ್ ಷೇರುಪೇಟೆ ಏರಿಕೆ: ಜಪಾನ್‌ನ ಟೋಕಿಯೊ ಷೇರುಪೇಟೆ ಶೇ 6ರಷ್ಟು ಏರಿಕೆ ದಾಖಲಿಸಿದೆ. ಹಾಂಗ್‌ಕಾಂಗ್, ಶಾಂಘೈ ಮತ್ತು ದಕ್ಷಿಣ ಕೊರಿಯಾದ ಷೇರುಪೇಟೆಗಳು ಏರಿಕೆ ಕಂಡಿವೆ. ಯುರೋಪ್ ಮಾರುಕಟ್ಟೆಗಳಲ್ಲಿ ಸಕಾರಾತ್ಮಕ ವಹಿವಾಟು ನಡೆದರೆ, ಅಮೆರಿಕದ ಮಾರುಕಟ್ಟೆಗಳು ಇಳಿದಿವೆ.

ಮಂಕಾದ ರೂಪಾಯಿ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮತ್ತೆ ಮಂಕಾಯಿತು.

ರೂಪಾಯಿ ಮೌಲ್ಯ 50 ಪೈಸೆ ಇಳಿಕೆ ಕಂಡಿದೆ. ಕಳೆದ ಮೂರು ತಿಂಗಳ ಅವಧಿಯಲ್ಲಿ ಅತಿಹೆಚ್ಚು ನಷ್ಟ ಕಂಡ ದಿನ ಇದಾಗಿದೆ. ಪ್ರತಿ ಡಾಲರ್ ಮೌಲ್ಯ ₹86.26 ಆಗಿದೆ.

ಟ್ರಂಪ್ ಸುಂಕ ನೀತಿಯಿಂದ ಜಾಗತಿಕ ವ್ಯಾಪಾರ ಸಮರ ಸೃಷ್ಟಿಯಾಗಲಿದೆ. ಇದು ಆರ್ಥಿಕ ಬೆಳವಣಿಗೆಗೆ ಪೆಟ್ಟು ನೀಡುವ ಆತಂಕವಿದೆ. ಹಾಗಾಗಿ, ರೂಪಾಯಿ ಮೌಲ್ಯ ಇಳಿಕೆಯಾಗಿದೆ ಎಂದು ತಜ್ಞರು ತಿಳಿಸಿದ್ದಾರೆ.

ಅಲ್ಲದೆ, ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಕಚ್ಚಾ ತೈಲದ ಬೆಲೆಯಲ್ಲಿ ಏರಿಕೆಯಾಗಿದೆ. ಮತ್ತೊಂದೆಡೆ ದೇಶದ ಷೇರುಪೇಟೆಯಿಂದ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ಬಂಡವಾಳ ಹಿಂಪಡೆಯುವಿಕೆ ಮುಂದುವರಿದಿರುವುದು ರೂಪಾಯಿ ಬಲಗೊಳ್ಳಲು ತೊಡಕಾಗಿದೆ ಎಂದು ಹೇಳಿದ್ದಾರೆ.

ಚಿನ್ನದ ಬೆಲೆ ಇಳಿಕೆ; ಬೆಳ್ಳಿ ಧಾರಣೆ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಮಂಗಳವಾರ ನಡೆದ ವಹಿವಾಟಿನಲ್ಲಿ ಚಿನ್ನದ ಬೆಲೆ ಇಳಿಕೆಯಾಗಿದೆ.

10 ಗ್ರಾಂ ಚಿನ್ನದ (ಶೇ 99.9 ಪರಿಶುದ್ಧತೆ) ಬೆಲೆಯು ₹200 ಇಳಿಕೆಯಾಗಿದ್ದು, ₹91,250 ಆಗಿದೆ. ಆಭರಣ ಚಿನ್ನದ ದರವು (ಶೇ 99.5 ಪರಿಶುದ್ಧತೆ) ಇಷ್ಟೇ ಪ್ರಮಾಣದಲ್ಲಿ ಇಳಿಕೆಯಾಗಿದ್ದು, ₹90,800 ಆಗಿದೆ ಎಂದು ಅಖಿಲ ಭಾರತ ಸರಾಫ್ ಅಸೋಸಿಯೇಷನ್ ತಿಳಿಸಿದೆ.

ಪ್ರತಿ ಕೆ.ಜಿ ಬೆಳ್ಳಿ ಧಾರಣೆಯು ₹200 ಏರಿಕೆಯಾಗಿದ್ದು, ₹92,700 ಆಗಿದೆ.

ಯುಎಎನ್ ಸೃಷ್ಟಿಗೆ ಮುಖ ಚಹರೆ ಸಾಕು

ನವದೆಹಲಿ (ಪಿಟಿಐ): ಉದ್ಯೋಗಿಗಳು ಮುಖ ಚಹರೆ ದೃಢೀಕರಣದ ಮೂಲಕ ಸಾರ್ವತ್ರಿಕ ಖಾತೆ ಸಂಖ್ಯೆ (ಯುಎಎನ್) ಸೃಷ್ಟಿಸಲು ಅಥವಾ ಸಕ್ರಿಯ-ಗೊಳಿಸಲು ನೌಕರರ ಭವಿಷ್ಯ ನಿಧಿ ಸಂಘಟನೆಯು (ಇಪಿಎಫ್‌ಒ) ಹೊಸ ಫೀಚರ್ ಅನ್ನು ಪರಿಚಯಿಸಿದೆ.

ಉಮಾಂಗ್ ಮೊಬೈಲ್ ಆ್ಯಪ್ ಮೂಲಕ ಉದ್ಯೋಗಿಗಳೇ ನೇರವಾಗಿ ಆಧಾರ್ ಆಧರಿತ ಮುಖ ಚಹರೆಯ ದೃಢೀಕರಣ ತಂತ್ರಜ್ಞಾನದಡಿ (ಎಫ್‌ಎಟಿ) ಯುಎಎನ್ ಹಾಗೂ ಅದಕ್ಕೆ ಸಂಬಂಧಿಸಿದ ಸೇವೆ ಪಡೆಯಲು ಅನುಕೂಲ ಕಲ್ಪಿಸಲಾಗಿದೆ. ಇದರಿಂದ ಇಪಿಎಫ್ ಖಾತೆ ಹೊಂದಿರುವ ಉದ್ಯೋಗಿಗಳಿಗೆ ಸಹಕಾರಿಯಾಗಲಿದೆ.

ಮಂಗಳವಾರ ಸುದ್ದಿಗಾರರೊಂದಿಗೆ ಮಾತನಾಡಿದ ಕೇಂದ್ರ ಕಾರ್ಮಿಕ ಸಚಿವ ಮನ್ಸುಖ್ ಮಾಂಡವೀಯ, ‘ಇಪಿಎಫ್‌ಒದಿಂದ ಈ ಡಿಜಿಟಲ್ ಸೇವೆಗೆ ಚಾಲನೆ ನೀಡಲಾಗಿದ್ದು, ಕೋಟ್ಯಂತರ ಚಂದಾದಾರರಿಗೆ ಸುರಕ್ಷಿತವಾದ ಈ ಡಿಜಿಟಲ್ ಸೇವೆ ದೊರೆಯಲಿದೆ’ ಎಂದು ಹೇಳಿದರು.

ಉದ್ಯೋಗಿಯು ನೇರವಾಗಿ ಯುಎಎನ್ ಸೃಷ್ಟಿಸಬಹುದಾಗಿದೆ. ಅಲ್ಲದೆ, ಉದ್ಯೋಗದಾತ ಸಂಸ್ಥೆಯು ಹೊಸದಾಗಿ ಕೆಲಸಕ್ಕೆ ಸೇರಿದ ಉದ್ಯೋಗಿಯ ಯುಎಎನ್ ಅನ್ನು ಈ ಪ್ರಕ್ರಿಯೆ ಮೂಲಕ ಸೃಜಿಸಬಹುದಾಗಿದೆ ಎಂದು ತಿಳಿಸಿದರು.

‘ಈಗಾಗಲೇ ಯುಎಎನ್ ಸೃಷ್ಟಿಸಿದ್ದು, ಸಕ್ರಿಯವಾಗಿಲ್ಲದಿರುವ ನಂಬರ್‌ಗಳನ್ನೂ ಉಮಾಂಗ್ ಆ್ಯಪ್ ಮೂಲಕ ಸಕ್ರಿಯಗೊಳಿಸಬಹುದಾಗಿದೆ’ ಎಂದರು. ಮುಂಬರುವ ದಿನಗಳಲ್ಲಿ ಮುಖ ಚಹರೆ ದೃಢೀಕರಣದ ಮೂಲಕವೇ ಡಿಜಿಟಲ್ ರೂಪದ ‘ಜೀವನ್ ಪ್ರಮಾಣ ಪತ್ರ’ಗಳ ವಿತರಣೆಗೆ ಇಪಿಎಫ್‌ಒ ಮುಂದಾಗಿದೆ ಎಂದು ತಿಳಿಸಿದರು.

2024–25ನೇ ಆರ್ಥಿಕ ವರ್ಷದಲ್ಲಿ ಇಪಿಎಫ್‌ಒದಿಂದ 1.26 ಕೋಟಿ ಯುಎಎನ್‌ಗಳನ್ನು ನೀಡಲಾಗಿದೆ. ಈ ಪೈಕಿ 44 ಲಕ್ಷವಷ್ಟೇ (ಶೇ 35.30) ಸಕ್ರಿಯವಾಗಿವೆ ಎಂದು ವಿವರಿಸಿದರು.

ಪ್ರಕ್ರಿಯೆ ಹೇಗೆ?

ಯುಎಎನ್ ಸೃಷ್ಟಿಸಬೇಕಿರುವ ಉದ್ಯೋಗಿಯು ಮೊದಲ ಉಮಾಂಗ್ ಆ್ಯಪ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬೇಕು. ಬಳಿಕ ಮುಖ ಚಹರೆ ಮೂಲಕ ಯುಎಎನ್ ಸರ್ವಿಸಸ್ ಅಡಿ ಅಲಾಟ್‌ಮೆಂಟ್ ಮತ್ತು ಆ್ಯಕ್ಟಿವೇಶನ್ ವಿಭಾಗಕ್ಕೆ ಹೋಗಿ ಸೂಚಿಸಿರುವ ಪ್ರಕ್ರಿಯೆ ಪೂರ್ಣಗೊಳಿಸಬೇಕಿದೆ. ಬಳಿಕ ಆಧಾರ್ ಸಂಖ್ಯೆ ಮತ್ತು ಆಧಾರ್‌ಗೆ ಲಿಂಕ್ ಆಗಿರುವ ಮೊಬೈಲ್ ಸಂಖ್ಯೆ ನಮೂದಿಸಬೇಕಿದೆ. ಈ ಮೊಬೈಲ್ ಸಂಖ್ಯೆಗೆ ಒಟಿಪಿ ಬರಲಿದೆ. ಇದನ್ನು ನಮೂದಿಸಿದ ನಂತರ ಯುಎಎನ್ ಸೃಷ್ಟಿಯಾಗಲಿದೆ. ಬಳಿಕ ನೋಂದಣಿ ಮಾಡಿರುವ ಮೊಬೈಲ್‌ಗೆ ಎಸ್‌ಎಂಎಸ್ ಮೂಲಕ ಯುಎಎನ್ ನಂಬರ್ ರವಾನೆಯಾಗಲಿದೆ.

ಈ ಪ್ರಕ್ರಿಯೆ ಪೂರ್ಣಗೊಂಡ ಬಳಿಕ ಉದ್ಯೋಗಿಯು ಉಮಾಂಗ್ ಆ್ಯಪ್ ಅಥವಾ ಮೆಂಬರ್ ಪೋರ್ಟಲ್‌ನಲ್ಲಿ ಯುಎಎನ್ ಕಾರ್ಡ್ ಅನ್ನು ಡೌನ್‌ಲೋಡ್ ಮಾಡಿಕೊಳ್ಳಬಹುದಾಗಿದೆ.

ಅಮೆರಿಕ: ಚೀನಾಕ್ಕೆ ಶೇ 104ರಷ್ಟು ಸುಂಕ

ವಾಷಿಂಗ್ಟನ್/ಬೀಜಿಂಗ್ (ರಾಯಿಟರ್ಸ್/ಎಪಿ/ಎಎಫ್‌ಪಿ): ಅಮೆರಿಕದಿಂದ ಆಮದಾಗುವ ಸರಕುಗಳ ಮೇಲೆ ಅಧಿಕ ಸುಂಕ ವಿಧಿಸುತ್ತಿರುವ ಚೀನಾಕ್ಕೆ ತಿರುಗೇಟು ನೀಡಲು ಮುಂದಾಗಿರುವ ಡೊನಾಲ್ಡ್ ಟ್ರಂಪ್ ಆಡಳಿತ, ಚೀನಾದ ಸರಕುಗಳಿಗೆ ಹೆಚ್ಚುವರಿಯಾಗಿ ಹೆಚ್ಚುವರಿಯಾಗಿ ಶೇ 50ರಷ್ಟು ಸುಂಕ ವಿಧಿಸಲು ನಿರ್ಧರಿಸಿದೆ.

ಏಪ್ರಿಲ್ 9ರಿಂದ ಇದು ಜಾರಿಗೊಳ್ಳಲಿದ್ದು, ಚೀನಾ ಸರಕುಗಳ ಮೇಲಿನ ಸುಂಕವು ಶೇ 104ರಷ್ಟಾಗಲಿದೆ ಎಂದು ಶ್ವೇತಭವನ ತಿಳಿಸಿದೆ.

‘ಹಿತಾಸಕ್ತಿ ರಕ್ಷಿಸಲು ಕ್ರಮ’: ಚೀನಾ ಮೇಲೆ ಹೆಚ್ಚುವರಿಯಾಗಿ ಶೇಕಡ 50ರಷ್ಟು ಸುಂಕ ವಿಧಿಸಲಾಗುವುದು ಎಂದು ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಹೇಳಿರುವುದಕ್ಕೆ ಪ್ರತಿಕ್ರಿಯೆ ನೀಡಿರುವ ಚೀನಾ, ತನ್ನ ಹಿತಾಸಕ್ತಿಗಳನ್ನು ಹಾಗೂ ಹಕ್ಕುಗಳನ್ನು ರಕ್ಷಿಸಲು ಕ್ರಮಗಳನ್ನು ಕೈಗೊಳ್ಳುವುದಾಗಿ ಹೇಳಿದೆ.

ಟ್ರಂಪ್ ಅವರು ಕಳೆದ ವಾರ ಘೋಷಿಸಿದ ಸುಂಕಗಳಿಗೆ ಪ್ರತಿಯಾಗಿ ತಾನೂ ಸುಂಕ ವಿಧಿಸುವುದಾಗಿ ಚೀನಾ ಹೇಳಿತ್ತು. ಇದಾದ ನಂತರದಲ್ಲಿ ಟ್ರಂಪ್ ಅವರು ಚೀನಾ ಮೇಲೆ ಹೆಚ್ಚುವರಿಯಾಗಿ ಸುಂಕ ವಿಧಿಸಲಾಗುವುದು ಎಂದು ಸೋಮವಾರ ಹೇಳಿದ್ದರು.

ದೊಡ್ಡ ತಪ್ಪು: ಅಮೆರಿಕದಿಂದ ಆಮದಾಗುವ ಸರಕುಗಳ ಮೇಲೆ ಸುಂಕ ವಿಧಿಸುವ ಚೀನಾ ಕ್ರಮವು ‘ದೊಡ್ಡ ತಪ್ಪು’ ಎಂದು ಅಮೆರಿಕದ ಹಣಕಾಸು ಸಚಿವ ಸ್ಕಾಟ್ ಬೆಸೆಂಟ್ ಅವರು ಸಿಎನ್‌ಬಿಸಿ ವಾಹಿನಿಗೆ ನೀಡಿದ ಸಂದರ್ಶನದಲ್ಲಿ ಹೇಳಿದ್ದಾರೆ.

‘ವ್ಯಾಪಾರ ಕೊರತೆ ಹೊಂದಿರುವ ದೇಶ ನಮ್ಮದು. ಹೀಗಾಗಿ, ನಮ್ಮ ಮೇಲೆ ಚೀನಾ ದೇಶವು ಸುಂಕ ಹೆಚ್ಚಿಸುವುದರಿಂದ ನಾವು ಕಳೆದುಕೊಳ್ಳುವುದು ಏನಿದೆ? ಅವರು ನಮ್ಮಲ್ಲಿಗೆ ರಫ್ತು ಮಾಡುವ ಪ್ರಮಾಣಕ್ಕೆ ಹೋಲಿಸಿದರೆ, ನಾವು ಅವರ ದೇಶಕ್ಕೆ ರಫ್ತು ಮಾಡುವುದು ಐದನೆಯ ಒಂದರಷ್ಟು ಮಾತ್ರ’ ಎಂದು ಅವರು ಹೇಳಿದ್ದಾರೆ.

ಅಮೆರಿಕದ ಮೇಲೆ ಶೇ 25ರಷ್ಟು ಸುಂಕ ವಿಧಿಸಲು ಚಿಂತನೆ

ಬ್ರಸೆಲ್ಸ್ (ಎಎಫ್‌ಪಿ): ಅಮೆರಿಕದಿಂದ ಆಮದಾಗುವ ಉತ್ಪನ್ನಗಳ ಮೇಲೆ ಗರಿಷ್ಠ ಶೇಕಡ 25ರಷ್ಟು ಸುಂಕ ವಿಧಿಸಲು ಐರೋಪ್ಯ ಒಕ್ಕೂಟ ಆಲೋಚಿಸಿದೆ. ಆದರೆ, ಅಮೆರಿಕದ ಬರ್ಬನ್ ವಿಸ್ಕಿಯ ಮೇಲೆ ಸುಂಕ ವಿಧಿಸದೆ ಇರುವ ಸಾಧ್ಯತೆ ಇದೆ.

ಬರ್ಬನ್ ವಿಸ್ಕಿಗೆ ಸುಂಕ ವಿಧಿಸಿದರೆ, ಅದಕ್ಕೆ ಪ್ರತಿಯಾಗಿ ಅಮೆರಿಕವು ಯುರೋಪಿನ ವೈನ್ ಮತ್ತು ಮದ್ಯಸಾರದ ಮೇಲೆ ಹೆಚ್ಚು ಸುಂಕ ವಿಧಿಸಬಹುದು ಎಂಬ ಕಾರಣಕ್ಕೆ ಒಕ್ಕೂಟವು ಈ ಆಲೋಚನೆ ಮಾಡಿದೆ.

ಯುರೋಪಿನ ಪ್ರಮುಖ ವೈನ್ ರಫ್ತುದಾರರಾದ ಫ್ರಾನ್ಸ್ ಮತ್ತು ಇಟಲಿಯ ಒತ್ತಡಕ್ಕೆ ಮಣಿದ ಒಕ್ಕೂಟವು ಸುಂಕ ವಿಧಿಸುವ ಪಟ್ಟಿಯಿಂದ ಬರ್ಬನ್ ವಿಸ್ಕಿ ಕೈಬಿಡಲು ತೀರ್ಮಾನಿಸಿತು.

ಆರ್ಥಿಕತೆಯಲ್ಲಿ ನಿರೀಕ್ಷಿತ ಪ್ರಗತಿ: ನಿರ್ಮಲಾ ವಿಶ್ವಾಸ

ಲಂಡನ್ (ಪಿಟಿಐ): ‘ಆರ್ಥಿಕ ಪರಿಸ್ಥಿತಿಗೆ ತಕ್ಕಂತೆ ಹೊಂದಿಕೊಳ್ಳುವ ಗುಣ ಮತ್ತು ದೇಶಿ ಮಾರುಕಟ್ಟೆಯ ಬೇಡಿಕೆಯು ಭಾರತವನ್ನು ಪ್ರಗತಿಯ ಪಥದಲ್ಲಿ ಮುಂದುವರಿಸಲಿದೆ’ ಎಂದು ಕೇಂದ್ರದ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ವಿಶ್ವಾಸ ವ್ಯಕ್ತಪಡಿಸಿದರು.



‘2047ರ ವೇಳೆಗೆ ಭಾರತ ಅಭಿವೃದ್ಧಿ ಹೊಂದಿದ ಆರ್ಥಿಕತೆ-ಯಾಗಲು ಇರುವ ಅವಕಾಶ ಮತ್ತು ಸವಾಲುಗಳು’ ಎಂಬ ವಿಷಯ ಕುರಿತು ಇಲ್ಲಿನ ಭಾರತೀಯ ರಾಯಭಾರ ಕಚೇರಿಯಲ್ಲಿ ನಡೆದ ಸಂವಾದ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಪ್ರಸಕ್ತ ಕೇಂದ್ರ ಸಂಪುಟದಲ್ಲಿ ಸಚಿವೆಯಾದ ಬಳಿಕ ಮೊದಲ ಬಾರಿಗೆ ಬ್ರಿಟನ್‌ಗೆ ಭೇಟಿ ನೀಡಿರುವ ಅವರು, ‘ಭಾರತ ಮತ್ತು ಬ್ರಿಟನ್ ನಡುವಣ ಮುಕ್ತ ವ್ಯಾಪಾರ ಒಪ್ಪಂದ (ಎಫ್‌ಟಿಎ) ತಡವಾಗಿ ಆದರೂ, ಇದೊಂದು ಉತ್ತಮ ಬೆಳವಣಿಗೆಯಾಗಿದೆ’ ಎಂದು ಹೇಳಿದರು.

ಹದಿಹರೆಯದವರು ‘ಇನ್‌ಸ್ಟಾ ಲೈವ್’ ಬರಲು ಪೋಷಕರ ಅನುಮತಿ ಕಡ್ಡಾಯ

ಲಂಡನ್ (ಎಪಿ): ಇನ್ನು ಮುಂದೆ 16 ವರ್ಷ ವಯೋಮಾನದ ಒಳಗಿನವರು ಪೋಷಕರ ಅನುಮತಿ ಇಲ್ಲದೆ ಇನ್‌ಸ್ಟಾಗ್ರಾಂನಲ್ಲಿ ಲೈವ್ ಬರಲು ಸಾಧ್ಯವಿಲ್ಲ ಮತ್ತು ನಗ್ನ ಅಥವಾ ಅಶ್ಲೀಲ ಚಿತ್ರಗಳನ್ನು ಬ್ಲರ್ ಮಾಡದೆ ನೇರವಾಗಿ ಕಳುಹಿಸುವಂತಿಲ್ಲ ಎಂದು ಮೆಟಾ ಸಂಸ್ಥೆಯ ಮುಖ್ಯಸ್ಥರು ಮಂಗಳವಾರ ತಿಳಿಸಿದರು.

ನೂತನ ಕ್ರಮವು ಮೊದಲಿಗೆ ಅಮೆರಿಕ, ಬ್ರಿಟನ್, ಕೆನಡಾ ಮತ್ತು ಆಸ್ಟ್ರೇಲಿಯಾದಲ್ಲಿ ಅನ್ವಯವಾಗಲಿದೆ. ನಂತರ ಜಾಗತಿಕ ಬಳಕೆದಾರರಿಗೆ ಅನ್ವಯವಾಗಲಿದೆ ಎಂದು ಹೇಳಿದರು.

ಕಳೆದ ಸೆಪ್ಟೆಂಬರ್‌ನಲ್ಲಿ ಹದಿಹರೆಯದವರಿಗೆ ಇನ್‌ಸ್ಟಾಗ್ರಾಂ ಖಾತೆ ತೆರೆಯಲು ಅವಕಾಶ ನೀಡಿದ್ದ ಮೆಟಾ, ಆನ್‌ಲೈನ್‌ನಲ್ಲಿ ಮಕ್ಕಳ ಚಲನವಲನಗಳ ಮೇಲ್ವಿಚಾರಣೆಗೆ ಪೋಷಕರಿಗೆ ಹಲವು ಆಯ್ಕೆಗಳನ್ನು ನೀಡಿತ್ತು.

ಹದಿಹರೆಯದವರ ಸುರಕ್ಷತಾ ದೃಷ್ಟಿಯಿಂದ ಫೇಸ್‌ಬುಕ್ ಮತ್ತು ಮೆಸೆಂಜರ್ ಜಾಲತಾಣಗಳಿಗೂ ಇದೇ ನಿಯಮಗಳನ್ನು ಶೀಘ್ರವೇ ವಿಸ್ತರಿಸಲಾಗುತ್ತದೆ ಎಂದು ಮೆಟಾ ತಿಳಿಸಿದೆ.

ಒಟ್ಟಾಗಿ ನಿಲ್ಲೋಣ: ಭಾರತಕ್ಕೆ ಚೀನಾ ಸಲಹೆ

ನವದೆಹಲಿ: ಅಮೆರಿಕ ವಿಧಿಸುತ್ತಿರುವ ಸುಂಕಕ್ಕೆ ತಿರುಗೇಟು ನೀಡಲು ಮುಂದಾಗಿರುವ ಚೀನಾ, ‘ಈ ಸುಂಕ ಹೋರಾಟದಲ್ಲಿ ಚೀನಾ ಮತ್ತು ಭಾರತ ಒಟ್ಟಾಗಿ ನಿಲ್ಲಬೇಕು’ ಎಂದು ಭಾರತಕ್ಕೆ ಸಲಹೆ ನೀಡಿದೆ.

‘ಅಮೆರಿಕ ಆರಂಭಿಸಿರುವ ಸುಂಕದ ದುರ್ಬಳಕೆ ಸಡ್ಡು ಹೊಡೆಯಲು ಎರಡೂ ರಾಷ್ಟ್ರಗಳು ಒಟ್ಟಾಗಬೇಕು’ ಎಂದು ಭಾರತದಲ್ಲಿನ ರಾಯಭಾರಿ ಕಚೇರಿ ವಕ್ತಾರ ಯು ಜಿಂಗ್ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಅಮೆರಿಕದ ಕ್ರಮವು ಭೌಗೋಳಿಕವಾಗಿ ದಕ್ಷಿಣದಲ್ಲಿರುವ ದೇಶಗಳಿಗೆ ಮಾರಕವಾಗಲಿದೆ. ವಿಶೇಷವಾಗಿ ಭಾರತ ಮತ್ತು ಚೀನಾದ ಅಭಿವೃದ್ಧಿ ಹೊಂದುವ ಹಕ್ಕನ್ನು ಕಸಿಯಲಿದೆ. ಈ ಸಂಕಷ್ಟದಿಂದ ಪಾರಾಗಲು ಎರಡೂ ದೇಶಗಳು ಜೊತೆಯಾಗಿ ನಿಲ್ಲಬೇಕಿದೆ’ ಎಂದು ಅವರು ಪ್ರತಿಪಾದಿಸಿದ್ದಾರೆ.

ಬಿಒಎಂ: ಸಾಲ ನೀಡಿಕೆ ಶೇ 18ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): 2024–25ನೇ ಆರ್ಥಿಕ ವರ್ಷದ ಮಾರ್ಚ್ ತ್ರೈಮಾಸಿಕದಲ್ಲಿ ₹2.40 ಲಕ್ಷ ಕೋಟಿ ಸಾಲ ನೀಡಲಾಗಿದೆ. ಒಟ್ಟಾರೆ ಸಾಲ ನೀಡಿಕೆ ಪ್ರಮಾಣದಲ್ಲಿ ಶೇ 17.84ರಷ್ಟು ಹೆಚ್ಚಳವಾಗಿದೆ ಎಂದು ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಆಫ್ ಮಹಾರಾಷ್ಟ್ರ (ಬಿಒಎಂ) ತಿಳಿಸಿದೆ.

ಮಾರ್ಚ್ 31ರ ಅಂತ್ಯಕ್ಕೆ ಬ್ಯಾಂಕ್‌ನ ವಸೂಲಾಗದ ಸಾಲವು ₹2.03 ಲಕ್ಷ ಕೋಟಿ ಇದೆ ಎಂದು ಷೇರುಪೇಟೆಗೆ ಮಂಗಳವಾರ ತಿಳಿಸಿದೆ.

ಠೇವಣಿ ಪ್ರಮಾಣದಲ್ಲಿ ಶೇ 13ರಷ್ಟು ಹೆಚ್ಚಳವಾಗಿದ್ದು, ಒಟ್ಟು ₹3.07 ಲಕ್ಷ ಕೋಟಿ ಸಂಗ್ರಹಿಸಲಾಗಿದೆ ಎಂದು ತಿಳಿಸಿದೆ.

ಕಳೆದ ಆರ್ಥಿಕ ವರ್ಷದ ಅಂತ್ಯಕ್ಕೆ ಬ್ಯಾಂಕ್‌ನ ಒಟ್ಟು ವ್ಯವಹಾರ (ಸಾಲ ಮತ್ತು ಠೇವಣಿ) ₹5.47 ಲಕ್ಷ ಕೋಟಿ ಯಾಗಿದೆ. ಚಾಲ್ತಿ ಖಾತೆ ಮತ್ತು ಉಳಿತಾಯ ಖಾತೆ (ಸಿಎಎಸ್‌ಎ) ಅನುಪಾತ ಸುಧಾರಣೆಗೊಂಡಿದ್ದು, ಶೇ 53.29ರಷ್ಟು ಆಗಿದೆ. ಸಾಲ–ಠೇವಣಿ ಅನುಪಾತವು ಶೇ 78.14ರಷ್ಟಾಗಿದೆ.

ವಿಸ್ತೃತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮೂರು ನಿರ್ಣಯ ● ಆರ್‌ಎಸ್‌ಎಸ್ ವಿರುದ್ಧ ಟೀಕಾಪ್ರಹಾರ

ಬಿಜೆಪಿ ನೀತಿ ವಿರುದ್ಧ 'ಕೈ' 'ನ್ಯಾಯ' ಹೋರಾಟ

ಪ್ರಜಾವಾಣಿ ವಾರ್ತೆ


ನವದೆಹಲಿ: ತನ್ನ ಹುಸಿ ರಾಷ್ಟ್ರೀಯತೆಯ ಮೂಲಕ ಭಾರತವನ್ನು ವಿಭಜಿಸಲು ಪ್ರಯತ್ನಿಸುತ್ತಿರುವ ಆಡಳಿತ ಪಕ್ಷವು ಮಾಡುತ್ತಿರುವ ಘೋರ ಅನ್ಯಾಯಗಳನ್ನು ನ್ಯಾಯಮಾರ್ಗದ ಮೂಲಕ ಎದುರಿಸಲು ಸಜ್ಜಾಗಬೇಕು ಎಂದು ಕಾಂಗ್ರೆಸ್ ಕರೆ ನೀಡಿದೆ. ಈ ಮೂಲಕ, ಆಡಳಿತಾರೂಢ ಬಿಜೆಪಿ ವಿರುದ್ಧ ಆಕ್ರಮಣಕಾರಿ ಸೈದ್ಧಾಂತಿಕ ಹೋರಾಟಕ್ಕೆ ಅಣಿಯಾಗಿದೆ.

ಗುಜರಾತ್‌ನ ಅಹಮದಾಬಾದ್‌ನಲ್ಲಿ ಮಂಗಳವಾರ ನಡೆದ ಪಕ್ಷದ ವಿಸ್ತೃತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಮೂರು ನಿರ್ಣಯಗಳನ್ನು ತೆಗೆದುಕೊಳ್ಳಲಾಗಿದೆ. ಸಿಡಬ್ಲ್ಯುಸಿ ಸಭೆಯಲ್ಲಿ ಗುಜರಾತ್ ಕುರಿತು ಒಂದು ನಿರ್ಣಯ ಮತ್ತು ರಾಷ್ಟ್ರೀಯ ವಿಷಯಗಳ ಕುರಿತು ಇನ್ನೊಂದು ನಿರ್ಣಯದ ಕುರಿತು ಚರ್ಚಿಸಲಾಗಿದೆ. ಬುಧವಾರ ನಡೆಯಲಿರುವ ಎಐಸಿಸಿ ಅಧಿವೇಶನದಲ್ಲಿ ಈ ನಿರ್ಣಯಗಳಿಗೆ ಅಂಗೀಕಾರ ಪಡೆಯಲಾಗುವುದು ಎಂದು ಪಕ್ಷದ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ತಿಳಿಸಿದರು.

ನಕಲಿ ಮುಖಾಮುಖಿ ಮತ್ತು ದುರುದ್ದೇಶಪೂರಿತವಾಗಿ ಹೇಳಿಕೊಳ್ಳುವ ವಿಭಜನೆಯ ಸಿದ್ಧಾಂತವು ಸರ್ದಾರ್ ಪಟೇಲ್ ಮತ್ತು ಜವಾಹರಲಾಲ್ ನೆಹರೂ ನಡುವಿನ ಸಂಘರ್ಷದ ಬಗ್ಗೆ ಉದ್ದೇಶಪೂರ್ವಕ ಸುಳ್ಳುಗಳ ಜಾಲ ಹರಡಲು ಕಾರಣವಾಯಿತು ಎಂದು ಪಕ್ಷವು ನಿರ್ಣಯದಲ್ಲಿ ತಿಳಿಸಿದೆ. 'ವಾಸ್ತವದಲ್ಲಿ ಈ ಸುಳ್ಳು ನಮ್ಮ ಸ್ವಾತಂತ್ರ್ಯ ಹೋರಾಟದ ನೀತಿ ಮತ್ತು ಗಾಂಧಿ-ನೆಹರೂ-ಪಟೇಲ್ ಅವರ ಬೇರ್ಪಡಿಸಲಾಗದ ನಾಯಕತ್ವದ ಮೇಲಿನ ದಾಳಿಯಾಗಿದೆ. ದ್ವೇಷ ಮತ್ತು ವಿಭಜನೆಯ ಶಕ್ತಿಗಳಿಂದು ಈ ಸೌಹಾರ್ದದ ಮತ್ತು ಸ್ನೇಹಪರತೆಯ ಮನೋಭಾವವನ್ನೇ ದುರ್ಬಲಗೊಳಿಸಲು ಪ್ರಯತ್ನಿಸುತ್ತಿವೆ' ಎಂದು ಪಕ್ಷ ಹೇಳಿದೆ.

ಸಭೆಯ ನಂತರ ಸುದ್ದಿಗಾರರಿಗೆ ಮಾಹಿತಿ ನೀಡಿದ ಪಕ್ಷದ ಪ್ರಧಾನ ಕಾರ್ಯದರ್ಶಿ (ಸಂಘಟನೆ) ಕೆ.ಸಿ. ವೇಣುಗೋಪಾಲ್, 'ಪಟೇಲ್ ಅವರ 150ನೇ ಜನ್ಮ ದಿನಾಚರಣೆಯ ಸಂದರ್ಭದಲ್ಲಿ ವಿಶೇಷ ನಿರ್ಣಯ ಅಂಗೀಕರಿಸಲಾಗಿದೆ' ಎಂದು ಹೇಳಿದರು.

ಬಿಜೆಪಿ ಹಾಗೂ ರಾಷ್ಟ್ರೀಯ ಸ್ವಯಂಸೇವಕ ಸಂಘವನ್ನು ಗುರಿಯಾಗಿಸಿಕೊಂಡು ಟೀಕಾಪ್ರಹಾರ ನಡೆಸಿದ ಪಕ್ಷವು ಹಿಂಸಾಚಾರ ಹಾಗೂ ಕೋಮುವಾದವು ದೇಶವನ್ನು ದ್ವೇಷದ ಪ್ರಪಾತಕ್ಕೆ ತಳ್ಳುತ್ತಿದೆ ಎಂದು ಆರೋಪಿಸಿದೆ. ಧಾರ್ಮಿಕ ಧ್ರುವೀಕರಣದ ಉನ್ಮಾದದ ವಿರುದ್ಧ ಹೋರಾಡುವ ಮೂಲಕ ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ದೃಢ-ನಿಶ್ಚಯವನ್ನು ಮುಂದುವರಿಸಲು ನಿರ್ಧರಿಸಲಾಗಿದೆ ಎಂದು ಪಕ್ಷ ಘೋಷಿಸಿದೆ.



ಅಹಮದಾಬಾದ್‌ನಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ವಿಸ್ತೃತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಭಾಗಿಯಾಗಿದ್ದ ಪಕ್ಷದ ಮುಖಂಡರು — ಪಿಟಿಐ ಚಿತ್ರ

ಪ್ರಿಯಾಂಕಾ ಗಾಂಧಿ ಗೈರು

ಎರಡು ದಿನಗಳ ಎಐಸಿಸಿ ಅಧಿವೇಶನಕ್ಕೆ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ ಗೈರುಹಾಜರಾಗಿದ್ದಾರೆ.

ವೈದ್ಯಕೀಯ ಸಹಾಯದ ಅಗತ್ಯವಿರುವ ಸಂಬಂಧಿಕರನ್ನು ನೋಡಿಕೊಳ್ಳುವ ಉದ್ದೇಶದಿಂದ ಅವರು ವಿದೇಶಕ್ಕೆ ತೆರಳಿದ್ದಾರೆ. 'ಸಂಸತ್‌ನ ಬಜೆಟ್ ಅಧಿವೇಶನದ ಕೊನೆಯ ಭಾಗ ಹಾಗೂ ಎಐಸಿಸಿ ಅಧಿವೇಶನಕ್ಕೆ ಗೈರುಹಾಜರಾಗಲು ಅವರು ಎಐಸಿಸಿ ಅಧ್ಯಕ್ಷರಿಂದ ಅನುಮತಿ ಪಡೆದಿದ್ದರು' ಎಂದು ಕೆ.ಸಿ.ವೇಣುಗೋಪಾಲ್ ತಿಳಿಸಿದರು. ವಕ್ಫ್ (ತಿದ್ದುಪಡಿ) ಮಸೂದೆ 2025 ರ ಚರ್ಚೆ ಮತ್ತು ಮತದಾನದ ಸಮಯದಲ್ಲಿ ಪ್ರಿಯಾಂಕಾ ಅವರು ಲೋಕಸಭೆಯಲ್ಲಿ ಗೈರುಹಾಜರಾಗಿರುವುದು ವಿವಾದಕ್ಕೆ ಕಾರಣವಾಗಿತ್ತು.

ಗಾಂಧಿ, ಪಟೇಲ್ ಪರಂಪರೆ ಕದಿಯುತ್ತಿರುವ ಬಿಜೆಪಿ: ಖರ್ಗೆ

ಸ್ವಾತಂತ್ರ್ಯ ಹೋರಾಟಗಾರರು ಹಾಗೂ ರಾಷ್ಟ್ರೀಯ ವೀರರ ವಿರುದ್ಧ ಬಿಜೆಪಿ ಹಾಗೂ ಆರ್‌ಎಸ್‌ಎಸ್ ಯೋಜಿತ ಪಿತೂರಿ ನಡೆಸುತ್ತಿವೆ ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಆರೋಪಿಸಿದರು.

ಅಹಮದಾಬಾದ್‌ನಲ್ಲಿ ಮಂಗಳವಾರ ನಡೆದ ಕಾಂಗ್ರೆಸ್ ಪಕ್ಷದ ವಿಸ್ತೃತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಉದ್ಘಾಟನಾ ಮಾತುಗಳನ್ನಾಡಿದ ಅವರು, 'ಸರ್ದಾರ್ ವಲ್ಲಭಭಾಯಿ ಪಟೇಲ್ ಅವರ ಸಿದ್ಧಾಂತವು ಆರ್‌ಎಸ್‌ಎಸ್‌ನ ವಿಚಾರಗಳಿಗೆ ವಿರುದ್ಧವಾಗಿದೆ. ಅವರು ಆರ್‌ಎಸ್‌ಎಸ್‌ಗೆ ನಿಷೇಧ ಹೇರಿದ್ದರು. ಸ್ವಾತಂತ್ರ್ಯ ಹೋರಾಟಕ್ಕೆ ಯಾವುದೇ ಕೊಡುಗೆ ನೀಡಿರದ ಆ ಸಂಘಟನೆಯು ಸರ್ದಾರ್ ಅವರ ಪರಂಪರೆಯನ್ನು ಬಿಂಬಿಸಿಕೊಳ್ಳುತ್ತಿರುವುದು ನಗೆಪಾಟಲಿಗೆ ಕಾರಣವಾಗಿದೆ' ಎಂದರು.

ಮಹಾತ್ಮ ಗಾಂಧಿ ಮತ್ತು ಸರ್ದಾರ್ ಪಟೇಲ್ ಅವರ ಪರಂಪರೆಯನ್ನು ಬಿಜೆಪಿ ಹಾಗೂ ಆರ್‌ಎಸ್‌ಎಸ್ ಕದಿಯುತ್ತಿವೆ ಎಂದು ಅವರು ಆರೋಪಿಸಿದರು. ಅವರ ಸಾಮಾಜಿಕ ನ್ಯಾಯದ ಸಿದ್ಧಾಂತವನ್ನು ಮುಂದಕ್ಕೆ ಕೊಂಡೊಯ್ಯಲು ಸಂಘಟನೆಯನ್ನು ಬಲಪಡಿಸುವಂತೆ ಕರೆ ನೀಡಿದರು. ಪಟೇಲ್ ಅವರನ್ನು ಉಲ್ಲೇಖಿಸಿದ ಅವರು, ಸಂಘಟನೆಯಿಲ್ಲದೆ ಸಂಖ್ಯಾಬಲವು ಅರ್ಥಹೀನ ಎಂದು ಹೇಳಿದರು. ಗಾಂಧೀಜಿಯವರ ಸೈದ್ಧಾಂತಿಕ ಪರಂಪರೆಯೇ ಕಾಂಗ್ರೆಸ್ ಹೊಂದಿರುವ ನಿಜವಾದ ಬಂಡವಾಳ ಎಂದು ಅಭಿಪ್ರಾಯಪಟ್ಟರು.

'ಕೋಮು ವಿಭಜನೆಯಲ್ಲಿ ತೊಡಗುವ ಮೂಲಕ ಇಂದು ದೇಶದ ಮೂಲಭೂತ ಸಮಸ್ಯೆಗಳಿಂದ ಗಮನವನ್ನು ಬೇರೆಡೆಗೆ ಸೆಳೆಯಲಾಗುತ್ತಿದೆ' ಎಂದು ಅವರು ದೂರಿದರು.

ಮೋದಿ ಸರ್ಕಾರವು ಗಾಂಧೀಜಿ ಮತ್ತು ಬಾಬಾ ಸಾಹೇಬರ ಭವ್ಯ ಪ್ರತಿಮೆಗಳನ್ನು ಸಂಸತ್ತಿನ ಆವರಣದಿಂದ ತೆಗೆದು ಮೂಲೆಯಲ್ಲಿ ಇರಿಸುವ ಮೂಲಕ ಅವಮಾನಿಸಿದೆ ಎಂದು ಅವರು ಆರೋಪಿಸಿದರು.

'ಸರ್ವಾಧಿಕಾರದ ವಿರುದ್ಧ ಹೋರಾಟ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ನಮ್ಮ ಹೋರಾಟ ಒಂದು ಪಕ್ಷದ ವಿರುದ್ಧ ಮಾತ್ರವಲ್ಲ. ಸರ್ವಾಧಿಕಾರದ ಹೆಸರಲ್ಲಿ ದೇಶವನ್ನು ವಿಭಜಿಸುವ, ವಿನಾಶಕ್ಕೆ ಕೊಂಡೊಯ್ಯುವ ಮನಃಸ್ಥಿತಿಯ ವಿರುದ್ಧ ಎಂಬುದನ್ನು ಮನಗಾಣಬೇಕಿದೆ' ಎಂದು ಸಿದ್ದರಾಮಯ್ಯ ಪ್ರತಿಪಾದಿಸಿದರು.

ಕಾಂಗ್ರೆಸ್‌ನ ವಿಸ್ತೃತ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಭೆಯಲ್ಲಿ ಮಾತನಾಡಿದ ಅವರು, 'ನಮ್ಮ ಗಣರಾಜ್ಯ ಹಲವು ಅಪಾಯಗಳನ್ನು ಎದುರಿಸುತ್ತಿರುವ ಈ ಸಂದರ್ಭದಲ್ಲಿ ಈ ಸಭೆಯು ಆಧುನಿಕ ಭಾರತ ನಿರ್ಮಾಣದ ಮೂಲತತ್ವಗಳಾದ ನ್ಯಾಯ, ಸಮಾನತೆ, ಸ್ವಾತಂತ್ರ್ಯ ಮತ್ತು ಭ್ರಾತೃತ್ವ ಮೌಲ್ಯಗಳಿಗೆ ಪುನಃ ಜೀವ ತುಂಬಲಿದೆ' ಎಂದರು.

'ರಾಜ್ಯಗಳು ಹೇಗೆ ವ್ಯಯಿಸಬೇಕು, ನಾಗರಿಕರು ಏನು ನುಡಿಯಬೇಕು ಮತ್ತು ಯಾರು ಒಳಪಡಲಿದ್ದಾರೆ ಎಂಬುದನ್ನು ನಿಯಂತ್ರಿಸಲಿಚ್ಛಿಸುವ ಬಿಜೆಪಿಯು ಆರ್ಥಿಕ, ಸಾಂಸ್ಕೃತಿಕ ಮತ್ತು ರಾಜಕೀಯ ಪ್ರಾಬಲ್ಯದ ಅಪಾಯಕಾರಿ ತ್ರಿಕೋನವನ್ನು ಹೇರುತ್ತಿದೆ. ಇದು ಒಕ್ಕೂಟ ವ್ಯವಸ್ಥೆಯಲ್ಲ, ಬಲವಂತದ ಏಕರೂಪತೆ' ಎಂದರು.

'ಜಿಲ್ಲಾ ಘಟಕಗಳಿಗೆ ಹೆಚ್ಚಿನ ಅಧಿಕಾರ'

ಪಕ್ಷದ ಜಿಲ್ಲಾ ಘಟಕಗಳಿಗೆ ಹೆಚ್ಚಿನ ಅಧಿಕಾರ ನೀಡಿ ಹೊಣೆಗಾರಿಕೆ ನಿಗದಿಪಡಿಸಲು ಪಕ್ಷ ಉದ್ದೇಶಿಸಿದೆ ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಚಿನ್ ಪೈಲಟ್ ತಿಳಿಸಿದರು.

ಸಭೆಯ ಬಳಿಕ ಸುದ್ದಿಗಾರರ ಜತೆಗೆ ಮಾತನಾಡಿದ ಅವರು, ಕಾಂಗ್ರೆಸ್ ಪಕ್ಷವು ಮುಂಬರುವ ಚುನಾವಣೆಗಳನ್ನು ಹೆಚ್ಚಿನ ಬಲದಿಂದ ಹಾಗೂ ಸಂಘಟಿತವಾಗಿ ಎದುರಿಸಲಿದೆ ಎಂದು ಪ್ರತಿಪಾದಿಸಿದರು. ಬಿಜೆಪಿ ಹಾಗೂ ಎನ್‌ಡಿಎಗೆ ಕಠಿಣ ಸವಾಲು ನೀಡಲು ಕಾಂಗ್ರೆಸ್ ಹಾಗೂ ಬೆಂಬಲಿತ ಸಿದ್ಧಾಂತಗಳು ಜತೆಗೂಡಿ ಕೆಲಸ ಮಾಡಲಿವೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

'ಕೈ' ನಾಯಕ ಭೇಟಿ: ಮಂದಿರ 'ಶುದ್ಧೀಕರಣ'

ಅಹಮದಾಬಾದ್ (ಪಿಟಿಐ): ರಾಜಸ್ಥಾನದ ಆಳ್ವಾರ್‌ನಲ್ಲಿನ ರಾಮ ಮಂದಿರದಲ್ಲಿ ನಡೆದ ಕಾರ್ಯಕ್ರಮದಲ್ಲಿ ಕಾಂಗ್ರೆಸ್‌ನ ದಲಿತ ಶಾಸಕ ಟಿಕಾರಾಂ ಜುಲ್ಲಿ ಭಾಗವಹಿಸಿದ ಬೆನ್ನಲ್ಲೇ, ಬಿಜೆಪಿ ಮುಖಂಡ ಗ್ಯಾನ್ ದೇವ್ ಅಹುಜಾ ಅವರು 'ಗಂಗಾ ಜಲ' ಸಿಂಪಡಿಸಿ ಮಂದಿರವನ್ನು ಶುದ್ಧೀಕರಿಸಿದ್ದಾರೆ.

ಇದು 'ಬಿಜೆಪಿಯ ದಲಿತ ವಿರೋಧಿ ನಡೆ' ಎಂದು ಕಾಂಗ್ರೆಸ್ ಪಕ್ಷ ಟೀಕಿಸಿದೆ.

'ಪಕ್ಷದ ಮುಖಂಡನ ಈ ರೀತಿಯ ನಡೆಗಾಗಿ ಬಿಜೆಪಿಯ ಉನ್ನತ ನಾಯಕರು ಕ್ಷಮೆಯಾಚಿಸಬೇಕು' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಜೈರಾಮ್ ರಮೇಶ್ ಮಂಗಳವಾರ ಆಗ್ರಹಿಸಿದರು.

ಬಿಜೆಪಿ ಮತ್ತು ಆರ್‌ಎಸ್‌ಎಸ್ ಸಿದ್ಧಾಂತದಲ್ಲಿಯೇ ದಲಿತವಿರೋಧಿ, ತಾರತಮ್ಯದ ಮನಃಸ್ಥಿತಿ ಬೇರೂರಿದೆ ಎಂದು ಅವರು 'ಎಕ್ಸ್' ಜಾಲತಾಣದ ಮೂಲಕ ಟೀಕಿಸಿದ್ದಾರೆ.

ಠಾಣೆ: ಬಾಲಕಿ ಮೇಲೆ ಅತ್ಯಾಚಾರ ಎಸಗಿ ಹತ್ಯೆ

ಠಾಣೆ (ಪಿಟಿಐ): 'ವ್ಯಕ್ತಿಯೊಬ್ಬ 10 ವರ್ಷದ ಬಾಲಕಿಯನ್ನು ಅಪಹರಿಸಿ, ಆಕೆ ಮೇಲೆ ಅತ್ಯಾಚಾರ ಎಸಗಿದ್ದಾನೆ. ನಂತರ ಕತ್ತು ಸೀಳಿ ಆಕೆಯ ಹತ್ಯೆ ಮಾಡಿ, ಮೃತದೇಹವನ್ನು 6ನೇ ಮಹಡಿಯ ಫ್ಲ್ಯಾಟ್‌ನ ಶೌಚಾಲಯದ ಕಿಟಕಿಯಿಂದ ಎಸೆದಿದ್ದಾನೆ ಎನ್ನಲಾಗಿದೆ' ಎಂದು ಪೊಲೀಸರು ಮಂಗಳವಾರ ತಿಳಿಸಿದ್ದಾರೆ.

'ಆರೋಪಿಯಾದ, ಮುಂಬ್ರಾ ಪ್ರದೇಶದ ಠಾಕೂರ್‌ಪಾಡಾ ನಿವಾಸಿ ಆಸಿಫ್ ಅಕ್ಬರ್ ಮನ್ಸೂರಿಯನ್ನು(20) ಬಂಧಿಸಲಾಗಿದೆ. ಈ ಘಟನೆ, ಮುಂಬ್ರಾ ಪ್ರದೇಶದ ಸಾಮ್ರಾಟ್ ನಗರದಲ್ಲಿ-ರುವ 10 ಮಹಡಿಗಳ ಕಟ್ಟಡದಲ್ಲಿ ಸೋಮವಾರ ರಾತ್ರಿ ನಡೆದಿದೆ' ಎಂದು ತಿಳಿಸಿದ್ದಾರೆ.

ಬಾಲಕಿ ಮೇಲೆ ಅತ್ಯಾಚಾರ ಎಸಗಿದ ನಂತರ ಆಯುಧವೊಂದರಿಂದ ಕತ್ತು ಸೀಳಲಾಗಿದೆ ಎಂಬುದು ಮರಣೋತ್ತರ ಪರೀಕ್ಷೆಯಿಂದ ತಿಳಿದು ಬಂದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಮೇಧಾಗೆ 1 ವರ್ಷ 'ಪ್ರೊಬೇಷನ್'



ನವದೆಹಲಿ (ಪಿಟಿಐ): ನರ್ಮದಾ ಬಚಾವೋ ಆಂದೋಲನದ ನಾಯಕಿ, ಸಾಮಾಜಿಕ ಕಾರ್ಯಕರ್ತೆ ಮೇಧಾ ಪಾಟ್ಕರ್ ಅವರಿಗೆ ಕ್ರಿಮಿನಲ್ ಮಾನನಷ್ಟ ಪ್ರಕರಣದಲ್ಲಿ ದೆಹಲಿಯ ನ್ಯಾಯಾಲಯವು ಒಂದು ವರ್ಷ ಪ್ರೊಬೇಷನ್ ಅವಧಿ ವಿಧಿಸಿದೆ.

2000ನೇ ಇಸವಿಯಲ್ಲಿ ದಾಖಲಾಗಿದ್ದ ಮಾನಹಾನಿ ಪ್ರಕರಣದಲ್ಲಿ ಮೇಧಾ ಅವರು ಅಪರಾಧಿ ಎಂದು ತೀರ್ಪು ನೀಡಿದ್ದ ನ್ಯಾಯಾಲಯ ಐದು ತಿಂಗಳ ಜೈಲು ಶಿಕ್ಷೆ ವಿಧಿಸಿತ್ತು.

ಇದನ್ನು ಪ್ರಶ್ನಿಸಿ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ಹೆಚ್ಚುವರಿ ಸೆಷನ್ಸ್ ನ್ಯಾಯಾಧೀಶ ವಿಶಾಲ್ ಸಿಂಗ್, ಪಾಟ್ಕರ್ ಅವರ ವಯಸ್ಸು, ಅಪರಾಧದ ತೀವ್ರತೆ ಮತ್ತು ಅವರು ಈ ಹಿಂದೆ ಯಾವುದೇ ಪ್ರಕರಣದಲ್ಲಿ ಶಿಕ್ಷೆಗೆ ಒಳಗಾಗದೇ ಇರುವುದನ್ನು ಪರಿಗಣಿಸಿ ಪ್ರೊಬೇಷನ್ ಅವಧಿ ವಿಧಿಸಿರುವುದಾಗಿ ತಿಳಿಸಿದರು.

ನ್ಯಾಯಾಧೀಶರು 70 ವರ್ಷದ ಪಾಟ್ಕರ್ ಅವರಿಗೆ ವಿಧಿಸಲಾಗಿದ್ದ ದಂಡದ ಮೊತ್ತವನ್ನು ₹10 ಲಕ್ಷದಿಂದ ₹1 ಲಕ್ಷಕ್ಕೆ ಇಳಿಸಿದರು.

ಪ್ರೊಬೇಷನ್ ಅವಧಿಯಲ್ಲಿ ಅಪರಾಧಿಗಳನ್ನು ಜೈಲಿನಲ್ಲಿ ಇರಿಸದೆ, ಅವರ ದೈನಂದಿನ ಚಟುವಟಿಕೆಯ ಮೇಲೆ ನಿಗಾ ಇಡಲಾಗುತ್ತದೆ. ಮೇಧಾ ಅವರು ಒಂದು ವರ್ಷ ನಿಯುಕ್ತ ಅಧಿಕಾರಿಯ ನಿರೀಕ್ಷಣೆಯಲ್ಲಿರುವರು. ಈ ಅವಧಿಯಲ್ಲಿ ಅವರ ನಡವಳಿಕೆ ಬಗ್ಗೆ ನ್ಯಾಯಾಲಯಕ್ಕೆ ಸಲ್ಲಿಕೆಯಾಗುವ ವರದಿ ಆಧರಿಸಿ ಮುಂದಿನ ಕ್ರಮ ಜರುಗಿಸಲಾಗುತ್ತದೆ.

ಪ್ರಕರಣ ಏನು?: ಪಾಟ್ಕರ್ ತಮ್ಮ ವಿರುದ್ಧ ಹೊರಡಿಸಿದ ಪತ್ರಿಕಾ ಹೇಳಿಕೆಯೊಂದು ಮಾನಹಾನಿಕರವಾಗಿದೆ ಎಂದು ದೂರಿ ದೆಹಲಿ ಲೆಫ್ಟಿನೆಂಟ್ ಗವರ್ನರ್ ವಿ.ಕೆ. ಸಕ್ಸೇನಾ ಅವರು ಮಾನಹಾನಿ ಪ್ರಕರಣ ದಾಖಲಿಸಿದ್ದರು. ಆಗ ಸಕ್ಸೇನಾ ಅವರು ನ್ಯಾಷನಲ್ ಕೌನ್ಸಿಲ್ ಆಫ್ ಸಿವಿಲ್ ಲಿಬರ್ಟೀಸ್‌ನ ಅಧ್ಯಕ್ಷರಾಗಿದ್ದರು.

ವಕ್ಫ್ ಕಾಯ್ದೆ ಜಾರಿ

ನವದೆಹಲಿ(ಪಿಟಿಐ): ಕಳೆದ ವಾರ ಸಂಸತ್‌ನಲ್ಲಿ ಅಂಗೀಕಾರಗೊಂಡಿದ್ದ ವಕ್ಫ್ (ತಿದ್ದುಪಡಿ) ಕಾಯ್ದೆಯು ಮಂಗಳವಾರ ಜಾರಿಗೆ ಬಂದಿದೆ ಎಂದು ಕೇಂದ್ರ ಸರ್ಕಾರ ಹೇಳಿದೆ.

ಈ ಕುರಿತು ಅಲ್ಪಸಂಖ್ಯಾತರ ವ್ಯವಹಾರಗಳ ಸಚಿವಾಲಯ ಅಧಿಸೂಚನೆ ಹೊರಡಿಸಿದೆ.

ಲೋಕಸಭೆಯಲ್ಲಿ ಏಪ್ರಿಲ್ 3ರಂದು ಹಾಗೂ ರಾಜ್ಯಸಭೆಯಲ್ಲಿ ಏಪ್ರಿಲ್ 4ರಂದು ಈ ತಿದ್ದುಪಡಿ ಮಸೂದೆ ಅಂಗೀಕಾರಗೊಂಡಿತ್ತು. ಏಪ್ರಿಲ್ 5ರಂದು ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಈ ಮಸೂದೆಗೆ ಅಂಕಿತ ಹಾಕಿದ್ದಾರೆ.

ವಕ್ಫ್ ಕಾಯ್ದೆ: 15ರಂದು 'ಸುಪ್ರೀಂ' ವಿಚಾರಣೆ?

ನವದೆಹಲಿ(ಪಿಟಿಐ): ವಕ್ಫ್ (ತಿದ್ದುಪಡಿ) ಕಾಯ್ದೆ–2025ರ ಸಾಂವಿಧಾನಿಕ ಸಿಂಧುತ್ವ ಪ್ರಶ್ನಿಸಿದ ಅರ್ಜಿಗಳ ವಿಚಾರಣೆಯನ್ನು ಸುಪ್ರೀಂ ಕೋರ್ಟ್ ಏಪ್ರಿಲ್ 15ರಂದು ನಡೆಸುವ ಸಾಧ್ಯತೆ ಇದೆ.

ಇನ್ನೊಂದೆಡೆ, ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ನಲ್ಲಿ ಮಂಗಳವಾರ ಕೇವಿಯಟ್ ಅರ್ಜಿ ಸಲ್ಲಿಸಿದ್ದು, ಈ ವಿಚಾರವಾಗಿ ಯಾವುದೇ ಆದೇಶ ಹೊರಡಿಸುವುದಕ್ಕೆ ಮುನ್ನ ತನ್ನ ವಾದ ಆಲಿಸುವಂತೆ ಕೋರಿದೆ.

'ವಕ್ಫ್ ತಿದ್ದುಪಡಿ ಕಾಯ್ದೆ ಪ್ರಶ್ನಿಸಿ ಸಲ್ಲಿಸಿರುವ ಅರ್ಜಿಗಳ ವಿಚಾರಣೆಯನ್ನು ಯಾವ ದಿನಾಂಕದಂದು ನಡೆಸಲಾಗುತ್ತದೆ ಎಂಬ ಬಗ್ಗೆ ಸುಪ್ರೀಂ ಕೋರ್ಟ್ ವೆಬ್‌ಸೈಟ್‌ನಲ್ಲಿ ಮಾಹಿತಿ ಇಲ್ಲ. ಏಪ್ರಿಲ್ 15ರ ವಿಚಾರಣೆ ಪಟ್ಟಿಗೆ ಈ ಕುರಿತ ಅರ್ಜಿಗಳನ್ನು ಸೇರಿಸುವ ಸಾಧ್ಯತೆ ಇದೆ' ಎಂದು ಕೆಲ ಅರ್ಜಿದಾರರ ಪರ ವಕೀಲರು ಪ್ರತಿಕ್ರಿಯಿಸಿದ್ದಾರೆ.

ಸಿಜೆಐ ಸಂಜೀವ್ ಖನ್ನಾ ನೇತೃತ್ವದ ಪೀಠವು ವಕ್ಫ್ ತಿದ್ದುಪಡಿ ಕಾಯ್ದೆ ಪ್ರಶ್ನಿಸಿ ಸಲ್ಲಿಸಿರುವ ಮೇಲ್ಮನವಿಗಳನ್ನು ವಿಚಾರಣೆ ಪಟ್ಟಿಗೆ ಸೇರಿಸಲು ಪರಿಗಣಿಸಲಾಗುವುದು ಎಂದು ಸೋಮವಾರ ಭರವಸೆ ನೀಡಿತ್ತು.

ಕೋರ್ಟ್ 'ನೈತಿಕ ಪೊಲೀಸ್‌ಗಿರಿ' ಮಾಡುವಂತಿಲ್ಲ


ಪಂಜಾಬ್ – ಹರಿಯಾಣ ಹೈಕೋರ್ಟ್ ಆದೇಶ ವಜಾಗೊಳಿಸಿದ 'ಸುಪ್ರೀಂ'

ನವದೆಹಲಿ (ಪಿಟಿಐ): 'ಕೋರ್ಟ್‌ಗಳು 'ನೈತಿಕ ಪೊಲೀಸ್‌ಗಿರಿ' ಮಾಡುವಂತಿಲ್ಲ' ಎಂದು ಸ್ಪಷ್ಟವಾಗಿ ಹೇಳಿರುವ ಸುಪ್ರೀಂ ಕೋರ್ಟ್, ಇದಕ್ಕೆ ಸಂಬಂಧಿಸಿದಂತೆ ಪಂಜಾಬ್ ಮತ್ತು ಹರಿಯಾಣ ಹೈಕೋರ್ಟ್‌ನ ಆದೇಶವೊಂದನ್ನು ಮಂಗಳವಾರ ವಜಾ ಮಾಡಿತು.

ಜೈನ ಸಂನ್ಯಾಸಿ ತರುಣ್ ಸಾಗರ್ ಅವರನ್ನು ಅಣಕ ಮಾಡಿದ್ದರು ಎಂಬ ಆರೋಪಕ್ಕೆ ಸಂಬಂಧಿಸಿ, ರಾಜಕೀಯ ವಿಶ್ಲೇಷಕ ತಹ್‌ಸೀನ್ ಪೂನಾವಾಲಾ ಅವರಿಗೆ ಹೈಕೋರ್ಟ್ ₹10 ಲಕ್ಷ ದಂಡ ವಿಧಿಸಿತ್ತು. ಇದನ್ನು ಭರಿಸುವಂತೆ ಪೂನಾವಾಲಾ ಮತ್ತು ಸಂಗೀತ ಸಂಯೋಜಕ, ಗಾಯಕ ವಿಶಾಲ್ ದದ್ಲಾನಿ ಅವರಿಗೆ ಹೈಕೋರ್ಟ್ ಸೂಚಿಸಿತ್ತು.

'ತಮ್ಮ ವಿರುದ್ಧ ದಾಖಲಾದ ಎಫ್‌ಐಆರ್ ರದ್ದತಿಗೆ ತಲಾ ₹10 ಲಕ್ಷ ದಂಡ ಪಾವತಿಸಬೇಕು' ಎಂದು ಹೈಕೋರ್ಟ್ ಇಬ್ಬರಿಗೂ ಆದೇಶಿಸಿತ್ತು. ಪೂನಾವಾಲಾ ಅವರು ಈ ಆದೇಶವನ್ನು ಸುಪ್ರೀಂ ಕೋರ್ಟ್‌ನಲ್ಲಿ ಪ್ರಶ್ನಿಸಿದ್ದರು. ನ್ಯಾಯಮೂರ್ತಿಗಳಾದ ಅಭಯ್ ಎಸ್ ಓಕಾ, ಉಜ್ಜಲ್ ಭುಯಾನ್ ಅವರಿದ್ದ ಪೀಠವು, 'ಇದೆಂತಹ ಆದೇಶ? ಅರ್ಜಿದಾರರನ್ನು ಖುಲಾಸೆಗೊಳಿಸಿ ದಂಡ ವಿಧಿ ಸಲಾಗಿದೆ. ಕೋರ್ಟ್ ನೈತಿಕ ಪೊಲೀಸ್‌ಗಿರಿ ಮಾಡುವಂತಿಲ್ಲ' ಎಂದು ಹೇಳಿತು..

ಬಾಂಬ್ ಸ್ಫೋಟ ಪ್ರಕರಣ : ಮರಣದಂಡನೆ ಶಿಕ್ಷೆ ಕಾಯಂ



ಹೈದರಾಬಾದ್: 2013ರಲ್ಲಿ ನಡೆದಿದ್ದ ಹೈದರಾಬಾದ್ ಬಾಂಬ್ ಸ್ಫೋಟ ಪ್ರಕರಣದ ಐವರು ಅಪರಾಧಿಗಳಿಗೆ ಮರಣದಂಡನೆ ವಿಧಿಸಿದ್ದ ವಿಚಾರಣಾ ನ್ಯಾಯಾಲಯದ ತೀರ್ಪನ್ನು ತೆಲಂಗಾಣ ಹೈಕೋರ್ಟ್ ಎತ್ತಿ ಹಿಡಿದಿದೆ.

ಎನ್‌ಐಎ (ವಿಚಾರಣಾ) ನ್ಯಾಯಾಲಯದ ತೀರ್ಪನ್ನು ಪ್ರಶ್ನಿಸಿ ನಿಷೇಧಿತ ಉಗ್ರ ಸಂಘಟನೆ ಇಂಡಿಯನ್ ಮುಜಾಹಿದ್ದೀನ್‌ನ ಸದಸ್ಯರು ಹೈಕೋರ್ಟ್ ಮೆಟ್ಟಿಲೇರಿ-ದ್ದರು. ನ್ಯಾಯಮೂರ್ತಿ ಕೆ.ಲಕ್ಷ್ಮಣ್, ನ್ಯಾಯಮೂರ್ತಿ ಪಿ.ಶ್ರೀ ಸುಧಾ ಅವರನ್ನು ಒಳಗೊಂಡ ಪೀಠವು ಈ ಅರ್ಜಿಯನ್ನು ತಿರಸ್ಕರಿಸಿದೆ.

ಹೈಕೋರ್ಟ್ ಆದೇಶದ ವಿರುದ್ಧ ಸುಪ್ರೀಂಕೋರ್ಟ್ ಮೊರೆ ಹೋಗುವುದಾಗಿ ಅಪರಾಧಿಗಳ ಪರ ವಕೀಲರು ತಿಳಿಸಿದ್ದಾರೆ. 2013ರ ಫೆ.21ರಂದು ಹೈದರಾಬಾದ್‌ನ ದಿಲ್‌ಸುಖ್‌ನಗರದಲ್ಲಿ ಎರಡು ಬಾಂಬ್ ಸ್ಫೋಟಿಸಲಾಗಿತ್ತು. ಘಟನೆಯಲ್ಲಿ 18 ಮಂದಿ ಮೃತಪಟ್ಟು, 131 ಮಂದಿ ಗಾಯಗೊಂಡಿದ್ದರು.

ಪ್ರಕರಣಕ್ಕೆ ಸಂಬಂಧಿಸಿದಂತೆ 5 ಮಂದಿಯನ್ನು ಬಂಧಿಸಿದ್ದ ಎನ್‌ಐಎ, ಅಪರಾಧಿಗಳ ವಿರುದ್ಧ 4000 ಪುಟಗಳ ಚಾರ್ಜ್‌ಶೀಟ್ ಸಲ್ಲಿಸಿತ್ತು. 2016ರ ಡಿ.13ರಂದು ಅಪರಾಧಿಗಳಿಗೆ ಮರಣದಂಡನೆ ಶಿಕ್ಷೆ ವಿಧಿಸಲಾಗಿತ್ತು.

ರಾಜ್ಯಪಾಲ ರವಿ: ಸದಾ ವಿವಾದದ ಕೇಂದ್ರ

ಪ್ರಜಾವಾಣಿ ವಾರ್ತೆ



ಚೆನ್ನೈ: ಆರ್.ಎನ್. ರವಿ ಅವರು 2021ರ ಸೆಪ್ಟೆಂಬರ್‌ನಲ್ಲಿ ತಮಿಳುನಾಡಿನ ರಾಜ್ಯಪಾಲರಾಗಿ ಅಧಿಕಾರ ವಹಿಸಿಕೊಂಡಾಗಿನಿಂದಲೂ ಅಲ್ಲಿನ ಸರ್ಕಾರದ ಜೊತೆ ಒಳ್ಳೆಯ ಸಂಬಂಧ ಹೊಂದಿಲ್ಲ.

ಮಸೂದೆಗಳನ್ನು ವಾಪಸ್ ಕಳುಹಿಸುವುದು, ಮಸೂದೆಗಳಿಗೆ ಅಂಕಿತ ಹಾಕದೆ ಹಾಗೆಯೇ ಇರಿಸಿಕೊಳ್ಳುವುದು, ಮುಖ್ಯಮಂತ್ರಿಯ ಒಪ್ಪಿಗೆ ಇಲ್ಲದೆಯೇ ಸಚಿವರೊಬ್ಬರನ್ನು ಸಂಪುಟದಿಂದ ವಜಾಗೊಳಿಸುವುದು, ಸಚಿವರೊಬ್ಬರಿಗೆ ಪ್ರಮಾಣವಚನ ಬೋಧಿಸಲು ನಿರಾಕರಿಸುವುದು, ತಮಿಳುನಾಡು ರಾಜ್ಯಕ್ಕೆ ಆ ಹೆಸರಿಗಿಂತಲೂ 'ತಮಿಳಗಂ' ಎಂಬ ಹೆಸರೇ ಸೂಕ್ತ ಎನ್ನುವುದು... ಇಂತಹ ಹಲವು ವಿವಾದಾತ್ಮಕ ನಡೆಗಳನ್ನು ರವಿ ಅವರು ಇರಿಸಿದ್ದಾರೆ.

ತಮಿಳುನಾಡಿನ ದ್ರಾವಿಡ ಚಳವಳಿಯನ್ನು ಅವರು ಹಲವು ಸಂದರ್ಭಗಳಲ್ಲಿ ಟೀಕಿಸಿದ್ದಾರೆ. ಈ ಚಳವಳಿಯು ಪ್ರತ್ಯೇಕತಾವಾದವನ್ನು ಪ್ರತಿಪಾದಿಸುತ್ತದೆ ಎಂಬ ಧಾಟಿಯಲ್ಲಿ ಅವರು ಮಾತನಾಡಿದ್ದಿದೆ.

ತಮಿಳುನಾಡಿನ ರಾಜ್ಯಪಾಲರಾಗಿ-ದ್ದವರ ಪೈಕಿ ಎರಡು ಮಸೂದೆಗಳನ್ನು ವಿಧಾನಸಭೆಗೆ ಮರಳಿಸಿ, ಹತ್ತು ಮಸೂದೆಗಳಿಗೆ ಅಂಕಿತ ಹಾಕುವುದನ್ನು ತಡೆಹಿಡಿದವರು ರವಿ ಮಾತ್ರ. ಅವರ ಈ ನಡೆಯ ಕಾರಣದಿಂದಾಗಿಯೇ ಸರ್ಕಾರವು 2022 ಮತ್ತು 2023ರಲ್ಲಿ ಮೂರು ಬಾರಿ ಅಧಿವೇಶನ ಕರೆದು, 12 ಮಸೂದೆಗಳಿಗೆ ಯಾವ ಬದಲಾವಣೆಯೂ ಇಲ್ಲದೆ ಮರು ಅಂಗೀಕಾರ ಪಡೆದುಕೊಂಡಿತ್ತು.

12 ಮಸೂದೆಗಳನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸುವ ಮೂಲಕ ರವಿ ಅವರು ರಾಜ್ಯ ಸರ್ಕಾರದ ಜೊತೆಗಿನ ಸಂಘರ್ಷವನ್ನು ತೀವ್ರಗೊಳಿಸಿದ್ದರು. ಅಲ್ಲದೆ, ಮೂರು ಬಾರಿ ಅವರು ನಿಗದಿತ ಸಮಯಕ್ಕೂ ಮೊದಲೇ ವಿಧಾನಸಭೆಯಿಂದ ಹೊರನಡೆದಿದ್ದರು.

ವಿ. ಸೆಂಥಿಲ್ ಬಾಲಾಜಿ ಅವರನ್ನು ರಾಜ್ಯದ ಸಂಪುಟದಿಂದ ವಜಾಗೊಳಿಸಿದ ಅವರ ಕ್ರಮಕ್ಕೆ ಸರ್ಕಾರವು ತೀವ್ರ ಆಕ್ಷೇಪ ದಾಖಲಿಸಿತ್ತು. ಅಲ್ಲದೆ, ಭ್ರಷ್ಟಾಚಾರ ಪ್ರಕರಣವೊಂದರಲ್ಲಿ ಕೆ. ಪೊನ್ಮುಡಿ ಅವರು ದೋಷಿ ಎಂದು ಘೋಷಿಸಿದ್ದಕ್ಕೆ ಸುಪ್ರೀಂ ಕೋರ್ಟ್ ತಡೆ ನೀಡಿದ ನಂತರವೂ, ಅವರಿಗೆ ಸಚಿವರಾಗಿ ಪ್ರಮಾಣವಚನ ಬೋಧಿಸಲು ರವಿ ನಿರಾಕರಿಸಿದ್ದರು.

ರಾಜ್ಯಪಾಲರಿಗೆ ಕಾಲಮಿತಿ

ಒಂದನೇ ಪುಟದಿಂದ...

'10 ಮಸೂದೆಗಳು ರಾಜ್ಯಪಾಲರಿಗೆ ಸಲ್ಲಿಕೆಯಾದ ದಿನದಿಂದಲೇ ಅವರ ಅಂಕಿತ ಪಡೆದಿವೆ ಎಂದು ಭಾವಿಸತಕ್ಕದ್ದು' ಎಂದು ಪೀಠವು ಸಾರಿದೆ.

ಸಂವಿಧಾನದ 142ನೆಯ ವಿಧಿಯ ಅಡಿಯಲ್ಲಿ ತನಗೆ ಇರುವ ಅಸಾಮಾನ್ಯ ಅಧಿಕಾರವನ್ನು ಬಳಸಿಕೊಂಡಿರುವ ಸುಪ್ರೀಂ ಕೋರ್ಟ್, ತಮಿಳುನಾಡಿನ ರಾಜ್ಯಪಾಲರಿಗೆ ಮರುಸಲ್ಲಿಕೆಯಾಗಿದ್ದ ಮಸೂದೆಗಳು ಅಂಕಿತ ಪಡೆದಿವೆ ಎಂದು ಭಾವಿಸಬೇಕು ಎಂದು ಸಾರಿದೆ.

ವಿಧಾನ ಮಂಡಲದ ತೀರ್ಮಾನಕ್ಕೆ ಅಡ್ಡಿ ಸೃಷ್ಟಿಸಬಾರದು, ಜನರ ಇಚ್ಛೆಗೆ ಅಡ್ಡಿ ಉಂಟುಮಾಡಬಾರದು ಎಂಬ ಪ್ರಜ್ಞೆ ರಾಜ್ಯಪಾಲರಿಗೆ ಇರಬೇಕು ಎಂದು ಪೀಠವು ಕಿವಿಮಾತು ಹೇಳಿದೆ.

'ಪ್ರಜಾತಾಂತ್ರಿಕ ಅಭಿವ್ಯಕ್ತಿಯ ಮೂಲಕ ಜನರಿಂದ ಆಯ್ಕೆಯಾಗಿರುವ ವಿಧಾನ ಮಂಡಲದ ಸದಸ್ಯರು ರಾಜ್ಯದ ಜನರ ಒಳಿತನ್ನು ಖಾತರಿಪಡಿಸುವ ವಿಚಾರವಾಗಿ ಹೆಚ್ಚು ಅರಿವು ಹೊಂದಿರುತ್ತಾರೆ' ಎಂದು ಅದು ಬಣ್ಣಿಸಿದೆ.

ಸಂವಿಧಾನದ 200ನೆಯ ವಿಧಿಯ ಅಡಿಯಲ್ಲಿ ರಾಜ್ಯಪಾಲರಿಗೆ ವಿವೇಚನಾ ಅಧಿಕಾರ ಇಲ್ಲ. ಅವರು ರಾಜ್ಯದ ಮಂತ್ರಿ ಪರಿಷತ್ತಿನ ಸಲಹೆ ಮತ್ತು ನೆರವಿಗೆ ಅನುಗುಣವಾಗಿ ಕರ್ತವ್ಯ ನಿರ್ವಹಿಸಬೇಕು ಎಂದು ಕೂಡ ಕೋರ್ಟ್ ಸ್ಪಷ್ಟಪಡಿಸಿದೆ.

ತಮಗೆ ಸಲ್ಲಿಸಲಾದ ಮಸೂದೆಗೆ ಅಂಕಿತ ಹಾಕುವ, ಅಂಕಿತವನ್ನು ತಡೆಹಿಡಿಯುವ ಅಥವಾ ಅದನ್ನು ರಾಷ್ಟ್ರಪತಿಯವರ ಪರಿಶೀಲನೆಗಾಗಿ ಇರಿಸಿಕೊಳ್ಳುವ ಅಧಿಕಾರವನ್ನು 200ನೆಯ ವಿಧಿಯು ರಾಜ್ಯಪಾಲರಿಗೆ ನೀಡುತ್ತದೆ.

ರಾಜ್ಯಪಾಲರು ಮಸೂದೆಗಳ ವಿಚಾರವಾಗಿ ತೀರ್ಮಾನವನ್ನೇ ತೆಗೆದುಕೊಳ್ಳದೆ, 'ಪ್ರಶ್ನಾತೀತವಾದ ಪರಮಾಧಿಕಾರ'ವನ್ನು ಹೊಂದಲು ಅವಕಾಶ ಇಲ್ಲ. ವಿಧಾನಸಭೆಯು ಅಂಗೀಕಾರ ನೀಡಿದ ಮಸೂದೆಯ ವಿಚಾರವಾಗಿ ರಾಜ್ಯಪಾಲರು ಯಾವುದೇ ಕ್ರಮ ಕೈಗೊಳ್ಳದೆ ಅದನ್ನು 'ಕಾಗದದ ತುಣುಕನ್ನಾಗಿ' ಮತ್ತು 'ಮಾಂಸವಿಲ್ಲದೆ ಅಸ್ಥಿಪಂಜರವನ್ನಾಗಿ' ಮಾಡಿದ್ದರು ಎಂದು ಪೀಠವು ಹೇಳಿದೆ.

ರಾಜ್ಯಪಾಲ ರವಿ ಅವರು ಕೆಲವು ಮಸೂದೆಗಳಿಗೆ ಅಂಕಿತ ಹಾಕುವುದನ್ನು ವಿಳಂಬ ಮಾಡಿದ ಕಾರಣದಿಂದಾಗಿ ತಮಿಳುನಾಡು ಸರ್ಕಾರವು 2023ರಲ್ಲಿ ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಿತ್ತು. 2020ರಲ್ಲಿ ರಾಜ್ಯಪಾಲರಿಗೆ ಕಳುಹಿಸಿದ ಒಂದು ಮಸೂದೆ ಸೇರಿದಂತೆ ಒಟ್ಟು 12 ಮಸೂದೆಗಳು ಅವರ ಬಳಿ ಬಾಕಿ ಇವೆ ಎಂದು ರಾಜ್ಯ ಸರ್ಕಾರವು ಉಲ್ಲೇಖಿಸಿತ್ತು.

ರಾಜ್ಯಪಾಲರಿಗೆ ಮಸೂದೆಗಳ ವಿಚಾರವಾಗಿ ಸುಪ್ರೀಂ ಕೋರ್ಟ್ ಈ ರೀತಿ ಮಾರ್ಗದರ್ಶನ ನೀಡಿರುವುದು ಇದೇ ಮೊದಲು.

ಕೋರ್ಟ್ ನಿಗದಿ ಮಾಡಿದ ಕಾಲಮಿತಿ

ಒಂದನೇ ಪುಟದಿಂದ...

- ಮಸೂದೆಗೆ ಅಂಕಿತ ಹಾಕುವುದನ್ನು ತಡೆಹಿಡಿದು, ಅದನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಕಳುಹಿಸುವುದಿದ್ದರೆ ಗರಿಷ್ಠ 1 ತಿಂಗಳಲ್ಲಿ ಮಾಡಬೇಕು.
- ರಾಜ್ಯಪಾಲರು ಮಸೂದೆಗೆ ಅಂಕಿತವನ್ನು ತಡೆಹಿಡಿದರೆ, ಮಸೂದೆಯನ್ನು ಮೂರು ತಿಂಗಳ ಒಳಗೆ ವಿಧಾನಸಭೆಗೆ ಮರಳಿಸಬೇಕು.
- ವಿಧಾನಸಭೆಯು ಮಸೂದೆಯನ್ನು ಪುನಃ ಪರಿಶೀಲಿಸಿ ರಾಜ್ಯಪಾಲರಿಗೆ ಸಲ್ಲಿಸಿದಾಗ, ಅವರು ಅದಕ್ಕೆ ಒಂದು ತಿಂಗಳಲ್ಲಿ ಅಂಕಿತ ಹಾಕಬೇಕು.
- ಕಾಲಮಿತಿಯಲ್ಲಿ ಕ್ರಮ ಕೈಗೊಳ್ಳಲು ರಾಜ್ಯಪಾಲರು ವಿಫಲರಾದಲ್ಲಿ ನ್ಯಾಯಾಂಗವು ಆ ವೈಫಲ್ಯವನ್ನು ಪರಿಶೀಲನೆಗೆ ಒಳಪಡಿಸಬಹುದು ಎಂದು ಸುಪ್ರೀಂ ಕೋರ್ಟ್ ಸ್ಪಷ್ಟಪಡಿಸಿದೆ.

200ನೆಯ ವಿಧಿ ಹೇಳುವುದೇನು?

ಒಂದನೇ ಪುಟದಿಂದ...

ಮಸೂದೆಯನ್ನು ಎರಡನೆಯ ಬಾರಿಗೆ ತಮ್ಮ ಮುಂದೆ ಇರಿಸಿದಾಗ, ಅದನ್ನು ರಾಷ್ಟ್ರಪತಿಯವರ ಪರಿಶೀಲನೆಗೆ ಇರಿಸಲು ಅವಕಾಶ ಇಲ್ಲ.

ಎರಡನೆಯ ಬಾರಿಗೆ ತಮ್ಮ ಮುಂದೆ ಮಸೂದೆಯು ಬಂದಾಗ ರಾಜ್ಯಪಾಲರು ಅದಕ್ಕೆ ಅಂಕಿತ ಹಾಕಬೇಕು. ಆದರೆ, ಎರಡನೆಯ ಬಾರಿ ಬಂದ ಮಸೂದೆಯು ಮೊದಲ ಬಾರಿಗೆ ಬಂದಿದ್ದ ಮಸೂದೆಗಿಂತ ಭಿನ್ನವಾಗಿದ್ದಾಗ ಈ ನಿಯಮಕ್ಕೆ ವಿನಾಯಿತಿ ಇರುತ್ತದೆ.

ಐತಿಹಾಸಿಕ ತೀರ್ಪು: ಸ್ಟಾಲಿನ್

ಚೆನ್ನೈ (ಪಿಟಿಐ): ರಾಜ್ಯಪಾಲರಿಗೆ ಕಾಲಮಿತಿ ವಿಧಿಸಿದ ಸುಪ್ರೀಂ ಕೋರ್ಟ್‌ನ ಕ್ರಮವು ಐತಿಹಾಸಿಕ ಎಂದು ತಮಿಳುನಾಡು ಮುಖ್ಯಮಂತ್ರಿ ಎಂ.ಕೆ. ಸ್ಟಾಲಿನ್ ಬಣ್ಣಿಸಿದ್ದಾರೆ. ಇದು ದೇಶದ ಎಲ್ಲ ರಾಜ್ಯ ಸರ್ಕಾರಗಳಿಗೆ ದೊರೆತಿರುವ ಜಯ ಎಂದು ಅವರು ಹೇಳಿದ್ದಾರೆ. 'ಇದು ಕೇಂದ್ರ ಮತ್ತು ರಾಜ್ಯಗಳ ನಡುವಿನ ಸಂಬಂಧದಲ್ಲಿ ಸಮತೋಲನವನ್ನು ಪುನರ್‌ಸ್ಥಾಪಿಸುವಲ್ಲಿ ಮಹತ್ವದ ಮತ್ತೊಂದು ಹೆಜ್ಜೆ' ಎಂದು ಕೂಡ ಸ್ಟಾಲಿನ್ ಸಂತಸ ಹಂಚಿಕೊಂಡಿದ್ದಾರೆ.

ತಡೆಹಿಡಿಯಲಾಗಿದ್ದ ಮಸೂದೆಗಳು

- ತಮಿಳುನಾಡು ಪಶುಸಂಗೋಪನೆ ಮತ್ತು ಪ್ರಾಣಿವಿಜ್ಞಾನ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ 2020
- ತಮಿಳುನಾಡು ಮೀನುಗಾರಿಕೆ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ 2020
- ತಮಿಳುನಾಡು ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ 2022
- ತಮಿಳುನಾಡು ಕೃಷಿ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ 2022
- ತಮಿಳುನಾಡು ಡಾ.ಅಂಬೇಡ್ಕರ್ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ 2022
- ತಮಿಳುನಾಡು ಡಾ. ಎಂಜಿಆರ್ ವೈದ್ಯಕೀಯ ವಿಶ್ವವಿದ್ಯಾಲಯ (ತಿದ್ದುಪಡಿ) ಮಸೂದೆ 2022
- ತಮಿಳು ವಿಶ್ವವಿದ್ಯಾಲಯಗಳ ಕಾಯ್ದೆ (2022)
- ತಮಿಳುನಾಡು ಪಶುಸಂಗೋಪನೆ ಮತ್ತು ಪ್ರಾಣಿವಿಜ್ಞಾನ ವಿಶ್ವವಿದ್ಯಾಲಯ (ಇನ್ನಷ್ಟು ತಿದ್ದುಪಡಿ) ಮಸೂದೆ 2023
- ತಮಿಳು ವಿಶ್ವವಿದ್ಯಾಲಯ ಕಾಯ್ದೆ 1982 (ಇನ್ನಷ್ಟು ತಿದ್ದುಪಡಿ)
- ತಮಿಳುನಾಡು ಮೀನುಗಾರಿಕೆ ವಿಶ್ವವಿದ್ಯಾಲಯ (ಇನ್ನಷ್ಟುತಿದ್ದುಪಡಿ) ಮಸೂದೆ 2023.

ತ್ರಿಕೋನ ಏಕದಿನ ಸರಣಿ: ತಂಡದಲ್ಲಿ ಮೂರು ಹೊಸಮುಖ

ನಾಯಕಿಯಾಗಿ ಮರಳಿದ ಹರ್ಮನ್

ನವದೆಹಲಿ (ಪಿಟಿಐ): ಬ್ಯಾಟಿಂಗ್ ತಾರೆ ಹರ್ಮನ್‌ಪ್ರೀತ್ ಕೌರ್ ಅವರು ಶ್ರೀಲಂಕಾದಲ್ಲಿ ಈ ತಿಂಗಳ ಅಂತ್ಯದಲ್ಲಿ ನಡೆಯಲಿರುವ ತ್ರಿಕೋನ ಏಕದಿನ ಸರಣಿಯಲ್ಲಿ ಭಾಗವಹಿಸುವ ಭಾರತ ಮಹಿಳಾ ತಂಡಕ್ಕೆ ನಾಯಕಿಯಾಗಿ ಮರಳಿದ್ದಾರೆ.

ಬಿಸಿಸಿಐ ಮಹಿಳಾ ಆಯ್ಕೆ ಸಮಿತಿಯು ಮಂಗಳವಾರ 15 ಆಟಗಾರ್ತಿಯರ ತಂಡವನ್ನು ಪ್ರಕಟಿಸಿದ್ದು, ಸ್ಮೃತಿ ಮಂದಾನ ಅವರನ್ನು ಉಪ ನಾಯಕಿಯನ್ನಾಗಿ ಹೆಸರಿಸಲಾಗಿದೆ. ಏಪ್ರಿಲ್ 27 ರಿಂದ ಮೇ 11ರವರೆಗೆ ನಡೆಯಲಿರುವ ಈ ಟೂರ್ನಿಯಲ್ಲಿ ಶ್ರೀಲಂಕಾ, ಭಾರತ ತಂಡಗಳ ಜೊತೆ ದಕ್ಷಿಣ ಆಫ್ರಿಕಾ ತಂಡವೂ ಆಡಲಿದೆ.

ಏ. 27ರಂದು ನಡೆಯುವ ಸರಣಿಯ ಉದ್ಘಾಟನಾ ಪಂದ್ಯದಲ್ಲಿ ಭಾರತ ತಂಡವು, ಆತಿಥೇಯ ಶ್ರೀಲಂಕಾವನ್ನು ಎದುರಿಸಲಿದೆ. ಡಬಲ್ ರೌಂಡ್ ರಾಬಿನ್ ಮಾದರಿಯಲ್ಲಿ ಟೂರ್ನಿ ನಡೆಯಲಿದ್ದು ಮೊದಲ ಎರಡು ಸ್ಥಾನ ಪಡೆಯುವ ತಂಡಗಳು ಫೈನಲ್‌ನಲ್ಲಿ ಆಡಲಿವೆ. ಎಲ್ಲ ಪಂದ್ಯಗಳು ರಣಸಿಂಘೆ ಪ್ರೇಮದಾಸ ಕ್ರೀಡಾಂಗಣದಲ್ಲಿ ನಡೆಯಲಿವೆ.



ಹರ್ಮನ್‌ಪ್ರೀತ್ ಕೌರ್

ವೇಗಿಗಳಾದ ರೇಣುಕಾ ಸಿಂಗ್ ಠಾಕೂರ್ ಮತ್ತು ತಿತಾಸ್ ಸಾಧು ಅವರು ಗಾಯಾಳಾಗಿದ್ದು ಅವರನ್ನು ಆಯ್ಕೆಗೆ ಪರಿಗಣಿಸಿಲ್ಲ ಎಂದು ಬಿಸಿಸಿಐ ಪ್ರಕಟಣೆ ತಿಳಿಸಿದೆ. ಕಶ್ವಿ ಗೌತಮ್, ಶ್ರೀ ಚರಣಿ ಮತ್ತು ಶುಚಿ ಉಪಾಧ್ಯಾಯ ಅವರು ತಂಡದಲ್ಲಿ ಅವಕಾಶ ಪಡೆದಿರುವ ಹೊಸಮುಖಗಳು.

ಜನವರಿಯಲ್ಲಿ ಐರ್ಲೆಂಡ್ ತಂಡ ಏಕದಿನ ಸರಣಿಗಾಗಿ ಭಾರತ ಪ್ರವಾಸ ಮಾಡಿದ್ದ ವೇಳೆ ಹರ್ಮನ್‌ಪ್ರೀತ್ ಅವರಿಗೆ ವಿಶ್ರಾಂತಿ ನೀಡಲಾಗಿತ್ತು. ಮಂದಾನ ಅವರು ತಂಡವನ್ನು ಮುನ್ನಡೆಸಿದ್ದು ಭಾರತ 3-0 ಯಿಂದ ಸರಣಿ ಗೆದ್ದಿತ್ತು. 2024ರ ಡಿಸೆಂಬರ್‌ನಲ್ಲಿ ವೆಸ್ಟ್ ಇಂಡೀಸ್ ವಿರುದ್ಧ ಟಿ20 ಸರಣೀಯ ವೇಳೆ ಹರ್ಮನ್‌ಪ್ರೀತ್ ಕೌರ್ ಅವರಿಗೆ ಮೊಣಕಾಲಿನ ಗಾಯವಾಗಿತ್ತು.

ತಂಡ ಹೀಗಿದೆ: ಹರ್ಮನ್‌ಪ್ರೀತ್ ಕೌರ್ (ನಾಯಕಿ), ಸ್ಮೃತಿ ಮಂದಾನ (ಉಪ ನಾಯಕಿ), ಪ್ರತೀಕಾ ರಾವಲ್, ಹರ್ಲೀನ್ ಡಿಯೋಲ್, ಜೆಮಿಮಾ ರೋಡ್ರಿಗಸ್, ರಿಚಾ ಘೋಷ್ (ವಿಕೆಟ್ ಕೀಪರ್), ಯಷ್ಟಿಕಾ ಭಾಟಿಯಾ (ವಿಕೆಟ್ ಕೀಪರ್), ದೀಪ್ತಿ ಶರ್ಮಾ, ಅಮನ್‌ಜೋತ್ ಕೌರ್, ಕಶ್ವಿ ಗೌತಮ್, ಸ್ನೇಹ ರಾಣಾ, ಅರುಂಧತಿ ರೆಡ್ಡಿ, ತೇಜಲ್ ಹಸಬ್ನಿಸ್, ಶ್ರೀ ಚರಣಿ, ಶುಚಿ ಉಪಾಧ್ಯಾಯ.

ಬೆಂಗಳೂರು ಸಿಟಿ ಎಫ್‌ಸಿಗೆ ಜಯ

ಬೆಂಗಳೂರು: ಬೆಂಗಳೂರು ಸಿಟಿ ಎಫ್‌ಸಿ ತಂಡ ಬಿಡಿಎಫ್‌ಎ ಎ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ 2–0 ರಿಂದ ಮಂಗಳವಾರ ವಿಜಯನಗರ ಎಫ್‌ಸಿ ವಿರುದ್ಧ ಗೆಲುವು ಸಾಧಿಸಿತು.

ಅಶೋಕ ನಗರದ ಬೆಂಗಳೂರು ಫುಟ್‌ಬಾಲ್ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಬೆಂಗಳೂರು ಸಿಟಿ ತಂಡದ ಕಾರ್ತಿ ಎಸ್ (38ನೇ ನಿ.) ಮತ್ತು ಅನುರಾಗ್ ದಿವಾಳಿ (45ನೇ ನಿ.) ಗೋಲು ಹೊಡೆದರು.

ಇನ್ನೊಂದು ಪಂದ್ಯದಲ್ಲಿ ಯಂಗ್ ಚಾಲೆಂಜರ್ಸ್ ಎಫ್‌ಸಿ 2–1 ಗೋಲುಗಳಿಂದ ಜವಾಹರ್ ಯೂನಿಯನ್ ಎಫ್‌ಸಿ ವಿರುದ್ಧ ಜಯಿಸಿತು.ಯಂಗ್ ಚಾಲೆಂಜರ್ಸ್ ತಂಡದ ರಾಜು ಜಿ.(40 + 2ನೇ ನಿ., 66ನೇ ನಿ.) ಗೋಲು ಹೊಡೆದರು. ಜವಾಹರ್ ತಂಡದ ಅನಿಶ್ ಬಾಮ್‌ಬಾನಿ (53ನೇ ನಿ.) ಗೋಲು ಗಳಿಸಿದರು.

ಸಿ ಡಿವಿಷನ್ ಲೀಗ್ ಚಾಂಪಿಯನ್‌ಷಿಪ್‌ನಲ್ಲಿ ಯಲಹಂಕ ತಂಡ 1–0 ಗೋಲಿನಿಂದ ಆರ್‌.ಟಿ. ನಗರ ಎಫ್‌ಸಿ ತಂಡವನ್ನು ಮಣಿಸಿತು.

ಬ್ಯಾಡ್ಮಿಂಟನ್: ಧ್ರುವ್–ತನಿಶಾ ಜೋಡಿಗೆ ಮುನ್ನಡೆ



ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ

ನಿಂಗ್ಬೊ, ಚೀನಾ (ಪಿಟಿಐ): ಭಾರತದ ಧ್ರುವ್ ಕಪಿಲಾ ಮತ್ತು ತನಿಶಾ ಕ್ರಾಸ್ಟೊ ಜೋಡಿಯು ಮಂಗಳವಾರ ಇಲ್ಲಿ ಆರಂಭವಾದ ಬ್ಯಾಡ್ಮಿಂಟನ್ ಏಷ್ಯಾ ಚಾಂಪಿಯನ್‌ಷಿಪ್‌ನ ಮಿಶ್ರ ಡಬಲ್ಸ್‌ನಲ್ಲಿ ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

ಧ್ರುವ್–ಕ್ರಾಸ್ಟೊ ಅವರು 15-21, 21-12, 21-11ರ ಮೂರು ಗೇಮ್‌ಗಳ ಹೋರಾಟದಲ್ಲಿ ಮಲೇಷ್ಯಾದ ಹೂ ಪಾಂಗ್ ರಾನ್ ಮತ್ತು ಸು ಯಿನ್ ಚೆಂಗ್ ಅವರನ್ನು ಹಿಮ್ಮೆಟ್ಟಿಸಿದರು. ಬುಧವಾರ ನಡೆಯುವ ಎರಡನೇ ಸುತ್ತಿನಲ್ಲಿ ಭಾರತದ ಜೋಡಿಯು ಚೀನಾ ತೈಪೆಯ ಹಾಂಗ್ ವೀ ಯೆ ಮತ್ತು ನಿಕೋಲ್ ಗೊನ್ಸಾಲೆಸ್ ಚಾನ್ ಅವರನ್ನು ಎದುರಿಸಲಿದೆ.

ಭಾರತದ ಇತರ ಮೂರು ಮಿಶ್ರ ಡಬಲ್ಸ್ ಜೋಡಿಗಳು ಆರಂಭದ ಸುತ್ತಿನಲ್ಲೇ ನಿರಾಸೆ ಮೂಡಿಸಿದವು. ಸತೀಶ್ ಕುಮಾರ್ ಕರುಣಾಕರನ್ ಮತ್ತು ಆದ್ಯಾ ವರಿಯಾತ್ ಜೋಡಿ 18-21, 19-21ರಿಂದ ಮೂರನೇ ಶ್ರೇಯಾಂಕದ ಸೂನ್ ಹುವಾಟ್ ಗೋ ಮತ್ತು ಶೆವೊನ್ ಜೇಮಿ ಲೈ (ಮಲೇಷ್ಯಾ) ಅವರಿಗೆ ಮಣಿಯಿತು.

ಆಶಿತ್ ಸೂರ್ಯ ಮತ್ತು ಅಮೃತಾ ಪ್ರಮುತೇಶ್ 9-21, 11-21ರಿಂದ ಮಲೇಷ್ಯಾದ ತುಲಿತ್ ಪಲ್ಲಿಯಗುರು ಮತ್ತು ಪಾಂಚಾಲಿ ಅಧಿಕಾರಿ ವಿರುದ್ಧ ಸೋತರು.

ರೋಹನ್ ಕಪೂರ್ ಮತ್ತು ಋತ್ವಿಕಾ ಶಿವಾನಿ ಗಡ್ಡೆ ಜೋಡಿ 21-18, 17-21, 17-21ರಿಂದ ಮಲೇಷ್ಯಾದ ರಾಯ್ ಕಿಂಗ್ ಯಾಪ್ ಮತ್ತು ವ್ಯಾಲೆರಿ ಸಿಯೋವ್ ಜೋಡಿಗೆ ಶರಣಾಯಿತು.

ಚೆಸ್: ಕಿಶನ್ ರನ್ನರ್ ಅಪ್

ಬೆಂಗಳೂರು: ಕರ್ನಾಟಕದ ಕಿಶನ್ ಗಂಗೊಳ್ಳಿ ಅವರು ಒಡಿಶಾದ ಕಟಕ್‌ನಲ್ಲಿ ಭಾನುವಾರ ಮುಕ್ತಾಯಗೊಂಡ ದೃಷ್ಟಿ ದೋಷವುಳ್ಳವರ 18ನೇ ರಾಷ್ಟ್ರೀಯ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಎರಡನೇ ಸ್ಥಾನ ಗಳಿಸಿದ್ದಾರೆ.

ಅಂಧರ ಅಖಿಲ ಭಾರತ ಚೆಸ್ ಫೆಡರೇಷನ್ (ಎಐಸಿಎಫ್‌ಬಿ), ಸಾಯಿ ಇಂಟರ್ ನ್ಯಾಷನಲ್ ರೆಸಿಡೆನ್ಶಿಯಲ್ ಸ್ಕೂಲ್‌ನಲ್ಲಿ ಹಮ್ಮಿಕೊಂಡಿದ್ದ ಈ ಐದು ದಿನಗಳ ಚಾಂಪಿಯನ್‌ಷಿಪ್‌ನಲ್ಲಿ ಕಿಶನ್ ಗಂಗೊಳ್ಳಿ ಮತ್ತು ಗುಜರಾತ್‌ನ ದರ್ಪಣ್ ಇನಾನಿ ಅವರು 9 ಸುತ್ತುಗಳಿಂದ ತಲಾ ಏಳೂವರೆ ಪಾಯಿಂಟ್ಸ್ ಸಂಗ್ರಹಿಸಿದ್ದರು. ಆದರೆ ದರ್ಪಣ್ ಉತ್ತಮ ಪ್ರೊಗ್ರೆಸಿವ್ ಅಂಕಗಳ ಆಧಾರದಲ್ಲಿ ಚಾಂಪಿಯನ್ ಪಟ್ಟಕ್ಕೇರಿದರು.

ದೇಶದ ನಾಲ್ಕು ವಲಯಗಳಿಂದ 52 ಆಟಗಾರರು ಭಾಗವಹಿಸಿದ್ದು, ಇವರಲ್ಲಿ 49 ಮಂದಿ ರೇಟಿಂಗ್ ಹೊಂದಿದ್ದರು.



ಕಿಶನ್ ಗಂಗೊಳ್ಳಿ

ಕಿಶನ್ ಅವರು ದರ್ಪಣ್ ಜೊತೆ ಸರ್ಬಿಯಾದಲ್ಲಿ ಜೂನ್ ತಿಂಗಳಲ್ಲಿ ನಡೆಯಲಿರುವ ಐಬಿಸಿಎ ಚೆಸ್ ಒಲಿಂಪಿಯಾಡ್‌ನಲ್ಲಿ (2025) ಮತ್ತು ಪೋಲೆಂಡ್‌ನಲ್ಲಿ ಆಗಸ್ಟ್‌ನಲ್ಲಿ ನಡೆಯಲಿರುವ ಐಬಿಸಿಎ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ದೇಶವನ್ನು ಪ್ರತಿನಿಧಿಸುವ ಅರ್ಹತೆ ಪಡೆದರು.

ತಿಂಗಳ ಪ್ರಶಸ್ತಿ ರೇಸ್‌ನಲ್ಲಿ ಅಯ್ಯರ್



ದುಬೈ (ಪಿಟಿಐ): ಭಾರತದ ಮಧ್ಯಮ ಕ್ರಮಾಂಕದ ಬ್ಯಾಟರ್ ಶ್ರೇಯಸ್ ಅಯ್ಯರ್, ನ್ಯೂಜಿಲೆಂಡ್‌ನ ರಚಿನ್ ರವೀಂದ್ರ ಮತ್ತು ಜೇಕಬ್ ಡಫಿ ಅವರನ್ನು ಐಸಿಸಿ ಪುರುಷರ ಮಾರ್ಚ್ ತಿಂಗಳ ಆಟಗಾರರ ಪ್ರಶಸ್ತಿಗೆ ನಾಮನಿರ್ದೇಶನ ಮಾಡಲಾಗಿದೆ.

30 ವರ್ಷ ವಯಸ್ಸಿನ ಶ್ರೇಯಸ್ ಅವರು ಈಚೆಗೆ ನಡೆದ ಚಾಂಪಿಯನ್ಸ್ ಟ್ರೋಫಿ ಕ್ರಿಕೆಟ್ ಟೂರ್ನಿಯ ಐದು ಪಂದ್ಯಗಳಲ್ಲಿ 48.60 ಸರಾಸರಿಯಲ್ಲಿ 243 ರನ್ ಗಳಿಸಿದ್ದರು. ಅದರಲ್ಲಿ ಎರಡು ಅರ್ಧಶತಕಗಳು ಸೇರಿದ್ದವು. ಭಾರತ ತಂಡ ಪ್ರಶಸ್ತಿ ಗೆಲುವಿನಲ್ಲಿ ಅವರು ಪ್ರಮುಖ ಪಾತ್ರ ವಹಿಸಿದ್ದರು. ಅವರು ಮಾರ್ಚ್‌ನಲ್ಲಿ ಮೂರು ಏಕದಿನ ಪಂದ್ಯಗಳಲ್ಲಿ 172 ರನ್ ಕಲೆ ಹಾಕಿದ್ದರು.

ಡೈಮಂಡ್ ಲೀಗ್‌ನಲ್ಲಿ ನೀರಜ್ ಕಣಕ್ಕೆ

ನವದೆಹಲಿ(ಪಿಟಿಐ): ಡಬಲ್ ಒಲಿಂಪಿಕ್ ಪದಕ ವಿಜೇತ ಭಾರತದ ಜಾವೆಲಿನ್ ಥ್ರೋ ತಾರೆ ನೀರಜ್ ಚೋಪ್ರಾ ಅವರು ಕತಾರ್‌ನ ರಾಜಧಾನಿಯಲ್ಲಿ ಮೇ 16ರಂದು ನಡೆಯಲಿರುವ ದೋಹಾ ಡೈಮಂಡ್ ಲೀಗ್‌ನಲ್ಲಿ ಕಣಕ್ಕೆ ಇಳಿಯುವ ಮೂಲಕ ಋತು ಆರಂಭಿಸಲಿದ್ದಾರೆ.

ಟೋಕಿಯೊ ಒಲಿಂಪಿಕ್ಸ್‌ನಲ್ಲಿ ಚಿನ್ನ ಮತ್ತು ಪ್ಯಾರಿಸ್ ಕ್ರೀಡಾಕೂಟದಲ್ಲಿ ಬೆಳ್ಳಿ ಪದಕ ಗೆದ್ದ ಚೋಪ್ರಾ ಅವರು ಸತತ ಮೂರನೇ ವರ್ಷ ದೋಹಾದಲ್ಲಿ ನಡೆಯುವ ಡೈಮಂಡ್ ಲೀಗ್‌ನಲ್ಲಿ ಕಣಕ್ಕೆ ಇಳಿಯಲಿದ್ದಾರೆ.

ಈ ಕೂಟದ ಬಳಿಕ ತಮ್ಮ ತವರು ಪಂಚಕುಲದಲ್ಲಿ ಮೇ 24ರಂದು ನಡೆಯುವ 'ನೀರಜ್ ಚೋಪ್ರಾ ಕ್ಲಾಸಿಕ್' ವಿಶ್ವ ಜಾವೆಲಿನ್ ಸ್ಪರ್ಧೆಯಲ್ಲಿ ಅವರು ಭಾಗವಹಿಸಲಿದ್ದಾರೆ.

ALVA'S P U COLLEGE


ALVA'S Education Foundation®

VIDYAGIRI, MOODUBIDIRE, D.K. – 574227

ALVA'S RECORD BREAKING ACHIEVEMENT IN II PUC ANNUAL EXAMINATIONS 2025

45 STUDENTS OF ALVA'S IN TOP 10 STATE RANKS

- 590 & Above **44**
- 98% & Above **93**
- 95% & Above **468**
- 90% & Above **1317**
- Distinction **1948**
- Marks improved compared to SSLC **1806 Students**



ADMISSIONS OPEN 2025-26

SCIENCE	COMMERCE	ARTS
PCMB | PCMC | PCMS | PCME	EBAC | EBAS | EBAH | BASBm | BAEBm	HEPS
NEET / CET / JEE / NATA / NDA	CA / CS / NDA / CLAT / CIVIL SERVICE	CLAT / NDA / CIVIL SERVICE

MEGA SCHOLARSHIP EXAMINATION FOR ALL 10TH GRADE STUDENTS

Date: 10 April 2025

Venue: Alva's PU College, Vidyagiri

SPOT REGISTRATION AVAILABLE ON PUBLIC DEMAND

Ph: 6366377823, 6366377825, 6366377827, 9632034765, 8951209303

www.alvaspucollege.org

WE HAVE NO BRANCHES



ಫಲ ನೀಡದ ಅಜಿಂಕ್ಯ ರಹಾನೆ ಮಿಂಚಿನ ಅರ್ಧಶತಕ ● ಪೂರನ್, ಮಾರ್ಷ್ ಭರ್ಜರಿ ಆಟ

ರನ್ ಹೊಳೆಯಲ್ಲಿ ಗೆದ್ದ ಲಖನೌ

ಕೋಲ್ಕತ್ತ (ಪಿಟಿಐ): ರನ್‌ಗಳ ಪ್ರವಾಹ ಕಂಡ ಪಂದ್ಯದಲ್ಲಿ ಲಖನೌ ಸೂಪರ್ ಜೈಂಟ್ಸ್ ತಂಡ ಕೊನೆಗಳಿಗೆಯ ಒತ್ತಡವನ್ನು ಯಶಸ್ವಿಯಾಗಿ ಮೆಟ್ಟಿ ನಿಂತಿತು. ರಿಷಭ್ ಪಂತ್ ಬಳಗ, ಈಡನ್ ಗಾರ್ಡನ್‌ನಲ್ಲಿ ಮಂಗಳವಾರ ನಡೆದ ಐಪಿಎಲ್ ಪಂದ್ಯದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ತಂಡದ ಮೇಲೆ ನಾಲ್ಕು ರನ್‌ಗಳ ರೋಚಕ ಜಯ ಪಡೆಯಿತು.

ಸಿಕ್ಸರ್, ಬೌಂಡರಿಗಳ ಮಳೆಯನ್ನು ಕಂಡ ಈ ಪಂದ್ಯದಲ್ಲಿ 472 ರನ್‌ಗಳು ಹರಿದುಬಂದವು. ಬ್ಯಾಟಿಂಗಿಗೆ ಇಳಿಸಲ್ಪಟ್ಟ ಲಖನೌ ತಂಡವು, ಅಮೋಘ ಲಯದಲ್ಲಿರುವ ಮಿಚೆಲ್ ಮಾರ್ಷ್ (81, 48ಎ, 4x6, 6x5) ಮತ್ತು ಎಡಗೈ ಬ್ಯಾಟರ್ ನಿಕೋಲಸ್ ಪೂರನ್ (81, 36 ಎಸೆತ, 4x7, 6x8) ಅವರ ಭರ್ಜರಿ ಆಟದಿಂದ 3 ವಿಕೆಟ್‌ಗೆ 238 ರನ್‌ಗಳ ದೊಡ್ಡ ಮೊತ್ತ ಪೇರಿಸಿತು. ಇದಕ್ಕೆ ಉತ್ತರವಾಗಿ ಸೇರಿಗೆ ಸವ್ವಾಸೇರು ಎಂಬಂತೆ ಆಡಿದ ಆತಿಥೇಯ ತಂಡ ಅಂತಿಮವಾಗಿ 7 ವಿಕೆಟ್‌ಗೆ 234 ರನ್‌ಗಳಿಸಿ ನಿರಾಸೆ ಅನುಭವಿಸಿತು.

ಈ ಭಾರಿ ಸವಾಲಿನ ಬೆನ್ನಟ್ಟಿದ ಕೋಲ್ಕತ್ತ ತಂಡಕ್ಕೆ ನಾಯಕ ಅಜಿಂಕ್ಯ ರಹಾನೆ (61, 35ಎ, 4x8, 6x2) ಎರಡು ಜೊತೆಯಾಟಗಳ ಮೂಲಕ ಗೆಲುವಿನ ಆಸೆ ಮೂಡಿಸಿದ್ದರು. ಮೊದಲು ಸುನೀಲ್ ನಾರಾಯಣ್ ಜೊತೆ ಎರಡನೇ ವಿಕೆಟ್‌ಗೆ 54 ರನ್ (23 ಎಸೆತ) ಸೇರಿಸಿದ ಅವರು, ನಂತರ ವೆಂಕಟೇಶ್ ಅಯ್ಯರ್ (45, 29ಎಸೆತ) ಜೊತೆ ಮೂರನೇ ವಿಕೆಟ್‌ಗೆ 71 ರನ್ (37 ಎಸೆತ) ಸೇರಿಸಿದ್ದರು.

ಆಕ್ರಮಣದ ಆಟಕ್ಕಿಳಿದ ಅವರು ಲಖನೌ ಬೌಲರ್‌ಗಳ ಬೆವರಿಳಿಸಿದರು. ಒಂದು ಹಂತದಲ್ಲಿ 13 ಓವರುಗಳಲ್ಲಿ 3 ವಿಕೆಟ್‌ಗೆ 162 ರನ್ ಗಳಿಸಿದ್ದ ಕೋಲ್ಕತ್ತ ಗೆಲುವಿನ ಹಾದಿಯಲ್ಲಿತ್ತು. 42 ಎಸೆತಗಳಲ್ಲಿ 77 ರನ್‌ಗಳು ಬೇಕಿದ್ದವು. ಆದರೆ ರಹಾನೆ ಸೇರಿದಂತೆ 5 ವಿಕೆಟ್‌ಗಳು 23 ರನ್ ಅಂತರದಲ್ಲಿ ಬಿದ್ದು ಕೋಲ್ಕತ್ತದ ರನ್ ಚೇಸ್ ಹಳಿ ತಪ್ಪಿತು. ರಿಂಕು ಸಿಂಗ್ (ಔಟಾಗದೇ 38) ಪ್ರಯತ್ನ ಸಾಲಲಿಲ್ಲ. ಲಖನೌ ಸ್ಪಿನ್ನರ್‌ಗಳಾದ ರವಿ ಬಿಷ್ಣೋಯಿ (47ಕ್ಕೆ1) ಮತ್ತು ದಿಗ್ವೇಶ್ ರಾಠಿ (33ಕ್ಕೆ1) ಕೊನೆಯ ಕೆಲ ಓವರುಗಳಲ್ಲಿ ಕೋಲ್ಕತ್ತದ ಅಬ್ಬರಕ್ಕೆ ಅಂಕುಶ ತೊಡಿಸಿದರು.

ಮತ್ತೊಮ್ಮೆ ಸಂಭ್ರಮ: ಎಡಗೈ ಸ್ಪಿನ್ನರ್ ದಿಗ್ವೇಶ್ ರಾಠಿ ಮತ್ತೆ ಮಿಂಚಿದರು. ತಮ್ಮ ಮೆಚ್ಚಿನ ಆಟಗಾರ ಸುನೀಲ್ ನಾರಾಯಣ್ (30, 13 ಎಸೆತ) ವಿಕೆಟ್ ಕೂಡ ಪಡೆದರು. ಈ ವೇಳೆ ನೋಟ್‌ಬುಕ್ ಸಂಭ್ರಮದ ಬದಲು ಹುಲ್ಲಿನ ಮೇಲೆ ಏನೊ ಬರೆದರು. ಈಗಾಗಲೇ ಈ ಬೌಲರ್ ತಮ್ಮ 'ನೋಟ್‌ಬುಕ್ ಸಂಭ್ರಮ'ಕ್ಕೆ ಎರಡು ಬಾರಿ ಡಿಮೆರಿಟ್ ಪಾಯಿಂಟ್, ದಂಡ ಶಿಕ್ಷೆ ಅನುಭವಿಸಿದ್ದಾರೆ.

ಮಿಂಚಿದ ಮಾರ್ಷ್ ಪೂರನ್: ಇದಕ್ಕೆ ಮೊದಲು, ಮಿಚೆಲ್ ಮಾರ್ಷ್ ಮೊದಲ ವಿಕೆಟ್‌ಗೆ ಏಡನ್ ಮರ್ಕರಂ (47, 28ಎ, 4x4, 6x2) ಅವರೊಂದಿಗೆ 61 ಎಸೆತಗಳಲ್ಲಿ 99 ರನ್ ಸೇರಿಸಿದರು. ಹರ್ಷಿತ್ ರಾಣಾ ಈ ಜೊತೆಯಾಟ ಮುರಿದರೂ ಕೋಲ್ಕತ್ತ ತಂಡದ ಬೇಗುದಿ ತಪ್ಪಲಿಲ್ಲ. ಮಾರ್ಷ್ ಈ ಐಪಿಎಲ್‌ನಲ್ಲಿ ನಾಲ್ಕನೇ ಅರ್ಧ ಶತಕ ಬಾರಿಸಿದರು.

ಒಳ್ಳೆಯ ಫಾರ್ಮಿನಲ್ಲಿರುವ ಪೂರನ್ ಮತ್ತೊಮ್ಮೆ ಸ್ಫೋಟಕ ಇನಿಂಗ್ಸ್ ಆಡಿದರು. 21 ಎಸೆತಗಳಲ್ಲಿ ಅರ್ಧಶತಕ ದಾಟಿದ ಅವರು 87 ರನ್ ಗಳಿಸಿ ಅಜೇಯರಾಗುಳಿದರು. ಮಾರ್ಷ್ ಮತ್ತು ಪೂರನ್ ಎರಡನೇ ವಿಕೆಟ್‌ಗೆ 35 ಎಸೆತಗಳಲ್ಲಿ 71 ರನ್ ಸೇರಿಸಿದ್ದರಿಂದ ಕೋಲ್ಕತ್ತದ ಮೇಲೆ ಒತ್ತಡ ಹೆಚ್ಚಿತು.

ಸ್ಕೋರುಗಳು: ಲಖನೌ ಸೂಪರ್ ಜೈಂಟ್ಸ್: 20 ಓವರುಗಳಲ್ಲಿ 3 ವಿಕೆಟ್‌ಗೆ 238 (ಏಡನ್ ಮರ್ಕರಂ 47, ಮಿಚೆಲ್ ಮಾರ್ಷ್ 81, ನಿಕೋಲಸ್ ಪೂರನ್ ಔಟಾಗದೇ 87, ಹರ್ಷಿತ್ ರಾಣಾ 51ಕ್ಕೆ2). **ಕೋಲ್ಕತ್ತ ನೈಟ್ ರೈಡರ್ಸ್:** 20 ಓವರುಗಳಲ್ಲಿ 7 ವಿಕೆಟ್‌ಗೆ 234 (ಸುನೀಲ್ ನಾರಾಯಣ್ 30, ಅಜಿಂಕ್ಯ ರಹಾನೆ 61, ವೆಂಕಟೇಶ್ ಅಯ್ಯರ್ 45, ರಿಂಕು ಸಿಂಗ್ ಔಟಾಗದೇ 38; ಆಕಾಶ್ ದೀಪ್ 55ಕ್ಕೆ2, ಶಾರ್ದೂಲ್ ಠಾಕೂರ್ 52ಕ್ಕೆ2).

ಪಂದ್ಯದ ಆಟಗಾರ: ನಿಕೋಲಸ್ ಪೂರನ್

ಶಾರ್ದೂಲ್ ಸತತ 5 ವೈಡ್ ದಾಖಲೆ

ವೇಗದ ಬೌಲರ್ ಶಾರ್ದೂಲ್ ಠಾಕೂರ್ ಇನಿಂಗ್ಸ್‌ನ 13ನೇ ಓವರಿನಲ್ಲಿ ಸತತ ಐದು ವೈಡ್‌ಗಳನ್ನು ಮಾಡಿದ್ದು ದಾಖಲೆ ಎನಿಸಿತು. ಈ ಹಿಂದೆ ಜಸ್‌ಪ್ರೀತ್ ಬೂಮ್ರಾ (2015), ಪ್ರವೀಣ್ ಕುಮಾರ್ (2017), ಮೊಹಮ್ಮದ್ ಸಿರಾಜ್ (2023) ಮತ್ತು ಖಲೀಲ್ ಅಹಮ್ಮದ್ (2024) ಸತತ ನಾಲ್ಕು ವೈಡ್‌ಗಳನ್ನು ಮಾಡಿದ್ದರು. ಒಟ್ಟು 11 ಎಸೆತಗಳನ್ನು ಕಂಡ ಶಾರ್ದೂಲ್ ಅವರ ಆ ಓವರ್ ಐಪಿಎಲ್‌ನ ಜಂಟಿ ದೀರ್ಘ ಓವರ್ ಎನಿಸಿತು. ಈ ಹಿಂದೆ, 2023ರಲ್ಲಿ ಚೆನ್ನೈನ ತುಷಾರ್ ದೇಶಪಾಂಡೆ, ಅದೇ ವರ್ಷ ಆರ್‌ಸಿಬಿಯ ಮೊಹಮ್ಮದ್ ಸಿರಾಜ್ ಕೂಡ 11 ಎಸೆತಗಳ ಓವರ್ ಮಾಡಿದ್ದರು.

ಲಖನೌದ 2ನೇ ಅತ್ಯಧಿಕ ಮೊತ್ತ: ಲಖನೌ ಸೂಪರ್ ಜೈಂಟ್ಸ್ ಈ ಪಂದ್ಯದಲ್ಲಿ ಗಳಿಸಿದ 3 ವಿಕೆಟ್‌ಗೆ 238 ಆ ತಂಡದ ಎರಡನೇ ಅತ್ಯಧಿಕ ಮೊತ್ತ. 2023ರಲ್ಲಿ ಪಂಜಾಬ್ ಕಿಂಗ್ಸ್ ವಿರುದ್ಧ 5 ವಿಕೆಟ್‌ಗೆ 257 ರನ್ ಹೊಡೆದಿತ್ತು.



ನಿಕೋಲಸ್ ಪೂರನ್ ಬ್ಯಾಟಿಂಗ್ ವೈಖರಿ ಪಿಟಿಐ ಚಿತ್ರ

ಟೈಟನ್ಸ್‌ಗೆ ರಾಯಲ್ಸ್ ಸವಾಲು ಇಂದು

ಅಹಮದಾಬಾದ್ (ಪಿಟಿಐ): ಗುಜರಾತ್ ಟೈಟನ್ಸ್ ತಂಡವು, ಬುಧವಾರ ನಡೆಯುವ ಐಪಿಎಲ್ ಪಂದ್ಯದಲ್ಲಿ ರಾಜಸ್ಥಾನ ರಾಯಲ್ಸ್ ತಂಡವನ್ನು ಎದುರಿಸಲಿದೆ. ಎರಡೂ ತಂಡಗಳು ತಮ್ಮ ಬೌಲಿಂಗ್ ಪಡೆಯು ಪೂರ್ಣ ಪ್ರಮಾಣದಲ್ಲಿ ಸಾಮರ್ಥ್ಯ ತೋರಲಿವೆ ಎಂಬ ವಿಶ್ವಾಸದಲ್ಲಿವೆ.

ಗುಜರಾತ್‌ನ ಬೌಲಿಂಗ್ ವಿಭಾಗವು ನಿರೀಕ್ಷಿತ ಮಟ್ಟದಲ್ಲಿ ಪ್ರದರ್ಶನ ನೀಡಿಲ್ಲ. ತಂಡದ ವೇಗಿ ಮೊಹಮ್ಮದ್ ಸಿರಾಜ್ ಮತ್ತು ಸ್ಪಿನ್ನರ್ ಆರ್.ಸಾಯಿ ಕಿಶೋರ್ ಅವರು ಮಾತ್ರ ಯಶಸ್ಸು ಕಾಣುತ್ತಿದ್ದಾರೆ. ಅನುಭವಿಗಳಾದ ಸ್ಪಿನ್ನರ್ ರಶೀದ್ ಖಾನ್ ಮತ್ತು ವೇಗಿ ಇಶಾಂತ್ ಶರ್ಮಾ ನಿರ್ವಹಣೆ ನಿರಾಶಾದಾಯಕವಾಗಿದೆ. ಬೌಲರ್‌ಗಳಿಗೆ ನೆರವಾಗುವ ಬೆಂಗಳೂರು, ಹೈದರಾಬಾದಿನ ಪಿಚ್‌ಗಳಲ್ಲೂ ಅವರು ವಿಫಲರಾಗಿದ್ದಾರೆ. ಟಿ20 ಪರಿಣತ ರಶೀದ್ ಓವರಿಗೆ ಹತ್ತಕ್ಕೂ ಹೆಚ್ಚು ರನ್ ತೆತ್ತಿದ್ದಾರೆ. ನಾಲ್ಕು ಪಂದ್ಯಗಳಲ್ಲಿ ಅವರು ಪಡೆದಿರುವುದು ಒಂದು ವಿಕೆಟ್ ಅಷ್ಟೇ. ಇದು ಐಪಿಎಲ್‌ನಲ್ಲಿ ಅವರ ಅತಿ ಕಳಪೆ ಆರಂಭ ಎನಿಸಿದೆ.

ಇಶಾಂತ್ ಕಥೆ ತೀರಾ ಭಿನ್ನವಾಗಿಲ್ಲ. ಅವರು ಮೂರು ಪಂದ್ಯಗಳಲ್ಲಿ ಒಂದು ವಿಕೆಟ್ ಮಾತ್ರ ಗಳಿಸಿದ್ದಾರೆ. ಓವರಿನಲ್ಲಿ 12ಕ್ಕೂ ಹೆಚ್ಚು ರನ್ ಸೋರಿಕೆಯಾಗಿದೆ.

ಸ್ನಾಯುರಜ್ಜು ನೋವಿನಿಂದ ಬಳಲುತ್ತಿರುವ ಜೆರಾಲ್ಡ್ ಕೊಟ್ಜಿಯಾ ಅವರು ಫಿಟ್ನೆಸ್‌ಗೆ ಮರಳುವುದನ್ನು ಟೈಟನ್ಸ್ ಕಾಯುತ್ತಿದೆ. ಸಂಜು ಸ್ಯಾಮ್ಸನ್, ಧ್ರುವ್ ಜುರೇಲ್, ರಿಯಾನ್ ಪರಾಗ್, ನಿತೀಶ್ ರಾಣಾ ಅವರನ್ನು ಹೊಂದಿರುವ ರಾಯಲ್ಸ್ ತಂಡ ಇದರ ಲಾಭ ಪಡೆಯುವ ಸಾಧ್ಯತೆಯಿದೆ. ಜೈಸ್ವಾಲ್ ಒಂದು ಪಂದ್ಯದಲ್ಲಿ ಯಶಸ್ಸು ಕಂಡಿದ್ದಾರೆ.

ಬೌಲಿಂಗ್ ವಿಭಾಗದಲ್ಲಿ ರಾಜಸ್ಥಾನ ತಂಡದ ಕಥೆ ತೀರಾ ಭಿನ್ನವಾಗಿಲ್ಲ. ಸಂದೀಪ್ ಶರ್ಮಾ ಬಿಟ್ಟರೆ ಉಳಿದವರು ಸ್ಥಿರ ಪ್ರದರ್ಶನ ನೀಡಿಲ್ಲ. ಇಂಗ್ಲೆಂಡ್‌ನ ವೇಗಿ ಜೋಫ್ರಾ ಆರ್ಚರ್, ಪಂಜಾಬ್ ಕಿಂಗ್ಸ್ ವಿರುದ್ಧ ಉತ್ತಮ ಪ್ರದರ್ಶನ (4–0–25–3) ನೀಡಿದ್ದು ತಂಡದ ಪಾಲಿಗೆ ಸಕಾರಾತ್ಮಕ ಅಂಶ.

ಅಹಮದಾಬಾದ್‌ನ ಸ್ಟೇಡಿಯಂನಲ್ಲಿ ಪೂರ್ಣಗೊಂಡ ನಾಲ್ಕು ಇನಿಂಗ್ಸ್‌ಗಳಲ್ಲಿ ಕ್ರಮವಾಗಿ 243, 232, 196, 160 ರನ್‌ಗಳು ಬಂದಿವೆ. ಹೀಗಾಗಿ ಗುಜರಾತ್ ತಂಡದ ಬ್ಯಾಟರ್‌ಗಳನ್ನು ಕಟ್ಟಿಹಾಕಲು ರಾಯಲ್ಸ್ ಬೌಲರ್‌ಗಳು ತಮ್ಮೆಲ್ಲಾ ಶ್ರಮ ಹಾಕಬೇಕಾಗಿದೆ. ನಾಯಕ ಶುಭಮನ್ ಗಿಲ್, ಜೋಸ್ ಬಟ್ಲರ್, ಶೆರ್ಫೇನ್ ರುದರ್‌ಫೋರ್ಡ್, ಸಾಯಿ ಸುದರ್ಶನ್ ಒಳ್ಳೆಯ ಲಯದಲ್ಲಿದ್ದಾರೆ.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್
ಜಿಯೊ ಹಾಟ್‌ಸ್ಟಾರ್ ಆ್ಯಪ್



ಸಿರಾಜ್



ಆರ್ಚರ್

ಪಾಯಿಂಟ್ಸ್ ಪಟ್ಟಿ

	ತಂಡ	ಪಂದ್ಯ	ಜಯ	ಸೋಲು	ಅಂಕ	ಎನ್‌ಆರ್‌ಆರ್
1	ಡಿಸಿ	3	3	0	6	1.257
2	ಜಿಟಿ	4	3	1	6	1.031
3	ಆರ್‌ಸಿಬಿ	4	3	1	6	1.015
4	ಪಿಬಿಕೆಎಸ್	4	3	1	6	0.289
5	ಎಲ್‌ಎಸ್‌ಜಿ	5	3	2	6	0.078
6	ಕೆಕೆಆರ್	5	2	3	4	-0.056
7	ಆರ್‌ಆರ್	4	2	2	4	-0.185
8	ಎಂಐ	5	1	4	2	-0.010
9	ಸಿಎಸ್‌ಕೆ	5	1	4	2	-0.889
10	ಎಸ್‌ಆರ್‌ಎಚ್	5	1	4	2	-1.629

ಆರೇಂಜ್ ಕ್ಯಾಪ್
ನಿಕೋಲಸ್ ಪೂರನ್ (ಎಲ್‌ಎಸ್‌ಜಿ) 288 ರನ್

ಪರ್ಪಲ್ ಕ್ಯಾಪ್
ನೂರ್ ಅಹ್ಮದ್ (ಸಿಎಸ್‌ಕೆ) 11 ವಿಕೆಟ್

ಪಂಜಾಬ್ ಗೆಲುವಿನಲ್ಲಿ ಮಿಂಚಿದ ಪ್ರಿಯಾಂಶ್

ಮುಲ್ಲನಪುರ (ಪಂಜಾಬ್), (ಪಿಟಿಐ): ಉದಯೋನ್ಮುಖ ಆರಂಭ ಆಟಗಾರ ಪ್ರಿಯಾಂಶ್ ಆರ್ಯ (103;42ಎ) ಅವರ ಅಮೋಘ ಶತಕದ ನೆರವಿನಿಂದ ಪಂಜಾಬ್ ಕಿಂಗ್ಸ್ ತಂಡವು ಮಂಗಳವಾರ ನಡೆದ ಇನ್ನೊಂದು ಹೋರಾಟದ ಪಂದ್ಯದಲ್ಲಿ ಚೆನ್ನೈ ಸೂಪರ್ ಕಿಂಗ್ಸ್ ತಂಡವನ್ನು 18 ರನ್‌ಗಳಿಂದ ಸೋಲಿಸಿತು.

ಈ ಪಂದ್ಯದಲ್ಲೂ ಎರಡೂ ತಂಡಗಳು 200ಕ್ಕಿಂತ ಹೆಚ್ಚಿನ ಮೊತ್ತ ಗಳಿಸಿದವು. ಮೊದಲು ಬ್ಯಾಟಿಂಗಿಗೆ ಇಳಿದ ಪಂಜಾಬ್ ತಂಡ 20 ಓವರುಗಳಲ್ಲಿ 6 ವಿಕೆಟ್‌ಗೆ 219 ರನ್‌ಗಳ ಉತ್ತಮ ಮೊತ್ತ ಗಳಿಸಿತು. ಒಂದು ಹಂತದಲ್ಲಿ ಕುಸಿತದತ್ತ ಸಾಗಿದ್ದ ತಂಡಕ್ಕೆ ಪ್ರಿಯಾಂಶ್ ಶತಕದ ಮೂಲಕ ಆಸರೆಯಾದರು. ಕೊನೆಯಲ್ಲಿ ಶಶಾಂಕ್ ಸಿಂಗ್ (ಔಟಾಗದೇ 52, 36 ಎಸೆತ) ಮತ್ತು ಮಾರ್ಕೊ ಯಾನ್ಸೆನ್ (ಔಟಾಗದೇ 34, 19ಎ) ಅವರ ಆಟದಿಂದ ತಂಡ ಉತ್ತಮ ಮೊತ್ತ ಕಲೆಹಾಕಿತು.

ಉತ್ತರವಾಗಿ ಚೆನ್ನೈ ತಂಡ ತನ್ನ ಪಾಲಿನ ಓವರುಗಳಲ್ಲಿ 5 ವಿಕೆಟ್‌ಗೆ 201 ರನ್ ಗಳಿಸಿ ನಿರಾಸೆ ಅನುಭವಿಸಿತು. ಇದು ಋತುರಾಜ್ ಗಾಯಕವಾಡ ಪಡೆಗೆ ಐದು ಪಂದ್ಯಗಳಲ್ಲಿ ಸತತ ನಾಲ್ಕನೇ ಸೋಲು.

ರಚಿನ್ ರವೀಂದ್ರ ಮತ್ತು ಡೆವಾನ್ ಕಾನ್ವೆ (69, 49ಎ) ಮೊದಲ ವಿಕೆಟ್‌ಗೆ 6.3 ಓವರುಗಳಲ್ಲಿ 61 ರನ್ ತಂಡಕ್ಕೆ ಉತ್ತಮ ಆರಂಭ ನೀಡಿದ್ದರು. ನಂತರ ಶಿವಂ ದುಬೆ (42, 27ಎ) ಮತ್ತು ಐದನೇ ಕ್ರಮಾಂಕದಲ್ಲಿ ಆಡಿದ ಧೋನಿ (27, 12ಎ) ಸ್ವಲ್ಪ ಪ್ರತಿರೋಧ ತೋರಿದರೂ, ಗುರಿ ಸಾಕಷ್ಟು ದೂರವಿತ್ತು.

ಮಿಂಚಿದ ಪ್ರಿಯಾಂಶ್: ದೆಹಲಿ ಲೀಗ್‌ನಲ್ಲಿ ಮಿಂಚಿದ್ದ 24 ವರ್ಷ ವಯಸ್ಸಿನ ಪ್ರಿಯಾಂಶ್, ಈ ಪಂದ್ಯದಲ್ಲಿ ಒಂಬತ್ತು ಭರ್ಜರಿ ಸಿಕ್ಸರ್ ಮತ್ತು ಏಳು ಬೌಂಡರಿಗಳನ್ನು ಸಿಡಿಸಿದರು. ಒಂದು ಹಂತದಲ್ಲಿ 83 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡು ಅಲ್ಪಮೊತ್ತಕ್ಕೆ ಕುಸಿಯುವ ಆತಂಕದಲ್ಲಿದ್ದ ತಂಡಕ್ಕೆ 'ಇಂಪ್ಯಾಕ್ಟ್ ಆಟಗಾರ'ನಾಗಿ ಕಣಕ್ಕಿಳಿದು ಆಸರೆಯಾದರು.

ಪ್ರಿಯಾಂಶ್ ಮತ್ತು ಶಶಾಂಕ್ ಸಿಂಗ್ (ಔಟಾಗದೇ 52;36ಎ, 4x2, 6x3) ಆರನೇ ವಿಕೆಟ್ ಜೊತೆಯಾಟದಲ್ಲಿ 71 (34ಎ) ರನ್ ಸೇರಿಸಿ ತಂಡವನ್ನು ಬೃಹತ್ ಮೊತ್ತದತ್ತ ಕೊಂಡೊಯ್ದರು. 13ನೇ ಓವರ್‌ನಲ್ಲಿ ಬೌಂಡರಿಯೊಂದಿಗೆ ಪ್ರಿಯಾಂಶ್ ಐಪಿಎಲ್‌ನಲ್ಲಿ ಚೊಚ್ಚಲ ಶತಕವನ್ನು ಪೂರೈಸಿದರು.

ಸಂಕ್ಷಿಪ್ತ ಸ್ಕೋರು: ಪಂಜಾಬ್ ಕಿಂಗ್ಸ್: 20 ಓವರ್‌ಗಳಲ್ಲಿ 6ಕ್ಕೆ 219 (ಪ್ರಿಯಾಂಶ್ ಆರ್ಯ 103, ಶಶಾಂಕ್ ಸಿಂಗ್ ಔಟಾಗದೇ 52, ಮಾರ್ಕೊ ಯಾನ್ಸೆನ್ ಔಟಾಗದೇ 34; ಖಲೀಲ್ ಅಹಮ್ಮದ್ 45ಕ್ಕೆ 2, ರವಿಚಂದ್ರನ್ ಅಶ್ವಿನ್ 48ಕ್ಕೆ 2); **ಚೆನ್ನೈ ಸೂಪರ್ ಕಿಂಗ್ಸ್:** 20 ಓವರುಗಳಲ್ಲಿ 5 ವಿಕೆಟ್‌ಗೆ 201 (ರಚಿನ್ ರವೀಂದ್ರ 36, ಡೆವಾನ್ ಕಾನ್ವೆ 69, ಶಿವಂ ದುಬೆ 42, ಎಂ.ಎಸ್. ಧೋನಿ 27; ಲಾಕಿ ಫರ್ಗ್ಯೂಸನ್ 40ಕ್ಕೆ2); **ಪಂದ್ಯದ ಆಟಗಾರ:** ಪ್ರಿಯಾಂಶ್ ಆರ್ಯ



ಶತಕ ಬಾರಿಸಿದ ಪಂಜಾಬ್ ಕಿಂಗ್ಸ್ ತಂಡದ ಪ್ರಿಯಾಂಶ್ ಆರ್ಯ ಎಎಫ್‌ಪಿ ಚಿತ್ರ

ಐಪಿಎಲ್‌ನ ದಾಖಲಾದ ವೇಗದ ಶತಕಗಳು

ಎಸೆತ	ಬ್ಯಾಟರ್	ತಂಡ	ಎದುರಾಳಿ	ಸ್ಥಳ	ವರ್ಷ
30	ಕ್ರಿಸ್ ಗೇಲ್	ಆರ್‌ಸಿಬಿ	ಪುಣೆ ವಾರಿಯರ್ಸ್	ಬೆಂಗಳೂರು	2013
37	ಯೂಸುಫ್ ಪಠಾಣ್	ಆರ್‌ಆರ್	ಎಂಐ	ಮುಂಬೈ	2010
38	ಡೇವಿಡ್ ಮಿಲ್ಲರ್	ಕಿಂಗ್ಸ್ ಇಲೆವೆನ್	ಆರ್‌ಸಿಬಿ	ಮೊಹಾಲಿ	2013
39	ಟ್ರಾವಿಸ್ ಹೆಡ್	ಎಸ್‌ಆರ್‌ಎಚ್	ಆರ್‌ಸಿಬಿ	ಬೆಂಗಳೂರು	2024
39	ಪ್ರಿಯಾಂಶ್ ಆರ್ಯ	ಪಿಬಿಕೆಎಸ್	ಸಿಎಸ್‌ಕೆ	ಮುಲ್ಲನಪುರ	2025

ನಿಧಾನಗತಿ ಓವರ್: ರಜತ್‌ಗೆ ದಂಡ

ಮುಂಬೈ (ಪಿಟಿಐ): ಮುಂಬೈ ಇಂಡಿಯನ್ಸ್ ವಿರುದ್ಧ ಸೋಮವಾರ ನಡೆದ ಐಪಿಎಲ್ ಪಂದ್ಯದಲ್ಲಿ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು ನಿಗದಿತ ಅವಧಿಯೊಳಗೆ ಓವರುಗಳನ್ನು ಪೂರೈಸದ ಕಾರಣಕ್ಕೆ ನಾಯಕ ರಜತ್ ಪಾಟೀದಾರ್ ಅವರಿಗೆ ₹12 ಲಕ್ಷ ದಂಡ ವಿಧಿಸಲಾಗಿದೆ.

'ಇದು ಈ ಋತುವಿನಲ್ಲಿ ಈ ತಂಡ ಈ ರೀತಿಯ ಮೊದಲ ತಪ್ಪು ಮಾಡಿದ ಕಾರಣ ಪಾಟೀದಾರ ಅವರಿಗೆ ಈ ದಂಡ ವಿಧಿಸಲಾಗಿದೆ' ಎಂದು ಐಪಿಎಲ್ ಮಾಧ್ಯಮ ಪ್ರಕಟಣೆ ತಿಳಿಸಿದೆ.

ಆರ್‌ಸಿಬಿ ತಂಡ ಏಪ್ರಿಲ್ 10ರಂದು ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಆಡಲಿದೆ.

ಶೂಟಿಂಗ್: ಸುರುಚಿ ಸಿಂಗ್‌ಗೆ ಚಿನ್ನ



ನವದೆಹಲಿ (ಪಿಟಿಐ): ಭಾರತದ ಯುವ ಶೂಟರ್ ಸುರುಚಿ ಸಿಂಗ್‌ಗೆ ಅವರು ಅರ್ಜೆಂಟೀನಾದ ಬ್ಯೂನೊ ಏರ್ಸ್‌ನಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವಕಪ್‌ನಲ್ಲಿ ಮಂಗಳವಾರ ಚಿನ್ನದ ಪದಕ ಗೆದ್ದರು.

18 ವರ್ಷ ವಯಸ್ಸಿನ ಸುರುಚಿ ಅವರು ಮಹಿಳೆಯರ 10 ಮೀ ಏರ್ ಪಿಸ್ತೂಲ್ ಸ್ಪರ್ಧೆಯಲ್ಲಿ 244.6 ಪಾಯಿಂಟ್ಸ್‌ನೊಂದಿಗೆ ಚಾಂಪಿಯನ್ ಆದರು. ಈ ವಿಶ್ವಕಪ್‌ನಲ್ಲಿ ಭಾರತಕ್ಕೆ ದಕ್ಕಿದ ಮೂರನೇ ಚಿನ್ನ ಇದಾಗಿದೆ.

ಚೀನಾದ ಕಿಯಾನ್ ವೀ (241.9 ಅಂಕ) ಮತ್ತು ಡಬಲ್ ಒಲಿಂಪಿಕ್ ಪದಕ ವಿಜೇತೆ ಜಿಯಾಂಗ್ ರಾಂಕ್ಸಿನ್ (221.0) ಕ್ರಮವಾಗಿ ಎರಡನೇ ಮತ್ತು ಮೂರನೇ ಸ್ಥಾನ ಪಡೆದರು.